ಸಾಲದ ಭಾರಕ್ಕೆ ತತ್ತರಿಸೀತು ತಮಿಳುನಾಡು: ಅರ್ಥಶಾಸ್ತ್ರಜ್ಞರ ಎಚ್ಚರಿಕೆ

ಸ್ವರ್ಗ ಧರೆಗಿಳಿಸುವ ಭರವಸೆ ಅನುಷ್ಠಾನಕ್ಕೆ ಹಣವೆಲ್ಲಿದೆ?

ಚೆನ್ನೈ (ಪಿಟಿಐ): ತಮಿಳುನಾಡಿನ ವಿಧಾನಸಭೆ ಚುನಾವಣೆಯಲ್ಲಿ ಬದ್ಧ ಪ್ರತಿಸ್ಪರ್ಧಿ ಪಕ್ಷಗಳಾದ ಎಐಎಡಿಎಂಕೆ ಮತ್ತು ಡಿಎಂಕೆಯ ಸೋಲು–ಗೆಲುವಿನ ಸಾಧ್ಯತೆಗಳ ಜತೆಗೆ ತೀವ್ರ ಚರ್ಚೆ ನಡೆಯುತ್ತಿದೆ. ಅದರ ಜತೆಗೆ, ಪ್ರಣಾಳಿಕೆಯಲ್ಲಿ ಪ್ರಕಟಿಸಿರುವ ಉಚಿತ ಕೊಡುಗೆಗಳು ಈಗಾಗಲೇ ಸಾಲದ ಸುಳಿಗೆ ಸಿಲುಕಿರುವ ರಾಜ್ಯದ ಆರ್ಥಿಕ ಸ್ಥಿತಿಯ ಮೇಲೆ ಬೀರಬಹುದಾದ ಪರಿಣಾಮಗಳ ಬಗ್ಗೆಯೂ ಚರ್ಚೆಗಳು ನಡೆಯುತ್ತಿವೆ.

2006ರಲ್ಲಿ ಡಿಎಂಕೆ ಮುಖ್ಯಸ್ಥ ಕೆ. ಕರುಣಾನಿಧಿ ಅವರು ಅತಿಜನಪ್ರಿಯತೆಯ ಮೊರೆ ಹೋಗುವ ಕಾರ್ಯತಂತ್ರವನ್ನು ಮೊತ್ತ ಮೊದಲಿಗೆ ಆರಂಭಿಸಿದರು. ಉಚಿತ ಬಣ್ಣದ ಟಿ.ವಿ. ಮುಂತಾದ ಹತ್ತಾರು ಭರವಸೆಗಳು ಆಗಿನ ಪ್ರಣಾಳಿಕೆಯಲ್ಲಿ ಇದ್ದವು. ಮುಂದೆ ಇದುವೇ ಒಂದು ಪದ್ಧತಿಯಾಯಿತು. ಉಚಿತ ಲ್ಯಾಪ್‌ಟಾಪ್, ಹಾಲುಕರೆವ ದನ, ಮಿಕ್ಸರ್ ಗ್ರೈಂಡರ್, ಚಿನ್ನದ ಮಂಗಳಸೂತ್ರಗಳೆಲ್ಲವೂ ಪ್ರಣಾಳಿಕೆ ಸೇರಿದವು.

2021ರ ವಿಧಾನಸಭಾ ಚುನಾವಣೆಯಲ್ಲಿಯೂ ದ್ರಾವಿಡ ಪಕ್ಷಗಳೆರಡೂ ಉಚಿತ ಕೊಡುಗೆಗಳ ಭರವಸೆಯ ಮಳೆ ಸುರಿಸಿವೆ. ದಾಖಲೆಯ ಸತತ ಮೂರನೇ ಅವಧಿಗೆ ಅಧಿಕಾರಕ್ಕೆ ಏರಲು ಬಯಸಿರುವ ಎಐಎಡಿಎಂಕೆ ಮತ್ತು ಹತ್ತು ವರ್ಷಗಳ ಬಳಿಕ ಅಧಿಕಾರಕ್ಕೆ ಮರಳಲೇಬೇಕು ಎಂಬ ಉಮೇದಿನಲ್ಲಿರುವ ಡಿಎಂಕೆ ಉಚಿತ ಕೊಡುಗೆಗಳ ಜತೆಗೆ ಇತರ ಭರವಸೆಗಳನ್ನೂ ನೀಡಿವೆ. ಪೌರತ್ವ ತಿದ್ದುಪಡಿ ಕಾಯ್ದೆ ರದ್ದತಿ ಮತ್ತು ರಾಜೀವ್ ಗಾಂಧಿ ಹಂತಕರ ಬಿಡುಗಡೆಗೆ ಕೇಂದ್ರದ ಮೇಲೆ ಒತ್ತಡ ಹೇರುತ್ತೇವೆ ಎಂಬ ಭರವಸೆಗಳೂ ಪ್ರಣಾಳಿಕೆಯಲ್ಲಿ ಸ್ಥಾನ ಪಡೆದಿವೆ.

ಉಚಿತ ವಾಷಿಂಗ್ ಮಷೀನ್, ಎಲ್ಲರಿಗೂ ವಸತಿ, ಸೋಲಾರ್ ಕುಕ್ಕರ್‌ಗಳು, ಶಿಕ್ಷಣ ಸಾಲ ಮನ್ನಾ, ಸರ್ಕಾರಿ ಸೇವೆಯಲ್ಲಿ ಇಲ್ಲದ ಕುಟುಂಬಗಳ ಒಬ್ಬ ವ್ಯಕ್ತಿಗೆ ಸರ್ಕಾರಿ ಉದ್ಯೋಗ ಇತ್ಯಾದಿ ಎಐಎಡಿಎಂಕೆಯ ಭರವಸೆಗಳಲ್ಲಿ ಸೇರಿವೆ. ಅಕ್ಕಿ ಪಡೆಯುವ ಕಾರ್ಡ್ ಇರುವವರು ಕೋವಿಡ್–19ಕ್ಕೆ ಒಳಗಾದರೆ ₹4,000 ನೆರವು, ಖಾಸಗಿ ಕ್ಷೇತ್ರದ ಶೇ 75ರಷ್ಟು ನೌಕರಿಯನ್ನು ಸ್ಥಳೀಯರಿಗೆ ಮೀಸಲಿರಿಸುವ ಕಾನೂನು ಸೇರಿ ಹತ್ತಾರು ಘೋಷಣೆಗಳು ಡಿಎಂಕೆಯ ಪ್ರಣಾಳಿಕೆಯಲ್ಲಿಯೂ ಇವೆ.

ರಾಜ್ಯದಲ್ಲಿ ಮದ್ಯ ನಿಷೇಧವನ್ನು ಹಂತ ಹಂತವಾಗಿ ಜಾರಿಗೆ ತರುವುದಾಗಿ ಎರಡೂ ಪಕ್ಷಗಳು ವಾಗ್ದಾನ ಮಾಡಿವೆ. ಚುನಾವಣೆಯ ಬಳಿಕ ಸರ್ಕಾರ ರಚನೆಯಾದ ಕೂಡಲೇ ಮದ್ಯ ನಿಷೇಧ ಮಾಡುವುದಾಗಿ ಕಾಂಗ್ರೆಸ್ ಭರವಸೆ ಕೊಟ್ಟಿದೆ. ಕಾಂಗ್ರೆಸ್ ಪಕ್ಷವು ಡಿಎಂಕೆ ನೇತೃತ್ವದ ಮೈತ್ರಿಕೂಟದಲ್ಲಿ ಕಿರಿಯ ಪಾಲುದಾರ ಮಾತ್ರ ಆಗಿರುವುದರಿಂದ ಅಧಿಕಾರಕ್ಕೆ ಬಂದರೆ ಈ ಬೇಡಿಕೆ ಈಡೇರಿಸುವುದು ಕೂಡ ಡಿಎಂಕೆಯ ಹೊಣೆಯೇ ಆಗುತ್ತದೆ. ಹೊಸ ಸರ್ಕಾರವು ಭಾರಿ ಸಾಲದ ಹೊರೆಯನ್ನು ಹೊರಬೇಕಾಗುತ್ತದೆ ಮತ್ತು ಅಭಿವೃದ್ಧಿ ಕಾರ್ಯಕ್ರಮಗಳು ಹಾಗೂ ಚುನಾವಣಾ ಭರವಸೆಗಳ ನಡುವೆ ಸಮತೋಲನ ಕಾಯ್ದುಕೊಳ್ಳುವುದು ಸುಲಭವೇನೂ ಅಲ್ಲ ಎಂದು ಅರ್ಥಶಾಸ್ತ್ರಜ್ಞರು ಹೇಳುತ್ತಾರೆ.

ಪ್ರಣಾಳಿಕೆ ಬಿಡುಗಡೆ ಸಮಾರಂಭದಲ್ಲಿ ಮುಖ್ಯಮಂತ್ರಿ ಪಳನಿಸ್ವಾಮಿ ಮತ್ತು ಎಐಎಡಿಎಂಕೆ ಮುಖಂಡರು

‘ಪಕ್ಷಗಳು ನೀಡಿರುವ ಭರವಸೆಗಳು ಅಸಾಧಾರಣ. ಆದರೆ, ಅಧಿಕಾರಕ್ಕೆ ಬಂದ ಬಳಿಕ ಅದನ್ನು ಜಾರಿಗೊಳಿಸಲು ಹಣ ಹೊಂದಿಸುವುದು ಎಲ್ಲಿಂದ ಎಂದು ಯಾವ ಪಕ್ಷವೂ ಯೋಚನೆಯನ್ನೇ ಮಾಡಿರಲಿಕ್ಕಿಲ್ಲ’ ಎನ್ನುತ್ತಾರೆ ಕೇಂದ್ರದ ಮಾಜಿ ರೆವೆನ್ಯೂ ಕಾರ್ಯದರ್ಶಿ ಎಂ.ಆರ್.ಶಿವರಾಮನ್. ಪ್ರತಿ ಕುಟುಂಬದ ಒಬ್ಬ ವ್ಯಕ್ತಿಗೆ ಸರ್ಕಾರಿ ಉದ್ಯೋಗ ಕೊಡುವುದಾಗಿ ಒಂದು ಪಕ್ಷವು ಭರವಸೆ ಕೊಟ್ಟಿದೆ. ಆದರೆ, ರಾಜ್ಯದಲ್ಲಿ ಎಷ್ಟು ಕುಟುಂಬಗಳಿವೆ ಎಂಬುದನ್ನೇ ಅವರು ಲೆಕ್ಕ ಹಾಕಿದಂತಿಲ್ಲ. ಲಕ್ಷಾಂತರ ಕುಟುಂಬಗಳಿವೆ. ಪ್ರತಿ ಕುಟುಂಬದ ಒಬ್ಬ ವ್ಯಕ್ತಿಗೆ ನೌಕರಿ ಕೊಟ್ಟರೆ ಸಂಬಳ ಮತ್ತು ಇತರ ಸೌಲಭ್ಯಕ್ಕಾಗಿ ಸರ್ಕಾರ ಮೇಲೆ ಆಗುವ ಹಣಕಾಸಿನ ಹೊರೆ ಎಷ್ಟು ಎಂದು ಅವರು ಪ್ರಶ್ನಿಸುತ್ತಾರೆ.

ಒಂದು ಬಾರಿ ಕೊಟ್ಟು ಬಿಡುವ ಕೊಡುಗೆಗಳು ಅರ್ಥ ವ್ಯವಸ್ಥೆಯನ್ನು ದೀರ್ಘಾವಧಿಯಲ್ಲಿ ಬಾಧಿಸುವುದಿಲ್ಲ. ಆದರೆ, ಜನಪ್ರಿಯ ಯೋಜನೆಗಳ ಜಾರಿಗಾಗಿ ಮರುಕಳಿಸುವ ವೆಚ್ಚವನ್ನು ಸರಿದೂಗಿಸುವುದು ದೊಡ್ಡ ಸವಾಲು. ಇಂತಹ ಯೋಜನೆಗಳಿಗೆ ದೊಡ್ಡ ಮೊತ್ತ ಬೇಕಾದರೆ ಅಭಿವೃದ್ಧಿ ಯೋಜನೆಗಳ ಜಾರಿಗೆ ಸರ್ಕಾರದ ಬಳಿ ಸಮಯವಾಗಲಿ ಹಣವಾಗಲಿ ಇರುವುದಿಲ್ಲ ಎಂಬ ಎಚ್ಚರಿಕೆ ನೀಡಿದವರು ಮದ್ರಾಸ್ ಸ್ಕೂಲ್ ಆಫ್ ಎಕನಾಮಿಕ್ಸ್‌ನ ನಿರ್ದೇಶಕ ಕೆ.ಆರ್. ಷಣ್ಮುಗಂ.

ಡಿಎಂಕೆ ಮುಖ್ಯಸ್ಥ ಎಂ.ಕೆ.ಸ್ಟಾಲಿನ್ ಮಗ ಉದಯನಿಧಿ ಅವರು ತೀವ್ರ ಪ್ರಚಾರದಲ್ಲಿ ತೊಡಗಿದ್ದಾರೆ

₹331 ಕೋಟಿ ಮೌಲ್ಯದ ವಸ್ತು ವಶ

ನವದೆಹಲಿ: ಐದು ವಿಧಾನಸಭೆಗಳ ಮತದಾನಕ್ಕೆ ಇನ್ನೂ ಹಲವು ದಿನಗಳಿವೆ. ಇಷ್ಟರಲ್ಲೇ ಈ ರಾಜ್ಯಗಳಿಂದ ಸಾಕಷ್ಟು ಪ್ರಮಾಣದಲ್ಲಿ ಮಾದಕವಸ್ತು, ಮದ್ಯ ಹಾಗೂ ನಗದನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ. ಈ ರಾಜ್ಯಗಳಲ್ಲಿ 2016ರ ಚುನಾವಣೆಯ ಸಂದರ್ಭದಲ್ಲಿ ವಶಪಡಿಸಿದ್ದಕ್ಕಿಂತ ಹೆಚ್ಚಿನ ವಸ್ತುಗಳನ್ನು ಈಗಾಗಲೇ ವಶಪಡಿಸಿಕೊಳ್ಳಲಾಗಿದೆ.

₹331.47 ಕೋಟಿ
ಚುನಾವಣೆ ಎದುರಿಸಲಿರುವ ರಾಜ್ಯ/ಕೇಂದ್ರಾಡಳಿತ ಪ್ರದೇಶದಿಂದ ಈವರೆಗೆ ವಶಪಡಿಸಿಕೊಂಡಿರುವ ವಸ್ತುಗಳ ಮೌಲ್ಯ. ಇದು 2016ರಲ್ಲಿ ವಶಪಡಿಸಿಕೊಂಡಿದ್ದ ವಸ್ತುಗಳ ಮೌಲ್ಯಕ್ಕಿಂದ ₹100 ಕೋಟಿಯಷ್ಟು ಹೆಚ್ಚು

₹89.48 ಕೋಟಿ
ಈವರೆಗೆ ವಶಪಡಿಸಿಕೊಂಡಿರುವ ನಗದು

₹28.93 ಕೋಟಿ
ಈವರೆಗೆ ವಶಪಡಿಸಿಕೊಂಡಿರುವ ಮದ್ಯದ ಮೌಲ್ಯ

₹75.67 ಕೋಟಿ
ವಶಪಡಿಸಿಕೊಂಡಿರುವ ಮಾದಕವಸ್ತುಗಳ ಮೌಲ್ಯ

₹48.52 ಕೋಟಿ
ಮತದಾರರಿಗೆ ಹಂಚಲು ತಂದದ್ದು ಎನ್ನಲಾದ ವಸ್ತುಗಳ ಮೌಲ್ಯ

₹88.87 ಕೋಟಿ
ವಶಪಡಿಸಿಕೊಂಡಿರುವ ಚಿನ್ನ, ಬೆಳ್ಳಿ ವಸ್ತುಗಳ ಮೌಲ್ಯ

ಎಲ್ಲಿ– ಎಷ್ಟು?
(ಮೌಲ್ಯ ಕೋಟಿಗಳಲ್ಲಿ)

ತಮಿಳುನಾಡು
- ನಗದು;₹50.86
- ಮದ್ಯ;₹1.32
- ಚಿನ್ನ, ಬೆಳ್ಳಿಯ ವಸ್ತುಗಳು;₹61.04
- ಇತರ ವಸ್ತುಗಳು;₹14.06

ಪಶ್ಚಿಮ ಬಂಗಾಳ
- ನಗದು;₹19.11
- ಮಾದಕವಸ್ತು;₹47.40
- ಇತರ ವಸ್ತುಗಳು;₹29.42

ಅಸ್ಸಾಂ
- ನಗದು;₹11.73
- ಮಾದಕವಸ್ತು;₹27.09

ಕೇರಳ
- ಚಿನ್ನ, ಬೆಳ್ಳಿ ವಸ್ತುಗಳು;₹15.23

ಬಿಜೆಪಿ–ಸಿಪಿಎಂ ಪರಸ್ಪರ ನೆರವು

ವಿವಾದ ಸೃಷ್ಟಿಸಿದ ಆರ್‌ಎಸ್‌ಎಸ್ ಮುಖಂಡ ಬಾಲಶಂಕರ್ ಹೇಳಿಕೆ

ಪ್ರಜಾವಾಣಿ ವಾರ್ತೆ

ತಿರುವನಂತಪುರ: ಕೇರಳದ ಹಲವು ಕ್ಷೇತ್ರಗಳ ಚುನಾವಣೆಯಲ್ಲಿ ಬಿಜೆಪಿ ಮತ್ತು ಸಿಪಿಎಂ ಪರಸ್ಪರರಿಗೆ ನೆರವಾಗುವಂತೆ ನಡೆದುಕೊಂಡಿದ್ದವು ಎಂದು ಆರ್‌ಎಸ್‌ಎಸ್–ಬಿಜೆಪಿ ಸಿದ್ಧಾಂತ ಪ್ರತಿಪಾದಕ ಆರ್. ಬಾಲಶಂಕರ್ ಹೇಳಿರುವುದು, ಎರಡೂ ಪಕ್ಷಗಳಿಗೆ ಮುಜುಗರ ಉಂಟು ಮಾಡಿದೆ.

ಬಿಜೆಪಿ ಗೆಲ್ಲುವ ಸಾಧ್ಯತೆ ಹೆಚ್ಚು ಇದ್ದ ಕೆಲವು ಕ್ಷೇತ್ರಗಳಲ್ಲಿ ಸಿಪಿಎಂ ಪ್ರಬಲ ಅಭ್ಯರ್ಥಿಗಳನ್ನು ಕಣಕ್ಕೆ ಇಳಿಸದೆ ನೆರವಾಗಿದೆ ಎಂದು ಆರ್‌ಎಸ್‌ಎಸ್‌ನ ಮುಖವಾಣಿ ‘ಆರ್ಗನೈಸರ್’ನ ಮಾಜಿ ಸಂಪಾದಕರೂ ಆಗಿರುವ ಬಾಲಶಂಕರ್ ಹೇಳಿದ್ದಾರೆ.

ಶಬರಿಮಲೆ ಇರುವ ಪತ್ತನಂತಿಟ್ಟ ಜಿಲ್ಲೆಯ ಕೊಣ್ಣಿ ವಿಧಾನಸಭಾ ಕ್ಷೇತ್ರದಲ್ಲಿ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಕೆ. ಸುರೇಂದ್ರನ್ ಗೆಲುವಿಗೆ ನೆರವಾಗುವುದಕ್ಕಾಗಿ ಸಿಪಿಎಂ ದುರ್ಬಲ ಅಭ್ಯರ್ಥಿಯನ್ನು ಕಣಕ್ಕೆ ಇಳಿಸಿತ್ತು. ಹಾಗೆಯೇ ಪತ್ತನಂತಿಟ್ಟ ಜಿಲ್ಲೆಯ ಅರನ್ಮುಲ ಮತ್ತು ಅಲೆಪ್ಪಿ ಜಿಲ್ಲೆಯ ಚೆಂಗನ್ನೂರು ಕ್ಷೇತ್ರಗಳಲ್ಲಿ ಬಿಜೆಪಿ ದುರ್ಬಲ ಅಭ್ಯರ್ಥಿಗಳಿಗೆ ಟಿಕೆಟ್ ನೀಡಿ ಸಿಪಿಎಂಗೆ ನೆರವಾಗಿತ್ತು ಎಂದು ಬಾಲಶಂಕರ್ ಉದಾಹರಣೆ ನೀಡಿದ್ದಾರೆ.


ಬಾಲಶಂಕರ್

ಸಿಪಿಎಂ ಅಥವಾ ಸಿಪಿಐನಿಂದ ಬಂದವರಿಗೆ ಹಲವು ಕ್ಷೇತ್ರಗಳಲ್ಲಿ ಬಿಜೆಪಿ ಟಿಕೆಟ್ ನೀಡಿದೆ ಎಂದು ಕಾಂಗ್ರೆಸ್ ಹೇಳುತ್ತಿದೆ. ಬಾಲಶಂಕರ್ ಅವರ ಹೇಳಿಕೆಯು ಕಾಂಗ್ರೆಸ್‌ನ ಆರೋಪಕ್ಕೆ ಪುಷ್ಟಿ ಒದಗಿಸಿದೆ. ಬಾಲಶಂಕರ್ ಅವರ ಹೇಳಿಕೆಯ ಬಗ್ಗೆ ಸಿಪಿಎಂ ಮತ್ತು ಬಿಜೆಪಿ ಜನರಿಗೆ ಸ್ಪಷ್ಟನೆ ಕೊಡಬೇಕು ಎಂದು ಕೇರಳ ವಿಧಾನಸಭೆಯ ವಿರೋಧ ಪಕ್ಷ ನಾಯಕ ರಮೇಶ್ ಚೆನ್ನಿತ್ತಲ ಆಗ್ರಹಿಸಿದ್ದಾರೆ. ಈ ಬಾರಿಯ ಚುನಾವಣೆಯಲ್ಲಿ ಸಿಪಿಎಂ ಗೆಲುವಿನ ಖಾತರಿಗೆ ಬಿಜೆಪಿ ಭಾರಿ ಕೆಲಸ ಮಾಡುತ್ತಿದೆ. ಸಿಪಿಎಂ ಮಾಡುತ್ತಿರುವ ರಾಜಕಾರಣ ರಾಜ್ಯಕ್ಕೆ ಅಪಾಯಕಾರಿ, ಇದನ್ನು ಜನರು ಮನಗಾಣುತ್ತಾರೆ ಎಂದು ಚೆನ್ನಿತ್ತಲ ಹೇಳಿದ್ದಾರೆ.

ವಿಧಾನಸಭೆಗೆ ಸ್ಪರ್ಧಿಸಲು ಟಿಕೆಟ್ ಸಿಕ್ಕಿಲ್ಲ ಎಂಬ ಕಾರಣಕ್ಕೆ ಬಾಲಶಂಕರ್ ಅವರಿಗೆ ಮುನಿಸು ಇದೆ. ಆ ಕಾರಣದಿಂದಲೇ ಅವರು ಆಧಾರರಹಿತ ಹೇಳಿಕೆಗಳನ್ನು ನೀಡುತ್ತಿದ್ದಾರೆ ಎಂದು ಬಿಜೆಪಿ ಮುಖಂಡರು ಹೇಳಿದ್ದಾರೆ.

ಕೇಂದ್ರ ಸಚಿವ ವಿ. ಮುರಳೀಧರನ್ ಅವರೂ ಬಾಲಶಂಕರ್ ಅವರ ಆರೋಪವನ್ನು ಅಲ್ಲಗಳೆದಿದ್ದಾರೆ. ಟಿಕೆಟ್ ನಿರಾಕರಣೆಯಿಂದಾದ ಬೇಸರವನ್ನು ಅವರು ಈ ರೀತಿ ಹೊರಹಾಕಿದ್ದಾರೆ ಎಂದು ಹೇಳಿದ್ದಾರೆ. ಆರೋಪವು ಆಧಾರರಹಿತ ಎಂದು ಕೇರಳ ಬಿಜೆಪಿ ಘಟಕದ ಅಧ್ಯಕ್ಷ ಕೆ.ಸುರೇಂದ್ರನ್ ಹೇಳಿದ್ದಾರೆ. ಸಿಪಿಎಂ ಮತ್ತು ಬಿಜೆಪಿ ನಡುವೆ ಯಾವುದೇ ಒಳ ಒಪ್ಪಂದ ಇಲ್ಲ ಎಂದು ಬಿಜೆಪಿಯ ಏಕೈಕ ಶಾಸಕ ಒ. ರಾಜಗೋಪಾಲ್ ಹೇಳಿದ್ದಾರೆ.

ಈಗ ಆಗಿರುವ ಮುಜುಗರ ತಪ್ಪಿಸುವುದಕ್ಕಾಗಿ ಸಿಪಿಎಂ ಕೂಡ ಬಿಜೆಪಿ ಮುಖಂಡರ ನಿಲುವನ್ನೇ ತಳೆದಿದೆ.

ಬಾಲಶಂಕರ್ ಅವರು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಹತ್ತಿರ ಇರುವವರು ಎನ್ನಲಾಗುತ್ತಿದೆ. ‘ನರೇಂದ್ರ ಮೋದಿ: ಕ್ರಿಯೇಟಿವ್ ಡಿಸ್‌ರಪ್ಟರ್’ ಎಂಬ ಪುಸ್ತಕವನ್ನು ಬಾಲಶಂಕರ್ ಬರೆದಿದ್ದಾರೆ. ಬಾಲಶಂಕರ್ ಅವರ ಹೆಸರನ್ನು ಚೆಂಗನ್ನೂರು ಕ್ಷೇತ್ರದಿಂದ ಪರಿಗಣಿಸಲಾಗಿತ್ತು.

ಕೇರಳ ಸಿ.ಎಂ ಆಸ್ತಿ ಮೌಲ್ಯ ₹54 ಲಕ್ಷ

ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರು ನಾಮಪತ್ರದ ಜತೆಗೆ ನೀಡಿರುವ ಪ್ರಮಾಣಪತ್ರದ ಪ್ರಕಾರ ಅವರ ಒಟ್ಟು ಆಸ್ತಿ ಮೌಲ್ಯ ₹54 ಲಕ್ಷ. ಎರಡು ನಿವೇಶನಗಳು ಮತ್ತು ಅದರಲ್ಲಿರುವ ಮನೆಯ ಮೌಲ್ಯ ₹51.95 ಲಕ್ಷ. ಅವರ ಚರಾಸ್ತಿಯ ಮೌಲ್ಯ ₹2.04 ಲಕ್ಷ. ಅದರಲ್ಲಿ ಬ್ಯಾಂಕ್ ಖಾತೆಯಲ್ಲಿರುವ ₹78,048 ಮತ್ತು ಮಲಯಾಳಂ ಕಮ್ಯುನಿಕೇಷನ್ ಲಿ.ನ ₹10 ಸಾವಿರ ಮೌಲ್ಯದ ಷೇರುಗಳು ಸೇರಿವೆ. ವಿಜಯನ್ ಅವರ ಹೆಂಡತಿ ಕಮಲಾ ಅವರ ಹೆಸರಿನಲ್ಲಿರುವ ಆಸ್ತಿಯ ಮೌಲ್ಯ ₹35 ಲಕ್ಷ.

ಎನ್‌ಡಿಎ ತೊರೆದ ಥಾಮಸ್ ಬಣ

ಕೇಂದ್ರದ ಮಾಜಿ ಸಚಿವ ಪಿ.ಸಿ.ಥಾಮಸ್ ನೇತೃತ್ವದ ಕೇರಳ ಕಾಂಗ್ರೆಸ್ (ಥಾಮಸ್) ಬಣವು ಎನ್‌ಡಿಎ ತೊರೆದು ಕೇರಳ ಕಾಂಗ್ರೆಸ್ (ಜೋಸೆಫ್) ಬಣದ ಜತೆಗೆ ವಿಲೀನವಾಗಲು ನಿರ್ಧರಿಸಿದೆ. ಥಾಮಸ್ ಅವರು ಆರು ಬಾರಿ ಸಂಸದರಾಗಿದ್ದವರು. 2004ರಲ್ಲಿ ಕೇರಳದ ಮೊದಲ ಎನ್‌ಡಿಎ ಸಂಸದ ಅವರು. ಈ ಬಾರಿ ಅವರ ಪಕ್ಷಕ್ಕೆ ಒಂದೂ ಕ್ಷೇತ್ರದಲ್ಲಿ ಟಿಕೆಟ್ ನೀಡದಿರುವುದು ಅವರು ಎನ್‌ಡಿಎ ತೊರೆಯಲು ಕಾರಣ. ಕೇರಳ ಕಾಂಗ್ರೆಸ್ (ಜೋಸೆಫ್) ಬಣವು ಯುಡಿಎಫ್ ಜತೆಗಿದೆ. ಹಾಗಾಗಿ, ಯುಡಿಎಫ್ ಪರವಾಗಿ ಪ್ರಚಾರ ಮಾಡುವುದಾಗಿ ಥಾಮಸ್ ಹೇಳಿದ್ದಾರೆ.

ಶೋಭಾ ಸುರೇಂದ್ರನ್‌ಗೆ ಟಿಕೆಟ್

ಕೇರಳದ ಬಿಜೆಪಿಯ ಹಿರಿಯ ಮಹಿಳಾ ನಾಯಕಿ ಶೋಭಾ ಸುರೇಂದ್ರನ್ ಅವರನ್ನು ತಿರುವನಂತಪುರದ ಕಳಕ್ಕೂಟಂ ಕ್ಷೇತ್ರದಿಂದ ಕಣಕ್ಕೆ ಇಳಿಸಲು ನಿರ್ಧರಿಸಲಾಗಿದೆ. ಶೋಭಾ ಅವರು ಪಕ್ಷದ ರಾಜ್ಯ ಘಟಕದ ನಾಯಕರ ಜತೆ ಉತ್ತಮ ಸಂಬಂಧ ಹೊಂದಿಲ್ಲ. ಹಾಗಾಗಿ, ರಾಜ್ಯದಿಂದ ಶಿಫಾರಸು ಮಾಡಲಾದ ಪಟ್ಟಿಯಲ್ಲಿ ಶೋಭಾ ಹೆಸರು ಇರಲಿಲ್ಲ. ಹಾಗಿದ್ದರೂ ಪಕ್ಷದ ವರಿಷ್ಠರ ಮಧ್ಯಪ್ರವೇಶದಿಂದಾಗಿ ಶೋಭಾ ಅವರಿಗೆ ಟಿಕೆಟ್ ನೀಡಲಾಗಿದೆ. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಪಾಲಕ್ಕಾಡ್ ಕ್ಷೇತ್ರದಿಂದ ಸ್ಪರ್ಧಿಸಿದ್ದ ಅವರು 40,076 ಮತಗಳೊಂದಿಗೆ ಎರಡನೇ ಸ್ಥಾನ ಪಡೆದಿದ್ದರು.

ಟಿಎಂಸಿ ಪ್ರಣಾಳಿಕೆ: ಪ್ರತಿ ಕುಟುಂಬಕ್ಕೂ ಆದಾಯ ಖಾತರಿ ಭರವಸೆ

ಕೋಲ್ಕತ್ತ (ಪಿಟಿಐ): ಎಲ್ಲ ಕುಟುಂಬಗಳಿಗೆ ಆದಾಯದ ಖಾತರಿ ನೀಡುವ ಯೋಜನೆ, ವಿದ್ಯಾರ್ಥಿ ಕ್ರೆಡಿಟ್ ಕಾರ್ಡ್, ಹಲವು ಜಾತಿಗಳನ್ನು ಒಬಿಸಿಗೆ ಸೇರಿಸುವುದನ್ನು ಪರಿಶೀಲಿಸಲು ಕಾರ್ಯಪಡೆ ರಚನೆಯಂತಹ ‘ಅಭಿವೃದ್ಧಿ ಆಧಾರಿತ’ ಪ್ರಣಾಳಿಕೆಯನ್ನು ಟಿಎಂಸಿ ಮುಖ್ಯಸ್ಥೆ ಮಮತಾ ಬ್ಯಾನರ್ಜಿ ತಮ್ಮ ನಿವಾಸದಲ್ಲಿ ಬುಧವಾರ ಬಿಡುಗಡೆ ಮಾಡಿದ್ದಾರೆ.

ತಮ್ಮ ಸರ್ಕಾರವು ರಾಜ್ಯದಲ್ಲಿನ ಬಡತನವನ್ನು ಶೇ 40ರಷ್ಟು ಕಡಿಮೆ ಮಾಡಿದೆ. ರೈತರಿಗೆ ನೀಡುವ ವಾರ್ಷಿಕ ಆರ್ಥಿಕ ನೆರವನ್ನು ಈಗಿನ ₹6,000ದಿಂದ ₹10 ಸಾವಿರಕ್ಕೆ ಹೆಚ್ಚಿಸಲಾಗುವುದು ಎಂದು ಅವರು ಭರವಸೆ ಕೊಟ್ಟಿದ್ದಾರೆ.

‘ಬಂಗಾಳದಲ್ಲಿ ಇದೇ ಮೊದಲಿಗೆ ಪ್ರತಿ ಕುಟುಂಬಕ್ಕೂ ಕನಿಷ್ಠ ಮೂಲ ಆದಾಯದ ಖಾತರಿ ದೊರೆಯಲಿದೆ. ಈ ಯೋಜನೆ ಅಡಿಯಲ್ಲಿ ರಾಜ್ಯದ 1.6 ಕೋಟಿ ಸಾಮಾನ್ಯ ವರ್ಗದ ಕುಟುಂಬಗಳಿಗೆ ಪ್ರತಿ ತಿಂಗಳು ₹500 ನೀಡಲಾಗುವುದು. ಪರಿಶಿಷ್ಟ ಜಾತಿ ಮತ್ತು ಪಂಗಡದ ಕುಟುಂಬಗಳಿಗೆ ತಿಂಗಳಿಗೆ ₹1,000 ದೊರೆಯಲಿದೆ. ಈ ಮೊತ್ತವನ್ನು ಕುಟುಂಬದ ಮಹಿಳಾ ಮುಖ್ಯಸ್ಥೆಯ ಬ್ಯಾಂಕ್ ಖಾತೆಗೆ ಜಮಾ ಮಾಡಲಾಗುವುದು’ ಎಂದು ಮಮತಾ ಹೇಳಿದ್ದಾರೆ.

₹10 ಲಕ್ಷದ ವರೆಗೆ ಸಾಲ ಪಡೆಯಲು ಅವಕಾಶ ಇರುವ ‘ವಿದ್ಯಾರ್ಥಿ ಕ್ರೆಡಿಟ್ ಕಾರ್ಡ್ ಯೋಜನೆ’ ಜಾರಿ ಮಾಡಲಾಗುವುದು. ಈ ಸಾಲಕ್ಕೆ ಶೇ 4ರಷ್ಟು ಮಾತ್ರ ಬಡ್ಡಿ ಇರುತ್ತದೆ. 10 ಲಕ್ಷ ಸಣ್ಣ ಮತ್ತು ಮಧ್ಯಮ ಗಾತ್ರದ ಕೈಗಾರಿಕೆಗಳು ಮತ್ತು 2,000 ದೊಡ್ಡ ಕೈಗಾರಿಕಾ ಘಟಕಗಳನ್ನು ಮುಂದಿನ ಐದು ವರ್ಷಗಳಲ್ಲಿ ಆರಂಭಿಸಲಾಗುವುದು ಎಂದು ಅವರು ಭರವಸೆ ಕೊಟ್ಟಿದ್ದಾರೆ.

ಪ್ರಣಾಳಿಕೆ ಬಿಡುಗಡೆ ಮಾಡಿದ ಮಮತಾ ಬ್ಯಾನರ್ಜಿ ಪಿಟಿಐ ಚಿತ್ರ

ಮೂರು ಕ್ಷೇತ್ರಗಳ ಗೆಲುವಿಗೆ ಬಿಎಸ್‌ವೈ ಗುರಿ

ಬೆಂಗಳೂರು: ಮೂರು ಕ್ಷೇತ್ರಗಳ ಉಪಚುನಾವಣೆಯಲ್ಲಿ ಶತಾಯಗತಾಯ ಗೆಲ್ಲಲೇಬೇಕು. ಇದಕ್ಕಾಗಿ ಎಲ್ಲ ಸಚಿವರೂ ಶ್ರಮಿಸಬೇಕು ಎಂದು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ, ತಮ್ಮ ಸಂಪುಟ ಸಹೋದ್ಯೋಗಿಗಳಿಗೆ ತಾಕೀತು ಮಾಡಿದ್ದಾರೆ.

ಸಚಿವ ಸಂಪುಟ ಸಭೆಯ ಕಾರ್ಯಸೂಚಿಯ ಚರ್ಚೆ ಮುಗಿದ ಬಳಿಕ ಅಧಿಕಾರಿಗಳನ್ನು ಹೊರಗೆ ಕಳುಹಿಸಿದ ಮುಖ್ಯಮಂತ್ರಿ, ಉಪಚುನಾವಣೆ ಕುರಿತು ಸಹೋದ್ಯೋಗಿಗಳ ಜತೆ ಅನೌಪಚಾರಿಕವಾಗಿ ಮಾತುಕತೆ ನಡೆಸಿದರು.

ಈ ಕ್ಷಣದಿಂದಲೇ ಎಲ್ಲ ಸಚಿವರೂ ತಕ್ಷಣದಿಂದಲೇ ಕಾರ್ಯಪ್ರವೃತ್ತರಾಗಬೇಕು. ಯಾವುದೇ ಸಮಯದಲ್ಲಿ ಅಭ್ಯರ್ಥಿಗಳ ಪಟ್ಟಿಯನ್ನು ವರಿಷ್ಠರು ಘೋಷಿಸಬಹುದು. ಅಭ್ಯರ್ಥಿ ಯಾರೇ ಆಗಲಿ; ಪಕ್ಷದ ಅಭ್ಯರ್ಥಿಗಳನ್ನು ಗೆಲ್ಲಿಸಲು ಪಣತೊಡಬೇಕು ಎಂದು ಸೂಚಿಸಿದರು.

ಬೆಳಗಾವಿ ಲೋಕಸಭಾ ಕ್ಷೇತ್ರ ಅನೇಕ ವರ್ಷಗಳಿಂದ ಬಿಜೆಪಿ ಹಿಡಿತದಲ್ಲಿಯೇ ಇದೆ. ಅಲ್ಲಿ ಯಾರನ್ನೇ ಕಣಕ್ಕೆ ಇಳಿಸಿದರೂ ಗೊಂದಲ, ಪ್ರತಿಷ್ಠೆಗೆ ಅವಕಾಶ ಕೊಡದಂತೆ ಕ್ಷೇತ್ರ ಉಳಿಸಿಕೊಳ್ಳಲು ಶತಾಯಗತಾಯ ಪ್ರಯತ್ನಿಸಬೇಕು. ಬಸವಕಲ್ಯಾಣ ಮತ್ತು ಮಸ್ಕಿ ಕ್ಷೇತ್ರಗಳನ್ನು ಹಿಂದಿನ ಚುನಾವಣೆಯಲ್ಲಿ ಕಾಂಗ್ರೆಸ್ ಗೆದ್ದಿತ್ತು. ಕಾಂಗ್ರೆಸ್ ತೊರೆದು ಬಂದ ಪ್ರತಾಪಗೌಡ ಪಾಟೀಲರಿಗೆ ಮಸ್ಕಿಯಲ್ಲಿ ಟಿಕೆಟ್ ನೀಡುವ ಸಾಧ್ಯತೆ ಹೆಚ್ಚಿದೆ. ಈ ಎರಡೂ ಕ್ಷೇತ್ರಗಳನ್ನು ಗೆಲ್ಲಲು ಕಾಂಗ್ರೆಸ್ ಎಷ್ಟೇ ಸವಾಲು ಒಡ್ಡಿದರೂ ಅದನ್ನು ಎದುರಿಸಿ ಪಕ್ಷದ ಅಭ್ಯರ್ಥಿಗಳನ್ನು ಗೆಲ್ಲಿಸಲು ಈಗಿನಿಂದಲೇ ಕಾರ್ಯತಂತ್ರ ರೂಪಿಸಬೇಕು ಎಂದು ಸಲಹೆ ನೀಡಿದರು.

ನಂದಿಗ್ರಾಮ ಚಳವಳಿ ಕೀರ್ತಿಗೆ ಪೈಪೋಟಿ

• ಸೌಮ್ಯ ದಾಸ್

ನಂದಿಗ್ರಾಮ: ನಂದಿಗ್ರಾಮದಲ್ಲಿ ಭೂಸ್ವಾಧೀನ ವಿರೋಧಿ ಹೋರಾಟ ನಡೆಸುತ್ತಿದ್ದವರ ಮೇಲೆ 2007ರಲ್ಲಿ ಪೊಲೀಸರು ನಡೆಸಿದ ಗೋಲಿಬಾರ್‌ನಲ್ಲಿ 14 ಮಂದಿ ಬಲಿಯಾಗಿ ಈಗ 14 ವರ್ಷಗಳಾಗಿವೆ. 2011ರಲ್ಲಿ ಟಿಎಂಸಿ ಅಧಿಕಾರಕ್ಕೆ ಬರಲು ಈ ಚಳವಳಿಯೇ ಮುಖ್ಯ ಕಾರಣ. ಈಗ, ಈ ಚಳವಳಿಯ ಯಶಸ್ಸಿನ ಕೀರ್ತಿಗಾಗಿ ಟಿಎಂಸಿ ಮುಖ್ಯಸ್ಥೆ ಮಮತಾ ಬ್ಯಾನರ್ಜಿ ಮತ್ತು ಮಮತಾ ಅವರ ಆಪ್ತರಾಗಿದ್ದ, ಟಿಎಂಸಿ ತೊರೆದು ಬಿಜೆಪಿ ಸೇರಿರುವ ಸುವೇಂದು ಅಧಿಕಾರಿ ನಡುವೆ ಸ್ಪರ್ಧೆ ಏರ್ಪಟ್ಟಿದೆ.

ಸ್ಥಳೀಯವಾಗಿ ನಡೆಯುವ ಚುನಾವಣಾ ಪ್ರಚಾರದಲ್ಲಿಯೂ ಈ ಸ್ಪರ್ಧೆಯ ಬಿಸಿ ಕಾಣಿಸುತ್ತಿದೆ. ಚಳವಳಿಯ ಪ್ರಮುಖ ನಾಯಕ ತಾನೇ ಆಗಿದ್ದೆ ಎಂಬ ಸುವೇಂದು ಹೇಳಿಕೆಯನ್ನು ಟಿಎಂಸಿ ಮುಖಂಡಅಬುತಾಹಿರ್‌ಖಂಡಿಸಿದ್ದಾರೆ. ‘ನಂದಿಗ್ರಾಮದ ಅಭಿವೃದ್ಧಿಗೆ ತಾನೇ ಕಾರಣ ಎಂದು ಅವರು (ಸುವೇಂದು) ಹೇಳಿದರೆ ಜನರು ಅವರನ್ನು ಓಡಿಸುತ್ತಾರೆ’ ಎಂದು ತಾಹಿರ್ ಹೇಳಿದ್ದಾರೆ.

ನಂದಿಗ್ರಾಮ ಚಳವಳಿಯ ಹುತಾತ್ಮರಿಗೆ ನಮನ ಸಲ್ಲಿಸಲು ಹೋಗುತ್ತಿದ್ದ ಸುವೇಂದು ಅವರಿದ್ದ ವಾಹನ ಸಾಲನ್ನು ಟಿಎಂಸಿಯ ನೂರಾರು ಕಾರ್ಯಕರ್ತರು ಸೋಮವಾರ ತಡೆದಿದ್ದರು. ವಿಶ್ವಾಸಾರ್ಹತೆ ಕಳೆದುಕೊಂಡ ‘ಮೀರ್ ಜಾಫರ್’ ಸುವೇಂದು ಅವರಿಗೆ ಹುತಾತ್ಮರಿಗೆ ನಮನ ಸಲ್ಲಿಸುವ ಹಕ್ಕಿಲ್ಲ ಎಂದು ಕಾರ್ಯಕರ್ತರು ಹೇಳಿದ್ದರು.

‘ನಂದಿಗ್ರಾಮದ ನಿಜವಾದ ವಂಚಕಿ ಮಮತಾ’ ಎಂದು ಸುವೇಂದು ಹೇಳಿದ್ದಾರೆ. ನಂದಿಗ್ರಾಮ ಗೋಲಿಬಾರ್ ಪ್ರಕರಣದಲ್ಲಿ ಭಾಗಿಯಾಗಿದ್ದ ಪೊಲೀಸರಿಗೆ ಮಮತಾ ಬಡ್ತಿ ನೀಡಿದ್ದಾರೆ ಎಂದು ಅವರು ಆರೋಪಿಸಿದ್ದಾರೆ.

ಸುವೇಂದು ಅಧಿಕಾರಿ

ಸುವೇಂದು ಅವರು ಚುನಾವಣೆಗೆ ಮುನ್ನ ಬಿಜೆಪಿ ಸೇರಿದ್ದು ಶ್ರೀಪುರ ಸಮೀಪದ ದೈಯಾನ್ ಖಾನ್‌ಗೆ ಇಷ್ಟವಾಗಿಲ್ಲ. ಸುವೇಂದು ಅವರ ಕ್ರಮವು ನಂದಿಗ್ರಾಮದ ಜನರಿಗೆ ಮಾಡಿದ ಮೋಸ ಎಂಬುದು ಖಾನ್ ಅವರ ಅಭಿಪ್ರಾಯ. 2007ರ ಗೋಲಿಬಾರ್‌ನಲ್ಲಿ ಅವರ ಸಣ್ಣ ಮಗ ಬಲಿಯಾಗಿದ್ದಾರೆ.

ನಂದಿಗ್ರಾಮದ ಚಳವಳಿಯಲ್ಲಿ ಭಾಗವಹಿಸಿದವರು ಜಾತಿ ನೋಡಿರಲಿಲ್ಲ. ಆದರೆ, ಬಿಜೆಪಿಯವರು ಧ್ರುವೀಕರಣ ರಾಜಕಾರಣ ಮಾಡುತ್ತಿದ್ದಾರೆ. ಚಳವಳಿಯ ಹೆಸರಿಗೆ ಮಸಿ ಬಳಿಯುತ್ತಿದ್ದಾರೆ ಎಂದು ಖಾನ್ ಅವರ ನೆರೆಮನೆಯ ವ್ಯಕ್ತಿ ಹೇಳುತ್ತಾರೆ.

ನಂದಿಗ್ರಾಮ ವಿಧಾನಸಭಾ ಕ್ಷೇತ್ರದಲ್ಲಿ ಎದುರಾಳಿಗಳಾಗಿರುವ ಇಬ್ಬರೂ ನಾಯಕರು ಪರಸ್ಪರರನ್ನು ಹೊರಗಿನವರು ಎಂದು ಆರೋಪಿಸುತ್ತಿದ್ದಾರೆ. ಮಮತಾ ಅವರನ್ನು ಹೊರಗಿನವರು ಎಂದು ಸುವೇಂದು ಹೇಳುತ್ತಿದ್ದಾರೆ. ತಾವು ಮಣ್ಣಿನ ಮಗ ಎಂಬುದು ಅವರ ಪ್ರತಿಪಾದನೆ. ‘ನಂದಿಗ್ರಾಮಕ್ಕೆ ಮೇದಿನಿಪುರದ ಮಣ್ಣಿನ ಮಗ ಬೇಕು’ ಎಂಬ ಪೋಸ್ಟರ್‌ಗಳನ್ನು ಬಿಜೆಪಿ ಎಲ್ಲೆಡೆ ಹಾಕಿದೆ. ‘ಗುಜರಾತ್‌ನಿಂದ ಬಂದವರು ಈಗ ಸ್ಥಳೀಯರಾಗಿದ್ದಾರೆ, ನಾನು ಹೊರಗಿನವಳಾಗಿದ್ದೇನೆ’ ಎನ್ನುವ ಮೂಲಕ ಮಮತಾ ತಿರುಗೇಟು ನೀಡಿದ್ದಾರೆ.

ಸುವೇಂದು ನಾಮಪತ್ರ ವಜಾಕ್ಕೆ ಟಿಎಂಸಿ ಕೋರಿಕೆ

ಕೋಲ್ಕತ್ತ (ಪಿಟಿಐ): ಟಿಎಂಸಿ ಮುಖ್ಯಸ್ಥೆ ಮಮತಾ ಬ್ಯಾನರ್ಜಿ ಎದುರು ನಂದಿಗ್ರಾಮದಲ್ಲಿ ಸ್ಪರ್ಧಿಸುತ್ತಿರುವ ಬಿಜೆಪಿ ಅಭ್ಯರ್ಥಿ ಸುವೇಂದು ಅಧಿಕಾರಿ ಅವರ ಹೆಸರು ಹಲ್ದಿಯಾ ಮತ್ತು ನಂದಿಗ್ರಾಮ ಎರಡೂ ಕ್ಷೇತ್ರಗಳ ಮತದಾರರ ಪಟ್ಟಿಯಲ್ಲಿ ‘ಇರುವಂತೆ ತೋರುತ್ತಿದೆ’. ಹಾಗಾಗಿ, ಅವರ ನಾಮಪತ್ರವನ್ನು ವಜಾ ಮಾಡಬೇಕು ಎಂದು ಚುನಾವಣಾ ಆಯೋಗವನ್ನು ಟಿಎಂಸಿ ಒತ್ತಾಯಿಸಿದೆ. ಮಮತಾ ಅವರ ನಾಮಪತ್ರವನ್ನು ತಿರಸ್ಕರಿಸಬೇಕು ಎಂದು ಅವರ ಒಂದು ಕಾಲದ ಪರಮಾಪ್ತ ಸುವೇಂದು ಇತ್ತೀಚೆಗೆ ಆಗ್ರಹಿಸಿದ್ದರು.

ಜನಪ್ರಾತಿನಿಧ್ಯ ಕಾಯ್ದೆಯ ಸೆಕ್ಷನ್ 17ರ ಪ್ರಕಾರ, ಒಬ್ಬ ವ್ಯಕ್ತಿಯ ಹೆಸರು ಒಂದಕ್ಕಿಂತ ಹೆಚ್ಚು ಕ್ಷೇತ್ರಗಳ ಮತದಾರರ ಪಟ್ಟಿಯಲ್ಲಿ ಇರುವಂತಿಲ್ಲ ಎಂದು ನಂದಿಗ್ರಾಮ ಚುನಾವಣಾಧಿಕಾರಿಗೆ ಬರೆದ ಪತ್ರದಲ್ಲಿ ಟಿಎಂಸಿ ರಾಜ್ಯಸಭಾ ಸದಸ್ಯ ಡೆರೆಕ್ ಒ ಬ್ರಯಾನ್ ಹೇಳಿದ್ದಾರೆ.

ಹಲ್ದಿಯಾ ಕ್ಷೇತ್ರದಿಂದ ನಂದಿಗ್ರಾಮಕ್ಕೆ ತಮ್ಮ ಹೆಸರು ವರ್ಗಾಯಿಸುವಂತೆ ಸುವೇಂದು ಅವರು ಅರ್ಜಿ ಸಲ್ಲಿಸಿದಂತೆ ಕಾಣಿಸುತ್ತಿದೆ. ಆದರೆ, ನಂದಿಗ್ರಾಮದ ನಿವಾಸಿ ತಾವು ಎಂದು ಸುವೇಂದು ಅವರು ಸುಳ್ಳು ಮಾಹಿತಿ ನೀಡಿದ್ದಾರೆ. ಮತಗಟ್ಟೆ ಮಟ್ಟದ ಅಧಿಕಾರಿಯು ಪರಿಶೀಲನೆಗಾಗಿ ಸುವೇಂದು ಅವರ ನಿವಾಸಕ್ಕೆ ಹೋದಾಗ ಅಲ್ಲಿ ಅವರು ಇರಲಿಲ್ಲ. ಸುವೇಂದು ಅವರು ಅವರೇ ಸೂಚಿಸಿರುವ ನಂದನಯಕಬರ್ ಗ್ರಾಮದಲ್ಲಿ ಕಳೆದ ಆರು ತಿಂಗಳಿನಿಂದ ವಾಸಿಸುತ್ತಿಲ್ಲ. ಅವರು ಅಲ್ಲಿನ ಕಾಯಂ ನಿವಾಸಿಯಂತು ಅಲ್ಲವೇ ಅಲ್ಲ ಎಂದು ಡೆರೆಕ್ ಅವರು ತಮ್ಮ ಪತ್ರದಲ್ಲಿ ವಿವರಿಸಿದ್ದಾರೆ.

ಛೋಟಾ ರಾಜನ್ ಸೇರಿ 7 ಆರೋಪಿಗಳಿಗೆ ಕಠಿಣ ಸಜೆ

ಪ್ರಜಾವಾಣಿ ವಾರ್ತೆ

ಮುಂಬೈ: ಬಿಲ್ಡರ್ ಅಜಯ್ ಗೋಸಲಿಯ ಮೇಲೆ ಗುಂಡಿನ ದಾಳಿ ನಡೆಸಿದ್ದ ಪ್ರಕರಣದಲ್ಲಿ ಭೂಗತ ಪಾತಕಿ ರಾಜೇಂದ್ರ ನಿಖಾಲ್ಜೆ ಅಲಿಯಾಸ್ ಛೋಟಾ ರಾಜನ್ ಮತ್ತು ಆತನ ಆರು ಮಂದಿ ಸಹಚರರಿಗೆ ಮುಂಬೈ ವಿಶೇಷ ನ್ಯಾಯಾಲಯವು 10 ವರ್ಷಗಳ ಕಠಿಣ ಜೈಲು ಶಿಕ್ಷೆ ಮತ್ತು ತಲಾ ₹5 ಲಕ್ಷ ದಂಡ ವಿಧಿಸಿದೆ.

ಆರೋಪಿಗಳ ವಿರುದ್ಧ ಮಹಾರಾಷ್ಟ್ರ ಸಂಘಟಿತ ಅಪರಾಧ ನಿಯಂತ್ರಣ ಕಾಯ್ದೆ (ಎಂಸಿಒಸಿಎ)ಯಡಿ ಪ್ರಕರಣ ದಾಖಲಾಗಿತ್ತು.

ಛೋಟಾ ರಾಜನ್ ಮತ್ತು ಆತನ ಗ್ಯಾಂಗ್ ಸದಸ್ಯರಾದ ಕೌಶಿಕ್ ರಾಜ್‌ಗೌರ್, ಅರವಿಂದ ಅಲಿಯಾಸ್ ಅರ್ನ್ಯಾ ಶಿಂಧೆ, ಸುನಿಲ್ ಕುಮಾರ್ ಅಲಿಯಾಸ್ ಪಿಯೂಷ್, ವಿಲಾಸ್ ಭಾರತಿ, ಪ್ರಕಾಶ್ ಅಲಿಯಾಸ್ ಪಾಕ್ಯ ಯಾನೆ ಭಾವು, ರೋಹಿತ್ ಅಲಿಯಾಸ್ ಸತೀಶ್‌ಗೆ ಮೋಕಾ ನ್ಯಾಯಾಲಯದ ವಿಶೇಷ ನ್ಯಾಯಾಧೀಶ ಎ.ಟಿ. ವಾಂಖೆಡೆ ಮಂಗಳವಾರ ಶಿಕ್ಷೆ ವಿಧಿಸಿದ್ದಾರೆ.

ರಾಜನ್

2012ರ ಆಗಸ್ಟ್ 28ರಂದು ಬಿಲ್ಡರ್ ಗೋಸಲಿಯ ಅವರು ಇನ್ಫಿನಿಟಿ ಮಾಲ್‌ನ ಗೇಟ್‌ನಿಂದ ನಿರ್ಗಮಿಸುವಾಗ ಅವರ ಮೇಲೆ ಮೂವರಿಂದ ಗುಂಡಿನ ದಾಳಿ ನಡೆದಿತ್ತು. ದಾಳಿಯಲ್ಲಿ ಗೋಸಲಿಯ ಅವರ ಗಂಟಲು, ಭುಜ, ಹೊಟ್ಟೆ ಮತ್ತು ಅಂಗೈಗೆ ಗಾಯಗಳಾಗಿದ್ದವು. ಬಂಗೂರ್ ನಗರ ಪೊಲೀಸ್ ಠಾಣೆಯಲ್ಲಿ ಕೊಲೆ ಯತ್ನದ ಪ್ರಕರಣ ದಾಖಲಾಗಿತ್ತು. ಮಹಾರಾಷ್ಟ್ರ ಸರ್ಕಾರದ ಕೋರಿಕೆ ನಂತರ ಈ ಪ್ರಕರಣವನ್ನು ಮೊದಲು ಸಿಐಡಿಗೆ ವರ್ಗಾಯಿಸಲಾಗಿತ್ತು. ನಂತರ 2016ರ ಏಪ್ರಿಲ್ 7ರಂದು ಸಿಬಿಐಗೆ ವಹಿಸಲಾಗಿತ್ತು.

‘ಸಾಮಾಜಿಕ ಮಾಧ್ಯಮ ನಿಯಂತ್ರಣ ಪ್ರಾಧಿಕಾರ ರಚಿಸುವ ಸಾಧ್ಯತೆ ಇಲ್ಲ’

ನವದೆಹಲಿ: ಸಾಮಾಜಿಕ ಮಾಧ್ಯಮಗಳಿಗೆ ನಿಯಂತ್ರಣ ಹೇರುವ ಸಂಬಂಧ ಯಾವುದೇ ಪ್ರಸ್ತಾವ ಮಾಹಿತಿ ತಂತ್ರಜ್ಞಾನ ಸಚಿವಾಲಯದ ಮುಂದೆ ಇಲ್ಲ ಎಂದು ಸರ್ಕಾರ ಬುಧವಾರ ಸಂಸತ್ತಿಗೆ ತಿಳಿಸಿದೆ.

ಸಾಮಾಜಿಕ ಜಾಲತಾಣಗಳು, ಒಟಿಟಿ ವೇದಿಕೆಗಳು ಮತ್ತು ಡಿಜಿಟಲ್ ಸುದ್ದಿ ಪೋರ್ಟಲ್‌ಗಳಲ್ಲಿ ಬಳಕೆದಾರರ ದೂರುಗಳನ್ನು ಆಲಿಸಲು ಸಾಧ್ಯವಾಗುವಂತೆ ‘ಮಾಹಿತಿ ತಂತ್ರಜ್ಞಾನ (ಮಧ್ಯಸ್ಥ ಸಂಸ್ಥೆಗಳಿಗೆ ಮಾರ್ಗಸೂಚಿ ಮತ್ತು ಡಿಜಿಟಲ್ ಮಾಧ್ಯಮಕ್ಕೆ ನೀತಿ ಸಂಹಿತೆ) ನಿಯಮಗಳು– 2021’ ಅನ್ನು ಕೇಂದ್ರ ಸರ್ಕಾರವು ಪ್ರಕಟಿಸಿದೆ. ಆದರೆ ಇವುಗಳನ್ನು ನಿಯಂತ್ರಿಸುವ ಉದ್ದೇಶವಿಲ್ಲ ಎಂದು ಕೇಂದ್ರ ಮಾಹಿತಿ ತಂತ್ರಜ್ಞಾನ ಖಾತೆ ಸಚಿವ ರವಿ ಶಂಕರ ಪ್ರಸಾದ್ ತಿಳಿಸಿದ್ದಾರೆ.

ಉತ್ತರಾಖಂಡ ಸಿಎಂ ರಾವತ್ ವಿವಾದಿತ ಹೇಳಿಕೆ

ಸ್ತ್ರೀಯರು ಹರಿದ ಜೀನ್ಸ್ ಧರಿಸಿದರೆ ಮಕ್ಕಳ ಮೇಲೆ ಪರಿಣಾಮ

ಪ್ರಜಾವಾಣಿ ವಾರ್ತೆ

ಲಖನೌ: ‘ಹರಿದ ಜೀನ್ಸ್ ಬಟ್ಟೆಯನ್ನು ಮಹಿಳೆಯರು ಧರಿಸುವುದರಿಂದ ಮಕ್ಕಳ ಮೇಲೆ ಪರಿಣಾಮ ಉಂಟಾಗುತ್ತದೆ’ ಎಂದು ಉತ್ತರಾಖಂಡ ಮುಖ್ಯಮಂತ್ರಿ ತೀರಥ್‌ಸಿಂಗ್ ರಾವತ್ ನೀಡಿರುವ ಹೇಳಿಕೆ ಈಗ ವಿವಾದಕ್ಕೆ ಎಡೆಮಾಡಿಕೊಟ್ಟಿದೆ.

ಕೆಲವು ದಿನಗಳ ಹಿಂದೆ ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡಿರುವ ರಾವತ್, ಡೆಹ್ರಾಡೂನ್‌ನಲ್ಲಿ ಮಂಗಳವಾರ ನಡೆದ ಸಮಾರಂಭದಲ್ಲಿ ಈ ಹೇಳಿಕೆ ನೀಡಿದ್ದರು.

‘ಹರಿದ ಜೀನ್ಸ್ ಬಟ್ಟೆ ಧರಿಸುವುದು ಮಹಿಳೆಯರಲ್ಲಿ ಜನಪ್ರಿಯವಾಗಿದೆ. ಇದು ನಮ್ಮ ಸಂಸ್ಕೃತಿಯೇ?. ಮಕ್ಕಳು ತಮ್ಮ ಪೋಷಕರಿಂದ ಸಂಸ್ಕೃತಿ ಕಲಿಯಬೇಕು. ಆದರೆ, ಪೋಷಕರು ಹರಿದ ಜೀನ್ಸ್ ಧರಿಸಿದರೆ ಅವರಿಂದ ಯಾವ ರೀತಿಯ ಸಂಸ್ಕೃತಿಯನ್ನು ಮಕ್ಕಳು ಕಲಿಯುತ್ತಾರೆ’ ಎಂದು ಅವರು ಪ್ರಶ್ನಿಸಿದ್ದಾರೆ.

‘ವಿಮಾನದಲ್ಲಿ ಪ್ರಯಾಣ ಮಾಡುತ್ತಿದ್ದಾಗ ನನ್ನ ಪಕ್ಕದಲ್ಲಿ ಕುಳಿತಿದ್ದ ಮಹಿಳೆಯು ತಮ್ಮನ್ನು ಸಮಾಜ ಸೇವಕಿ ಎಂದು ಪರಿಚಯಿಸಿಕೊಂಡಿದ್ದರು. ಆದರೆ ಅವರು ಹರಿದ ಜೀನ್ಸ್ ತೊಟ್ಟಿದ್ದರು. ಅದನ್ನು ಗಮನಿಸಿದಾಗ, ಯಾವ ರೀತಿಯ ಸಮಾಜ ಸೇವೆಯನ್ನು ಅವರು ಮಾಡುತ್ತಾರೆ ಎಂದು ಆಶ್ಚರ್ಯವಾಯಿತು’ ಎಂದು ಹೇಳಿದ್ದಾರೆ.

‘ಹೊಸ ತಲೆಮಾರಿನ ಯುವ ಜನತೆ ಪಾಶ್ಚಿಮಾತ್ಯ ಸಂಸ್ಕೃತಿಯಿಂದ ಹೆಚ್ಚು ಪ್ರಭಾವಿತರಾಗಿದ್ದಾರೆ. ಹರಿದಿರುವ ಜೀನ್ಸ್ ಧರಿಸುವುದು ಪ್ರತಿಷ್ಠೆಯ ಸಂಕೇತವಾಗಿದೆ’ ಎಂದು ಅವರು ಟೀಕಿಸಿದ್ದಾರೆ.

ಪುಲ್ವಾಮ ದಾಳಿ: ಎನ್‌ಐಎ ವಶಕ್ಕೆ ಆರೋಪಿಗಳ ಮನೆ

ಶ್ರೀನಗರ: 2019ರ ಫೆಬ್ರುವರಿಯಲ್ಲಿ ದಕ್ಷಿಣ ಕಾಶ್ಮೀರದ ಪುಲ್ವಾಮದಲ್ಲಿ ಆತ್ಮಾಹುತಿ ದಾಳಿ ನಡೆಸಿ 40 ಮಂದಿ ಸಿಆರ್‌ಪಿಎಫ್ ಯೋಧರ ಸಾವಿಗೆ ಕಾರಣರಾದ ಆರೋಪಿಗಳಾದ ಆದಿಲ್ ದರ್ ಮತ್ತು ಇನ್ಶಾಜಾನ್ ಎಂಬುವರ ಮನೆಗಳನ್ನು ರಾಷ್ಟ್ರೀಯ ತನಿಖಾ ದಳ (ಎನ್‌ಐಎ) ವಶಪಡಿಸಿಕೊಂಡಿದೆ.

ಈ ಉಗ್ರರಿಗೆ ಪುಲ್ವಾಮದಲ್ಲಿ ಪೀಠೋಪಕರಣಗಳ ಅಂಗಡಿ ಮಾಲೀಕ ಶಕೀರ್ ಬಷೀರ್ ಮ್ಯಾಗ್ರೆ ಎಂಬಾತ ಆಶ್ರಯ ನೀಡಿದ್ದ. 2020ರ ಫೆಬ್ರುವರಿ ಮತ್ತು ಮಾರ್ಚ್‌ನಲ್ಲಿ ಮ್ಯಾಗ್ರೆ ಮತ್ತು ಜಾನ್ ಅವರನ್ನು ಎನ್‌ಐಎ ಎರಡು ಪ್ರತ್ಯೇಕ ಕಾರ್ಯಾಚರಣೆಗಳಲ್ಲಿ ಬಂಧಿಸಿತ್ತು. ನಂತರ ಇಬ್ಬರ ಹೆಸರನ್ನೂ ಚಾರ್ಜ್‌ಶೀಟ್‌ನಲ್ಲಿ ಹೆಸರಿಸಲಾಗಿತ್ತು. ಕಾನೂನು ಬಾಹಿರ ಚಟುವಟಿಕೆಗಳು (ತಡೆಗಟ್ಟುವಿಕೆ) ಕಾಯ್ದೆ (ಯುಎಪಿಎ)1967ರ ಸೆಕ್ಷನ್ 25ರ ಅಡಿಯಲ್ಲಿ ಮನೆಗಳನ್ನು ವಶಪಡಿಸಿಕೊಂಡಿದೆ.

ಹಳೆ ವಾಹನ ನೋಂದಣಿ ನವೀಕರಣ ಶುಲ್ಕ ಹೆಚ್ಚಳ

ನವದೆಹಲಿ: ಹಳೆಯ ವಾಹನಗಳ ನೋಂದಣಿ ನವೀಕರಣದ ಶುಲ್ಕವನ್ನು ಕೇಂದ್ರ ಸರ್ಕಾರ ಅಪಾರ ಪ್ರಮಾಣದಲ್ಲಿ ಹೆಚ್ಚಿಸಿದೆ.

2021ರ ಅಕ್ಟೋಬರ್ 1ರಿಂದ ಹೊಸ ಶುಲ್ಕ ವ್ಯವಸ್ಥೆ ಜಾರಿಯಾಗಲಿದೆ. ಹಳೆಯ ಮತ್ತು ಮಾಲಿನ್ಯಕ್ಕೆ ಕಾರಣವಾಗುವ ವಾಹನಗಳನ್ನು ಸಾರ್ವಜನಿಕರು ಬಳಸುವುದನ್ನು ನಿಯಂತ್ರಿಸಲು ಈ ಕ್ರಮಕೈಗೊಳ್ಳಲಾಗಿದೆ ಎಂದು ಅಧಿಕಾರಿಗಳು ಪ್ರತಿಪಾದಿಸಿದ್ದಾರೆ. ಕೇಂದ್ರೀಯ ಮೋಟಾರ್ ವಾಹನಗಳ (ತಿದ್ದುಪಡಿ) ನಿಯಮಾವಳಿ– 2021 ಅನ್ನು ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯ ಹೊರಡಿಸಿದೆ.

ಹೊಸ ನಿಯಮಗಳ ಅನ್ವಯ, 15 ವರ್ಷದ ಹಳೆಯ ವಾಹನವನ್ನು ಗುಜರಿ ಹಾಕುವ ಪ್ರಮಾಣಪತ್ರವನ್ನು ಮಾಲೀಕ ಪಡೆದುಕೊಂಡರೆ ಹೊಸ ವಾಹನ ಖರೀದಿಸಲು ನೋಂದಣಿ ಪ್ರಮಾಣಪತ್ರದ ಮೇಲೆ ಹೆಚ್ಚುವರಿ ಶುಲ್ಕ ವಿಧಿಸುವುದಿಲ್ಲ. ಅಕ್ಟೋಬರ್ 1ಕ್ಕೆ ಮುನ್ನವೇ ಗುಜರಿಗೆ ಹಾಕುವ ಪ್ರಮಾಣಪತ್ರ ಪಡೆಯದಿದ್ದರೆ ಹಳೆಯ ವಾಹನಕ್ಕೆ ವಿನಾಯಿತಿ ದೊರೆಯುವುದಿಲ್ಲ. ಈ ನಿಯಮವು 15 ವರ್ಷದ ಹಳೆಯದಾದ ಎಲ್ಲ ಖಾಸಗಿ ಮತ್ತು ವಾಣಿಜ್ಯ ವಾಹನಗಳಿಗೆ ಅನ್ವಯವಾಗುತ್ತದೆ ಎಂದು ತಿಳಿಸಲಾಗಿದೆ.

ದ್ವಿಚಕ್ರ ವಾಹನದ ಹೊಸ ನೋಂದಣಿ ಪ್ರಮಾಣ ಪತ್ರಕ್ಕೆ ₹300, 15 ವರ್ಷದ ಹಳೆಯ ವಾಹನಕ್ಕೆ ₹1000, ತ್ರಿಚಕ್ರ ವಾಹನಗಳ ಹೊಸ ನೋಂದಣಿ ಪ್ರಮಾಣ ಪತ್ರಕ್ಕೆ ₹600, ನವೀಕರಣಕ್ಕೆ ₹2500 ಶುಲ್ಕ ನಿಗದಿಪಡಿಸಲಾಗಿದೆ. ಲಘು ಮೋಟಾರು ವಾಹನಗಳ ಹೊಸ ನೋಂದಣಿ ಪ್ರಮಾಣ ಪತ್ರಕ್ಕೆ ₹600 ಮತ್ತು ನವೀಕರಣಕ್ಕೆ ₹5000 ನಿಗದಿಪಡಿಸಲಾಗಿದೆ.

ಆಮದು ಮಾಡಿಕೊಳ್ಳಲಾದ ದ್ವಿಚಕ್ರ ಮತ್ತು ತ್ರಿಚಕ್ರ ವಾಹನಗಳ ಹೊಸ ನೋಂದಣಿಗೆ ₹5000 ಮತ್ತು ಹಳೆಯ ವಾಹನದ ನವೀಕರಣಕ್ಕೆ ₹40,000 ನಿಗದಿಪಡಿಸಲಾಗಿದೆ.

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸ್ಪರ್ಧಾ ವಾಣಿ
ಕೇಂದ್ರ ಸರ್ಕಾರದ ಹುದ್ದೆಗಳಿಗೆ ನಡೆಯುವ ಸ್ಪರ್ಧಾತ್ಮಕ ಪರೀಕ್ಷೆಗಳ ರೀತಿಯೇ ಬೇರೆ. ಆದ್ದರಿಂದ, ವಿಭಿನ್ನ ರೀತಿಯಲ್ಲಿ ಅಧ್ಯಯನ ನಡೆಸಬೇಕಾಗುತ್ತದೆ

ಆಳ-ಅಗಲ
ರಾಜಕೀಯದ 'ಪೊಲೀಸ್'ಗಿರಿ
4 ಕೋಟಿ ಪಡಿತರ ಚೀಟಿ ರದ್ದು 6
'ಶೀಘ್ರ ಸಂಪುಟ ಉಪ ಸಮಿತಿ ರಚನೆ' 5

ಸೆನ್ಸೆಕ್ಸ್	ನಿಫ್ಟಿ	₹/$
49,802	14,721	72.55

ಒಳಾಂಗಣಕ್ಕೆ ನಿಯಮ ಕಟ್ಟುನಿಟ್ಟು; ಹೊರಾಂಗಣಕ್ಕೆ ನಿರ್ಬಂಧ ಇಲ್ಲ: ಬಿಎಸ್‌ವೈ

ಲಾಕ್‌ಡೌನ್, ಕರ್ಫ್ಯೂ ಇಲ್ಲ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಬೀದರ್, ಕಲಬುರ್ಗಿ, ಬೆಂಗಳೂರಿಗೆ ಪ್ರತ್ಯೇಕ ಕಾರ್ಯತಂತ್ರ
- ಗ್ರಾಮೀಣ ಪ್ರದೇಶಗಳಲ್ಲಿ ಹೆಚ್ಚಿನ ಪರೀಕ್ಷೆಗೆ ಒತ್ತು
- ಮಾಸ್ಕ್ ಧರಿಸದವರ ವಿರುದ್ಧ ಕಠಿಣ ಕ್ರಮಕ್ಕೆ ಸೂಚನೆ

ಬೆಂಗಳೂರು: 'ರಾಜ್ಯದಲ್ಲಿ ಲಾಕ್‌ಡೌನ್ ಅಥವಾ ರಾತ್ರಿ ಕರ್ಫ್ಯೂ ಹೇರುವ ಉದ್ದೇಶ ಇಲ್ಲ' ಎಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಸ್ಪಷ್ಟಪಡಿಸಿದರು.

ಕೋವಿಡ್ ಪರಿಸ್ಥಿತಿ ಕುರಿತಂತೆ ಪ್ರಧಾನಿ ಜೊತೆ ಬುಧವಾರ ವಿಡಿಯೊ ಸಂವಾದದ ಬಳಿಕ ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಮಾಸ್ಕ್ ಕಡ್ಡಾಯವಾಗಿ ಹಾಕಬೇಕು. ವೈಯಕ್ತಿಕ ಅಂತರ ಕಾಯ್ದುಕೊಳ್ಳಬೇಕು. ಯಾವುದೇ ಹೊಸ ಮಾರ್ಗಸೂಚಿ ಹೊರಡಿಸುವುದಿಲ್ಲ. ಈಗಿರುವ ಮಾರ್ಗಸೂಚಿಯನ್ನು ಕಡ್ಡಾಯವಾಗಿ ಪಾಲಿಸಲೇಬೇಕು' ಎಂದು ಸಲಹೆ ನೀಡಿದರು.

'ಕೋವಿಡ್ ಸೋಂಕು ಹರಡುವುದನ್ನು ತಡೆಯಲು ಮದುವೆ, ಜನ್ಮದಿನ ಕಾರ್ಯಕ್ರಮ ಮತ್ತಿತರ ಎಲ್ಲ ರೀತಿಯ ಒಳಾಂಗಣ ಕಾರ್ಯಕ್ರಮಗಳಿಗೆ ನಿರ್ಬಂಧ ವಿಧಿಸಲಾಗುವುದು. ನಮ್ಮ ಗಮನ ನಾಲ್ಕು ಗೋಡೆಗಳ ಒಳಗೆ ಹೆಚ್ಚು ಜನರು ಸೇರುವ ದೊಡ್ಡ ಕಾರ್ಯಕ್ರಮಗಳನ್ನು ನಿಯಂತ್ರಿಸುವುದರ ಮೇಲಿರುತ್ತದೆ. ಕಾರ್ಯಕ್ರಮದಲ್ಲಿ ಭಾಗವಹಿಸುವವರ ಸಂಖ್ಯೆ ಸೇರಿದಂತೆ ಕೋವಿಡ್ ನಿಯಮಗಳನ್ನು ಉಲ್ಲಂಘಿಸುವ ಯಾವುದೇ ಘಟನೆಗಳನ್ನು ಗಂಭೀರವಾಗಿ ಪರಿಗಣಿಸಲಾಗುವುದು. ಆದರೆ, ಹೊರಾಂಗಣ ಕಾರ್ಯಕ್ರಮಗಳಿಗೆ ಹೆಚ್ಚಿನ ನಿರ್ಬಂಧ ಇಲ್ಲ' ಎಂದರು.

'ಎರಡಕ್ಕಿಂತ ಹೆಚ್ಚು ಕೋವಿಡ್ ಪ್ರಕರಣಗಳು ಕಂಡುಬಂದ ಪ್ರದೇಶವನ್ನು ಮೈಕ್ರೊ ಕಂಟೇನ್‌ಮೆಂಟ್ ವಲಯವಾಗಿ ಘೋಷಿಸಲು ಯೋಜಿಸಲಾಗಿದೆ' ಎಂದ ಮುಖ್ಯಮಂತ್ರಿ, 'ರಾಜ್ಯದಲ್ಲಿ ಹತ್ತು ದಿನಗಳಲ್ಲಿ ಕೊರೊನಾ ಪ್ರಕರಣಗಳು ಏರಿಕೆಯಾಗಿವೆ. ಕೋವಿಡ್ ಚಿಕಿತ್ಸಾ ನಿರ್ವಹಣೆಯ ಮಾರ್ಗಸೂಚಿಗಳ ಪಾಲನೆ, ಪರೀಕ್ಷೆ, ಸಂಪರ್ಕಿತರ ಪತ್ತೆ, ಚಿಕಿತ್ಸೆ, (ಟೆಸ್ಟ್, ಟ್ರಾಕ್, ಟ್ರೀಟ್) ಮಾದರಿ ತೀವ್ರಗೊಳಿಸುವಂತೆ ಪ್ರಧಾನಿ ತಿಳಿಸಿದ್ದಾರೆ. ಪ್ರಕರಣಗಳ ಸಂಖ್ಯೆ ಹೆಚ್ಚಿರುವ ಜಿಲ್ಲೆಗಳಲ್ಲಿ ಪರೀಕ್ಷೆ ಹೆಚ್ಚಿಸಲಾಗುವುದು' ಎಂದರು.

ಬೆಂಗಳೂರಿನಲ್ಲಿ 3 ಕೇಂದ್ರ: 'ಕೋವಿಡ್ ಸೋಂಕಿತರಿಗಾಗಿ ಹೆಚ್ಚುವರಿ ಹಾಸಿಗೆಗಳು, ಐಸಿಯುಗಳನ್ನು ಮೀಸಲಿಡಲಾಗುವುದು. ಬೆಂಗಳೂರಿನಲ್ಲಿ ಮೂರು ಕೋವಿಡ್ ಕೇರ್ ಸೆಂಟರ್ ಸ್ಥಾಪಿಸಲು ನಿರ್ಧರಿಸಲಾಗಿದೆ' ಎಂದು ಅವರು ಹೇಳಿದರು.

6ನೇ ಪುಟ ನೋಡಿ

ಕೋವಿಡ್ ಪರಿಸ್ಥಿತಿ ಕುರಿತಂತೆ ಪ್ರಧಾನಿ ನರೇಂದ್ರ ಮೋದಿ ಜೊತೆ ಬುಧವಾರ ನಡೆದ ವಿಡಿಯೊ ಸಂವಾದದಲ್ಲಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಮತ್ತು ಸಚಿವರು ಭಾಗವಹಿಸಿದ್ದರು

ಹಳ್ಳಿಗಳಿಗೆ ಹರಡದಂತೆ ತಡೆಯಿರಿ: ಮೋದಿ

ನವದೆಹಲಿ: ದೇಶದಲ್ಲಿ ಕೋವಿಡ್–19 ಪ್ರಕರಣಗಳು ಹೆಚ್ಚುತ್ತಿರುವುದಕ್ಕೆ ಆತಂಕ ವ್ಯಕ್ತಪಡಿಸಿರುವ ಪ್ರಧಾನಿ ನರೇಂದ್ರ ಮೋದಿ, ಎರಡನೇ ಅಲೆಯನ್ನು ನಿಯಂತ್ರಿಸಲು 'ತಕ್ಷಣದ ಮತ್ತು ನಿರ್ಣಾಯಕ' ಕ್ರಮಗಳನ್ನು ಕೈಗೊಳ್ಳಬೇಕು ಎಂದು ರಾಜ್ಯ ಸರ್ಕಾರಗಳಿಗೆ ಸೂಚನೆ ನೀಡಿದ್ದಾರೆ.

ಕೋವಿಡ್–19 ಪರಿಸ್ಥಿತಿ ಕುರಿತು ವಿವಿಧ ರಾಜ್ಯಗಳ ಮುಖ್ಯಮಂತ್ರಿಗಳ ಜತೆ ಬುಧವಾರ ವರ್ಚುವಲ್ ಸಭೆ ನಡೆಸಿದ ಅವರು, 'ಈ ಮೊದಲು ಸುರಕ್ಷಿತ ವಲಯಗಳು ಎಂದು ಪರಿಗಣಿಸಲಾಗಿದ್ದ ಎರಡು ಮತ್ತು ಮೂರನೇ ಹಂತದ ನಗರಗಳಲ್ಲಿ ಈಗ ಸೋಂಕು ಪ್ರಕರಣಗಳು ಹೆಚ್ಚುತ್ತಿವೆ. ಸಣ್ಣ ನಗರಗಳಿಗೆ ಸೋಂಕು ಹಬ್ಬಿದರೆ ಹಳ್ಳಿಗಳಿಗೂ ವ್ಯಾಪಿಸುತ್ತದೆ ಎನ್ನುವುದನ್ನು ಗಮನದಲ್ಲಿಟ್ಟುಕೊಳ್ಳಬೇಕು' ಎಂದು ಸಲಹೆ ನೀಡಿದರು.

6ನೇ ಪುಟ ನೋಡಿ

ಗಣಿ: ದಂಡ ಪ್ರಮಾಣ ₹3,350 ಕೋಟಿ ಇಳಿಕೆ

ಒಂದೇ ಕಂತು ತೀರುವಳಿ ಯೋಜನೆ ಜಾರಿ: ಸಚಿವ ನಿರಾಣಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಎಲ್ಲ ಮಾದರಿಯ ಗಣಿಗಾರಿಕೆ ನಡೆಸುವ ಉದ್ಯಮಿಗಳಿಗೆ ದಂಡರೂಪದಲ್ಲಿ ವಿಧಿಸಲಾದ ₹6,700 ಕೋಟಿ ಸರ್ಕಾರಕ್ಕೆ ಬರಬೇಕಾಗಿದ್ದು, ಇದರಲ್ಲಿ ಅರ್ಧದಷ್ಟನ್ನು ಕಡಿಮೆ ಮಾಡಲಾಗುವುದು' ಎಂದು ಗಣಿ ಮತ್ತು ಭೂ ವಿಜ್ಞಾನ ಸಚಿವ ಮುರುಗೇಶ ನಿರಾಣಿ ಹೇಳಿದರು.

ಫೆಡರೇಷನ್ ಆಫ್ ಕರ್ನಾಟಕ ಕ್ವಾರಿ ಮತ್ತು ಸ್ಟೋನ್ ಕ್ರಷರ್ಸ್ ಅಸೋಸಿಯೇಷನ್ ಆಶ್ರಯದಲ್ಲಿ ಕಲ್ಲು ಗಣಿ ಮತ್ತು ಸ್ಟೋನ್ ಕ್ರಷರ್ಸ್ ಉದ್ಯಮಿಗಳಿಗೆ ಬುಧವಾರ ಇಲ್ಲಿ ಹಮ್ಮಿಕೊಂಡಿದ್ದ ಸುರಕ್ಷತಾ ಅಭಿಯಾನವನ್ನು ಉದ್ಘಾಟಿಸಿ ಮಾತನಾಡಿದರು.

'ಉದ್ಯಮಿಗಳಿಗೆ ಸದ್ಯ ಐದು ಪಟ್ಟು ದಂಡ ವಿಧಿಸುವ ನಿಯಮ ಚಾಲ್ತಿಯಲ್ಲಿದ್ದು, ಈ ಲೆಕ್ಕಾಚಾರದಲ್ಲಿ ಬೃಹತ್ ಮೊತ್ತ ಸರ್ಕಾರದ ಬೊಕ್ಕಸಕ್ಕೆ ಬರಬೇಕಾಗಿದೆ. ಈ ಮೊತ್ತವನ್ನು ಅರ್ಧದಷ್ಟು ಕಡಿಮೆ ಮಾಡುವ ಜತೆಗೆ, ದಂಡದ ಬಾಕಿ ಪಾವತಿಗಾಗಿ ಏಕಕಂತು ತೀರುವಳಿ ಯೋಜನೆ ಜಾರಿ ಮಾಡಲಾಗುವುದು. ತೀರುವಳಿ ಯೋಜನೆಗಾಗಿ ರಚಿಸುವ ಸಮಿತಿಯಲ್ಲಿ ಕ್ವಾರಿ ಮಾಲೀಕರಿಗೂ ಪ್ರಾತಿನಿಧ್ಯ ನೀಡಲಾಗುವುದು' ಎಂದು ಹೇಳಿದರು.

ಮುರುಗೇಶ ನಿರಾಣಿ

ಜಿಲ್ಲಾ ಗಣಿ ನಿಧಿಗೆ (ಡಿಎಂಎಫ್) ಪಾವತಿಸುವ ಪ್ರಮಾಣ ಶೇ 30ರಷ್ಟಿದೆ. ಇದನ್ನು ಶೇ 10ಕ್ಕೆ ಇಳಿಕೆ ಮಾಡಬೇಕೆಂಬ ಕ್ವಾರಿ ಮಾಲೀಕರ ಬೇಡಿಕೆಯನ್ನು ಸಚಿವ ಸಂಪುಟದ ಮುಂದಿಟ್ಟು ಚರ್ಚಿಸುವುದಾಗಿ ಅವರು ಭರವಸೆ ಕೊಟ್ಟರು.

90 ದಿನಗಳಲ್ಲಿ ಎನ್‌ಒಸಿ: 'ಕಲ್ಲು ಕ್ವಾರಿ ಮತ್ತು ಗಣಿಗಾರಿಕೆ ಪರವಾನಗಿ ಪಡೆಯುವ ತೊಂದರೆಗಳನ್ನು ನಿವಾರಿಸಲು ಕಂದಾಯ, ಸಾರಿಗೆ, ಅರಣ್ಯ ಮತ್ತು ಪರಿಸರ ಇಲಾಖೆಗಳ ಅಧಿಕಾರಿಗಳನ್ನು ಒಳಗೊಂಡಿರುವ ಏಕಗವಾಕ್ಷಿ ಪದ್ಧತಿ ಜಾರಿಗೆ ತರಲಾಗುವುದು. ಅರ್ಜಿ ಸಲ್ಲಿಸಿದ 90 ದಿನಗಳ ಒಳಗೆ ನಿರಾಕ್ಷೇಪಣಾ ಪತ್ರವನ್ನು ಅರ್ಜಿದಾರರ ಮನೆಗೆ ತಲುಪಿಸಲು ವ್ಯವಸ್ಥೆ ಮಾಡಲಾಗುವುದು' ಎಂದು ನಿರಾಣಿ ಹೇಳಿದರು.

'ದೇಶಕ್ಕೆ ಮಾದರಿಯಾದ ಗಣಿ ನೀತಿಯನ್ನು ಜಾರಿ ಮಾಡುವ ಯೋಜನೆ ಹಾಕಿಕೊಂಡಿದ್ದೇವೆ. ಭವಿಷ್ಯವನ್ನು ಗಮನದಲ್ಲಿಟ್ಟುಕೊಂಡು ನೂತನ ಗಣಿ ನೀತಿ ಜಾರಿಗೆ ತರುತ್ತೇವೆ' ಆಶ್ವಾಸನೆ ನೀಡಿದರು.

ಕರ್ನಾಟಕ ಸಣ್ಣ ಕೈಗಾರಿಕಾ ಅಭಿವೃದ್ಧಿ ನಿಗಮದ ಉಪಾಧ್ಯಕ್ಷ ಎಸ್. ದತ್ತಾತ್ರಿ, ಫೆಡರೇಷನ್ ಆಫ್ ಕರ್ನಾಟಕ ಕ್ವಾರಿ ಮತ್ತು ಸ್ಟೋನ್ ಕ್ರಷರ್ ಅಸೋಸಿಯೇಷನ್ಸ್ ಅಧ್ಯಕ್ಷ ಎಸ್ ಸಂಜೀವ ಹಟ್ಟಿಹೊಳಿ, ಗಣಿ ಸುರಕ್ಷತಾ ಮಹಾನಿರ್ದೇಶಕರಾದ ಮುರಳೀಧರ್, ಶ್ಯಾಮ್ ಸುಂದರ್ ಸೋನಿ, ಉಮೇಶ್ ಎಂ.ಸಾವರ್ಕರ್ ಪಾಲ್ಗೊಂಡಿದ್ದರು.

ಕನ್ನಡಿಗ ಗಣಪತಿ ಎನ್‌ಎಸ್‌ಜಿ ಮಹಾನಿರ್ದೇಶಕ

ಪ್ರಜಾವಾಣಿ ವಾರ್ತೆ

ನವದೆಹಲಿ: ಕೊಡಗು ಮೂಲದ ಹಿರಿಯ ಐಪಿಎಸ್ ಅಧಿಕಾರಿ ಎಂ.ಎ. ಗಣಪತಿ ಅವರನ್ನು ರಾಷ್ಟ್ರೀಯ ಭದ್ರತಾ ಪಡೆಯ (ಎನ್‌ಎಸ್‌ಜಿ) ಮಹಾನಿರ್ದೇಶಕರನ್ನಾಗಿ ನೇಮಕ ಮಾಡಲಾಗಿದೆ.

ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕ್ಯಾಬಿನೆಟ್ ನೇಮಕಾತಿ ಸಮಿತಿಯು ಗಣಪತಿ ಅವರ ನೇಮಕಾತಿಗೆ ಅನುಮೋದನೆ ನೀಡಿದ ಬಳಿಕ ಸಿಬ್ಬಂದಿ ಮತ್ತು ತರಬೇತಿ ಇಲಾಖೆ (ಡಿಒಪಿಟಿ) ಮಂಗಳವಾರ ಈ ಸಂಬಂಧ ಆದೇಶ ಹೊರಡಿಸಿದೆ.

ಇದೇ ವೇಳೆ, ಪಶ್ಚಿಮ ಬಂಗಾಳ ಕೇಡರ್‌ನ 1986ರ ಬ್ಯಾಚ್‌ನ ಐಪಿಎಸ್ ಅಧಿಕಾರಿ ಕುಲದೀಪ್ ಸಿಂಗ್ ಅವರನ್ನು ಸಿಆರ್‌ಪಿಎಫ್ ಮಹಾನಿರ್ದೇಶಕರನ್ನಾಗಿ ನೇಮಕ ಮಾಡಲಾಗಿದೆ. ಪ್ರಸ್ತುತ ಅವರು ಸಿಆರ್‌ಪಿಎಫ್‌ನ ವಿಶೇಷ ಡಿಜಿ ಆಗಿದ್ದಾರೆ.

ಎನ್‌ಎಸ್‌ಜಿ ಮಹಾನಿರ್ದೇಶಕರಾಗಿ ನೇಮಕವಾಗಿರುವ ಗಣಪತಿ ಅವರು ಪ್ರಸ್ತುತ ಬ್ಯೂರೊ ಆಫ್ ಸಿವಿಲ್ ಏವಿಯೇಷನ್ ಸೆಕ್ಯುರಿಟಿಯ ಮಹಾನಿರ್ದೇಶಕರಾಗಿದ್ದಾರೆ.

57 ವರ್ಷದ 1986 ರ ಐಪಿಎಸ್ ಬ್ಯಾಚ್‌ನ ಅಧಿಕಾರಿಯಾಗಿರುವ ಗಣಪತಿ, ಕರ್ನಾಟಕದ ಕೊಡಗು ಮೂಲದವರಾಗಿದ್ದಾರೆ. ಉತ್ತರಾಖಂಡದಲ್ಲಿ ಪೊಲೀಸ್ ಮಹಾನಿರ್ದೇಶಕರಾಗಿಯೂ ಸೇವೆ ಸಲ್ಲಿಸಿದ್ದಾರೆ. ಈ ಹಿಂದೆ ಅವರು ಗೃಹ ಸಚಿವಾಲಯದಲ್ಲಿ ಆಂತರಿಕ ಭದ್ರತೆ ಮತ್ತು ಎಡಪಂಥೀಯ ಉಗ್ರವಾದದಂತಹ ಚಟುವಟಿಕೆಗಳನ್ನು ಹತ್ತಿಕ್ಕುವ ಕಾರ್ಯಗಳನ್ನು ನಿರ್ವಹಿಸಿದ್ದಾರೆ.

ಕಲಬುರ್ಗಿ ರೈಲ್ವೆ ವಿಭಾಗ ರಚನೆ ಕೈಬಿಟ್ಟ ಕೇಂದ್ರ

ಪಿಯೂಷ್ ಗೋಯಲ್

ಕಲಬುರ್ಗಿ: 2014ರಲ್ಲಿ ಘೋಷಣೆಯಾದ ಕಲಬುರ್ಗಿ ಸೇರಿದಂತೆ ಮೂರು ಕಡೆಗಳಲ್ಲಿ ರೈಲ್ವೆ ವಿಭಾಗ ಆರಂಭಿಸುವ ಪ್ರಸ್ತಾವವನ್ನು ಹಿಂದಕ್ಕೆ ಪಡೆಯಲಾಗಿದೆ ಎಂದು ರೈಲ್ವೆ ಸಚಿವ ಪಿಯೂಷ್ ಗೋಯಲ್ ಬುಧವಾರ ಲೋಕಸಭೆಯಲ್ಲಿ ತಿಳಿಸಿದ್ದಾರೆ.

6ನೇ ಪುಟ ನೋಡಿ

ಇಂದಿನ ಪಾಡ್‌ಕಾಸ್ಟ್ ವಿಶೇಷ
ಆಟ-ನೋಟ
ವನಿತಾ ಧ್ವನಿ
ಪ್ರತೀ ದಿನ: ದಿನದ ಸೂಕ್ತಿ, ವಚನವಾಣಿ ಸಂಪಾದಕೀಯ, ಪ್ರಚಲಿತ
Prajavani.net/podcast

ಪ್ರಿಯ ವಿದ್ಯಾರ್ಥಿಗಳೇ, ಕೋವಿಡ್‌ನಿಂದಾಗಿ ಈ ವರ್ಷ ತರಗತಿಗಳಿಗೆ ಖುದ್ದಾಗಿ ಹಾಜರಾಗಲು ನಿಮಗೆ ಸಾಧ್ಯವಾಗದಿರಬಹುದು. ಎಸ್ಸೆಸ್ಸೆಲ್ಸಿ-ಪಿಯುಸಿ ಪರೀಕ್ಷೆ ಬರೆಯುವ ನಿಮಗಾಗಿ ಅನುಭವಿ ಶಿಕ್ಷಕರು ನೀಡಿರುವ ಮಾರ್ಗದರ್ಶನ ದಿಕ್ಸೂಚಿಯಲ್ಲಿ..
ಪುಟ-7

ಮಿಸಳ್ ಹಾಪ್ಚಾ
ಭದ್ರತೆಯಿಲ್ಲದೆ, ಬಂಗಾರದ ಕೆಲಸ
ನಿಮ್ಮ Prajavani.net ನಲ್ಲಿ ಮತ್ತೊಂದು ವಿಶೇಷ
ವಿಡಿಯೊ ನೋಡಲು QR ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

ಚಿನಕುರಳಿ
ಪ್ರಕಾಶ್ ಶೆಟ್ಟಿ

₹50 ಲಕ್ಷ ನೆರವಿನ ಯೋಜನೆ ಸುತ್ತ ಸಂಶಯದ ಹುತ್ತ

ನವೋದ್ಯಮ: ಆಯ್ಕೆ ಪ್ರಕ್ರಿಯೆಯೇ ನಿಗೂಢ

• ಪ್ರವೀಣ ಕುಮಾರ್ ಪಿ.ವಿ.

ಬೆಂಗಳೂರು: ನವೋದ್ಯಮಗಳನ್ನು ಉತ್ತೇಜಿಸಲು ರಾಜ್ಯ ಸರ್ಕಾರ ಗರಿಷ್ಠ ₹ 50 ಲಕ್ಷ ಆರ್ಥಿಕ ನೆರವು ನೀಡುತ್ತಿದ್ದು, ಇದರ ಪ್ರಕ್ರಿಯೆಯೇ ಪಾರದರ್ಶಕವಾಗಿಲ್ಲ ಎಂಬ ಕೂಗು ಎದ್ದಿದೆ.

ಆಯ್ಕೆ ಪ್ರಕ್ರಿಯೆ ವೇಳೆ ಯಾವ ಸಂಸ್ಥೆಗೆ ಎಷ್ಟು ಅಂಕ ನೀಡಲಾಯಿತು ಎಂಬುದು ಸ್ವತಃ ಸ್ಪರ್ಧಿಗಳಿಗೇ ತಿಳಿಯುವುದಿಲ್ಲ.

ನವೋದ್ಯಮಗಳಿಗೆ ಉತ್ತೇಜನ ನೀಡಲೆಂದೇ 'ಕರ್ನಾಟಕ ನವೋದ್ಯಮ ಕಾರ್ಯನೀತಿ 2015 -2020' ರೂಪಿಸಿರುವ ರಾಜ್ಯ ಸರ್ಕಾರವು ಎಲೆಕ್ಟ್ರಾನಿಕ್ಸ್, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯಡಿ ಇದರ ಅನುಷ್ಠಾನಕ್ಕಾಗಿ ಪ್ರತ್ಯೇಕ ಕೋಶವನ್ನೂ ಸ್ಥಾಪಿಸಿದೆ. ಇದರ ಫಲವಾಗಿ ಕರ್ನಾಟಕ ನವೋದ್ಯಮ ಸ್ನೇಹಿ ರಾಜ್ಯಗಳ ಶ್ರೇಯಾಂಕ ಪಟ್ಟಿಯಲ್ಲಿ ಮುಂಚೂಣಿಯಲ್ಲಿದೆ.

ನವೋದ್ಯಮಗಳಿಗೆ ಆರಂಭಿಕ ಹಂತದಲ್ಲಿ ಆರ್ಥಿಕ ನೆರವು ಒದಗಿಸಲು ಪುರಾವೆ ಆಧಾರಿತ ಪರಿಕಲ್ಪನೆ ಆಶಯದಡಿ 'ಐಡಿಯಾ2ಪಿಒಸಿ' (ಎಲೆವೇಟ್) ಸ್ಪರ್ಧೆ ಏರ್ಪಡಿಸುತ್ತದೆ. ಇಲ್ಲಿ ಪಕ್ಷಪಾತ ನಡೆಯುತ್ತಿದೆ ಎಂಬುದು ಭಾಗವಹಿಸಿದವರ ಆರೋಪ.

'ಐಡಿಯಾ2ಪಿಒಸಿ' ಸ್ಪರ್ಧೆಯಲ್ಲಿ ಆವಿಷ್ಕಾರಗಳ ಹೊಸತನ, ಅದರಿಂದ ಉಂಟಾಗುವ ಸಾಮಾಜಿಕ ಮತ್ತು ಆರ್ಥಿಕ ಪರಿಣಾಮ, ವ್ಯಾಪಾರದ ಮಾದರಿ ಹಾಗೂ ತಂಡದ ಸಾಮರ್ಥ್ಯ ಆಧರಿಸಿ ನವೋದ್ಯಮವನ್ನು ಆಯ್ಕೆ ಮಾಡಲಾಗುತ್ತದೆ. ಸ್ಪರ್ಧಿಗಳು ತಮ್ಮ ಕಾರ್ಯ ಯೋಜನೆಯನ್ನು ಸ್ವತಂತ್ರ ಮೌಲ್ಯಮಾಪಕರ ಸಮಿತಿ ಮುಂದೆ ಪ್ರಸ್ತುತಪಡಿಸಬೇಕು. ಅತಿ ಹೆಚ್ಚು ಅಂಕಗಳನ್ನು ಪಡೆದು ಆಯ್ಕೆಯಾಗುವ ಸಂಸ್ಥೆಗಳಿಗೆ ಆರ್ಥಿಕ ನೆರವು ನೀಡಲಾಗುತ್ತದೆ.

ಇಲಾಖೆಯು 2019ರ ಮಾರ್ಚ್‌ನಲ್ಲಿ ಏರ್ಪಡಿಸಿದ್ದ 'ಎಲೆವೇಟ್ 2019' ಸ್ಪರ್ಧೆಗೆ 729 ಅರ್ಜಿಗಳು ಬಂದಿದ್ದವು. ಕೈಗಾರಿಕಾ ಸಂಘಗಳು ಮತ್ತು ಈ ಕೈಗಾರಿಕಾ ಪರಿಸರ ನಿರ್ಮಾಣದ ಪಾಲುದಾರ ಸಂಸ್ಥೆಗಳಾದ ಎಬಿಎಐ, ಟಿಐಇ, ನಾಸ್ಕಾಂ, ಐಇಎಸ್‌ಎ ಸಂಸ್ಥೆಗಳು ಶಿಫಾರಸು ಮಾಡಿದ್ದ ಮೌಲ್ಯಮಾಪಕರು ಆಯ್ಕೆ ಪ್ರಕ್ರಿಯೆ ನಡೆಸಿಕೊಟ್ಟಿದ್ದರು. ಅವರು ನೀಡಿದ್ದ ಅಂಕಗಳನ್ನು ಆಧರಿಸಿ 479 ನವೋದ್ಯಮಗಳು ಮೂರನೇ ಸುತ್ತಿಗೆ ಆಯ್ಕೆಯಾಗಿದ್ದವು. ಈ ಸುತ್ತಿನ ಮೌಲ್ಯಮಾಪನ ಮೈಸೂರು, ಮಂಗಳೂರು, ಬೆಳಗಾವಿ, ಕಲಬುರ್ಗಿ ಮತ್ತು ಬೆಂಗಳೂರಿನಲ್ಲಿ ನಡೆದಿದ್ದವು. ಅಂತಿಮ ಸುತ್ತಿನಲ್ಲಿ ಅತಿ ಹೆಚ್ಚು ಅಂಕ ಗಳಿಸಿದ ನೂರು ನವೋದ್ಯಮಗಳನ್ನು ಆರ್ಥಿಕ ನೆರವು ನೀಡುವುದಕ್ಕೆ ಆಯ್ಕೆ ಮಾಡಲಾಗಿತ್ತು.

'ಮೇಲ್ನೋಟಕ್ಕೆ ಈ ಎಲ್ಲ ಪ್ರಕ್ರಿಯೆ ನಿಯಮಬದ್ಧವಾಗಿಯೇ ನಡೆದಂತೆ ತೋರುತ್ತದೆ. ಆದರೆ, ಆಯ್ಕೆ ಪ್ರಕ್ರಿಯೆಯೇ ಪಾರದರ್ಶಕವಾಗಿಲ್ಲ. 300ಕ್ಕೆ 208 ಅಂಕ ಪಡೆದ ನವೋದ್ಯಮವೊಂದು ಆರ್ಥಿಕ ನೆರವು ಪಡೆದಿದೆ' ಎಂದು ಹೇಳುತ್ತಾರೆ ಮೈಸೂರಿನ ಎಂ.ಕೆ. ಪ್ರವೀಣ್ ಕುಮಾರ್.

3ನೇ ಪುಟ ನೋಡಿ

'ಅಕ್ರಮಕ್ಕೆ ಆಸ್ಪದವಿಲ್ಲ'

'ಆರೋಪಗಳಲ್ಲಿ ಹುರುಳಿಲ್ಲ. ಐಡಿಯಾ2ಪಿಒಸಿ ಸ್ಪರ್ಧೆಯಲ್ಲಿ ಅಕ್ರಮಕ್ಕೆ ಅವಕಾಶವಿಲ್ಲ. ಅತ್ಯಂತ ದಕ್ಷ ಮೌಲ್ಯಮಾಪಕರು ನವೋದ್ಯಮಗಳನ್ನು ಆಯ್ಕೆ ಮಾಡುತ್ತಾರೆ. ಮೌಲ್ಯಮಾಪನದ ಪ್ರತಿಯೊಂದು ದಾಖಲೆಗಳನ್ನೂ ನಾವು ಇಟ್ಟುಕೊಂಡಿರುತ್ತೇವೆ. ಅನುದಾನ ಲಭ್ಯತೆ ಆಧಾರದಲ್ಲಿ ನವೋದ್ಯಮಗಳಿಗೆ ಆರ್ಥಿಕ ನೆರವು ಹಂಚಿಕೆ ಮಾಡುತ್ತೇವೆ' ಎಂದು 'ಸ್ಟಾರ್ಟ್‌ಅಪ್ ಕರ್ನಾಟಕ'ದ ಮುಖ್ಯಸ್ಥೆ ಚಂಪಾ ಇ. 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದರು.

> ತಾವೇಕೆ ವಿಫಲರಾದೆವು ಎಂಬುದನ್ನು ತಿಳಿಯಲು ಅವಕಾಶ ಕಲ್ಪಿಸಿದರೆ ಅಂತಹ ನವೋದ್ಯಮಗಳು ಭವಿಷ್ಯದಲ್ಲಿ ತಪ್ಪನ್ನು ಸರಿಪಡಿಸಿಕೊಳ್ಳಲು ಅವಕಾಶ ಸಿಗಲಿದೆ
> **ಪ್ರತಾಪ್ ಪರಾಶರ**
> ಐಡಿಯಾ2ಪಿಒಸಿ, ಸ್ಪರ್ಧಿ

ಭೂ ಪರಿವರ್ತನೆ ಸರಳೀಕರಣಕ್ಕೆ ಕ್ರಮ: ಸಚಿವ ಅಶೋಕ

ಬೆಂಗಳೂರು: 'ವಾರದೊಳಗೆ ಭೂ ಪರಿವರ್ತನೆ ಮಂಜೂರಾತಿ ನಿಯಮ ಬದಲಿಸಲಾಗುವುದು' ಎಂದು ಕಂದಾಯ ಸಚಿವ ಆರ್. ಅಶೋಕ ತಿಳಿಸಿದರು.

ವಿಧಾನಪರಿಷತ್‌ನಲ್ಲಿ ಜೆಡಿಎಸ್‌ನ ಎಚ್.ಎಂ.ರಮೇಶ್‌ಗೌಡ, ತಿಪ್ಪೇಸ್ವಾಮಿ ಜಂಟಿಯಾಗಿ ಕೇಳಿದ ಪ್ರಶ್ನೆಗೆ ಸಚಿವರು ಉತ್ತರಿಸಿದರು.

3ನೇ ಪುಟ ನೋಡಿ

ರಾತ್ರಿ 10ರಿಂದ ಬೆಳಿಗ್ಗೆ 6ರವರೆಗೆ ಶಬ್ದಕ್ಕೆ ಕಡಿವಾಣ

ಮಸೀದಿ: ಧ್ವನಿವರ್ಧಕ ಬಳಕೆಗೆ ನಿರ್ಬಂಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಸೀದಿಗಳು ಮತ್ತು ದರ್ಗಾಗಳಲ್ಲಿ ರಾತ್ರಿ 10 ರಿಂದ ಬೆಳಿಗ್ಗೆ 6 ರವರೆಗೆ ಧ್ವನಿವರ್ಧಕಗಳನ್ನು ಬಳಸುವುದಕ್ಕೆ ನಿರ್ಬಂಧ ವಿಧಿಸಿ ಕರ್ನಾಟಕ ರಾಜ್ಯ ವಕ್ಫ್ ಮಂಡಳಿ ಸುತ್ತೋಲೆ ಹೊರಡಿಸಿದೆ.

ಶಬ್ದ ಮಾಲಿನ್ಯ (ನಿಯಂತ್ರಣ ಮತ್ತು ನಿರ್ವಹಣೆ) ಕಾಯ್ದೆ–2000 ಅಡಿ ಮಂಡಳಿ ಮಾರ್ಚ್ 9 ರಂದು ಸುತ್ತೋಲೆ ಹೊರಡಿಸಿದೆ. ಅಲ್ಲದೆ, ಹಗಲು ಹೊತ್ತಿನಲ್ಲೂ ಧ್ವನಿವರ್ಧಕವನ್ನು ಸುತ್ತಲಿನ ಶಬ್ದದ ಗುಣಮಟ್ಟಕ್ಕೆ ಅನುಗುಣವಾಗಿ ಬಳಸಬೇಕು ಎಂದು ಸುತ್ತೋಲೆ ತಿಳಿಸಿದೆ.

ಮಸೀದಿ ಮತ್ತು ದರ್ಗಾಗಳಲ್ಲಿ ಧ್ವನಿವರ್ಧಕ ಸದ್ದು, ಜನರೇಟರ್ ಸದ್ದು ಮತ್ತು ಸಾರ್ವಜನಿಕರನ್ನು ಉದ್ದೇಶಿಸಿ ಮಾತನಾಡುವ ಭಾಷಣಗಳಿಂದ ಶಬ್ದದ ಪ್ರಮಾಣ ಹೆಚ್ಚಾಗುತ್ತಿದೆ. ಇದರಿಂದ ಸುತ್ತಮುತ್ತಲಿನ ಜನರ ಆರೋಗ್ಯ ಮತ್ತು ಮಾನಸಿಕ ಸ್ವಾಸ್ಥ್ಯದ ಮೇಲೂ ದುಷ್ಪರಿಣಾಮ ಬೀರುತ್ತಿದೆ ಎಂದು ವಕ್ಫ್ ಮಂಡಳಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ ತಿಳಿಸಿದ್ದಾರೆ.

ಮಸೀದಿಗಳಲ್ಲಿ ಧ್ವನಿವರ್ಧಕ ಬಳಕೆಯನ್ನು ಪ್ರಶ್ನಿಸಿ ಹಲವು ರಾಜ್ಯಗಳ ನ್ಯಾಯಾಲಯಗಳಲ್ಲಿ ಅರ್ಜಿ ಸಲ್ಲಿಕೆಯಾಗಿದ್ದು, ವಿಚಾರಣೆ ನಡೆಯುತ್ತಿದೆ. ಕೆಲವು ಮಸೀದಿಗಳು ನಿಯಮಗಳನ್ನು ಅತ್ಯಂತ ಗಂಭೀರವಾಗಿ ಪಾಲನೆ ಮಾಡುತ್ತಿವೆ ಎಂದು ವಿವರಿಸಲಾಗಿದೆ.

ಅಝಾನ್ ಮತ್ತು ಪ್ರಮುಖ ಸೂಚನೆಗಳನ್ನು ನೀಡಲು (ಸಾವು, ಸಮಾಧಿ ಮಾಡುವ ಸಮಯ, ಚಂದ್ರ ಕಾಣಿಸುವ ಮತ್ತು ಹಗಲು ಹೊತ್ತಿನಲ್ಲಿ) ಮಾತ್ರ ಧ್ವನಿವರ್ಧಕ ಬಳಸಬೇಕು.

ಧಾರ್ಮಿಕ ಸ್ಥಳಗಳಲ್ಲಿ ನಮಾಜ್ ಮಾಡಲು ಜನ ಸೇರಿದಾಗ, ಶುಕ್ರವಾರದ ಕಾರ್ಯಕ್ರಮಗಳು, ಧಾರ್ಮಿಕ ಮತ್ತು ಸಾಮಾಜಿಕ ಹಾಗೂ ಸಾಂಸ್ಕೃತಿಕ, ಜ್ಞಾನ ಧಾರಿತ ಕಾರ್ಯಕ್ರಮಗಳಲ್ಲಿ ಧ್ವನಿವರ್ಧಕ ಬಳಸಬಹುದು. ಧ್ವನಿವರ್ಧಕದ ಶಬ್ದದ ಪ್ರಮಾಣ ಎಷ್ಟಿರಬೇಕು ಎಂಬುದನ್ನು ಸ್ಥಳೀಯ ಪರಿಸರ ಮಾಲಿನ್ಯ ಮಂಡಳಿ ಅಧಿಕಾರಿಗಳ ಜತೆ ಸಮಾಲೋಚಿಸಿ ನಿಗದಿ ಮಾಡಬೇಕು.

ಮಸೀದಿ ಮತ್ತು ದರ್ಗಾ ಸುತ್ತಮುತ್ತ ಪಟಾಕಿಗಳನ್ನು ಸುಡಬಾರದು. ಧಾರ್ಮಿಕ ಸ್ಥಳದ ಸುತ್ತಮುತ್ತ ಭಿಕ್ಷಾಟನೆಗೆ ಪ್ರೋತ್ಸಾಹ ನೀಡಬಾರದು. ಅಂತಹವರಿಗೆ ನೆರವು ನೀಡಲು ಸಾಂಸ್ಥಿಕ ಮಟ್ಟದಲ್ಲೇ ಕ್ರಮಗಳನ್ನು ತೆಗೆದುಕೊಳ್ಳಬೇಕು ಎಂದು ಸೂಚಿಸಲಾಗಿದೆ.

ಇನ್ನೊಂದು ಸುದ್ದಿ 3B

'ಅಝಾನ್‌ಗೆ ನಿರ್ಬಂಧ ಹೇರಿಲ್ಲ'

'ಅಝಾನ್ ಬಗ್ಗೆ ರಾಜ್ಯ ವಕ್ಫ್ ಮಂಡಳಿ ಯಾವುದೇ ನಿರ್ಬಂಧ ಹೇರಿಲ್ಲ' ಎಂದು ಮಂಡಳಿ ಸದಸ್ಯರೂ ಆಗಿರುವ ಕರ್ನಾಟಕ ರಾಜ್ಯ ಮುಸ್ಲಿಂ ಜಮಾ ಅತ್‌ನ ಪ್ರಧಾನ ಕಾರ್ಯದರ್ಶಿ ಮೌಲಾನಾ ಶಾಫಿ ಸಾದಿ ಟ್ವೀಟ್ ಮಾಡಿದ್ದಾರೆ.

'ಸುತ್ತೋಲೆಯ ಕ್ರಮ ಸಂಖ್ಯೆ ಮೂರರಲ್ಲಿ ಅಝಾನ್ ಮತ್ತು ಇತರ ಯಾವ ವಿಚಾರಗಳಿಗೆ ಧ್ವನಿವರ್ಧಕ ಬಳಸಬಹುದೆಂದು ಸ್ಪಷ್ಟಪಡಿಸಲಾಗಿದೆ. ಈ ನಿರ್ಣಯದಲ್ಲಿ ಯಾವುದೇ ಲೋಪದೋಷಗಳಿದ್ದರೂ ಮುಂದಿನಸಭೆಯಲ್ಲಿ ಚರ್ಚಿಸಿ ಸರಿಪಡಿಸಲಾಗುವುದು' ಎಂದು ತಿಳಿಸಿದ್ದಾರೆ.

ಗುರುವಾರದ ಉಷ್ಣಾಂಶ 34° ಗರಿಷ್ಠ 19° ಕನಿಷ್ಠ

ಹವಾಮಾನ ಮುನ್ಸೂಚನೆ
ನಗರದಲ್ಲಿ ಬಿಸಿಲಿನ ವಾತಾವರಣ. ಒಣಹವೆ, ಶುಭ್ರ ಆಗಸ

ಹವಾಮಾನ

ಶುಕ್ರವಾರ	ಶನಿವಾರ	ಭಾನುವಾರ
33° 19°	32° 19°	33° 20°

‘ಕೂ’ ಷೇರು ಖರೀದಿಸಿದ ಜಾವಗಲ್ ಶ್ರೀನಾಥ್, ಕಲ್ಯಾಣ್ ಕೃಷ್ಣಮೂರ್ತಿ

ನವದೆಹಲಿ (ಪಿಟಿಐ): ‘ಕೂ’ ಸಾಮಾಜಿಕ ಜಾಲತಾಣದ ಮಾತೃಸಂಸ್ಥೆಯಲ್ಲಿ ಚೀನಾ ಮೂಲದ ಶುನ್‌ವೈ ಕ್ಯಾಪಿಟಲ್ ಹೊಂದಿದ್ದ ಷೇರುಪಾಲನ್ನು ಮಾಜಿ ಕ್ರಿಕೆಟಿಗ ಜಾವಗಲ್ ಶ್ರೀನಾಥ್, ಫ್ಲಿಪ್‌ಕಾರ್ಟ್‌ನ ಸಿಇಒ ಕಲ್ಯಾಣ್ ಕೃಷ್ಣಮೂರ್ತಿ ಸೇರಿದಂತೆ ಹಲವರು ಖರೀದಿಸಿದ್ದಾರೆ.

ಬುಕ್‌ಮೈಶೋ ಸಂಸ್ಥಾಪಕ ಆಶಿಶ್ ಹೇಮರಾಜನಿ, ಉಡಾನ್ ಸಹಸಂಸ್ಥಾಪಕ ಸುಜಿತ್ ಕುಮಾರ್, ಜೆರೊದಾ ಸಂಸ್ಥಾಪಕ ನಿಖಿಲ್ ಕಾಮತ್ ಅವರು ಕೂಡ ಶುನ್‌ವೈ ಕ್ಯಾಪಿಟಲ್ ಹೊಂದಿದ್ದ ಷೇರುಪಾಲನ್ನು ಖರೀದಿಸಿದವರ ಸಾಲಿನಲ್ಲಿ ಇದ್ದಾರೆ.

ಜಾವಗಲ್ ಶ್ರೀನಾಥ್

‘ಕೂ’ನ ಮಾತೃಸಂಸ್ಥೆಯ ಹೆಸರು ಬಾಂಬಿನೇಟ್ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್.

ಇವರು ಷೇರು ಪಾಲು ಖರೀದಿಸಿರುವ ವಿಷಯವನ್ನು ಬಾಂಬಿನೇಟ್ ಟೆಕ್ನಾಲಜೀಸ್ ಕಂಪನಿಯೇ ತಿಳಿಸಿದೆ. ಆದರೆ, ಯಾರು ಎಷ್ಟು ಪಾಲು ಖರೀದಿಸಿದ್ದಾರೆ ಎಂಬ ವಿವರ ನೀಡಿಲ್ಲ. ‘ಕೂ’ ಈಗ 10 ಲಕ್ಷ ಸಕ್ರಿಯ ಬಳಕೆದಾರರನ್ನು ಹೊಂದಿದೆ.

‘ಕೂ ಆ್ಯಪ್‌ಗೆ ಬೆಂಬಲವಾಗಿ ನಿಲ್ಲಲು ನನಗೆ ಸಂತಸವಾಗುತ್ತಿದೆ. ಭಾರತೀಯನಾಗಿ ನಾನು ಅವರಿಗೆ ನನ್ನ ಬೆಂಬಲವನ್ನು ಹೃತ್ಪೂರ್ವಕವಾಗಿ ನೀಡುತ್ತಿದ್ದೇನೆ’ ಎಂದು ಶ್ರೀನಾಥ್ ಅವರು ಹೇಳಿದ್ದಾರೆ. ಶುನ್‌ವೈ ಕ್ಯಾಪಿಟಲ್ ಕಂಪನಿಯು ಬಾಂಬಿನೇಟ್ ಟೆಕ್ನಾಲಜೀಸ್ ಕಂಪನಿಯಲ್ಲಿ ಶೇ 9ಕ್ಕಿಂತ ತುಸು ಹೆಚ್ಚಿನ ಪ್ರಮಾಣದ ಷೇರು ಹೊಂದಿತ್ತು.

ಚೀನಾ ಮೂಲದ ಹೂಡಿಕೆದಾರರು ಕಂಪನಿಯಿಂದ ಹೂಡಿಕೆಯನ್ನು ಹಿಂದಕ್ಕೆ ಪಡೆಯಲಿದ್ದಾರೆ ಎಂದು ‘ಕೂ’ ಸಹಸಂಸ್ಥಾಪಕ ಅಪ್ರಮೇಯ ರಾಧಾಕೃಷ್ಣ ಅವರು ಈ ಹಿಂದೆ ಪ್ರಕಟಿಸಿದ್ದರು.

ಕೇಬಲ್ ಅಳವಡಿಕೆ ಕಾಮಗಾರಿ: ವಿದ್ಯುತ್ ವ್ಯತ್ಯಯ ನಾಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭೂಗತ ಕೇಬಲ್ ಅಳವಡಿಕೆ ಕಾಮಗಾರಿ ಕೈಗೆತ್ತಿಕೊಳ್ಳುತ್ತಿರುವುದರಿಂದ ಕೆಂಗೇರಿ ಉಪವಿಭಾಗ ವ್ಯಾಪ್ತಿಯಲ್ಲಿ ಇದೇ 19 ಮತ್ತು 20ರಂದು ಬೆಳಿಗ್ಗೆ 9ರಿಂದ ಸಂಜೆ 5ರ ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ಹೇಳಿದೆ.

ಕೆಂಗೇರಿ ಉಪನಗರ, ಬಿಎಂಟಿಸಿ ಹತ್ತಿರ, ಜೆ.ಬಿ. ಬಡಾವಣೆ, ಕೊಮ್ಮಘಟ್ಟ ರಸ್ತೆ, ದೊಡ್ಡಮಾರಮ್ಮನ ದೇವಸ್ಥಾನ ಮತ್ತು ಸುತ್ತ–ಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ಓಪನ್ ಸ್ಕೂಲ್‌ನಲ್ಲಿ ಓದಿದ ವಿದ್ಯಾರ್ಥಿಗೆ ರ‍್ಯಾಂಕ್

ಬೆಂಗಳೂರು: ದಿ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಓಪನ್ ಸ್ಕೂಲಿಂಗ್‌ನಲ್ಲಿ (ಎನ್‌ಐಒಎಸ್) ಓದಿದ ನಗರದ ಮಯಾಂಕ್ ಫಂಡರಿ ಕಿಶೋರ್ ವೈಜ್ಞಾನಿಕ ಪ್ರೋತ್ಸಾಹ ಯೋಜನಾ (ಕೆವಿಪಿವೈ) ಪರೀಕ್ಷೆಯಲ್ಲಿ ದೇಶಕ್ಕೆ 648ನೇ ರ‍್ಯಾಂಕ್ ಪಡೆದಿದ್ದಾನೆ.

17 ವರ್ಷದ ಮಯಾಂಕ್ ತೆರೆದ ಶಾಲೆಯಲ್ಲಿ (ಓಪನ್ ಸ್ಕೂಲ್) ಅಂದರೆ, ಶಾಲೆಗೆ ಹೋಗದೆ ಓದಿ ಈ ಸಾಧನೆ ಮಾಡಿದ್ದಾನೆ.

ಮಯಾಂಕ್

ಕೆವಿಪಿವೈ ಪರೀಕ್ಷೆಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಫೆಲೋಷಿಪ್ ನೀಡಲಾಗುತ್ತದೆ. ದೇಶದಲ್ಲಿ 1 ಲಕ್ಷ ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದಾರೆ. ಈ ಪೈಕಿ 900 ವಿದ್ಯಾರ್ಥಿಗಳಿಗೆ ಮಾತ್ರ ತಿಂಗಳಿಗೆ ₹5 ಸಾವಿರದವರೆಗೆ ಫೆಲೋಷಿಪ್ ಬರುತ್ತದೆ.

ನಗರದ ರಾಜಾಜಿನಗರದಲ್ಲಿರುವ ಜ್ಞಾನಧಾರ ಎಜುಕೇಷನಲ್ ಸರ್ವಿಸಸ್ ಸಂಸ್ಥೆಯಲ್ಲಿ ಸ್ಪರ್ಧಾತ್ಮಕ ಪರೀಕ್ಷೆ ತರಬೇತಿಯನ್ನು ಪಡೆದು ಮಯಾಂಕ್ ಈ ಪರೀಕ್ಷೆ ಬರೆದಿದ್ದಾರೆ.

‘ಮಯಾಂಕ್‌ಗೆ ಐಐಎಸ್‌ಸಿ ಅಥವಾ ಯಾವುದೇ ಐಐಟಿಯಲ್ಲಿ ಸೀಟು ಸಿಗುವ ಸಾಧ್ಯತೆ ಇದೆ. ವಿಪರೀತ ಒತ್ತಡ ಮತ್ತು ಸಾಕಷ್ಟು ದುಬಾರಿಯಾಗಿರುವ ಈ ಶಿಕ್ಷಣ ವ್ಯವಸ್ಥೆಯಲ್ಲಿ ಓಪನ್ ಸ್ಕೂಲಿಂಗ್ ಹೆಚ್ಚು ಪ್ರಸ್ತುತವಾಗುತ್ತಿದೆ’ ಎಂದು ಜ್ಞಾನಧಾರ ಎಜುಕೇಷನಲ್ ಸರ್ವಿಸಸ್ ಸಂಸ್ಥೆಯ ನಿರ್ದೇಶಕ ಡಾ.ಎಂ.ಕೆ. ರಾಘವೇಂದ್ರ ಹೇಳಿದರು.

‘ಎಸ್ಸೆಸ್ಸೆಲ್ಸಿ ನಂತರ ಮಯಾಂಕ್ ಓಪನ್ ಸ್ಕೂಲಿಂಗ್ ಆಯ್ಕೆ ಮಾಡಿಕೊಂಡಿದ್ದಾನೆ. ಯಾವ ವಯಸ್ಸಿನವರು ಬೇಕಾದರೂ, ಯಾವ ಮಾಧ್ಯಮದಲ್ಲಿದ್ದವರೂ ಈ ವ್ಯವಸ್ಥೆ ಆಯ್ಕೆ ಮಾಡಿಕೊಳ್ಳಬಹುದು.’ ಎಂದು ಅವರು ಮಾಹಿತಿ ನೀಡಿದರು.

ಮಾಹಿತಿಗೆ, 99011 11008.

ಸೀಗೆಹಳ್ಳಿ: ಐತಿಹಾಸಿಕ ಶಾಸನಗಳಿದ್ದ ಪೊದೆಗೆ ಬೆಂಕಿ

ಅನಾಥ ಸ್ಥಿತಿಯಲ್ಲಿ ವೀರಗಲ್ಲುಗಳು

● ಪ್ರವೀಣ್ ಕುಮಾರ್ ಪಿ.ವಿ.

ಸೀಗೆಹಳ್ಳಿಯಲ್ಲಿ ಪತ್ತೆಯಾದ ವೀರಗಲ್ಲುಗಳು

ಬೆಂಗಳೂರು: ನಗರದ ಹೊರವಲಯದ ಸೀಗೇಹಳ್ಳಿಯ ಆಂಜನೇಯ ಗುಡಿ ಸಮೀಪ ಏಳು ವೀರಗಲ್ಲುಗಳು ಪತ್ತೆಯಾಗಿವೆ. ಪೊದೆಯ ನಡುವೆ ಈ ಕಲ್ಲುಗಳಿದ್ದವು. ಈ ಪೊದಗೆ ಯಾರೋ ಕಿಡಿಗೇಡಿಗಳು ಬೆಂಕಿ ಹಚ್ಚಿದ್ದು, ವೀರಗಲ್ಲುಗಳು ಕರಕಲಾಗಿವೆ.

‘ನಾವು ಸಣ್ಣವರಿದ್ದಾಗ ಇಲ್ಲಿ ಆಂಜನೇಯ ಗುಡಿ ಇರಲಿಲ್ಲ. 10 ವರ್ಷಗಳ ಹಿಂದೆ ಈ ಗುಡಿ ನಿರ್ಮಾಣವಾಗಿರಬಹುದು. ಸೀಗೆಹಳ್ಳಿಯ ಈ ಪ್ರದೇಶದಲ್ಲಿ ವೀರಗಲ್ಲುಗಳಿದ್ದವು. ಆದರೆ, ಒಂದೇ ಕಡೆ ಏಳೆಂಟು ಕಲ್ಲುಗಳು ಇರಲಿಲ್ಲ. ಯಾರೋ ಇವುಗಳನ್ನು ಬೇರೆ ಕಡೆಯಿಂದ ಕಿತ್ತು ತಂದು ಇಲ್ಲಿ ನೆಟ್ಟಿರುವಂತೆ ತೋರುತ್ತದೆ. ಅವು ಅನಾಥವಾಗಿ ಬಿದ್ದಿದ್ದು, ಅವುಗಳ ಸುತ್ತ ಪೊದೆ ಬೆಳೆದಿದೆ. ಇವುಗಳ ಬಳಿ ಆಂಜನೇಯನ ವಿಗ್ರಹವೂ ಪತ್ತೆಯಾಗಿದೆ’ ಎಂದು ಸ್ಥಳೀಯರಾದ ಬಾಲಾಜಿ ರಘೋತ್ತಮ್ ಬಾಲಿ ‘ಪ್ರಜಾವಾಣಿ’ಗೆ ತಿಳಿಸಿದರು.

ಒಂದು ವೀರಗಲ್ಲು 1.5 ಮೀ ಅಗಲ ಹಾಗೂ 1.2 ಮೀ ಎತ್ತರವಿದೆ. ಉಳಿದವು ಸಣ್ಣವು. ಕೆಲವು ಕಲ್ಲುಗಳಲ್ಲಿ ಬಿಲ್ಲು ಹಿಡಿದ ಯೋಧನ ಕೆತ್ತನೆ ಇದೆ. ಒಂದು ಕಲ್ಲಿನಲ್ಲಿ ಕೈಯಲ್ಲಿ ಖಡ್ಗ ಹಿಡಿದ ವೀರನ ಉಬ್ಬುಶಿಲ್ಪವಿದೆ. ಕಲ್ಲಿನ ಎಡ ಮೇಲ್ತುದಿಯಲ್ಲಿ ವೀರನು ಅಪ್ಸರೆಯರ ಜೊತೆ ಸ್ವರ್ಗಾರೋಹಣ ಮಾಡುವ ಕಿರು ಚಿತ್ರಣವೂ ಇದೆ. ವೀರನ ಎಡಗೈಯಲ್ಲಿ ಗುರಾಣಿ ಬಲಗೈಯಲ್ಲಿ ಖಡ್ಗ ಹಿಡಿದು ಯುದ್ಧದಲ್ಲಿ ತೊಡಗಿರುವ ಆಕರ್ಷಕ ಕೆತ್ತನೆ ಇದೆ. ಆ ಸೈನಿಕನ ಕಾಲಿಗೆ ವೈರಿಯೊಬ್ಬ ಎರಗಿದಂತೆ ಹಾಗೂ ಇನ್ನೊಬ್ಬ ಸೈನಿಕ ಕುದುರೆ ಮೇಲೆ ಸಾಗಿ ಬಂದಂತೆ, ಮತ್ತೊಬ್ಬ ಕಾದಾಟದಲ್ಲಿ ಕೆಳಗೆ ಬಿದ್ದಂತೆ ಚಿತ್ರಿಸಲಾಗಿದೆ. ಈ ಚಿತ್ರಣಗಳು ಯುದ್ಧದ ಸನ್ನಿವೇಶವನ್ನು ಕಟ್ಟಿಕೊಡುವಂತಿವೆ.

ಇನ್ನೊಂದು ವೀರಗಲ್ಲಿನಲ್ಲಿ ವೀರನ ಎಡಗೈಯಲ್ಲಿ ಬಿಲ್ಲು, ಬಲಗೈಯಲ್ಲಿ ಕಿರುಗತ್ತಿ ಇದೆ. ವೀರನ ತೊಡೆಗೆ ಬಾಣವು ನಾಟಿರುವಂತಿದೆ. ಶಿಲ್ಪದ ಎಡ ಮೇಲ್ಭಾಗದಲ್ಲಿ ವೀರನು ಅಪ್ಸರೆಯರ ಜೊತೆ ಸ್ವರ್ಗಾರೋಹಣ ಮಾಡುವ ಚಿತ್ರಣವಿದೆ.

ಶಾಸನ ತಜ್ಞ ಡಾ.ಎಚ್.ಎಸ್. ಗೋಪಾಲ ರಾವ್, ‘ಈ ವೀರಗಲ್ಲುಗಳನ್ನು ಇತಿಹಾಸ ತಜ್ಞ ಪಿ.ವಿ. ಕೃಷ್ಣಮೂರ್ತಿ ಈ ಹಿಂದೆಯೇ ಅಧ್ಯಯನ ಮಾಡಿದ್ದಾರೆ. ಇದರ ಬಗ್ಗೆ ಸಂಶೋಧನಾ ಲೇಖನಗಳನ್ನೂ ಪ್ರಕಟಿಸಿದ್ದಾರೆ. ಅವರ ಅಧ್ಯಯನ ಪ್ರಕಾರ ಇವು ಕ್ರಿ.ಶ. 9ನೇ ಶತಮಾನದ (ಕ್ರಿ.ಶ 830) ವೀರಗಲ್ಲುಗಳು. ಎಲೆಮಲ್ಲಪ್ಪ ಶೆಟ್ಟಿ ಕೆರೆಯ ಬಳಿ ಮೇಡಹಳ್ಳಿ ಬಳಿ ಪತ್ತೆಯಾಗಿದ್ದವು. ಇವು ಗಂಗರು ಹಾಗೂ ನೊಳಂಬರ ಕಾಲಘಟ್ಟದವು’ ಎಂದು ವಿವರಿಸಿದರು.

‘ಒಂದು ವೀರಗಲ್ಲಿನಲ್ಲಿರುವ ಶಾಸನವು ಊರಿನ ಮೇಲೆ ನಡೆದ ದಾಳಿಯ ಸಂದರ್ಭದಲ್ಲಿ ಯೋಧನೊಬ್ಬ ಮೃತಪಟ್ಟ ಬಗ್ಗೆ ವಿವರಿಸುತ್ತದೆ. ಎರೆಯಪಮಂಗಲ ಊರಿನಲ್ಲಿ ನಡೆದ ಹೋರಾಟದಲ್ಲಿ ಮದಶೆಟ್ಟಿಯ ಮಗ ಸಂಬಯ್ಯ ಸತ್ತ ವಿಚಾರ ತಿಳಿಯುತ್ತದೆ. ಇನ್ನೊಂದು ವೀರಗಲ್ಲು ರಸಮಲ್ಲ ಪೆಮ್ಮ (ಗಂಗರ ತಲಕಾಡಿನ ರಾಚಮಲ್ಲ ಪೆರ್ಮಾನಡಿ) ಎಂಬ ಅರಸನ ಕಾಲದಲ್ಲಿ ನಡೆದ ಊರಳಿವಿನ ಹೋರಾಟಕ್ಕೆ ಸಂಬಂಧಿಸಿದ್ದು. ಇದರಲ್ಲಿ ಇಗ್ಗಲೂರ ಶಂಭಯ್ಯನ ಮಾವ ಕಬ್ಬಯ್ಯ ಸತ್ತ ವಿವರವಿದೆ’ ಎಂದರು.

‘ಐತಿಹಾಸಿಕ ಪುರಾವೆ ಸಂರಕ್ಷಣೆ ಅಗತ್ಯ’

‘ಬೆಂಗಳೂರು ಆಸುಪಾಸಿನಲ್ಲಿ ಲಕ್ಷಾಂತರ ಸಂಖ್ಯೆಯಲ್ಲಿ ವೀರಗಲ್ಲುಗಳು ಕಾಣಸಿಗುತ್ತವೆ. ಎಲ್ಲವುಗಳಲ್ಲಿ ಶಾಸನಗಳಿರುವುದಿಲ್ಲ. ಶಾಸನಗಳಿರುವ ವೀರಗಲ್ಲುಗಳಿಗೆ ಐತಿಹಾಸಿಕ ಮಹತ್ವ ಜಾಸ್ತಿ. ಇಲ್ಲಿರುವ ಎರಡು ವೀರಗಲ್ಲುಗಳಲ್ಲಿ ಶಾಸನಗಳಿವೆ. ಇವುಗಳನ್ನು ಅಗತ್ಯವಾಗಿ ಸಂರಕ್ಷಣೆ ಮಾಡಬೇಕು’ ಎಂದು ಡಾ.ಎಚ್.ಎಸ್.ಗೋಪಾಲ ರಾವ್ ತಿಳಿಸಿದರು.

‘ಇವು ಗ್ರಾನೈಟ್ ಕಲ್ಲಿನಲ್ಲಿ ಕೆತ್ತಿರುವ ವೀರಗಲ್ಲುಗಳು. ಈ ರೀತಿ ಬೆಂಕಿಗೆ ಸಿಲುಕಿದರೆ ಇವು ಒಡೆದು ಹೋಗುವ ಅಪಾಯವಿದೆ. ಇವುಗಳನ್ನು ಸಂರಕ್ಷಿಸದೇ ಹೋದರೆ, ಯಾರಾದರೂ ಇವುಗಳನ್ನು ದುರ್ಬಳಕೆ ಮಾಡಿಕೊಳ್ಳುವ ಅಪಾಯವೂ ಇದೆ’ ಎಂದರು.

‘ಈ ವೀರಗಲ್ಲುಗಳು ಊರಿನ ಇತಿಹಾಸವನ್ನು ಸಾರುವ ಕುರುಹುಗಳು. ಇವುಗಳನ್ನು ಪುರಾತತ್ವ ಇಲಾಖೆಯವರು ಸಂರಕ್ಷಿಸಬೇಕು. ಅವರಿಂದ ಇದು ಸಾಧ್ಯವಾಗದೇ ಹೋದರೆ, ಸ್ಥಳೀಯರ ನೆರವಿನಿಂದ ಯಾವುದಾದರೂ ಸರ್ಕಾರಿ ಶಾಲೆಯ ಬಳಿ ಇವುಗಳನ್ನು ಸ್ಥಾಪಿಸಿ ಸಂರಕ್ಷಿಸಲು ನಾವು ಸಿದ್ಧ. ಇಲಾಖೆಯವರು ಇದಕ್ಕೆ ಸಹಕಾರ ನೀಡಲಿ’ ಎಂದು ಬಾಲಾಜಿ ರಘೋತ್ತಮ್ ಬಾಲಿ ತಿಳಿಸಿದರು.

ನೀರಿನ ಅದಾಲತ್ ಇಂದು

ಬೆಂಗಳೂರು: ಜಲಮಂಡಳಿಯು ವಿವಿಧ ಉಪವಿಭಾಗಗಳಲ್ಲಿ ಇದೇ 18ರಂದು ಬೆಳಿಗ್ಗೆ 9.30ರಿಂದ 11ರವರೆಗೆ ನೀರಿನ ಅದಾಲತ್ ಹಮ್ಮಿಕೊಳ್ಳಲಾಗಿದೆ.

ನೀರಿನ ಬಿಲ್ಲು, ನೀರು ಮತ್ತು ಒಳಚರಂಡಿ ಸಂಪರ್ಕ ಕಲ್ಪಿಸುವಲ್ಲಿನ ವಿಳಂಬ, ಗೃಹ ಬಳಕೆಯಿಂದ ವಾಣಿಜ್ಯ ಬಳಕೆ ಪರಿವರ್ತನೆ ವಿಳಂಬ ಮತ್ತಿತರ ಕುಂದು ಕೊರತೆಗಳಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಅದಾಲತ್‌ನಲ್ಲಿ ಪರಿಹರಿಸಲಾಗುವುದು. ಬಳಕೆದಾರರು ಸಂಬಂಧಪಟ್ಟ ಉಪವಿಭಾಗದ ಕಚೇರಿಗೆ ತೆರಳಿ ಅದಾಲತ್‌ನಲ್ಲಿ ಪಾಲ್ಗೊಳ್ಳಬಹುದು. ಕುಂದು ಕೊರತೆಗಳಿಗೆ ಸಂಬಂಧಿಸಿದಂತೆ ಮಂಡಳಿಯ 24/7 ದೂರು ನಿರ್ವಹಣಾ ಕೇಂದ್ರದ ದೂರವಾಣಿ: 080– 22238888, ಸಹಾಯವಾಣಿ 1916 ಹಾಗೂ ವಾಟ್ಸ್‌ಆ್ಯಪ್ ಸಂಖ್ಯೆ:8762228888 ಗೆ ಸಂಪರ್ಕಿಸಬಹುದು.

‘ಮೀಸಲಾತಿ ಹೋರಾಟ ಸ್ಥಗಿತ ತಾತ್ಕಾಲಿಕ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸರ್ಕಾರದ ಭರವಸೆಯನ್ನು ನಂಬಿ ಪಂಚಮಸಾಲಿ ಮೀಸಲಾತಿ ಹೋರಾಟವನ್ನು ಆರು ತಿಂಗಳ ಅವಧಿಯವರೆಗೆ ತಾತ್ಕಾಲಿಕವಾಗಿ ಮಾತ್ರ ಸ್ಥಗಿತಗೊಳಿಸಲಾಗಿದೆ ಎಂದು ಕೂಡಲ ಸಂಗಮದ ಪಂಚಮಸಾಲಿ ಪೀಠದ ಬಸವ ಜಯ ಮೃತ್ಯುಂಜಯ ಸ್ವಾಮೀಜಿ ತಿಳಿಸಿದರು.

ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಸರ್ಕಾರ ಆರು ತಿಂಗಳ ಕಾಲಾವಕಾಶ ಕೇಳಿದೆ. ಅದರಂತೆ ಮಾರ್ಚ್ 15ರಂದು ಹೋರಾಟವನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ. ಸೆಪ್ಟೆಂಬರ್ 15ರವರೆಗೂ ಸರ್ಕಾರಕ್ಕೆ ಕಾಲಾವಕಾಶ ನೀಡಲಾಗುವುದು. ಆ ಬಳಿಕ ಮತ್ತೆ ಹೋರಾಟ ಆರಂಭವಾಗಲಿದೆ’ ಎಂದರು.

‘ಸಂವಿಧಾನದ ಚೌಕಟ್ಟಿನಲ್ಲಿ ಕಾನೂನುಬದ್ಧವಾಗಿ ಮೀಸಲಾತಿ ಕಲ್ಪಿಸಬೇಕಾದರೆ ಆರು ತಿಂಗಳ ಕಾಲಾವಕಾಶ ಬೇಕು ಎಂದು ರಾಜ್ಯ ಸರ್ಕಾರ ಮನವಿ ಮಾಡಿತ್ತು. ರಾಜ್ಯ ಹಿಂದುಳಿದ ವರ್ಗಗಳ ಆಯೋಗವೂ ಇದೇ ಅಭಿಪ್ರಾಯ ವ್ಯಕ್ತಪಡಿಸಿತ್ತು. ಈ ಕುರಿತು ವಿಧಾನಮಂಡಲದಲ್ಲೇ ಭರವಸೆ ನೀಡುವಂತೆ ಒತ್ತಾಯಿಸಿದ್ದೆವು. ಅದರಂತೆ ಸರ್ಕಾರ ವಿಧಾನಮಂಡಲದಲ್ಲೇ ಭರವಸೆ ನೀಡಿದೆ’ ಎಂದರು.

ಮಾ.23ರಂದು ಬೆಂಗಳೂರಿನಿಂದ ವಾಪಸ್ ಹೊರಡಲಾಗುವುದು. ಮೀಸಲಾತಿ ಹೋರಾಟದ ಪಾದಯಾತ್ರೆ ಸಾಗಿಬಂದ ಮಾರ್ಗವಾಗಿಯೇ ಶರಣು ಶರಣಾರ್ಥಿ ಯಾತ್ರೆ ಮೂಲಕ ತೆರಳಲಾಗುವುದು. ಏಪ್ರಿಲ್ 11ಕ್ಕೆ ಕೂಡಲಸಂಗಮದ ಪಂಚಮಸಾಲಿ ಪೀಠಕ್ಕೆ ತಲುಪಲಾಗುವುದು ಎಂದು ಸ್ವಾಮೀಜಿ ಪ್ರಕಟಿಸಿದರು.

ಅಖಿಲ ಭಾರತ ಪಂಚಮಸಾಲಿ ಮಹಾಸಭಾ ಅಧ್ಯಕ್ಷ ವಿಜಯಾನಂದ ಕಾಶಪ್ಪನವರ ಮಾತನಾಡಿ, ಸೆಪ್ಟೆಂಬರ್ 15 ರೊಳಗೆ ಮೀಸಲಾತಿ ದೊರಕದಿದ್ದರೆ ಮತ್ತೆ ಬೆಂಗಳೂರಿನಲ್ಲಿ ಹಕ್ಕೊತ್ತಾಯ ಸಮಾವೇಶ ನಡೆಸಲಾಗುವುದು ಎಂದರು.

ಮಾಜಿ ಸಚಿವ ಎ.ಬಿ. ಪಾಟೀಲ, ಪಂಚಮಸಾಲಿ ಮೀಸಲಾತಿ ಹೋರಾಟ ಸಮಿತಿಯ ಮುಖಂಡರಾದ ನಾನಾಗೌಡ ಬಿರಾದಾರ್ ಪತ್ರಿಕಾಗೋಷ್ಠಿಯಲ್ಲಿದ್ದರು.

‘ವಚನಾನಂದ ಸ್ವಾಮೀಜಿ ಸೆಲೆಬ್ರಿಟಿ’

ಹರಿಹರ ಪಂಚಮಸಾಲಿ ಪೀಠದ ವಚನಾನಂದ ಸ್ವಾಮೀಜಿ ಮೀಸಲಾತಿ ಹೋರಾಟದಿಂದ ಹಿಂದೆ ಸರಿದು ಮತ್ತೆ ಕಾಣಿಸಿಕೊಂಡಿರುವ ಕುರಿತು ಪ್ರಶ್ನಿಸಿದಾಗ ಪ್ರತಿಕ್ರಿಯಿಸಿದ ಬಸವ ಜಯ ಮೃತ್ಯುಂಜಯ ಸ್ವಾಮೀಜಿ, ‘ನಮ್ಮ ಪಾದಯಾತ್ರೆ ಹರಿಹರ ತಲುಪಿದಾಗ ಅವರು (ವಚನಾನಂದ ಸ್ವಾಮೀಜಿ) ಬಂದರು. ನಾವು ಸ್ವಾಗತಿಸಿದೆವು. ಬೆಂಗಳೂರಿನಲ್ಲಿ ಸಮಾವೇಶ ಮುಗಿದ ತಕ್ಷಣ ಹೋದರು. ಈಗ ಮತ್ತೆ ಕಾಣಿಸಿಕೊಂಡಿದ್ದಾರೆ. ಅವರು ಸೆಲೆಬ್ರಿಟಿ ಬರುತ್ತಾರೆ, ಹೋಗುತ್ತಾರೆ. ನಮ್ಮ ಹೋರಾಟ ನಿರಂತರ’ ಎಂದರು.

ಕೆನರಾ ಬ್ಯಾಂಕ್: ಉಚಿತ ಕಂಪ್ಯೂಟರ್ ಶಿಕ್ಷಣ

ಬೆಂಗಳೂರು: ಮಲ್ಲೇಶ್ವರದಲ್ಲಿರುವ ಕೆನರಾ ಬ್ಯಾಂಕ್ ಮಾಹಿತಿ ತಂತ್ರಜ್ಞಾನ ತರಬೇತಿ ಸಂಸ್ಥೆಯು ನಿರುದ್ಯೋಗಿ ಯುವಕ–ಯುವತಿಯರಿಗೆ ಮೂರು ತಿಂಗಳ ಉಚಿತ ಕಂಪ್ಯೂಟರ್ ಕಲಿಕಾ ತರಬೇತಿ ಶಿಕ್ಷಣವನ್ನು ಹಮ್ಮಿಕೊಂಡಿದೆ.

ಅಭ್ಯರ್ಥಿಗಳು ಕನಿಷ್ಠ ಎಸ್ಸೆಸ್ಸೆಲ್ಸಿಯಲ್ಲಿ ತೇರ್ಗಡೆಯಾಗಿರಬೇಕು. ಪಿಯುಸಿ, ಡಿಗ್ರಿ, ಡಿಪ್ಲೊಮಾ ವ್ಯಾಸಂಗ ಮಾಡಿದ 18ರಿಂದ 27 ವರ್ಷದೊಳಗಿನವರಿಗೆ ಆದ್ಯತೆ ನೀಡಲಾಗುತ್ತದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ಗರಿಷ್ಠ 30 ವರ್ಷ ನಿಗದಿಪಡಿಸಲಾಗಿದೆ. ಏಪ್ರಿಲ್ 1ರಿಂದ ತರಗತಿಗಳು ಪ್ರಾರಂಭವಾಗಲಿವೆ ಎಂದು ಸಂಸ್ಥೆಯ ನಿರ್ದೇಶಕ ಎಂ. ವೆಂಕಟೇಶ ಶೇಷಾದ್ರಿ ತಿಳಿಸಿದ್ದಾರೆ. ವಿವರಕ್ಕೆ ದೂ.: 080 23440036 ಅಥವಾ 94485 38107.

ನಗರದಲ್ಲಿ ಇಂದು

ವಿಶೇಷ ಉಪನ್ಯಾಸ: ಡಾ. ವಿಜಯ ಕೃಷ್ಣ ಎ., ಡಾ. ಸುರಭಿ ನಾರಾಯಣ್, ಆಯೋಜನೆ ಮತ್ತು ಸ್ಥಳ: ಪಿಇಎಸ್ ಪಾಲಿಟೆಕ್ನಿಕ್, ಹನುಮಂತನಗರ, ಬೆಳಿಗ್ಗೆ 11.30

ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ: ಸಚಿವೆ ಶಶಿಕಲಾ ಜೊಲ್ಲೆ, ಅಧ್ಯಕ್ಷತೆ: ಪ್ರಮೀಳಾ ಆರ್. ನಾಯ್ಡು, ಮುಖ್ಯ ಅತಿಥಿ: ಎನ್. ನಾಗಾಂಬಿಕಾ ದೇವಿ, ಅತಿಥಿ: ಪೆದ್ದಪಯ್ಯ, ಎಸ್.ಜಿ. ಸುಶೀಲಮ್ಮ, ಆಯೋಜನೆ: ಕರ್ನಾಟಕ ರಾಜ್ಯ ಮಹಿಳಾ ಆಯೋಗ, ಸ್ಥಳ: ವೈಎಂಸಿಎ, ಆರ್‌ಬಿಐ ಪಕ್ಕ, ನೃಪತುಂಗ ರಸ್ತೆ, ಮಧ್ಯಾಹ್ನ 2

ಉಪನ್ಯಾಸ: ಜಯಲಕ್ಷ್ಮಮ್ಮ ಬಾಬು ರಾಮಣ್ಣ ಸ್ಮರಣಾರ್ಥ ಉಪನ್ಯಾಸ: ಸಾಹಿತಿ ಡಾ.ಬಿ.ಎ. ವಿವೇಕ ರೈ, ಕಾರ್ಯಕ್ರಮ ಸಂಯೋಜನೆ: ಡಾ.ಬಿ. ಸಿ. ರಾಜಕುಮಾರ್, ಉಪಸ್ಥಿತಿ: ಡಾ.ಆರ್. ಲಕ್ಷ್ಮೀನಾರಾಯಣ, ಪ್ರೊ.ಎಂ.ಎಚ್. ಕೃಷ್ಣಯ್ಯ, ಡಾ.ಎಚ್.ಎಸ್. ಎಂ. ಪ್ರಕಾಶ್, ಡಾ.ಎಸ್. ಅನಿಲ್ ಕುಮಾರ್, ಆಯೋಜನೆ: ಬಿ.ಎಂ.ಶ್ರೀ. ಪ್ರತಿಷ್ಠಾನ, (ಆನ್‌ಲೈನ್ ಕಾರ್ಯಕ್ರಮ) ಸಂಜೆ 4.30


ಬಿ.ಎ. ವಿವೇಕ ರೈ

ಗಾಂಧಿ ಶಿಲ್ಪ ಬಜಾರ್: ಕರಕುಶಲ ವಸ್ತುಗಳ ಮಾರಾಟ ಮತ್ತು ಪ್ರದರ್ಶನ, ಮುಖ್ಯ ಅತಿಥಿಗಳು: ಸಚಿವ ಆರ್. ಶಂಕರ್, ಶಾಸಕಿ ಸೌಮ್ಯಾ ರೆಡ್ಡಿ, ಸಂಸದ ತೇಜಸ್ವಿ ಸೂರ್ಯ, ಸ್ಥಳ: ರಾಜಲಕ್ಷ್ಮಿ ಕಲ್ಯಾಣ ಮಂದಿರ, 8ನೇ ಬ್ಲಾಕ್, ಜಯನಗರ, ಸಂಜೆ 4

ಕೆ.ಎಂ.ಎಫ್ ಕರ್ನಾಟಕ ಸಹಕಾರಿ ಹಾಲು ಉತ್ಪಾದಕರ ಮಹಾ ಮಂಡಳಿ ನಿಯಮಿತ
ಕಹಾಮ ಸಂಕೀರ್ಣ, ಡಾ: ಎಂ. ಹೆಚ್. ಮರೀಗೌಡ ರಸ್ತೆ, ಬೆಂಗಳೂರು–560 029
ಫೋನ್: 26096832/26096822/26096910 ಫ್ಯಾಕ್ಸ್: 080–25536105 Email: purchase@kmf.coop
ಸಂ. ಕಹಾಮ/ಖರೀದಿ/ ಇ–ಪ್ರೊಕ್./ಟೆಂಡರ್–284/2020–21 ದಿನಾಂಕ: 15.03.2021

ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

ಕರ್ನಾಟಕ ಹಾಲು ಮಹಾ ಮಂಡಳಿಯ ನಂದಿನಿ ಹೈಟೆಕ್ ಮಿಲ್ಕ್ ಪೌಡರ್‌ಪ್ಲಾಂಟ್‌ನಲ್ಲಿ ಉತ್ಪಾದಿಸಲಾಗುವ ಹಾಲಿನ ಪುಡಿಯನ್ನು ಗೋದಾಮುಗಳಿಗೆ ಸಾಗಿಸಲು ಅಗತ್ಯವಿರುವ ವಾಹನಗಳನ್ನು **ಎರಡು ವರ್ಷಗಳ ಅವಧಿಗೆ ಗುತ್ತಿಗೆ ಆಧಾರದಲ್ಲಿ** ಒದಗಿಸಲು ಅರ್ಹ ಟೆಂಡರ್‌ದಾರರಿಂದ ಟೆಂಡರ್‌ನ್ನು ಆಹ್ವಾನಿಸಲಾಗಿದೆ.

ಕ್ರಮ ಸಂಖ್ಯೆ	ವಿವರ	ದರ	ಇಎಂಡಿ ಮೊತ್ತ
1	ನಂದಿನಿ ಹೈಟೆಕ್ ಮಿಲ್ಕ್ ಪೌಡರ್‌ಪ್ಲಾಂಟ್‌ನಿಂದ ಗೆಜ್ಜಲಗೆರೆ ಗೋದಾಮಿನವರೆಗೆ ಸಾಗಾಣಿಕೆ ಮಾಡಲು ವಾಹನ ವ್ಯವಸ್ಥೆ	ಪ್ರತಿ ಮೆಟ್ರಿಕ್‌ಟನ್‌ಗೆ ನಿವ್ವಳ.	ರೂ.1,44,000/–
2	ನಂದಿನಿ ಹೈಟೆಕ್ ಮಿಲ್ಕ್ ಪೌಡರ್‌ಪ್ಲಾಂಟ್‌ನಿಂದ ಸೋಮನಹಳ್ಳಿ ಗೋದಾಮಿನವರೆಗೆ ಸಾಗಾಣಿಕೆ ಮಾಡಲು ವಾಹನ ವ್ಯವಸ್ಥೆ	ಪ್ರತಿ ಮೆಟ್ರಿಕ್‌ಟನ್‌ಗೆ ನಿವ್ವಳ	ರೂ.1,44,000/–

ಟೆಂಡರ್‌ದಾಖಲಾತಿಯನ್ನು e-proc ವೆಬ್‌ಸೈಟ್ https://eproc.karnataka.gov.in/. ನಲ್ಲಿ download ಮಾಡಿಕೊಳ್ಳಬಹುದಾಗಿರುತ್ತದೆ. ಆಸಕ್ತಿಯುಳ್ಳ ಟೆಂಡರ್‌ದಾರರು ಹೆಚ್ಚಿನ ಮಾಹಿತಿಯನ್ನು ಮೇಲ್ಕಾಣಿಸಿದ ವಿಳಾಸದಲ್ಲಿ ಪಡೆಯಬಹುದಾಗಿರುತ್ತದೆ, ಹಾಗೂ Help line No: 080–22230960 / 22234115

ಟೆಂಡರ್ ಶುರುವಾಗುವ ದಿನಾಂಕ	:	15.03.2021
ಪೂರ್ವಬಾವಿ ಸಭೆ ದಿನಾಂಕ	:	22.03.2021 ರಂದು 11.00 ಘಂಟೆಗೆ
ಟೆಂಡರ್ ಅಪ್ ಲೋಡಿಂಗ್ ಮಾಡಲುಕಡೆಯ ದಿನಾಂಕ	:	03.04.2021 ರಂದು 5.00 ಘಂಟೆಯವರೆಗೆ
ತಾಂತ್ರಿಕ ಬಿಡ್‌ತೆರೆಯುವ ದಿನಾಂಕ	:	07.04.2021 ರಂದು 03.00 ಘಂಟೆಗೆ
ವಾಣಿಜ್ಯಕ ಬಿಡ್‌ತೆರೆಯುವ ದಿನಾಂಕ	:	ತಾಂತ್ರಿಕ ಬಿಡ್‌ಗಳ ವಿಶ್ಲೇಷಣೆಯ ನಂತರ

ಕರ್ನಾಟಕ ಸಹಕಾರಿ ಹಾಲು ಮಹಾಮಂಡಳಿ ಪರವಾಗಿ
ಸಹಿ/–
ನಿರ್ದೇಶಕರು (ಖರೀದಿ)

IN THE COURT OF THE HON.BLE CCH 20 - XXVI ADDITIONAL CITY CIVIL JUDGE AT MAYOHALL AT BENGALURU
O.S. No. 25307 OF 2018

BETWEEN: ESTEEM SECURITY & ALLIED SERVICES, DNS Complex, 2nd Floor. Dasarahalli, Nadaprabhu Kempegowda Main Road, Near St. James Church, H.A. Farm Post, Bengaluru-560 024. Represented by its Proprietor Shri Major P. Ramachandran (Retd) ...**Plaintiff**

AND: CELEBRITY LAKEVIEW RESIDENTIAL OWNERS WELFARE ASSOCIATION #28-29, C/O - Jayasheela Reddy Building, 3rd Cross, Pragathinagar, Electronic City Post, Bengaluru-560 100 Represented by its President Shri Manjunath ...**Defendant**

NOTICE / SUMMONS TO DEFENDANT

1. CELEBRITY LAKEVIEW RESIDENTIAL OWNERS WELFARE ASSOCIATION, #28-29, C/O - Jayasheela Reddy Building, 3rd Cross. Pragathinagar, Electronic City Post, Bengaluru-560 001. Represented by its President Shri Manjunath ...**DEFENDANT**

Whereas the above named Plaintiff has instituted a civil suit against you the Defendant before the Hon'ble Court (CCH-20) for the recovery of money of Rs. 2,92,556/- (Rupees Two Lakhs Ninety-Two Thousand Five Hundred and Firfty-Six only) along with pendent-lite and future interest at the rate of 18% p.a. against you the Defendant.

You are hereby warned to appear in this Court in person or by pleader duly instructed on thursday the **08-04-2021 at 11 a.m.** forenoon to show cause against the plaint. Failing wherein, the matter will be heard and determined ex-parte.

Given under my sign and seal on this 4th day of March 2021 at Bengaluru City.

By order of the Court, Deputy Registrar, City Civil Court, Mayo Hall Unit, Bangalore.

Advocate for Plaintiff :
PROLAW, Advocates
18, Chitrakoot, 1st Cross, Kumarcot Layout, High Grounds, Bengaluru-560 001.
Represented by **Satyen Bajaj**.

ಪಂಜಾಬ್ ನ್ಯಾಷನಲ್ ಬ್ಯಾಂಕ್ punjab national bank
ಶಾಖಾ ಕಛೇರಿ, ರಾಮಮೂರ್ತಿನಗರ (ಇ–ಒ.ಬಿ.ಸಿ), #28, 1ನೇ ಬ್ಲಾಕ್, ಟಿ.ಸಿ ಪಾಳ್ಯ ಮುಖ್ಯ ರಸ್ತೆ, ಅಕ್ಷಯನಗರ, ರಾಮಮೂರ್ತಿನಗರ, ಬೆಂಗಳೂರು – 560 016. ಮೊಬೈಲ್ : 7022038141

ಚಿನ್ನದ ಆಭರಣಗಳ ಹರಾಜು ಪ್ರಕಟಣೆ

ಈ ಮೂಲಕ ಶ್ರೀ.ದಿನೇಶ್ ಪಾಲಿವಾಲ್, ಶ್ರೀ ರಾಮ್‌ಗೋಪಾಲ್ ರವರ ಪುತ್ರ ಮತ್ತು ಶ್ರೀಮತಿ ಗೀತಾ ಜೋಷಿ, ಶ್ರೀ ದಿನೇಶ್ ಪಾಲಿವಾಲ್ ರವರ ಪತ್ನಿ, ಇವರಿಬ್ಬರ ವಿಳಾಸ #204, 2ನೇ ಮಹಡಿ, 189 ಎನ್.ಆರ್.ಐ ಲೇಔಟ್, ಕಲ್ಕೆರೆ, ಬೆಂಗಳೂರು–560 043 ಮತ್ತು ಎನ್.ಆರ್.ಐ ಲೇಔಟ್, ಫೇಸ್ 2, 2ನೇ ಕ್ರಾಸ್, ಎಡಗಡೆ 1ನೇ ಮನೆ, ಜೂಬ್ಲಿ ಕಾಲೇಜ್ ಹತ್ತಿರ, ಕಲ್ಕೆರೆ, ರಾಮಮೂರ್ತಿನಗರ, ಬೆಂಗಳೂರು–560043 ಮತ್ತು ಅವರ ಉತ್ತರಾಧಿಕಾರಿಗಳು ಹಾಗೂ ಅವರ ಕಾನೂನುಬದ್ಧ ವಾರಸುದಾರರಿಗೆ ತಿಳಿಸುವುದೇನೆಂದರೆ ಈ ಪೂರ್ವ ಓರಿಯಂಟಲ್ ಬ್ಯಾಂಕ್ ಆಫ್ ಕಾಮರ್ಸ್ (ಪ್ರಸ್ತುತ ಪಂಜಾಬ್ ನ್ಯಾಷನಲ್ ಬ್ಯಾಂಕ್), ರಾಮಮೂರ್ತಿನಗರ ಶಾಖೆಯಿಂದ ರೂ.4,78,901/– ಮತ್ತು ರೂ.4,71,012/– (ಇದರೊಂದಿಗೆ ಇವೆರಡರ ಖಾತೆಯಲ್ಲಿ ದಿನಾಂಕ 01.12.2020 ರಿಂದ ಮುಂದಿನ ಬಡ್ಡಿ, ಖರ್ಚು ವೆಚ್ಚಗಳು ಸೇರುತ್ತವೆ) ಮೊತ್ತದ ಸಾಲವನ್ನು ಪಡೆಯಲು ಚಿನ್ನದ ಆಭರಣಗಳನ್ನು ಅಡಮಾನವಿಡಲಾಗಿತ್ತು. ಖಾತೆಗಳಲ್ಲಿನ ಸಾಲದ ಮೊತ್ತವು ಮಿತಿಮೀರಿದ್ದರಿಂದ, ಬ್ಯಾಂಕಿಗೆ ತಿಳಿದಿರುವ ವಿಳಾಸಕ್ಕೆ ಸಾಲಗಾರರಿಗೆ ಪತ್ರಗಳನ್ನು ಕಳುಹಿಸಲಾಯಿತು. ಆದರೆ ಆ ಪತ್ರಗಳು ತಲುಪದೆ ಹಿಂತಿರುಗಿ ಬಂದಿದೆ. ಅಡಮಾನವಿಟ್ಟಿರುವ ಚಿನ್ನದ ಆಭರಣಗಳನ್ನು, ದಿನಾಂಕ 26.3.2021 ರಂದು ಮಧ್ಯಾಹ್ನ 2.30 ಕ್ಕೆ ಹರಾಜು ಮಾಡಲಾಗುವುದು. ಈ ಮೂಲಕ ಮೇಲೆ ತಿಳಿಸಿದ ಸಾಲಗಾರರಿಗೆ ಪಂಜಾಬ್ ನ್ಯಾಷನಲ್ ಬ್ಯಾಂಕ್, ರಾಮಮೂರ್ತಿನಗರ (ಇ–ಒ.ಬಿ.ಸಿ) ಶಾಖೆಯ ಮುಖ್ಯಸ್ಥರನ್ನು ಹರಾಜಿನ ದಿನಾಂಕದೊಳಗೆ ಭೇಟಿಯಾಗಿ ಖಾತೆಗಳನ್ನು ಅಂತ್ಯಗೊಳಿಸಿ ಅಥವಾ ತಿಳಿಸಲಾದ ಹರಾಜಿನಲ್ಲಿ ಹಾಜರಾಗಬೇಕೆಂದು ಸೂಚಿಸಲಾಗಿದೆ.

ದಿನಾಂಕ : 17.3.2021
ಸ್ಥಳ : ಬೆಂಗಳೂರು
ಶಾಖಾ ವ್ಯವಸ್ಥಾಪಕರು
ರಾಮಮೂರ್ತಿನಗರ

ಎನ್ ಜಿ ಇ ಎಫ್ ಲಿ.
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ನಂ.49, 3ನೇ ಮಹಡಿ, ಖನಿಜ ಭವನ (ಸೌತ್ ವಿಂಗ್),
ರೇಸ್ ಕೋರ್ಸ್ ರಸ್ತೆ, ಬೆಂಗಳೂರು–560001
CIN:U31102KA1970SGC001568
ದೂ.:080–22203339 ಇ–ಮೇಲ್: md-ngef@karnataka.gov.in
ಸಂ: ಎನ್‌ಜಿಇಎಫ್/92/ಎಸ್.ಎಂ.ಎ./2020–21 ದಿನಾಂಕ:18.03.2021

ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ (ಇ–ಪ್ರೊಕ್ಯುರ್‌ಮೆಂಟ್)

ಎನ್ ಜಿ ಇ ಎಫ್ ಲಿ. ಸಂಸ್ಥೆಗೆ ಅವಶ್ಯವಿರುವ ಸಿಬ್ಬಂದಿಯನ್ನು ಮಾನವ ಸಂಪನ್ಮೂಲ ಏಜೆನ್ಸಿ ಮೂಲಕ ತೆಗೆದುಕೊಳ್ಳಲು ಏಜೆನ್ಸಿ ಆಯ್ಕೆಗೆ ದಿನಾಂಕ: **18.03.2021** ರಂದು ಇ–ಟೆಂಡರ್ ಕರೆಯಲಾಗಿದೆ.
ಇ–ಟೆಂಡರ್ ಸಂಖ್ಯೆ : **ಎನ್‌ಜಿಇಎಫ್/92/ಎಸ್.ಎಂ.ಎ./2020–21**
ದಿನಾಂಕ:18.03.2021. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **01.04.2021**
ಸಮಯ : ಸಂಜೆ 5.30 ಗಂಟೆಯವರೆಗೆ.
ಟೆಂಡರ್ ವಿವರಗಳನ್ನು ಇ–ಪ್ರೊಕ್ಯುರ್‌ಮೆಂಟ್ ಅಂತರ್ಜಾಲ **https://eproc.karnataka.gov.in**ರಲ್ಲಿ **ದಿನಾಂಕ:18.03.2021 ರಿಂದ 01.04.2021** ರವರೆಗೆ ಪಡೆಯಬಹುದು.

ಸಹಿ/– ಕಾರ್ಯನಿರ್ವಾಹಕ ನಿರ್ದೇಶಕರು, ಎನ್‌ಜಿಇಎಫ್ ಲಿ.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ
ರಾಮನಗರ ವಿಭಾಗ, ಸಂಚಾರ ಶಾಖೆ, ಮೊದಲನೇ ಮಹಡಿ,
ವಾಹನ ನಿಲ್ದಾಣ, ಐಜೂರು ವೃತ್ತ, ರಾಮನಗರ–562159
ಸಂಖ್ಯೆ: ಕರಾಸಾ.ರಾನವಿ.ಸಂ.ವಾ/2854/20–21 ದಿನಾಂಕ: 15.03.2021

“ಸಂಧಾನ ಪ್ರಕಟಣೆ ಸಂಖ್ಯೆ: 13–2020–21”

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ರಾಮನಗರ ವಿಭಾಗ, ಮೊದಲನೇ ಮಹಡಿ, ರಾಮನಗರ ಬಸ್ ನಿಲ್ದಾಣ, ಐಜೂರು ವೃತ್ತ, ರಾಮನಗರ ಇವರು, ರಾಮನಗರ ವಿಭಾಗದ ವ್ಯಾಪ್ತಿಯಲ್ಲಿ ಬರುವ ಕೋಡಿಹಳ್ಳಿ ಹಾಗೂ ಚನ್ನಪಟ್ಟಣ ಬಸ್ ನಿಲ್ದಾಣದಲ್ಲಿ ಖಾಲಿಯಿರುವ ವಾಣಿಜ್ಯ ಮಳಿಗೆಗೆ 5 ವರ್ಷಗಳವರೆಗೆ / ತೆರೆದ ಸ್ಥಳದ ಮಳಿಗೆಗೆ 03 ವರ್ಷಗಳವರೆಗೆ ಹಾಗೂ ರಾಮನಗರ ವಿಭಾಗದ ವ್ಯಾಪ್ತಿಯಲ್ಲಿ ಖಾಲಿ ಇರುವ ಹೋರ್ಡಿಂಗ್ಸ್ / ಗ್ಲೋಸೈನ್ / ಪ್ಲಾಟ್ ಫಾರಂ ಫಲಕಗಳ ಜಾಹೀರಾತುಗಳಿಗೆ 05 ವರ್ಷಗಳವರೆಗೆ ಸಂಧಾನದ ಮುಖಾಂತರ ಪರವಾನಿಗಿದಾರರನ್ನು ಆಯ್ಕೆ ಮಾಡುವ ಸಲುವಾಗಿ ದಿ: **06.04.2021**ರಂದು **12:00 ಗಂಟೆಗೆ** ವಿಭಾಗೀಯ ಕಛೇರಿಯಲ್ಲಿ ಅರ್ಜಿದಾರರು / ಪ್ರತಿನಿಧಿಗಳ ಎದುರು ಸಂಧಾನ ಸಭೆಯನ್ನು ನಡೆಸಲಾಗುವುದು. ಸಂಧಾನ ಅರ್ಜಿಗಳನ್ನು ದಿನಾಂಕ: **16.03.2021**ರಿಂದ ದಿನಾಂಕ: **06.04.2021**ರ **11:00 ಗಂಟೆ**ಗಳವರೆಗೆ ಪಡೆಯಬಹುದು. ಹೆಚ್ಚಿನ ವಿವರಗಳಿಗಾಗಿ ವಿಭಾಗೀಯ ಕಛೇರಿ, ಕರಾರಸಾ ಸಂಸ್ಥೆ, ರಾಮನಗರ ವಿಭಾಗ, ಮೊದಲನೇ ಮಹಡಿ, ರಾಮನಗರ ಬಸ್ ನಿಲ್ದಾಣ, ಐಜೂರು ವೃತ್ತ, ರಾಮನಗರ–562159ರಲ್ಲಿ ಸಂಪರ್ಕಿಸಲು ಕೋರಲಾಗಿದೆ. ದೂ.ಸಂ: 080–27272306 ಹಾಗೂ ವಿಭಾಗ ಸಂಚಲನಾಧಿಕಾರಿಗಳ ಮೊಬೈಲ್ ಸಂ: 7760990852.

ಸಹಿ/–, ವಿಭಾಗೀಯ ನಿಯಂತ್ರಣಾಧಿಕಾರಿ,
ವಾಸಾಸಂಇ/ಉನಿನ/ಎಲ್‌ಸಿ/3146/2020–21 ರಾಮನಗರ ವಿಭಾಗ, ರಾಮನಗರ

ಕೋವಿಡ್–19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

FUTURE FOCUS

Astrology

WONDERFUL FREE Sample Astrological Consultation Available SMS Your Birth Date Time 7760960709 Assured Response.

JOB OPPORTUNITIES

General

IMMEDIATE RECRUITMENT HRD/ ADMINISTRATION/ ACCOUNTS/ MANAGER/ SUPERVISOR/ MECHANICAL/ ELECTRONICS/ ELECTRICAL/ SOFTWARE/ HARDWARE/ ENGINEERS:- 7676760299/ 7676760399

Manager

WANTED MALE RESIDENT MANAGER
For Sharadindu, luxury senior commune at Pandavapura, near Mysore. Attractive salary, free single accommodation with food. Contact **Sree Senior Homes 99000 31256/57**

Teachers/ Professors

WANTED IMMEDIATELY CHEMISTRY & BIOLOGY TEACHER For 'VIKAS HIGH SCHOOL,' BSK 3rd Stage, Bangalore-85 Contact: 9448110651/ 26797652 between 9- 1pm

DH Classifieds
BOOK YOUR PROPERTY TEXT AD ON SATURDAY & SUNDAY
FOR JUST ₹ 1530/-*
For more information contact:
9880856233
9731810277 | 9901641752
9845114560 | 9886213331
*condition apply

EDUCATIONAL

Correspondence Courses

DIRECT FINAL (ONE Sitting) PUC/B. Com/ BA/BBA/BCA/ MBA/ B.Ed/ Diploma/ B.Tech/ D.Pharma, 100%Success. Shilpa: 9663366823

Distance Education

DEGREE/ DIPLOMA LOGISTICS and Supply Chain, Airport Ground Staff, Airport Management, Automobile Production and Servicing,Textile Technology,Telecom,Hotel Management,Hospital Management,Montessori, NTTC Call: 9778261645/9745910775

BUSINESS

Business to Business

Finance

NRI'S INVESTMENT AND FINANCE AVAILABLE ON LOW INTEREST AGAINST, PROPERTIES, LAND& BUILDING, SITES, FLATS, (ALSO) BUSINESS, COMPANIES CALL: 7411265189

PERSONAL

Change of Name

KHUSHBOO KUMARI, W/o JC672130W SUB Govind Kumar Singh, Fatehpur, Raghopur Hazipur Vaishali, Bihar, my name KHUSHBOO KUMARI to KHUSHBOO DEVI, Notary KV Mani, Bangalore.

WE, MANJU .H.S and CHAITHRA .T R/a #99, SidharthaNagar, Karihiabanahalli, Indiranagar Nagasandra Post, Bangalore-73 Have Changed Our Minor son's name from RAM KRISHNA. M to MANVITH SHETTY vide Affidavit dated 10/03/2021 before notary N.Nagappa, Bangalore

KANAGAVALLI MUTHUKUMAR W/o 14828353N- NK/MT- P MUTHU KUMAR R/a L/289, Malligainagar, Anaiyur, Madurai, Tamil Nadu changed name from KANAGAVALLI MUTHUKUMAR to M KANAGAVALLI, notary KV Mani, Bangalore.

I, ARUNKUMAR.C S/o Chikkanna R/a.735, Vittal Nilaya, Deshadapete road, Near Yellamma temple, Old town, Yelahanka Bengaluru-560064 have changed my name to ARUNAKUMARA.C vide affidavit dated:16.03.2021 before notary Vijayalakshmi.K, Bangalore.

I, B.V. SURESHA S/o. B.S. Venkatachalaiah, R/o. #120, 3rd 'B' Cross, Nanda Gokula Layout, Near Ramasandra, Kengeri Hobli, Bengaluru-560060 Have Changed My Name to B.V. SURESH Vide Affidavit Dated: 13.03.2021 Before Notary S.N.Madhu, Bangalore-85.

I, RAVI KUMAR MANI, residing at Bengaluru-26 have changed my name as RAVI KUMAR NATARAJAN, vide affidavit dated 17/3/2021 before Notary P.C.Ramaiah, Bangalore

RENTAL PROPERTIES

Accommodation Available

Commercial

SHOWROOM_&_OFFICE_SPACES FURNISHED & Unfurnished Available for Rent.T Dasarahalli, 8th Mile, Tumkur Road, Ph: 9391024959

REAL ESTATE SELLING

Commercial Land

Mysore

PRIME COMMERCIAL Property 88000 Square Feet on 10 Lane Mysore Express Highway Near Underpass Close to Mysore is for Sale. Contact Owner 8277589915 /9471019028

Out-Station

GOA INDUSTRIAL Area 1000 meter plot 260 meter builtup area. Ideal for Pharma also. Contact: 9620938350/ 9844243147.

Flat

Bommanahalli

LUXURY-APARTMENT FOR Sale. 3 BHK with attached bathroom. 1800 Sft + 1 Car Park & all amenities in Roopena Agrahara, Bommanahalli Ph: 9391024959, 7710878007

Sites

Sanjaynagar

EAST FACING SITE FOR SALE Near Sandeeppani School SANJAYANAGAR, area 1160 Sq.ft. Contact: 9845402737

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

ಒಂದೇ ದಿನ 1.51 ಲಕ್ಷ ಮಂದಿಗೆ ಲಸಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಬುಧವಾರ 3,360 ಕೇಂದ್ರಗಳಲ್ಲಿ ಕೋವಿಡ್ ಲಸಿಕೆ ವಿತರಣೆ ಅಭಿಯಾನ ನಡೆದಿದ್ದು, 1.51 ಲಕ್ಷ ಮಂದಿಗೆ ಲಸಿಕೆ ವಿತರಣೆ ಮಾಡಲಾಗಿದೆ. ಈವರೆಗೆ ಒಂದು ದಿನದ ಅವಧಿಯಲ್ಲಿ ವಿತರಿಸಿದ ಗರಿಷ್ಠ ಲಸಿಕೆಗಳು ಇವಾಗಿವೆ.

3,365 ಕಡೆ ಲಸಿಕೆ ವಿತರಣೆಗೆ ಯೋಜನೆ ರೂಪಿಸಲಾಗಿತ್ತು. 5 ಕೇಂದ್ರಗಳಲ್ಲಿ ಕಾರಣಾಂತರಗಳಿಂದ ಲಸಿಕೆ ವಿತರಣೆ ನಡೆದಿಲ್ಲ. ಲಸಿಕೆ ಪಡೆದವರಲ್ಲಿ 1.12 ಲಕ್ಷ ಮಂದಿ ಹಿರಿಯ ನಾಗರಿಕರಾಗಿದ್ದಾರೆ. ಈವರೆಗೆ 18.21 ಲಕ್ಷ ಡೋಸ್ ಲಸಿಕೆಯನ್ನು ನೀಡಲಾಗಿದೆ. 4.99 ಲಕ್ಷ ಆರೋಗ್ಯ ಕಾರ್ಯಕರ್ತರು ಮೊದಲ ಡೋಸ್ ಲಸಿಕೆ ಪಡೆದುಕೊಂಡಿದ್ದಾರೆ. ಇವರಲ್ಲಿ 3.01 ಲಕ್ಷ ಮಂದಿ ಎರಡನೇ ಡೋಸ್ ಪೂರ್ಣಗೊಳಿಸಿದ್ದಾರೆ. 60 ವರ್ಷ ಮೇಲ್ಪಟ್ಟವರಲ್ಲಿ 6.55 ಲಕ್ಷ ಮಂದಿ ಲಸಿಕೆ ಹಾಕಿಸಿಕೊಂಡಿದ್ದಾರೆ. 45- 60 ವರ್ಷದೊಳಗಿನ ಕೋವಿಡೇತರ ಕಾಯಿಲೆ ಎದುರಿಸುತ್ತಿರುವವರಲ್ಲಿ 1.49 ಲಕ್ಷ ಮಂದಿ ಲಸಿಕೆ ಪಡೆದುಕೊಂಡಿದ್ದಾರೆ. ಕೋವಿಡ್ ಮುಂಚೂಣಿ ಯೋಧರಲ್ಲಿ 1.83 ಲಕ್ಷ ಮಂದಿ ಮೊದಲ ಡೋಸ್ ಪಡೆದಿದ್ದು, ಅವರಲ್ಲಿ 32 ಸಾವಿರ ಮಂದಿ ಎರಡನೇ ಡೋಸ್ ಪೂರ್ಣಗೊಳಿಸಿದ್ದಾರೆ ಎಂದು ಆರೋಗ್ಯ ಇಲಾಖೆ ತಿಳಿಸಿದೆ.

ನಗರದ ಕೋವಿಡ್ ಪ್ರಕರಣಗಳ ಅಂಕಿ–ಅಂಶ

4,13,485 ಒಟ್ಟು ಸೋಂಕಿತರು

4,01,610 ಗುಣಮುಖರಾದವರು

7,344 ಸಕ್ರಿಯ ಪ್ರಕರಣ

4,530 ಸಾವು

ಬುಧವಾರದ ಏರಿಕೆ

786 ದೃಢಪಟ್ಟ ಪ್ರಕರಣ

271 ಗುಣಮುಖ | **03** ಸಾವು

ಶೇಕಡ 6.5ರಷ್ಟು ಲಸಿಕೆ ವ್ಯರ್ಥ

ನವದೆಹಲಿ: ದೇಶದಲ್ಲಿ ಶೇಕಡ 6.5ರಷ್ಟು ಪ್ರಮಾಣದಲ್ಲಿ ಕೋವಿಡ್–19 ಲಸಿಕೆ ವ್ಯರ್ಥವಾಗುತ್ತಿದೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ತಿಳಿಸಿದೆ.

ತೆಲಂಗಾಣ ಮತ್ತು ಆಂಧ್ರಪ್ರದೇಶದಲ್ಲಿ ಕ್ರಮವಾಗಿ ಶೇಕಡ 17.6 ಮತ್ತು ಶೇಕಡ 11.6ರಷ್ಟು ವ್ಯರ್ಥವಾಗುತ್ತಿದೆ.

ತೆಲಂಗಾಣ, ಆಂಧ್ರಪ್ರದೇಶ, ಉತ್ತರ ಪ್ರದೇಶ, ಕರ್ನಾಟಕ ಹಾಗೂ ಜಮ್ಮು ಮತ್ತು ಕಾಶ್ಮೀರದಲ್ಲಿ ಶೇಕಡ 6.5ಕ್ಕಿಂತಲೂ ಹೆಚ್ಚು ವ್ಯರ್ಥ ಮಾಡಲಾಗುತ್ತಿದೆ. ಕರ್ನಾಟಕದಲ್ಲಿ ಶೇಕಡ 6.9ರಷ್ಟು ವ್ಯರ್ಥವಾಗುತ್ತಿದೆ ಎಂದು ಆರೋಗ್ಯ ಕಾರ್ಯದರ್ಶಿ ರಾಜೇಶ್ ಭೂಷಣ್ ತಿಳಿಸಿದ್ದಾರೆ.

ದೇಶದಲ್ಲಿ ಇದುವರೆಗೆ ಕೋವಿಡ್–19 ಲಸಿಕೆಯ 3.51 ಕೋಟಿ ಡೋಸ್‌ಗಳನ್ನು ನೀಡಲಾಗಿದೆ. ಅಂದರೆ, 1.38 ಕೋಟಿ ಫಲಾನುಭವಿಗಳಿಗೆ ಈ ಡೋಸ್‌ಗಳನ್ನು ನೀಡಲಾಗಿದೆ ಎಂದು ತಿಳಿಸಿದ್ದಾರೆ.

ಇದೇ 27ರಿಂದ 'ನಮಸ್ತುಭ್ಯಮ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತೀಯ ಸಾಮಗಾನ ಸಭಾವು ಮಾ.27 ಮತ್ತು ಮಾ.28ಕ್ಕೆ ಚೌಡಯ್ಯ ಸ್ಮಾರಕ ಭವನದಲ್ಲಿ 'ನಮಸ್ತುಭ್ಯಮ್' ಯುವ ಸಾವಿಷ್ಕಾರ ಸಂಗೀತೋತ್ಸವ ಹಮ್ಮಿಕೊಂಡಿದೆ.

'ಸಂಜೆ 6 ಗಂಟೆಯಿಂದ ಸಂಗೀತ ಕಾರ್ಯಕ್ರಮಗಳು ಪ್ರಾರಂಭವಾಗಲಿವೆ. ಪ್ರತಿಭಾನ್ವಿತ ಯುವ ಕಲಾವಿದರನ್ನು ಈ ವರ್ಷದ ಸಂಗೀತ ಉತ್ಸವಕ್ಕೆ ಆಹ್ವಾನಿಸಲಾಗಿದೆ. ಎರಡು ದಿನಗಳ ಅವಧಿಯಲ್ಲಿ ರಾಹುಲ್ ವೆಳ್ಳಲ್, ನಂದಿನಿ ಗಾಯಕವಾಡ್, ಉತ್ತರ ಉನ್ನಿಕೃಷ್ಣನ್ ಮತ್ತು ಸ್ಫೂರ್ತಿ ರಾವ್ ಕಾರ್ಯಕ್ರಮ ನೀಡಲಿದ್ದಾರೆ. ಬುಕ್ ಮೈ ಶೋನಲ್ಲಿ ಡೋನರ್ ಪಾಸ್‌ಗಳು ದೊರೆಯಲಿವೆ. shaale.com ಮೂಲಕ ಆನ್‌ಲೈನ್‌ನಲ್ಲಿ ಕಾರ್ಯಕ್ರಮದ ನೇರ ಪ್ರಸಾರವನ್ನು ವೀಕ್ಷಿಸಬಹುದು.

ರೈತರಿಂದ 26ಕ್ಕೆ ಭಾರತ ಬಂದ್

ನವದೆಹಲಿ (ಪಿಟಿಐ): ಕೇಂದ್ರದ ಮೂರು ಕೃಷಿ ಕಾಯ್ದೆಗಳನ್ನು ಹಿಂದಕ್ಕೆ ಪಡೆಯುವಂತೆ ಒತ್ತಾಯಿಸಿ ಇದೇ 26ರಂದು ಭಾರತ ಬಂದ್ ನಡೆಸಲು ಸಂಯುಕ್ತ ಕಿಸಾನ್ ಮೋರ್ಚಾ ನಿರ್ಧರಿಸಿದೆ.

ಇದೇ 28ರಂದು ನಡೆಯುವ ಹೋಳಿ ಹಬ್ಬದಂದು ಮೂರು ಕಾಯ್ದೆಗಳನ್ನು ಉರಿಸುವ ಮೂಲಕ ಹೋಳಿ ದಹನ ನಡೆಸಲಾಗುವುದು ಎಂದು ಗಂಗಾನಗರ ಕಿಸಾನ್ ಸಮಿತಿಯ ರಂಜಿತ್ ರಾಜು ಬುಧವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

REGIONAL INSTITUTE OF EDUCATION

National Council of Educational Research and Training, New Delhi
Department of Education, Government of India, MYSURU - 570006
Email: principal@riemysore.ac.in, website: www.riemysore.ac.in

No F.9-17 /2000/Estt/RIEM Date: 15.03.2021

WALK-IN-INTERVIEW

The Regional Institute of Education, Mysuru will conduct Walk-in-Interview for the post of *Medical Officer (Part-time)* on **26th March, 2021** purely on contractual basis for the Year 2021-22. As per details given below:

Name of the Post	Posts	Consolidated Remuneration Per Month Rs.	Date of Interview and Time
Medical Officer (Part-time)	02 (Female- 01 & Male- 01)	Rs. 25,000/ -	26.03.2021 at 10:30 am

FOR MORE DETAILS PLEASE LOG ON TO **www.riemysore.ac.in.**

Sd/-
PRINCIPAL

ಶಿವರಾಮ ಕಾರಂತ ಬಡಾವಣೆ: ರೈತ ಮುಖಂಡರ ಜೊತೆ ಬಿಡಿಎ ಸಭೆ

'ಸುಪ್ರೀಂ' ಆದೇಶಕ್ಕೆ ಬದ್ಧ: ವಿಶ್ವನಾಥ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸುಪ್ರೀಂ ಕೋರ್ಟ್ ನೀಡಿರುವ ಆದೇಶದ ಪ್ರಕಾರವೇ ಡಾ.ಶಿವರಾಮ ಕಾರಂತ ಬಡಾವಣೆ ನಿರ್ಮಾಣ ಯೋಜನೆಯನ್ನು ಕೈಗೆತ್ತಿಕೊಳ್ಳಲಾಗುತ್ತದೆ' ಎಂದು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಬಿಡಿಎ) ಅಧ್ಯಕ್ಷ ಎಸ್.ಆರ್.ವಿಶ್ವನಾಥ್ ಸ್ಪಷ್ಟಪಡಿಸಿದರು.

ರಾಜ್ಯ ರೈತ ಸಂಘ ಮತ್ತು ಹಸಿರು ಸೇನೆ ಅಧ್ಯಕ್ಷ ಕೋಡಿಹಳ್ಳಿ ಚಂದ್ರಶೇಖರ್ ಮತ್ತು ಇತರ ರೈತ ಮುಖಂಡರ ಜತೆ ಅವರು ಬುಧವಾರ ಸಭೆ ನಡೆಸಿದರು. ಕೋಡಿಹಳ್ಳಿ ಚಂದ್ರಶೇಖರ್, 'ಯೋಜನೆಯಿಂದ ರೈತರು ಮತ್ತು ಸ್ಥಳೀಯರಿಗೆ ಸಮಸ್ಯೆಗಳು ಎದುರಾಗುತ್ತವೆ. ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರೊಂದಿಗೆ ಚರ್ಚಿಸಿ ಈ ಯೋಜನೆಯನ್ನು ಕೈಬಿಡಬೇಕು' ಎಂದು ಮನವಿ ಮಾಡಿದರು.

ಇದಕ್ಕೆ ಪ್ರತಿಕ್ರಿಯಿಸಿದ ವಿಶ್ವನಾಥ್, 'ಯೋಜನೆಯನ್ನು ಯಾವುದೇ ಕಾರಣಕ್ಕೂ ಕೈಬಿಡಬಾರದು ಮತ್ತು ಉದ್ದೇಶಿತ ಬಡಾವಣೆಯಲ್ಲಿ 2018ರ ಆಗಸ್ಟ್‌ಗೆ ಮುನ್ನ ನಿರ್ಮಾಣವಾಗಿರುವ ಮನೆಗಳ ಸಮೀಕ್ಷೆ ನಡೆಸಬೇಕು ಎಂದು ಈಗಾಗಲೇ ಸುಪ್ರೀಂ ಕೋರ್ಟ್ ಆದೇಶ ಮಾಡಿದೆ. ಈ ಸಲುವಾಗಿ ಉನ್ನತಾಧಿಕಾರಿಗಳ ಸಮಿತಿಯನ್ನು ರಚನೆ ಮಾಡಿದೆ. ಸಮಿತಿಯು ಕಳೆದ ಹಲವು ತಿಂಗಳಿಂದ ನಿರಂತರವಾಗಿ ಈ ಬಗ್ಗೆ ಸಮೀಕ್ಷೆ ನಡೆಸುತ್ತಿದೆ. ಶೀಘ್ರವೇ ಸುಪ್ರೀಂ ಕೋರ್ಟ್‌ಗೆ ತನ್ನ ವರದಿಯನ್ನೂ ಸಲ್ಲಿಸಲಿದೆ. ಅದರ ಆಧಾರದಲ್ಲಿ ಕೋರ್ಟ್ ಅಂತಿಮ ತೀರ್ಪನ್ನು ನೀಡಲಿದೆ' ಎಂದು ರೈತ ಮುಖಂಡರ ಗಮನಕ್ಕೆ ತಂದರು.

ಬಡಾವಣೆಯಲ್ಲಿ ನಿರ್ಮಿಸಿರುವ ಮನೆಗಳ ಸಮೀಕ್ಷೆಯಲ್ಲಿ ಬಿಡಿಎ ಯಾವುದೇ ಹಸ್ತಕ್ಷೇಪ ಮಾಡುವುದಿಲ್ಲ ಎಂದೂ ಸ್ಪಷ್ಟಪಡಿಸಿದರು.

ದಾಖಲೆ ನೀಡಿ: ಬಡಾವಣೆ ವ್ಯಾಪ್ತಿಯ ನಾಲ್ಕು ಕಡೆ ಸಹಾಯಕೇಂದ್ರಗಳನ್ನು ಸ್ಥಾಪಿಸಲಾಗಿದೆ. ನಾಗರಿಕರು ಈ ಕೇಂದ್ರಗಳಿಗೆ ತೆರಳಿ ತಮ್ಮ ಮನೆಗಳಿಗೆ ಸಂಬಂಧಿಸಿದ ದಾಖಲೆಗಳನ್ನು ಸಲ್ಲಿಸಬೇಕು ಎಂದು ವಿಶ್ವನಾಥ್ ಮನವಿ ಮಾಡಿದರು.

ಬಿಡಿಎ ಆಯುಕ್ತ ಡಾ.ಮಹದೇವ್ ಮತ್ತು ಕಾರ್ಯದರ್ಶಿ ಡಾ.ವಾಸಂತಿ ಅಮರ್ ಅವರು ಸಭೆಯಲ್ಲಿ ಉಪಸ್ಥಿತರಿದ್ದರು.

'ನಿವೇಶನ ಖರೀದಿ, ಮನೆ ನಿರ್ಮಾಣ ಬೇಡ'

'ಶಿವರಾಮ ಕಾರಂತ ಬಡಾವಣೆ ನಿರ್ಮಾಣಕ್ಕೆ ಗುರುತಿಸಿರುವ ಪ್ರದೇಶಗಳಲ್ಲಿ ಯಾರೂ ಸುಪ್ರೀಂ ಕೋರ್ಟ್‌ನ ಮುಂದಿನ ಆದೇಶದವರೆಗೆ ಮನೆಗಳನ್ನು ನಿರ್ಮಿಸಬಾರದು. ನಿವೇಶನ ಖರೀದಿ ಮಾಡಬಾರದು' ಎಂದು ವಿಶ್ವನಾಥ್ ಸಲಹೆ ನೀಡಿದರು.

'ಸುಪ್ರೀಂ ಕೋರ್ಟ್ ಆದೇಶ ಇದ್ದಾಗಲೂ ಕೆಲವು ಡೆವಲಪರ್‌ಗಳು ಅಮಾಯಕರಿಗೆ ನಿವೇಶನಗಳನ್ನು ಮಾರಾಟ ಮಾಡುತ್ತಿದ್ದಾರೆ. ಮನೆ ನಿರ್ಮಿಸಿದರೆ ನಿವೇಶನ ಉಳಿಯುತ್ತದೆ ಎಂಬ ಭಾವನೆಯನ್ನು ಕೆಲವರು ಹೊಂದಿದ್ದಾರೆ. 2018ರ ಆಗಸ್ಟ್ ಬಳಿಕ ನಿರ್ಮಾಣವಾಗುವ ಮನೆಗಳನ್ನು ನ್ಯಾಯಾಲಯದ ಆದೇಶದಂತೆ ಬಡಾವಣೆ ನಿರ್ಮಾಣಕ್ಕೆ ಸ್ವಾಧೀನಪಡಿಸಿಕೊಳ್ಳುವುದು ಅನಿವಾರ್ಯ' ಎಂದು ಅವರು ತಿಳಿಸಿದರು.

8 ದಿನ ಮೆಟ್ರೊ ರೈಲು ಸಂಚಾರ ಭಾಗಶಃ ವ್ಯತ್ಯಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಮ್ಮ ಮೆಟ್ರೊ' ನೇರಳೆ ಮಾರ್ಗದಲ್ಲಿನ ನಾಡಪ್ರಭು ಕೆಂಪೇಗೌಡ ರೈಲು ನಿಲ್ದಾಣದಿಂದ ಮೈಸೂರು ರಸ್ತೆ ಮೆಟ್ರೊ ನಿಲ್ದಾಣದವರೆಗೆ ಇದೇ 21ರಿಂದ 28ರ ತನಕ ಮೆಟ್ರೊ ರೈಲು ಸಂಚಾರ ಇರುವುದಿಲ್ಲ ಎಂದು ಬೆಂಗಳೂರು ಮೆಟ್ರೊ ರೈಲು ನಿಗಮ (ಬಿಎಂಆರ್‌ಸಿಎಲ್) ತಿಳಿಸಿದೆ.

ಮೈಸೂರು ರಸ್ತೆಯಿಂದ–ಕೆಂಗೇರಿಯವರೆಗೆ ಮುಂದಿನ ತಿಂಗಳು ಪರೀಕ್ಷಾರ್ಥ ರೈಲು ಸಂಚಾರ ನಡೆಸಲು ಬಿಎಂಆರ್‌ಸಿಎಲ್ ಮುಂದಾಗಿದ್ದು, ಇದಕ್ಕಾಗಿ ಮಾಗಡಿ ರಸ್ತೆಯಿಂದ ಮೈಸೂರು ರಸ್ತೆ ಮಾರ್ಗದಲ್ಲಿ ಸಿಗ್ನಲಿಂಗ್ ವ್ಯವಸ್ಥೆ ಮಾರ್ಪಾಡು ಕಾಮಗಾರಿ ಹಮ್ಮಿಕೊಳ್ಳಲಿದೆ. ಇದಕ್ಕಾಗಿ ಈ ಮಾರ್ಗದಲ್ಲಿ ಮೆಟ್ರೊ ರೈಲು ಸಂಚಾರ ಸ್ಥಗಿತಗೊಳಿಸಲಾಗಿದೆ.

ಈ ಅವಧಿಯಲ್ಲಿ ನೇರಳೆ ಮಾರ್ಗದಲ್ಲಿ ಮೆಜೆಸ್ಟಿಕ್‌ನಿಂದ ಬೈಯಪ್ಪನಹಳ್ಳಿ ನಿಲ್ದಾಣದ ನಡುವೆ ಮಾತ್ರ ಮೆಟ್ರೊ ರೈಲು ಸಂಚರಿಸಲಿದೆ. ಮಾ.29ರ ಬೆಳಿಗ್ಗೆ 7ರಿಂದ ಎಂದಿನಂತೆ ಸೇವೆ ಇರಲಿದೆ.

ಹಸಿರು ಮಾರ್ಗದ ನಾಗಸಂದ್ರ ಮತ್ತು ರೇಷ್ಮೆ ಸಂಸ್ಥೆ ನಿಲ್ದಾಣಗಳ ನಡುವೆ ಯಾವುದೇ ವ್ಯತ್ಯಯ ಇರುವುದಿಲ್ಲ ಎಂದೂ ಬಿಎಂಆರ್‌ಸಿಎಲ್ ಹೇಳಿದೆ.

ಲಾರಿ- ಕಾರು ಡಿಕ್ಕಿ: ಕಬಡ್ಡಿ ಆಟಗಾರರ ಸಾವು

ಕೊಲ್ಹಾರ(ವಿಜಯಪುರ): ವಿಜಯಪುರ-ಹುಬ್ಬಳ್ಳಿ ರಾಷ್ಟ್ರೀಯ ಹೆದ್ದಾರಿ 218 ರ ರೋಣಿಹಾಳ ಕ್ರಾಸ್ ಬಳಿ ಬುಧವಾರ ಬೆಳಿಗ್ಗೆ ಸಂಭವಿಸಿದ ಕಾರು ಹಾಗೂ ಲಾರಿ ಮುಖಾಮುಖಿ ಡಿಕ್ಕಿಯಲ್ಲಿ ಕಾರಿನಲ್ಲಿದ್ದ ಇಬ್ಬರು ಸಾವನ್ನಪ್ಪಿದ್ದಾರೆ.

ಇನ್ನುಳಿದ ಆರು ಮಂದಿ ಹಾಗೂ ಕಾರು ಚಾಲಕ ಗಂಭೀರವಾಗಿ ಗಾಯಗೊಂಡಿದ್ದಾರೆ. ಸೋಹೆಲ್ ಇಸ್ಮಾಯಿಲ್ ಸೈಯದ್ (20) ಹಾಗೂ ಮಹಾದೇವ ಬಾಪೂ ಅವಟಿ (23) ಮೃತಪಟ್ಟವರು.

ಇವರೆಲ್ಲರೂ ಕಬಡ್ಡಿ ಆಟಗಾರರಾಗಿದ್ದು ಮಹಾರಾಷ್ಟ್ರದ ಪುಣೆಯ ಕುಳಂ ಗ್ರಾಮದವರು ಎನ್ನಲಾಗಿದೆ.

ಹುಟ್ಟುಹಬ್ಬದ ಶುಭಾಶಯ ಜಗ್ಗೇಶ್ ಅಣ್ಣ ಎಂದ ದರ್ಶನ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ದರ್ಶನ್ ಅಭಿಮಾನಿಗಳು ಮತ್ತು ನಟ ಜಗ್ಗೇಶ್ ನಡುವೆ ತಿಕ್ಕಾಟ ನಡೆದು ಸುಮಾರು ಒಂದು ತಿಂಗಳು ಕಳೆಯುತ್ತಿದ್ದಂತೆಯೇ ಇಬ್ಬರ ನಡುವೆಯೂ ಸಾಮರಸ್ಯದ ಬಾಂಧವ್ಯ ಗಟ್ಟಿಯಾಗಿದೆ.

ಜಗ್ಗೇಶ್ ಅವರ ಹುಟ್ಟುಹಬ್ಬದ ಸಂದರ್ಭದಲ್ಲಿ ನಟ ದರ್ಶನ್ ಅವರು ಫೇಸ್‌ಬುಕ್‌ನಲ್ಲಿ ಹುಟ್ಟುಹಬ್ಬದ ಶುಭಾಶಯಗಳು ಜಗ್ಗೇಶ್ ಅಣ್ಣ ಎಂದು ಬರೆದು ಶುಭ ಕೋರಿದ್ದಾರೆ. ದರ್ಶನ್ ಅವರ ಒಂದು ಸಾಲಿಗೆ 708 ಮಂದಿ ಪ್ರತಿಕ್ರಿಯಿಸಿದ್ದಾರೆ. 208 ಮಂದಿ ಈ ಹೇಳಿಕೆಯನ್ನು ಹಂಚಿಕೊಂಡಿದ್ದಾರೆ. ಅನೇಕರು ಈ ಬಾಂಧವ್ಯ ಇನ್ನಷ್ಟು ಗಟ್ಟಿಯಾಗಲಿ ಎಂದು ಹಾರೈಸಿದ್ದಾರೆ.

ದರ್ಶನ್ ಅಭಿಮಾನಿಗಳ ಬಗ್ಗೆ ಹಗುರವಾಗಿ ಮಾತನಾಡಿದ್ದಾರೆ ಎಂದು ಆರೋಪಿಸಿ ಕೆಲವು ದಿನಗಳ ಹಿಂದೆ ಬನ್ನೂರು ಸಮೀಪ ಜಗ್ಗೇಶ್ ಅವರನ್ನು ದರ್ಶನ್ ಅಭಿಮಾನಿಗಳು ತೀವ್ರವಾಗಿ ತರಾಟೆಗೆ ತೆಗೆದುಕೊಂಡಿದ್ದರು. ವಿವಾದ ತಾರಕಕ್ಕೇರುತ್ತಿದ್ದಂತೆಯೇ ಸುದ್ದಿವಾಹಿನಿಯ ಸಂದರ್ಶನವೊಂದರಲ್ಲಿ ಮಾತನಾಡಿದ ದರ್ಶನ್ ಅವರು ಅಲ್ಲಿಂದಲೇ ಅಭಿಮಾನಿಗಳ ಪರವಾಗಿ ಜಗ್ಗೇಶ್ ಅವರ ಬಳಿ ಕ್ಷಮೆ ಕೋರಿ ವಿವಾದಕ್ಕೆ ತೆರೆ ಎಳೆದಿದ್ದರು.

'ದರ್ಶನ್ ನಡವಳಿಕೆಯಿಂದ ನನ್ನ ಮನಸ್ಸು ಹಗುರವಾಯಿತು' ಎಂದು ಜಗ್ಗೇಶ್ ಟ್ವಿಟರ್‌ನಲ್ಲಿ ಪ್ರತಿಕ್ರಿಯಿಸಿದ್ದರು. ಇದಾದ ಕೆಲ ದಿನಗಳ ಅಂತರದ ಬಳಿಕ ದರ್ಶನ್ ಜಗ್ಗೇಶ್ ಅವರಿಗೆ ಶುಭ ಕೋರಿದ್ದು ಚಿತ್ರರಂಗದಲ್ಲಿ ಪರಸ್ಪರ ಬಾಂಧವ್ಯವನ್ನು ಗಟ್ಟಿಗೊಳಿಸಿದೆ ಎಂಬ ಅಭಿಪ್ರಾಯ ವ್ಯಕ್ತವಾಗಿದೆ.

ಜಗ್ಗೇಶ್‌ಅವರು ಇಂದು ಮನೆಯಲ್ಲೇ ಸರಳವಾಗಿ ಹುಟ್ಟುಹಬ್ಬ ಆಚರಿಸಿದರು. ಹುಟ್ಟುಹಬ್ಬದ ಸಲುವಾಗಿ ಮನೆಯಲ್ಲೇ ಗುರು ರಾಘವೇಂದ್ರ ರಾಯರಿಗೆ ಪೂಜೆ ಸಲ್ಲಿಸಿ ಕುಟುಂಬದವರೊಂದಿಗೆ ಕಾಲ ಕಳೆದರು. ಅಭಿಮಾನಿಗಳ ಶುಭಾಶಯ ಸ್ವೀಕರಿಸಿದರು.

ನವೋದ್ಯಮ: ಆಯ್ಕೆ ಪ್ರಕ್ರಿಯೆಯೇ ನಿಗೂಢ

ಒಂದನೇ ಪುಟದಿಂದ...

'ಆದರೆ, ಅದಕ್ಕಿಂತಲೂ ಹೆಚ್ಚು ಅಂಕ ಗಳಿಸಿದ್ದ ನವೋದ್ಯಮಗಳು ಆಯ್ಕೆಯಾಗಿಲ್ಲ. ಮೌಲ್ಯಮಾಪನದ ಪ್ರತಿಗಳನ್ನಾಗಲೀ, ಅಂಕಗಳನ್ನಾಗಲೀ ಸ್ಪರ್ಧಿಗಳಿಗೆ ತೋರಿಸುವುದೇ ಇಲ್ಲ. ಇಲ್ಲಿ ಅಧಿಕಾರಿಗಳು, ಮೌಲ್ಯಮಾಪಕರು ಆಡಿದ್ದೇ ಆಟ. ನವೋದ್ಯಮವು ನಿಜಕ್ಕೂ ಅರ್ಹತೆ ಗಳಿಸಿದ್ದರೂ 'ನೀವು ವಿಫಲರಾಗಿದ್ದೀರಿ' ಎನ್ನುವ ಸಂದೇಶ ಕಳುಹಿಸಲಾಗುತ್ತದೆ. ಸೋತಿದ್ದೇಕೆ ಎಂಬುದನ್ನು ತಿಳಿದುಕೊಳ್ಳುವುದಕ್ಕೂ ಸ್ಪರ್ಧಿಗಳಿಗೆ ಅವಕಾಶವಿಲ್ಲ. ಈ ರೀತಿ ಗೋಪ್ಯತೆ ಕಾಯ್ದುಕೊಳ್ಳುವ ಉದ್ದೇಶವೇನು' ಎಂದು ಪ್ರಶ್ನಿಸುವ ಪ್ರವೀಣ್ ಕುಮಾರ್, ಅದಕ್ಕೆ ತಕ್ಕ ದಾಖಲೆಗಳನ್ನೂ ಮುಂದಿಡುತ್ತಾರೆ.

'ಹೆಚ್ಚು ಅಂಕ ಪಡೆದ ನವೋದ್ಯಮಗಳನ್ನು ಅಂತಿಮ ಪಟ್ಟಿಯಿಂದ ಕೈಬಿಡಲು ಅನುಸರಿಸಿದ ಮಾನದಂಡಗಳೇನು, ಕಾರ್ಯನೀತಿಯ ಯಾವ ಅಂಶದ ಅಡಿಯಲ್ಲಿ ಈ ಮಾನದಂಡಗಳನ್ನು ನಿಗದಿಪಡಿಸಲಾಗಿದೆ ಎಂದು ಮಾಹಿತಿ ಹಕ್ಕಿನಡಿ ದಾಖಲೆ ಕೇಳಿದರೆ ನೀಡುವುದೇ ಇಲ್ಲ' ಎಂದು ದೂರಿದರು.

'ಆಯ್ಕೆ ಪ್ರಕ್ರಿಯೆಯ ಪಾರದರ್ಶಕತೆ ಬಗ್ಗೆ ಪ್ರಶ್ನೆ ಮಾಡಿದರೆ, 'ಈ ಬಗ್ಗೆ ನೀವು ತಲೆಕೆಡಿಸಿಕೊಳ್ಳಬೇಡಿ' ಎನ್ನುತ್ತಾರೆ. ಅರ್ಹರಲ್ಲದ ನವೋದ್ಯಮಗಳಿಗೆ ಅನುಕೂಲ ಕಲ್ಪಿಸಿ ಅರ್ಹ ಕಂಪನಿಗಳಿಗೆ ಅನ್ಯಾಯ ಮಾಡಲಾಗುತ್ತಿದೆ' ಎಂದು ಆರೋಪಿಸುತ್ತಾರೆ ಇನ್ನೊಬ್ಬ ಸ್ಪರ್ಧಿ ಧಾರವಾಡದ ಪ್ರಭಾಂಜನ್.

ಭೂ ಪರಿವರ್ತನೆ ಸರಳೀಕರಣಕ್ಕೆ ಕ್ರಮ: ಸಚಿವ ಅಶೋಕ

ಒಂದನೇ ಪುಟದಿಂದ...

'ಐದು ವರ್ಷಗಳಲ್ಲಿ ಭೂ ಸಮೀಕ್ಷೆಗಾಗಿ, ಅಂದರೆ 11ಇ ನಕ್ಷೆ, ಭೂ ಪರಿವರ್ತನೆ ನಕ್ಷೆ, ಹದ್ದುಬಸ್ತು, ತತ್ಕಾಲ್ ಮತ್ತು ಭೂ ಸ್ವಾಧೀನ, ಪೋಡಿ (ಜೆಎಂಸಿ ನಕ್ಷೆ) ಕೋರಿ ಒಟ್ಟು 36,79,331 ಅರ್ಜಿಗಳು ಬಂದಿವೆ. ಅವುಗಳಲ್ಲಿ ಶೇ 95ರಷ್ಟು ವಿಲೇವಾರಿಯಾಗಿದೆ. ವಿವಿಧ ಕಾರಣಗಳಿಗಾಗಿ 4,81,982 ಅರ್ಜಿಗಳು ಬಾಕಿ ಇವೆ' ಎಂದರು.

'ವಿಸ್ತೀರ್ಣ ಹಾಗೂ ಪಹಣಿಯ ಕಾಲಂಗಳಲ್ಲಿ ವ್ಯತ್ಯಾಸ, ಶಿಥಿಲವಾಗಿರುವ ದಾಖಲೆಗಳು, ಭೂ ಮಂಜೂರಾತಿ ವೇಳೆ ಕೆಲವು ಕಡೆ ನಕಲಿ ದಾಖಲೆ, ಫಲಾನುಭವಿಗಳ ಬಳಿ ದಾಖಲೆಗಳಿದ್ದರೂ ತಾಲ್ಲೂಕು ಕಚೇರಿಗಳಲ್ಲಿ ಇಲ್ಲದಿರುವುದು ಈ ರೀತಿಯ ಕಾರಣಗಳಿಂದ ಪೋಡಿ ವಿಳಂಬವಾಗುತ್ತಿದೆ. ತಪ್ಪಿತಸ್ಥ ಅಧಿಕಾರಿಗಳು ನಿವೃತ್ತರಾಗಿದ್ದರೂ ಅವರ ವಿರುದ್ಧ ಕಠಿಣ ಕ್ರಮ ಜರುಗಿಸಲಾಗುವುದು. ಸರ್ವೆ ಕಾರ್ಯಕ್ಕೆ ಎರಡು ಸಾವಿರ ಸರ್ವೆಯರ್‌ಗಳನ್ನು ನೇಮಕ ಮಾಡಿಕೊಳ್ಳಲಾಗಿದೆ' ಎಂದರು.

ವಿನಯ ಕುಲಕರ್ಣಿ ಜಾಮೀನು ಅರ್ಜಿ ತಿರಸ್ಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಧಾರವಾಡ ಜಿಲ್ಲಾ ಪಂಚಾಯಿತಿ ಸದಸ್ಯರಾಗಿದ್ದ ಯೋಗೀಶಗೌಡ ಹತ್ಯೆ ಪ್ರಕರಣದ ಆರೋಪಿ ವಿನಯ ಕುಲಕರ್ಣಿ ಜಾಮೀನು ಅರ್ಜಿಯನ್ನು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ತಿರಸ್ಕರಿಸಿದೆ.

ವಿನಯ ಕುಲಕರ್ಣಿ

ಜಾಮೀನು ಕೋರಿ ವಿನಯ ಕುಲಕರ್ಣಿ ಸಲ್ಲಿಸಿದ್ದ ಅರ್ಜಿಗೆ ಆಕ್ಷೇಪಣೆ ಸಲ್ಲಿಸಿದ ಸಿಬಿಐ, 'ರಾಜಕೀಯ ಕಾರಣಗಳಿಗೆ ಈ ಹತ್ಯೆ ನಡೆದಿದೆ. ಪ್ರಕರಣದಲ್ಲಿ ವಿನಯ ಕುಲಕರ್ಣಿ ಪ್ರಮುಖ ಆರೋಪಿಯಾಗಿದ್ದಾರೆ. ಜಿಮ್‌ನಿಂದ ಹೊರ ಬರುವಾಗ ಯೋಗೇಶ್ ಗೌಡ ಕೊಲೆಯಾಗಿದೆ. ಆರೋಪಿಗಳು ಶರಣಾಗಿದ್ದರು. ಪ್ರತ್ಯಕ್ಷ ಸಾಕ್ಷ್ಯಗಳನ್ನು ಅರ್ಜಿದಾರರು ಬೆದರಿಸಿ ದೂರ ಉಳಿಯುವಂತೆ ನೋಡಿಕೊಂಡಿದ್ದರು. ಇದಕ್ಕೆ ಸ್ಥಳೀಯ ಪೊಲೀಸರು ಮತ್ತು ವಿನಯ ಕುಲಕರ್ಣಿ ಸಂಬಂಧಿಸಿಕರು ನೆರವು ನೀಡಿದ್ದರು ಎಂಬ ಅಂಶಗಳು ತನಿಖೆ ವೇಳೆ ಪತ್ತೆಯಾಗಿವೆ' ಎಂದು ತಿಳಿಸಿದೆ. ಸಿಬಿಐ ಪರ ವಿಶೇಷ ವಕೀಲ ಪಿ. ಪ್ರಸನ್ನಕುಮಾರ್ ವಾದ ಮಂಡಿಸಿದ್ದರು.

ಈ ಪ್ರಕರಣದಲ್ಲಿ ಆರೋಪಿಯಾಗಿರುವ ವಿನಯ ಕುಲಕರ್ಣಿ ನವೆಂಬರ್ 5ರಂದು ಬಂಧನಕ್ಕೆ ಒಳಗಾಗಿದ್ದರು. ಜಾಮೀನು ಕೋರಿ ಮೊದಲಿಗೆ ಸ್ಥಳೀಯ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿದ್ದರು. ಅಲ್ಲಿ ತಿರಸ್ಕಾರವಾದ ಬಳಿಕ ಹೈಕೋರ್ಟ್ ಧಾರವಾಡ ಪೀಠದಲ್ಲೂ ಅರ್ಜಿ ಸಲ್ಲಿಸಿದ್ದು, ಅಲ್ಲೂ ಜಾಮೀನು ದೊರೆತಿಲ್ಲ.

ಬಳಿಕ ಬೆಂಗಳೂರಿನ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯಕ್ಕೆ ಪ್ರಕರಣ ವರ್ಗಾವಣೆಯಾಗಿದೆ. ಪ್ರಕರಣದ ಗಂಭೀರತೆ ಮತ್ತು ಸಿಬಿಐ ಆಕ್ಷೇಪಣೆ ಪುರಸ್ಕರಿಸಿರುವ ನ್ಯಾಯಾಲಯ, ಜಾಮೀನು ನೀಡಲು ನಿರಾಕರಿಸಿದೆ.

ರಮೇಶ ಜಾರಕಿಹೊಳಿ ಅವರ ಸಿ.ಡಿ ಪ್ರಕರಣ: ಬಿಜೆಪಿ– ಕಾಂಗ್ರೆಸ್ ವಾಕ್ಸಮರ

ಮುಂದುವರಿದ ಟ್ವೀಟ್ ಕದನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಮೇಶ ಜಾರಕಿಹೊಳಿ ಅವರ ಸಿ.ಡಿ ಪ್ರಕರಣದಲ್ಲಿ ಬಿಜೆಪಿ– ಕಾಂಗ್ರೆಸ್ ಪಕ್ಷಗಳ ನಡುವೆ ಬುಧವಾರವೂ ಟ್ವಿಟರ್‌ನಲ್ಲಿ ವಾಕ್ಸಮರ ಮುಂದುವರಿಯಿತು. ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಸಿ.ಡಿ ಪ್ರಕರಣದ ಸೂತ್ರಧಾರ ಎಂಬರ್ಥದಲ್ಲಿ ಬಿಜೆಪಿ ಟ್ವೀಟ್ ಮಾಡಿದ್ದರೆ, ಪ್ರತಿಯಾಗಿ ಕಾಂಗ್ರೆಸ್ ವಿವಿಧ ಪ್ರಕರಣಗಳ ಆರೋಪಿಗಳು ಪ್ರಧಾನಿ ಜತೆಗಿರುವ ಫೋಟೊವನ್ನು ಬಳಸಿ ಟ್ವೀಟ್ ಮಾಡಿದೆ.

ಜಾರಕಿಹೊಳಿ ಸಿ.ಡಿ ಪ್ರಕರಣದಲ್ಲಿ ವಿಶೇಷ ತನಿಖಾ ತಂಡವು ಹುಡುಕಾಡುತ್ತಿರುವ ಆರೋಪಿಗಳ ಜತೆ ಡಿ.ಕೆ. ಶಿವಕುಮಾರ್ ಇರುವ ಫೋಟೊಗಳನ್ನು ಟ್ವಿಟರ್‌ನಲ್ಲಿ ಪ್ರಕಟಿಸಿರುವ ಬಿಜೆಪಿ ರಾಜ್ಯ ಘಟಕ, 'ಮಾಸ್ಟರ್ ಮೈಂಡ್ ಮತ್ತು ರಿಂಗ್ ಮಾಸ್ಟರ್ ಒಂದೇ ಫ್ರೇಮ್‌ನಲ್ಲಿ ಸಿಲುಕಿಕೊಂಡಿರುವುದಕ್ಕೂ 'ನನ್ನನ್ನು ಸಿಲುಕಿಸುವ ಕುತಂತ್ರ' ಎನ್ನುವ ಸ್ವರಕ್ಷಣಾ ಆಟ ಆಡಿರುವುದಕ್ಕೂ ಸಂಬಂಧವಿರಬಹುದೆ' ಎಂದು ಪ್ರಶ್ನಿಸಿದೆ.

ಕಾಂಗ್ರೆಸ್ ರಾಜ್ಯ ಘಟಕ ಟ್ವೀಟ್

ಬಿಜೆಪಿ ರಾಜ್ಯ ಘಟಕ ಟ್ವೀಟ್

'ಆ ಪ್ರಕರಣದ 'ಮಾಸ್ಟರ್ ಮೈಂಡ್'ಗಳೆಲ್ಲರೂ ಮಹಾ ನಾಯಕನೊಂದಿಗೆ ಏಕೆ ಆತ್ಮೀಯ ಸಂಬಂಧ ಹೊಂದಿದ್ದಾರೆ ಎಂಬ ಅನುಮಾನ ರಾಜ್ಯದ ಜನತೆಯನ್ನು ಕಾಡುತ್ತಿದೆ. ಈ ಸಂಬಂಧ ಏಕೆ, ಹೇಗೆ ಮತ್ತು ಯಾಕಾಗಿ ಇತ್ತು ಎಂಬುದನ್ನು ರಿಂಗ್ ಮಾಸ್ಟರ್ ಬಗೆಹರಿಸುವರೆ? ಹಗಲು ಮುಟ್ಟಿ ನೋಡಿಕೊಂಡಿದ್ದಕ್ಕೂ ಈ ಚಿತ್ರಕ್ಕೂ ಇರುವ ಸಂಬಂಧವೇನು' ಎಂದು ಕೇಳಿರುವ ಬಿಜೆಪಿ ಎರಡು ಫೋಟೊಗಳನ್ನು ಟ್ವೀಟ್ ಮಾಡಿದೆ.

ಪ್ರತಿಕ್ರಿಯೆ ನೀಡಿರುವ ಕಾಂಗ್ರೆಸ್, 'ಹೆಣ್ಣು ಮಕ್ಕಳ ದುರ್ಬಳಕೆಯನ್ನು ಸಮರ್ಥಿಸುತ್ತಿರುವ ಬಿಜೆಪಿ ಸರ್ಕಾರ ದೇಶದ್ರೋಹಿ ಮತ್ತು ಅತ್ಯಾಚಾರಿಯೊಂದಿಗೆ ಪ್ರಧಾನಿ ಮೋದಿಯವರಿಗೆ ಏನು ಸಂಬಂಧ? ಸಂಸದ ತೇಜಸ್ವಿ ಸೂರ್ಯ ಅವರಿಗೆ ಡ್ರಗ್ ಡೀಲರ್‌ಗೂ ಏನು ಸಂಬಂಧ? ಪ್ರತಾಪ ಸಿಂಹ ಹಾಗೂ ಈ ಆರೋಪಿಗೂ ಏನು ಸಂಬಂಧ? ಉಪ ಮುಖ್ಯಮಂತ್ರಿ ಲಕ್ಷ್ಮಣ ಸವದಿ ಹಾಗೂ ಯುವರಾಜನಿಗೂ ಏನು ಸಂಬಂಧ? ಹಗಲು ಮುಟ್ಟಿಕೊಂಡು ತಡೆಯಾಜ್ಞೆ ತಂದಿದ್ದು ಯಾರು' ಎಂಬ ಪ್ರಶ್ನೆಗಳೊಂದಿಗೆ ಹಲವು ಫೋಟೊಗಳನ್ನು ಪ್ರಕಟಿಸಿದೆ.

ನಾಲ್ಕು ತಿಂಗಳಿಂದಲೂ ಬ್ಲಾಕ್ ಮೇಲ್ ಮಾಡುತ್ತಿದ್ದರೆ ಏಕೆ ದೂರು ನೀಡಲಿಲ್ಲ. ₹ 20 ಕೋಟಿ ಬಜೆಟ್ಟಿನ ಸಿ.ಡಿಗೆ ಕೇವಲ ₹ 5 ಕೋಟಿ ಬೇಡಿಕೆಯೆ? ವಿಡಿಯೊ ನಕಲಿ ಎಂದಾದರೆ ಜಾರಕಿಹೊಳಿ ಹಣ ಸಂದಾಯ ಮಾಡಿದ್ದೇಕೆ ಎಂದೂ ಕಾಂಗ್ರೆಸ್ ಪ್ರಶ್ನಿಸಿದೆ.

ಸುದ್ದಿ 2 ನಿಮಿಷ

ಚಿತ್ರಕಲಾ ಶಿಕ್ಷಕರ ನೇಮಕ ಪ್ರಕ್ರಿಯೆ ಪೂರ್ಣಕ್ಕೆ ಆಗ್ರಹ

ಬೆಂಗಳೂರು: ಮೊರಾರ್ಜಿ ದೇಸಾಯಿ ಮತ್ತು ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಗಳಿಗೆ ಚಿತ್ರಕಲಾ ಶಿಕ್ಷಕರ ನೇಮಕ ಪ್ರಕ್ರಿಯೆಗಳನ್ನು ಶೀಘ್ರ ಪೂರ್ಣಗೊಳಿಸಬೇಕು ಎಂದು ಸರ್ಕಾರಿ ಚಿತ್ರಕಲಾ ಮಹಾ ವಿದ್ಯಾಲಯದ ಹಳೇ ವಿದ್ಯಾರ್ಥಿಗಳ ಸಂಘ ಒತ್ತಾಯಿಸಿದೆ.

230 ಚಿತ್ರಕಲಾ ಶಿಕ್ಷಕರ ನೇಮಕಕ್ಕೆ 2016ರಲ್ಲಿ ಕೆಪಿಎಸ್‌ಸಿ ಅಧಿಸೂಚನೆ ಹೊರಡಿಸಿತ್ತು. ಅರ್ಹತಾ ಪಟ್ಟಿ ಪ್ರಕಟಿಸಿ ಅಭ್ಯರ್ಥಿಗಳ ಮೂಲ ದಾಖಲೆಗಳ ಪರಿಶೀಲನೆಯನ್ನೂ ಮಾಡಲಾಗಿದೆ ಎಂದು ಸಂಘದ ಪ್ರಧಾನ ಕಾರ್ಯದರ್ಶಿ ಜಿ.ಎಲ್. ನಟರಾಜ್ ಅವರು ಬುಧವಾರ ಸುದ್ದಿಗೋಷ್ಠಿಯಲ್ಲಿ ವಿವರಿಸಿದರು.

'ಪದವಿ ಅಂಕಗಳ ಸ್ಪಷ್ಟೀಕರಣಕ್ಕೆ ವಿಶ್ವವಿದ್ಯಾಲಯದಿಂದ ಪಟ್ಟಿಯನ್ನು ಆಯೋಗಕ್ಕೆ ಕಳುಹಿಸಬೇಕಿದೆ. ಸಮಾಜ ಕಲ್ಯಾಣ ಇಲಾಖೆಯು ತರ್ತಾಗಿ ಉನ್ನತ ಶಿಕ್ಷಣ ಇಲಾಖೆಯಿಂದ ದಾಖಲೆಗಳನ್ನು ತರಿಸಿಕೊಂಡು ಆಯೋಗಕ್ಕೆ ಕಳುಹಿಸಬೇಕು. ಆ ಮೂಲಕ ಚಿತ್ರಕಲಾ ಶಿಕ್ಷಕರಿಗೆ ಉದ್ಯೋಗ ಪಡೆಯಲು ನೆರವಾಗಬೇಕು' ಎಂದು ಮನವಿ ಮಾಡಿದರು.

ಗರಿಗೆದರಿದ ಚುನಾವಣಾ ಕಣ

ಹೆಸರಘಟ್ಟ: ದಾಸನಪುರ ಹೋಬಳಿ ಆಲೂರು ಗ್ರಾಮ ಪಂಚಾಯಿತಿಯ ಚುನಾವಣೆಗೆ ಬುಧವಾರ 13 ಅಭ್ಯರ್ಥಿಗಳು ನಾಮಪತ್ರವನ್ನು ಸಲ್ಲಿಸಿದ್ದಾರೆ.

ಮಾದನಾಯಕನಹಳ್ಳಿ ನಗರಸಭೆಗೆ ಆಲೂರು ಗ್ರಾಮ ಪಂಚಾಯಿತಿಯನ್ನು ಸೇರ್ಪಡೆಗೊಳಿಸಬೇಕೆಂದು ಒತ್ತಾಯಿಸಿ ಗ್ರಾಮಸ್ಥರು ಗ್ರಾಮ ಪಂಚಾಯಿತಿ ಚುನಾವಣೆಯನ್ನು ಬಹಿಷ್ಕಾರ ಮಾಡಿದ್ದರು. ಆದರೆ ಚುನಾವಣಾ ಆಯೋಗವು ಚುನಾವಣೆ ನಡೆಸುವಂತೆ ಆದೇಶ ಹೊರಡಿಸಿತ್ತು.

'ಚುನಾವಣೆ ನಡೆದರೂ ಕೂಡ ನಮ್ಮ ಹೋರಾಟ ಮುಂದುವರಿಯುತ್ತದೆ. ಆಲೂರು ಗ್ರಾಮ ಪಂಚಾಯಿತಿಯು ನಗರಸಭೆಗೆ ಸೇರಿಸಲು ಬೇಕಾದ ಎಲ್ಲ ಅರ್ಹತೆಗಳನ್ನು ಹೊಂದಿದೆ. ನಗರಸಭೆಗೆ ಸೇರ್ಪಡೆಯಾದರೆ ಗ್ರಾಮವನ್ನು ಅಭಿವೃದ್ಧಿ ಪಡಿಸಬಹುದು. ಅಲ್ಲದೇ ಜನಸಂಖ್ಯೆ ಏರಿಕೆ ಅಗಿರುವುದರಿಂದ ಪಂಚಾಯಿತಿಯ ಅದಾಯದಲ್ಲಿ ಪ್ರಾಥಮಿಕ ಸೌಲಭ್ಯವನ್ನು ಕಲ್ಪಿಸಲು ಸಾಧ್ಯವಾಗುತ್ತಿಲ್ಲ' ಎಂದು ಜಿಲ್ಲಾ ಪಂಚಾಯಿತಿ ಸದಸ್ಯ ರವಿಕುಮಾರ್ ಹೇಳಿದರು.

'ಆಲೂರು ಗ್ರಾಮದಲ್ಲಿ ಅನೇಕ ಸಿದ್ಧ ಉಡುಪು ತಯಾರಿಕೆ ಕೇಂದ್ರಗಳಿವೆ. ರಾಜ್ಯಮಟ್ಟದ ಕ್ರಿಕೆಟ್ ಕ್ರೀಡಾಂಗಣ ಇದೆ. ಅನತಿ ದೂರದಲ್ಲಿ ದಾಸನಪುರ ಕೃಷಿ ಉತ್ಪನ್ನ ಮಾರುಕಟ್ಟೆ ಇದೆ. ಇವುಗಳನ್ನು ಅಭಿವೃದ್ಧಿ ಪಡಿಸಿದರೆ ಸರ್ಕಾರಕ್ಕೆ ವರಮಾನ ಬರುತ್ತದೆ. ಪಂಚಾಯಿತಿ ಚುನಾವಣೆಗೆ ನಡೆದ ಬಳಿಕ ನಗರಸಭೆಗೆ ಸೇರ್ಪಡೆ ಮಾಡಲು ಹೋರಾಟ ಮಾಡಲಾಗುವುದು' ಎಂದು ಅವರು ತಿಳಿಸಿದರು.

'ಬಿಬಿಎಂಪಿ ಆಡಳಿತದಲ್ಲಿ ನಿರ್ವಾತ ಸೃಷ್ಟಿಸಿದ ಸರ್ಕಾರ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಿಬಿಎಂಪಿಗೆ ನೇಮಿಸಲಾಗಿದ್ದ ಆಡಳಿತಾಧಿಕಾರಿಯ ಅವಧಿಯನ್ನೂ ವಿಸ್ತರಿಸದ ಬಿಜೆಪಿ ನೇತೃತ್ವದ ಸರ್ಕಾರವು ಪಾಲಿಕೆಯ ಆಡಳಿತದಲ್ಲಿ ನಿರ್ವಾತ ಸೃಷ್ಟಿಸಿದೆ' ಎಂದು ಭಾರತ ಕಮ್ಯೂನಿಸ್ಟ್ ಪಕ್ಷದ (ಮಾರ್ಕ್ಸ್‌ವಾದಿ) ಬೆಂಗಳೂರು ಉತ್ತರ ಮತ್ತು ದಕ್ಷಿಣ ಜಿಲ್ಲಾ ಸಮಿತಿ ಆರೋಪಿಸಿದೆ.

'ಬಿಬಿಎಂಪಿಯ ಚುನಾಯಿತ ಕಾಲಾವಧಿ 2020ರ ಸೆ.1ರಂದು ಕೊನೆಯಾಗಿದೆ. ಅದಕ್ಕೂ ಮೊದಲು ಚುನಾವಣೆ ನಡೆಸಿ, ಚುನಾಯಿತ ಕೌನ್ಸಿಲ್ ರಚಿಸಲು ಅವಕಾಶ ನೀಡಬೇಕಿತ್ತು. ಆದರೆ, ಸರ್ಕಾರವು ತನ್ನ ರಾಜಕೀಯ ಹಿತಾಸಕ್ತಿಗಾಗಿ ಚುನಾವಣೆ ನಡೆಸದೆ ಆಡಳಿತಾಧಿಕಾರಿಯನ್ನು ನೇಮಕ ಮಾಡಿತ್ತು. 2021ರ ಮಾ.10ಕ್ಕೆ ಆಡಳಿತಾಧಿಕಾರಿಯ ಅವಧಿ ಮುಕ್ತಾಯಗೊಂಡಿದೆ. ಈಗ ಚುನಾವಣೆಯನ್ನೂ ನಡೆಸದೆ, ಆಡಳಿತಾಧಿಕಾರಿಯ ಅವಧಿಯನ್ನೂ ವಿಸ್ತರಿಸದೆ ಬಿಬಿಎಂಪಿ ಆಡಳಿತವನ್ನು ಅತಂತ್ರಗೊಳಿಸಿದೆ. ಇದಕ್ಕೆ ಸರ್ಕಾರದ ದುರಾಡಳಿತವೇ ಕಾರಣ' ಎಂದು ಸಮಿತಿ ಕಾರ್ಯದರ್ಶಿ ಕೆ.ಎನ್. ಉಮೇಶ್ ಮತ್ತು ಎನ್. ಪ್ರತಾಪ್ ಸಿಂಹ ತಿಳಿಸಿದ್ದಾರೆ.

'ಅಕ್ರಮ ಸಕ್ರಮ: ಮತ್ತೆ ಅವಕಾಶಕ್ಕೆ ಚರ್ಚೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅಕ್ರಮ ಸಕ್ರಮಕ್ಕೆ ನಮೂನೆ 57ರ ಅಡಿ ಅರ್ಜಿ ಸಲ್ಲಿಸಲು ಇನ್ನೂ ಎಂಟು ದಿನ ಇದ್ದಾಗಲೇ ಲೋಕಸಭೆ ಚುನಾವಣೆ ಘೋಷಣೆ (2019) ಘೋಷಣೆ ಆಗಿದ್ದರಿಂದ ಅರ್ಜಿ ಸಲ್ಲಿಸಲು ಸಾಧ್ಯ ಆಗದವರಿಗೆ ಅವಕಾಶ ಕಲ್ಪಿಸಲು ಕಾಯ್ದೆ ತಿದ್ದುಪಡಿಗೆ ಮುಖ್ಯಮಂತ್ರಿ ಜೊತೆ ಚರ್ಚಿಸಿ, ತೀರ್ಮಾನಿಸಲಾಗುವುದು' ಎಂದು ಕಂದಾಯ ಸಚಿವ ಆರ್. ಅಶೋಕ ತಿಳಿಸಿದರು.

ವಿಧಾನ ಪರಿಷತ್‌ನಲ್ಲಿ ಈ ಬಗ್ಗೆ ಪ್ರಶ್ನೆ ಕೇಳಿದ ಕಾಂಗ್ರೆಸ್ಸಿನ ಪ್ರತಾಪ್‌ಚಂದ್ರ ಶೆಟ್ಟಿ, 'ಕಾಯ್ದೆ ಪ್ರಕಾರ ಸಮಯಾವಕಾಶ ಇತ್ತಾದರೂ, ಜಿಲ್ಲಾಧಿಕಾರಿಗಳು ತಪ್ಪಾಗಿ ಅರ್ಥೈಸಿಕೊಂಡು, ಅರ್ಜಿ ಸ್ವೀಕರಿಸುವ ಪ್ರಕ್ರಿಯೆಯನ್ನು ಎಂಟು ದಿನ ಮೊದಲೇ ಸ್ಥಗಿತಗೊಳಿಸಿದ್ದರು. ಇದರಿಂದ ರೈತರ ಹಕ್ಕಿಗೆ ಧಕ್ಕೆಯಾಗಿದೆ' ಎಂದರು.

'ಸರ್ಕಾರಿ ಜಮೀನುಗಳಲ್ಲಿ ಅನಧಿಕೃತ ಸಾಗುವಳಿಯನ್ನು ಸಕ್ರಮಗೊಳಿಸಲು ಕರ್ನಾಟಕ ಭೂ ಕಂದಾಯ ಕಾಯ್ದೆಗೆ 1964ರ ಕಲಂ 94 ಎ(1)ಕ್ಕೆ ತಿದ್ದುಪಡಿ ಮಾಡಿ 2018ರ ಮಾರ್ಚ್ 17ರಿಂದ ಒಂದು ವರ್ಷದವರೆಗೆ, ಅಂದರೆ 2019 ಮಾರ್ಚ್ 16 ರವರೆಗೆ ಅವಕಾಶ ಕಲ್ಪಿಸಲಾಗಿತ್ತು. ಕೇಂದ್ರ ಚುನಾವಣಾ ಆಯೋಗ 2019ರ ಮಾರ್ಚ್10ರಂದು ಚುನಾವಣೆ ಘೋಷಿಸಿದ್ದರಿಂದ, ನೀತಿ ಸಂಹಿತೆ ನೆಪವಾಗಿಟ್ಟು ಅರ್ಜಿ ಸ್ವೀಕರಿಸುವ ಪ್ರಕ್ರಿಯೆ ಸ್ಥಗಿತಗೊಳಿಸಲಾಗಿತ್ತು. ಆದರೆ, ಕಾಯ್ದೆಯಲ್ಲಿರುವ ಅಂಶ ನೀತಿಸಂಹಿತೆಗೆ ಬಾಧಕ ಆಗುವುದಿಲ್ಲ' ಎಂದು ಪ್ರತಾಪಚಂದ್ರ ಶೆಟ್ಟಿ ವಿವರಿಸಿದರು.

ಅದಕ್ಕೆ ಸಚಿವರು, 'ಮತ್ತೆ ಅವಧಿ ವಿಸ್ತರಿಸುವ ಬಗ್ಗೆ ಮುಖ್ಯಮಂತ್ರಿ ಜೊತೆ ಚರ್ಚಿಸಿ, ತೀರ್ಮಾನಿಸಲಾಗುವುದು. ಬಾಕಿ ಇರುವ ಅರ್ಜಿಗಳ ಅಪ್‌ಲೋಡ್ ಮಾಡಲು ಕೂಡಾ ಕ್ರಮ ವಹಿಸಲಾಗುವುದು' ಎಂದರು.

ಸಿಇಎನ್ ಠಾಣೆಗಳ ಕಾರ್ಯವೈಖರಿ ವರದಿ ಕೇಳಿದ ಹೈಕೋರ್ಟ್

ಬೆಂಗಳೂರು: ಸಿಇಎನ್ (ಸೈಬರ್, ಎಕನಾಮಿಕ್ಸ್ ಆ್ಯಂಡ್ ನಾರ್ಕೋಟಿಕ್) ಅಪರಾಧ ಠಾಣೆಗಳಲ್ಲಿ ದಾಖಲಾಗಿರುವ ಮತ್ತು ದೋಷಾರೋಪ ಪಟ್ಟಿ ಸಲ್ಲಿಕೆಯಾಗಿರುವ ಪ್ರಕರಣಗಳ ಸಂಖ್ಯೆ ಒಳಗೊಂಡ ವರದಿ ಸಲ್ಲಿಸುವಂತೆ ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ನಿರ್ದೇಶನ ನೀಡಿದೆ.

ವಕೀಲೆ ಸುಧಾ ಕಟ್ವಾ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠ, 'ನಗರದ ಪ್ರತಿ ಸಿಇಎನ್ ಪೊಲೀಸ್ ಠಾಣೆಗೆ ಯಾವ ಹಾರ್ಡ್‌ವೇರ್ ಮತ್ತು ಸಾಫ್ಟ್‌ವೇರ್ ಅಗತ್ಯವಿದೆ ಎಂಬುದನ್ನು ಪರಿಶೀಲಿಸಿ ಪೂರೈಕೆ ಮಾಡಬೇಕು' ಎಂದು ತಿಳಿಸಿತು.

ಈ ಠಾಣೆಗಳಿಗೆ ಸಮರ್ಪಕ ಸಿಬ್ಬಂದಿ ಒದಗಿಸಲಾಗಿದೆ ಎಂಬುದರ ಕುರಿತು ಪ್ರಮಾಣ ಪತ್ರ ಸಲ್ಲಿಸಬೇಕು. ಎಂಟೂ ಠಾಣೆಗಳಲ್ಲಿ ದಾಖಲಾದ ಪ್ರಕರಣಗಳ ಸಂಖ್ಯೆ, ಸಲ್ಲಿಕೆಯಾಗಿರುವ ದೋಷಾರೋಪ ಪಟ್ಟಿ ಬಗ್ಗೆ ವಿವರ ಸಲ್ಲಿಸಬೇಕು ಎಂದು ನಿರ್ದೇಶನ ನೀಡಿದ ಪೀಠ, ವಿಚಾರಣೆಯನ್ನು ಏ.9ಕ್ಕೆ ಮುಂದೂಡಿತು.

ಜೊಮ್ಯಾಟೊ ಪ್ರಕರಣ: ಎಫ್‌ಐಆರ್ ದಾಖಲು, ರಾಜ್ಯ ತೊರೆದ ಗ್ರಾಹಕಿ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಜೊಮ್ಯಾಟೊ ಕಂಪನಿ ಡೆಲಿವರಿ ಬಾಯ್ ಜೊತೆಗಿನ ಜಗಳ ಪ್ರಕರಣದಲ್ಲಿ ತಮ್ಮ ವಿರುದ್ಧ ಎಫ್‌ಐಆರ್ ದಾಖಲಾಗುತ್ತಿದ್ದಂತೆ ಗ್ರಾಹಕಿ ಹಿತೇಶಾ ಇಂದ್ರಾಣಿ ಅವರು ರಾಜ್ಯ ತೊರೆದಿದ್ದಾರೆ.

'ಆಹಾರ ಪೂರೈಸಲು ಬಂದಿದ್ದ ಡೆಲಿವರಿ ಬಾಯ್ ಕಾಮರಾಜ್ ನನ್ನ ಮೇಲೆ ಹಲ್ಲೆ ಮಾಡಿದ್ದಾರೆ' ಎಂದು ಆರೋಪಿಸಿ ವಸ್ತ್ರ ವಿನ್ಯಾಸಕಿ ಹಿತೇಶಾ ಇಂದ್ರಾಣಿ ದೂರು ನೀಡಿದ್ದರು. ಆರೋಪ ನಿರಾಕರಿಸಿದ್ದ ಡೆಲಿವರಿ ಬಾಯ್ ಕಾಮರಾಜ್, 'ಗ್ರಾಹಕಿ ಇಂದ್ರಾಣಿ ಅವರೇ ನನ್ನ ಮೇಲೆ ಚಪ್ಪಲಿ ಎಸೆದು ಹಲ್ಲೆ ಮಾಡಿದ್ದಾರೆ' ಎಂದು ಪ್ರತಿ ದೂರು ನೀಡಿದ್ದರು.

ಎರಡೂ ಪ್ರಕರಣದಲ್ಲಿ ಎಫ್‌ಐಆರ್ ದಾಖಲಿಸಿಕೊಂಡಿರುವ ಪೊಲೀಸರು, ಕಾಮರಾಜ್ ಅವರನ್ನು ಬಂಧಿಸಿ ಜಾಮೀನು ಮೇಲೆ ಬಿಡುಗಡೆ ಮಾಡಿದ್ದಾರೆ. ಇನ್ನೊಂದು ಪ್ರಕರಣದಲ್ಲಿ ಹಿತೇಶಾ ಇಂದ್ರಾಣಿ ಅವರನ್ನು ವಿಚಾರಣೆ ನಡೆಸಲು ಪ್ರಯತ್ನಿಸುತ್ತಿದ್ದು, ಅವರು ಮಾತ್ರ ಕೈಗೆ ಸಿಗುತ್ತಿಲ್ಲ.

'ಎಲೆಕ್ಟ್ರಾನಿಕ್ ಸಿಟಿಯಲ್ಲಿ ವಾಸವಿದ್ದ ಹಿತೇಶಾ ಇಂದ್ರಾಣಿ ರಾಜ್ಯವನ್ನು ತೊರೆದು ಮಹಾರಾಷ್ಟ್ರಕ್ಕೆ ಹೋಗಿದ್ದಾರೆ. ವಿಚಾರಣೆಗಾಗಿ ನೋಟಿಸ್ ನೀಡಿದರೂ ಠಾಣೆಗೆ ಬರುತ್ತಿಲ್ಲ. ಆ ಬಗ್ಗೆ ಪ್ರಶ್ನಿಸಿದ್ದಕ್ಕೆ, 'ನಾನು ಮಹಾರಾಷ್ಟ್ರದಲ್ಲಿರುವ ಸಂಬಂಧಿ ಮನೆಗೆ ಬಂದಿದ್ದೇನೆ. ಸದ್ಯಕ್ಕೆ ವಿಚಾರಣೆಗೆ ಬರಲು ಆಗುವುದಿಲ್ಲ' ಎಂದಷ್ಟೇ ಹೇಳಿದ್ದಾರೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

ಮಹಡಿಯಿಂದ ಬಿದ್ದು ಕಾರ್ಮಿಕ ಸಾವು

ಬೆಂಗಳೂರು: ಜ್ಞಾನಭಾರತಿ ಠಾಣೆ ವ್ಯಾಪ್ತಿಯಲ್ಲಿ ನಿರ್ಮಾಣ ಹಂತದ ಕಟ್ಟಡವೊಂದರ ಎರಡನೇ ಮಹಡಿಯಿಂದ ಬಿದ್ದು ಕೋಟೇಶ್ವರ (23) ಎಂಬುವವರು ಮೃತಪಟ್ಟಿದ್ದಾರೆ.

'ರಾಯಚೂರಿನ ಕೋಟೇಶ್ವರ, ಕೆಲಸ ಹುಡುಕಿಕೊಂಡು ನಗರಕ್ಕೆ ಬಂದಿದ್ದರು. ನಿರ್ಮಾಣ ಹಂತದ ಕಟ್ಟಡದಲ್ಲಿ ಕಾರ್ಮಿಕರಾಗಿ ಕೆಲಸಕ್ಕೆ ಸೇರಿದ್ದರು' ಎಂದು ಪೊಲೀಸರು ಹೇಳಿದರು.

'ಜ್ಞಾನಭಾರತಿ ಠಾಣೆ ವ್ಯಾಪ್ತಿಯ ಸಪ್ತಗಿರಿಯ ಖಾಲಿ ಜಾಗದಲ್ಲಿ ಕಟ್ಟಡ ನಿರ್ಮಾಣ ಕೆಲಸ ನಡೆಯುತ್ತಿದೆ. ಅದೇ ಕಟ್ಟಡದ ಎರಡನೇ ಮಹಡಿಯಲ್ಲಿ ಬುಧವಾರ ಕೋಟೇಶ್ವರ ಕೆಲಸ ಮಾಡುತ್ತಿದ್ದರು. ಆಗ ಆಯತಪ್ಪಿ ಕೆಳಗೆ ಬಿದ್ದು ಮೃತಪಟ್ಟಿದ್ದಾರೆ' ಎಂದು ತಿಳಿಸಿದರು.

'ಕಟ್ಟಡ ನಿರ್ಮಾಣ ಸ್ಥಳದಲ್ಲಿ ಯಾವುದೇ ಮುಂಜಾಗ್ರತಾ ಕ್ರಮ ಕೈಗೊಂಡಿರಲಿಲ್ಲ. ನಿರ್ಲಕ್ಷ್ಯ ವಹಿಸಿದ್ದ ಆರೋಪದಡಿ ಕಟ್ಟಡದ ಮಾಲೀಕ ರಾಘವೇಂದ್ರ ರಾವ್ ಹಾಗೂ ಗುತ್ತಿಗೆದಾರ ಕೃಷ್ಣಪ್ಪ ಪೆರುಮಾಳ್ ಎಂಬುವವರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ' ಎಂದೂ ಪೊಲೀಸರು ತಿಳಿಸಿದರು.

₹ 75 ಲಕ್ಷ ಮೌಲ್ಯದ ಡ್ರಗ್ಸ್ ಜಪ್ತಿ

ಆರೋಪಿಗಳಿಂದ ಜಪ್ತಿ ಮಾಡಲಾದ ಡ್ರಗ್ಸ್

ಬೆಂಗಳೂರು: ನಗರದಲ್ಲಿ ಡ್ರಗ್ಸ್ ಮಾರಾಟ ಮಾಡುತ್ತಿದ್ದ ಆರೋಪದಡಿ ನೈಜೀರಿಯಾದ ಇಬ್ಬರು ಪ್ರಜೆಗಳನ್ನು ಬಂಧಿಸಿರುವ ಸಿಸಿಬಿ ಪೊಲೀಸರು, ₹ 75 ಲಕ್ಷ ಮೌಲ್ಯದ ಡ್ರಗ್ಸ್ ಜಪ್ತಿ ಮಾಡಿದ್ದಾರೆ.

'ಜೋಸೆಫ್ ಎಂಡುಕ್ವೆ (38) ಮತ್ತು ಯುಜೋಚುಕ್ವು ಮಾರ್ಕ್ವೆರಿಕ್ (38) ಬಂಧಿತರು. ಅಮೃತಹಳ್ಳಿ ಹಾಗೂ ಯಲಹಂಕದಲ್ಲಿ ಬಾಡಿಗೆ ಮನೆಯಲ್ಲಿ ವಾಸವಿದ್ದ ಆರೋಪಿಗಳು, ಮನೆಯಲ್ಲೇ ಡ್ರಗ್ಸ್ ಸಂಗ್ರಹಿಸಿಟ್ಟುಕೊಂಡು ಮಾರಾಟ ಮಾಡುತ್ತಿದ್ದರು' ಎಂದು ಪೊಲೀಸರು ಹೇಳಿದರು.

'ಕೆಲ ಕಾಲೇಜು ವಿದ್ಯಾರ್ಥಿಗಳು ಹಾಗೂ ಕೆಲ ಖಾಸಗಿ ಕಂಪನಿ ಉದ್ಯೋಗಿಗಳಿಗೆ ಆರೋಪಿಗಳು ಡ್ರಗ್ಸ್ ಪೂರೈಕೆ ಮಾಡುತ್ತಿದ್ದರು. ಈ ಬಗ್ಗೆ ಮಾಹಿತಿ ಬರುತ್ತಿದ್ದಂತೆ ದಾಳಿ ಮಾಡಿ ಆರೋಪಿಗಳನ್ನು ಬಂಧಿಸಲಾಯಿತು. ಆರೋಪಿಗಳ ಬಳಿ ಕೊಕೇನ್, ಎಕ್ಸ್‌ಟೆಸ್ಸಿ, ಎಲ್‌ಎಸ್‌ಡಿ ಕಾಗದ ಚೂರುಗಳು ಹಾಗೂ ಎಂಡಿಎಂಎ ಮಾತ್ರೆಗಳನ್ನು ಜಪ್ತಿ ಮಾಡಲಾಗಿದೆ' ಎಂದೂ ತಿಳಿಸಿದರು.

'ಪ್ರವಾಸಿ ಹಾಗೂ ಉದ್ಯೋಗ ವೀಸಾದಡಿ ನಗರಕ್ಕೆ ಬಂದಿದ್ದ ಆರೋಪಿಗಳು, ವೀಸಾ ಅವಧಿ ಮುಗಿದರೂ ನಗರದಲ್ಲಿ ಅಕ್ರಮವಾಗಿ ನೆಲೆಸಿದ್ದರು. ಕೃತ್ಯಕ್ಕೆ ಬಳಸುತ್ತಿದ್ದ ಮೊಬೈಲ್‌ಗಳನ್ನು ಜಪ್ತಿ ಮಾಡಲಾಗಿದೆ. ಎನ್‌ಡಿಪಿಎಸ್ ಕಾಯ್ದೆ ಹಾಗೂ ವಿದೇಶಿಗರ ಕಾಯ್ದೆಯಡಿ ಆರೋಪಿಗಳ ವಿರುದ್ಧ ಪ್ರಕರಣ ದಾಖಲಿಸಲಾಗಿದೆ' ಎಂದೂ ಹೇಳಿದರು.

ಸಾಮಾಜಿಕ ಜಾಲತಾಣ: ಯುವತಿಯರ ಸೋಗಿನಲ್ಲಿ ಪರಿಚಯ

'ಬೆತ್ತಲೆ' ಬ್ಲ್ಯಾಕ್‌ಮೇಲ್; ಗ್ಯಾಂಗ್ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯುವತಿಯರ ಸೋಗಿನಲ್ಲಿ ವ್ಯಕ್ತಿಗಳನ್ನು ಪರಿಚಯ ಮಾಡಿಕೊಂಡು ಅವರ ಅಶ್ಲೀಲ ವಿಡಿಯೊಗಳನ್ನು ಚಿತ್ರೀಕರಿಸಿ ಬ್ಲ್ಯಾಕ್‌ಮೇಲ್ ಮಾಡಿ ಹಣ ಸುಲಿಗೆ ಮಾಡುತ್ತಿದ್ದ ರಾಜಸ್ಥಾನದ ಗ್ಯಾಂಗ್ ಸಿಐಡಿ ಸೈಬರ್ ಪೊಲೀಸರ ಬಲೆಗೆ ಬಿದ್ದಿದೆ.

'ಸಾಮಾಜಿಕ ಜಾಲತಾಣಗಳಲ್ಲಿ ನಕಲಿ ಖಾತೆ ತೆರೆದು ಕೃತ್ಯ ಎಸಗುತ್ತಿದ್ದ ರಾಜಸ್ಥಾನದ ಸಾಹುನ್, ಶಾರುಖ್ ಖಾನ್, ನಾಸೀರ್ ಹಾಗೂ ಸಹೀದ್ ಅನ್ವರ್ ಎಂಬುವರನ್ನು ಬಂಧಿಸಲಾಗಿದೆ. ಇದೊಂದು ವ್ಯವಸ್ಥಿತ ಗ್ಯಾಂಗ್' ಎಂದು ಸಿಐಡಿ ಪೊಲೀಸ್ ಮೂಲಗಳು ಹೇಳಿವೆ.

'ಸುಲಿಗೆ ಮಾಡುವುದನ್ನೇ ವೃತ್ತಿಯನ್ನಾಗಿ ಮಾಡಿಕೊಂಡಿದ್ದ ಆರೋಪಿಗಳು, ಯಾವುದೋ ಯುವತಿಯರ ಫೋಟೊಗಳನ್ನು ಕದ್ದು ನಕಲಿ ಖಾತೆ ತೆರೆಯುತ್ತಿದ್ದರು. ಅದರ ಮೂಲಕವೇ ಗಣ್ಯರು, ಉದ್ಯಮಿಗಳು ಸೇರಿ ಹಲವರಿಗೆ ಫ್ರೆಂಡ್ ರಿಕ್ವೆಸ್ಟ್ ಕಳುಹಿಸುತ್ತಿದ್ದರು. ಅದನ್ನು ಸ್ವೀಕರಿಸುತ್ತಿದ್ದ ವ್ಯಕ್ತಿಗಳ ಜೊತೆ ನಿತ್ಯವೂ ಚಾಟಿಂಗ್ ಮಾಡಲಾರಂಭಿಸುತ್ತಿದ್ದರು. ಸಲುಗೆಯಿಂದ ಮಾತನಾಡಲಾರಂಭಿಸಿದ್ದರು' ಎಂದೂ ಮೂಲಗಳು ತಿಳಿಸಿವೆ.

'ರಾತ್ರಿ ಹೊತ್ತಿನಲ್ಲಿ ವಿಡಿಯೊ ಕರೆ ಮಾಡುತ್ತಿದ್ದ ಆರೋಪಿಗಳು, ಸಾರ್ವಜನಿಕರನ್ನು ಪ್ರಚೋಸಿದಿ ಬೆತ್ತಲೆಗೊಳಿಸುತ್ತಿದ್ದರು. ನಂತರ, ಅದೇ ದೃಶ್ಯವನ್ನು ಚಿತ್ರೀಕರಿಸಿಟ್ಟುಕೊಳ್ಳುತ್ತಿದ್ದರು. ಮರುದಿನವೇ ವಿಡಿಯೊವನ್ನು ಸಂತ್ರಸ್ತರಿಗೆ ಕಳುಹಿಸಿ ಬ್ಲ್ಯಾಕ್‌ಮೇಲ್ ಮಾಡುತ್ತಿದ್ದ ಆರೋಪಿಗಳು, ₹25 ಸಾವಿರದಿಂದ ಲಕ್ಷದವರೆಗೆ ಹಣಕ್ಕೆ ಬೇಡಿಕೆ ಇಡುತ್ತಿದ್ದರು.'

'ಕೇಳಿದಷ್ಟು ಹಣ ಕೊಡದಿದ್ದರೆ ಫೇಸ್‌ಬುಕ್, ಇನ್‌ಸ್ಟಾಗ್ರಾಂ, ಯೂಟ್ಯೂಬ್‌ನಲ್ಲಿ ವಿಡಿಯೊ ಹರಿಬಿಡುವುದಾಗಿ ಆರೋಪಿಗಳು ಹೆದರಿಸುತ್ತಿದ್ದರು. ಮರ್ಯಾದೆಗೆ ಅಂಜಿ ಕೆಲವರು ಆರೋಪಿಗಳಿಗೆ ಕೇಳಿದಷ್ಟು ಹಣ ಕೊಟ್ಟಿದ್ದರು. ಅದರಲ್ಲಿ ಕೆಲವರು ಮಾತ್ರ ನಗರ ಹಾಗೂ ಹೊರ ನಗರಗಳ ಠಾಣೆಗಳಲ್ಲಿ ದೂರು ನೀಡಿದ್ದಾರೆ' ಎಂದೂ ಸಿಐಡಿ ಮೂಲಗಳು ಹೇಳಿವೆ.

ಮನೆಯಲ್ಲಿ ಕಳವು: ಕೆಲಸದಾಕೆ ಬಂಧನ

ಬೆಂಗಳೂರು: ರಾಜರಾಜೇಶ್ವರಿ ನಗರ ಠಾಣೆ ವ್ಯಾಪ್ತಿಯ ಮನೆಯೊಂದರಲ್ಲಿ ಕಳ್ಳತನ ಎಸಗಿದ್ದ ಆರೋಪದಡಿ ಆಶಾ (28) ಎಂಬಾಕೆಯನ್ನು ಪೊಲೀಸರು ಬಂಧಿಸಿದ್ದಾರೆ.

'ಹಲಗೆವಡೇರಹಳ್ಳಿ ನಿವಾಸಿ ಆಶಾ, ದೂರುದಾರರ ಮನೆಯಲ್ಲಿ ಕೆಲಸ ಮಾಡುತ್ತಿದ್ದಳು. ಜ. 31ರಂದು ಚಿನ್ನಾಭರಣ ಕಳವು ಮಾಡಿಕೊಂಡು ಪರಾರಿಯಾಗಿದ್ದಳು. ಆಕೆಯಿಂದ ₹ 3.10 ಲಕ್ಷ ಮೌಲ್ಯದ ಚಿನ್ನಾಭರಣ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಹಲವು ಮನೆಗಳಲ್ಲಿ ಆಶಾ ಕೆಲಸ ಮಾಡುತ್ತಿದ್ದಳು. ಅಕ್ರಮವಾಗಿ ಹಣ ಸಂಪಾದಿಸುವ ಉದ್ದೇಶದಿಂದ ಕೆಲಸಕ್ಕಿದ್ದ ಮನೆಯಲ್ಲೇ ಕೃತ್ಯ ಎಸಗಿದ್ದಳು. ಕದ್ದ ಆಭರಣಗಳನ್ನು ಮಾರಾಟ ಮಾಡಿದ್ದ ಆರೋಪಿ, ಅದರಿಂದ ಬಂದ ಹಣದಲ್ಲಿ ಆಮ್ನಿ ವಾಹನ ಖರೀದಿಸಿದ್ದರು. ವಾಹನವನ್ನೂ ಇದೀಗ ಜಪ್ತಿ ಮಾಡಲಾಗಿದೆ' ಎಂದೂ ತಿಳಿಸಿದರು.

₹ 400 ಕೋಟಿ ಲೆಕ್ಕವಿಲ್ಲದ ಆದಾಯ ಪತ್ತೆ

ನವದೆಹಲಿ (ಪಿಟಿಐ): ತಮಿಳುನಾಡಿನಲ್ಲಿ ನಡೆಸಿದ ದಾಳಿಯಲ್ಲಿ ಸುಮಾರು ₹ 400 ಕೋಟಿ ಬೃಹತ್ ಪ್ರಮಾಣದ ಬಹಿರಂಗಪಡಿಸದ ಆದಾಯ ಮತ್ತು ಕಡಲಾಚೆಯ ವಹಿವಾಟು ಪತ್ತೆಯಾಗಿದೆ ಎಂದು ಐಟಿ ಇಲಾಖೆ ಹೇಳಿದೆ.

ವಿದೇಶಿ ಸಂಸ್ಥೆಗಳ ಜೊತೆ ವಹಿವಾಟು ನಡೆಸಿರುವ ವ್ಯಕ್ತಿಗಳ ಮೇಲೆ ದಾಳಿ ಮತ್ತು ಅವರ ಸಂಬಂಧಿತ ಬ್ಯಾಂಕ್ ಖಾತೆಗಳ ಪರಿಶೀಲನೆ ನಡೆಸಿದಾಗ 'ಲೆಕ್ಕವಿಲ್ಲದ' ₹ 50 ಲಕ್ಷ ನಗದು, 3 ಕೋಟಿ ಮೌಲ್ಯದ ಆಭರಣಗಳು ಮತ್ತು ₹ 12.5 ಕೋಟಿ ಮೌಲ್ಯದ ಒಂಬತ್ತು ಐಷಾರಾಮಿ ವಾಹನಗಳು ಪತ್ತೆಯಾಗಿವೆ" ಎಂದು ಐಟಿ ಇಲಾಖೆ ತಿಳಿಸಿದೆ.

ಕಪ್ಪು ಹಣ ವಿರೋಧಿ ಕಾಯ್ದೆಯಡಿ ಈ ಪ್ರಕರಣದ ತನಿಖೆ ನಡೆಸಲಾಗುವುದು ಎಂದು ಇಲಾಖೆ ಹೇಳಿದೆ.

ಕನ್ನಡ ಸಾಹಿತ್ಯ ಪರಿಷತ್ತು ನಗರದಲ್ಲಿ ಬುಧವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ (ಕುಳಿತವರು ಎಡದಿಂದ) ಲೇಖಕಿ ಡಾ.ವೈ.ಕೆ. ಸಂಧ್ಯಾ ಶರ್ಮಾ ಅವರಿಗೆ 'ಪಂಕಜ ಶ್ರೀ ಸಾಹಿತ್ಯ ದತ್ತಿ ಪ್ರಶಸ್ತಿ', ವೈದ್ಯೆ ಡಾ. ವಿಜಯಲಕ್ಷ್ಮಿ ಬಾಳೆಕುಂದ್ರಿ ಅವರಿಗೆ 'ಮನೋಹರಿ ಪಾರ್ಥಸಾರಥಿ ದತ್ತಿ ಪ್ರಶಸ್ತಿ' ಹಾಗೂ ಹಿರಿಯ ಪತ್ರಕರ್ತ ವಿಶ್ವೇಶ್ವರ ಭಟ್ ಅವರಿಗೆ 'ನಾಗಡಿಕೆರೆ–ಕಿಟ್ಟಪ್ಪಗೌಡ ರುಕ್ಮಿಣಿ ತೀರ್ಥಹಳ್ಳಿ ದತ್ತಿ ಪ್ರಶಸ್ತಿ' ಪ್ರದಾನ ಮಾಡಲಾಯಿತು. (ನಿಂತವರು ಎಡದಿಂದ) ಪರಿಷತ್ತಿನ ಗೌರವ ಕೋಶಾಧ್ಯಕ್ಷ ಪಿ. ಮಲ್ಲಿಕಾರ್ಜುನಪ್ಪ, ಅಂಕಣಕಾರ ಎಸ್. ಷಡಕ್ಷರಿ, ಪರಿಷತ್ತಿನ ಅಧ್ಯಕ್ಷ ಮನು ಬಳಿಗಾರ್ ಹಾಗೂ ಗೌರವ ಕಾರ್ಯದರ್ಶಿ ಪದ್ಮರಾಜ ದಂಡಾವತಿ ಇದ್ದರು. –ಪ್ರಜಾವಾಣಿ ಚಿತ್ರ

ಪಠ್ಯಪುಸ್ತಕ ಖರೀದಿಗೆ ಒತ್ತಡ: 'ಕ್ಯಾಮ್ಸ್' ಆರೋಪ

ಬೆಂಗಳೂರು: 'ಕೋವಿಡ್ ಕಾರಣದಿಂದ ಕಳೆದ ಶೈಕ್ಷಣಿಕ ಸಾಲಿನ ಪಠ್ಯ ಪುಸ್ತಕವನ್ನೇ ಪೋಷಕರು ತೆಗೆದುಕೊಂಡು ಹೋಗಿಲ್ಲ. ಹೀಗಾಗಿ, ಪ್ರಸಕ್ತ ಸಾಲಿನ ಪುಸ್ತಕ ಖರೀದಿ ಸಂಬಂಧ ಶಿಕ್ಷಣ ಇಲಾಖೆ ಒತ್ತಡ ಹೇರುವುದು ಸರಿಯಲ್ಲ' ಎಂದು ಕರ್ನಾಟಕ ಖಾಸಗಿ ಪ್ರಾಥಮಿಕ, ಪ್ರೌಢ ಶಾಲೆಗಳ ಆಡಳಿತ ಮಂಡಳಿಗಳ ಒಕ್ಕೂಟ (ಕ್ಯಾಮ್ಸ್) ಸರ್ಕಾರಕ್ಕೆ ಮನವಿ ಮಾಡಿದೆ.

'2021-22ನೇ ಶೈಕ್ಷಣಿಕ ಅವಧಿಗೆ ಅವಶ್ಯವಾದ ಪಠ್ಯಪುಸ್ತಕಗಳನ್ನು ಖರೀದಿಸುವಂತೆ ಖಾಸಗಿ ಶಾಲಾ ಆಡಳಿತ ಮಂಡಳಿಗಳ ಮೇಲೆ ಒತ್ತಡ ಹೇರಲಾಗುತ್ತಿದೆ. ಪುಸ್ತಕ ಖರೀದಿಗೂ ಈ ರೀತಿ ದೌರ್ಜನ್ಯ ನಿಲ್ಲಿಸಬೇಕು. ಕೊರೊನಾ ಕಾರಣದಿಂದ ಆರ್ಥಿಕ ಪರಿಸ್ಥಿತಿ ಹದಗೆಟ್ಟಿದೆ. ಹೀಗಾಗಿ ಖಾಸಗಿ ಶಾಲೆಗಳಿಗೆ ಉಚಿತವಾಗಿ ಪಠ್ಯಪುಸ್ತಕ ಒದಗಿಸಬೇಕು' ಎಂದು ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಡಿ. ಶಶಿಕುಮಾರ್ ಒತ್ತಾಯಿಸಿದ್ದಾರೆ.

'ಖಾಸಗಿ ಶಾಲೆಗಳು ಆರ್ಥಿಕ ಸಂಕಷ್ಟ ಎದುರಿಸುತ್ತಿವೆ. ಹಲವು ಶಾಲೆಗಳಲ್ಲಿ ಪೋಷಕರು ಮಕ್ಕಳನ್ನುಇನ್ನೂ ದಾಖಲು ಮಾಡಿಲ್ಲ. ಕೆಲವು ಕಡೆಗಳಲ್ಲಿ ಶುಲ್ಕ ಪಾವತಿ ಆಗಿಲ್ಲ. ಅಲ್ಲದೆ, ಕಳೆದ ಸಾಲಿನ ಪುಸ್ತಕವನ್ನೇ ಪೋಷಕರು ತೆಗೆದುಕೊಂಡು ಹೋಗಿಲ್ಲ. ಈ ಪರಿಸ್ಥಿತಿಯಲ್ಲಿ ಶಿಕ್ಷಣ ಇಲಾಖೆ ಪಠ್ಯಪುಸ್ತಕ ಖರೀದಿಸುವಂತೆ ಒತ್ತಡ ಹೇರುವುದು ಸರಿಯಲ್ಲ. ಪಠ್ಯಪುಸ್ತಕ ಸಂಘ ತಮಗೆ ಎಷ್ಟು ಬೇಕೋ ಅಷ್ಟು ಪಠ್ಯ ಪುಸ್ತಕ ಮುದ್ರಿಸಿ ಇಟ್ಟುಕೊಳ್ಳಲಿ. ಮಕ್ಕಳ ದಾಖಲಾತಿ ಪ್ರಕ್ರಿಯ ಮುಗಿದ ಬಳಿಕ ವಿದ್ಯಾರ್ಥಿಗಳ ದಾಖಲಾತಿ ಆಧಾರದಲ್ಲಿ ಪುಸ್ತಕ ಖರೀದಿಸುತ್ತೇವೆ. ಈಗ ಒತ್ತಡ ಹೇರಿ ದೌರ್ಜನ್ಯ ಮಾಡುವುದು ಸರಿಯಲ್ಲ' ಎಂದೂ ಅವರು ತಿಳಿಸಿದ್ದಾರೆ.

ಸಾರ್ವಜನಿಕ ಶಿಕ್ಷಣ ಇಲಾಖೆ ಆಯುಕ್ತರಿಗೂ ಅವರು ಈ ಬಗ್ಗೆ ಪತ್ರ ಬರೆದಿದ್ದಾರೆ.

ದೋಷಪೂರಿತ ವಾಹನ ಕಡ್ಡಾಯ ವಾಪಸ್: 1 ಕೋಟಿವರೆಗೂ ದಂಡ

ಪ್ರಜಾವಾಣಿ ವಾರ್ತೆ

ನವದೆಹಲಿ: ದೋಷಪೂರಿತ ವಾಹನಗಳನ್ನು ಕಡ್ಡಾಯವಾಗಿ ವಾಪಸ್ ಪಡೆಯಬೇಕು ಎಂದು ಸರ್ಕಾರ ಆದೇಶ ಮಾಡಿದರೆ ಆಟೊಮೊಬೈಲ್ ಕಂಪನಿಗಳು ₹1 ಕೋಟಿವರೆಗೂ ದಂಡ ಪಾವತಿಸಬೇಕಾಗುತ್ತದೆ.

2021ರ ಏಪ್ರಿಲ್ 1ರಿಂದ ಈ ನಿಯಮ ಅನ್ವಯವಾಗಲಿದೆ ಎಂದು ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯ ತಿಳಿಸಿದೆ.

ದೋಷಪೂರಿತ ವಾಹನಗಳನ್ನು ಕಡ್ಡಾಯವಾಗಿ ವಾಪಸ್ ಪಡೆಯುವ ಕುರಿತು ರೂಪಿಸಿರುವ ನಿಯಮಾವಳಿಗಳನ್ನು ಸಚಿವಾಲಯ ಬಿಡುಗಡೆ ಮಾಡಿದೆ.

ತಯಾರಕರು ಅಥವಾ ಆಮದುಗಾರರು ಸ್ವಯಂ ಪ್ರೇರಣೆಯಿಂದ ವಾಹನಗಳನ್ನು ವಾಪಸ್ ಪಡೆಯದಿದ್ದರೆ ಕೇಂದ್ರೀಯ ಮೋಟಾರ್ ವಾಹನ ಕಾಯ್ದೆ ಅನ್ವಯ ದಂಡ ವಿಧಿಸಲು ಅವಕಾಶವಿದೆ ಎಂದು ಅಧಿಸೂಚನೆಯಲ್ಲಿ ತಿಳಿಸಲಾಗಿದೆ. ಸದ್ಯಕ್ಕೆ ದಂಡ ವಿಧಿಸುವ ವ್ಯವಸ್ಥೆ ಇಲ್ಲ.

ವಾಹನಗಳ ಮಾದರಿ ಮತ್ತು ಸಂಖ್ಯೆ ಆಧರಿಸಿ ₹10 ಲಕ್ಷದಿಂದ ₹1 ಕೋಟಿಯವರೆಗೆ ದಂಡ ವಿಧಿಸಲಾಗುವುದು ಎಂದು ತಿಳಿಸಲಾಗಿದೆ.

ವಾಹನ ಮಾಲೀಕರು ದೂರುಗಳನ್ನು ಸಲ್ಲಿಸಲು ಪೋರ್ಟಲ್ ಆರಂಭಿಸಲಾಗುವುದು ಎಂದು ತಿಳಿಸಿದೆ.

ಹಳೆಯ ಘಟನೆಗಳನ್ನು ನೆನಪಿಸಿಕೊಂಡ ಒಡನಾಡಿಗಳು

'ಭಟ್ಟರಿಂದ ಭಾವಗೀತೆಯ ಆಯಾಮ ವಿಸ್ತಾರ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಿಸಾರ್ ಅಹಮದ್ ಅವರು ತಮ್ಮ 'ನಿತ್ಯೋತ್ಸವ' ಕವಿತೆಯ ಮೂಲಕ ಭಾವಗೀತೆಗಳಿಗೆ ನೀಡಿದ ಹೊಸ ಆಯಾಮವನ್ನು ವಿಶ್ವದಾದ್ಯಂತ ವಿಸ್ತರಿಸಿದ ಕೀರ್ತಿ ಲಕ್ಷ್ಮೀನಾರಾಯಣ ಭಟ್ಟರಿಗೆ ಸಲ್ಲುತ್ತದೆ. ಸುಮಧುರ ಭಾವಗೀತೆಗಳಿಂದಲೇ ಅವರು ಜನಸಾಮಾನ್ಯರಿಗೆ ಆಪ್ತರಾದರು' ಎಂದು ಕವಿ ಬಿ.ಆರ್. ಲಕ್ಷ್ಮಣರಾವ್ ತಿಳಿಸಿದರು.

ಬಿ.ಎಂ.ಶ್ರೀ. ಪ್ರತಿಷ್ಠಾನವು ನಗರದಲ್ಲಿ ಮಂಗಳವಾರ ಆಯೋಜಿಸಿದ ಕವಿ ಡಾ.ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟ ಅವರ ಶ್ರದ್ಧಾಂಜಲಿ ಸಭೆಯಲ್ಲಿ ಮಾತನಾಡಿದರು.

'ಉತ್ತರ ಕರ್ನಾಟಕದ ಭಾಗಗಳಲ್ಲಿ ಪರಿಚಿತವಾಗಿದ್ದ ಸಂತ ಶಿಶುನಾಳ ಶರೀಫ್ ಸಾಹೇಬರ ಅನುಭಾವಗೀತೆಗಳನ್ನು ಸಂಗ್ರಹಿಸಿದ ಭಟ್ಟರು, ಅದನ್ನು ಪುಸ್ತಕ ರೂಪದಲ್ಲಿ ಪ್ರಕಟಿಸುವ ಮೂಲಕ ಇಡೀ ನಾಡಿಗೆ ತಲುಪಿಸಿದರು. ಅಶ್ವತ್ಥ್, ಶಿವಮೊಗ್ಗ ಸುಬ್ಬಣ್ಣ ಮುಂತಾದ ಖ್ಯಾತ ಗಾಯಕರಿಂದ ಅವುಗಳನ್ನು ಹಾಡಿಸಿ, ಕನ್ನಡಿಗರೆಲ್ಲರ ನಾಲಿಗೆಯ ಮೇಲೂ ಅವು ನಲಿಯುವಂತೆ ಮಾಡಿದರು.

ಹಂ.ಪ. ನಾಗರಾಜಯ್ಯ ಮತ್ತು ಬಿ.ಆರ್. ಲಕ್ಷ್ಮಣರಾವ್ ಚರ್ಚಿಸಿದರು. ಪ್ರತಿಷ್ಠಾನದ ಅಧ್ಯಕ್ಷ ಆರ್. ಲಕ್ಷ್ಮೀನಾರಾಯಣ, ಪ್ರೊ.ಎಂ.ಎಚ್. ಕೃಷ್ಣಯ್ಯ ಮತ್ತು ವಿಜಯಾ ಸುಬ್ಬಾರಾಜ್ ಇದ್ದರು. –ಪ್ರಜಾವಾಣಿ ಚಿತ್ರ

ಇದರಿಂದಾಗಿ ಅವರಿಗೆ 'ಶರೀಫ್ ಭಟ್ಟ' ಎಂಬ ಬಿರುದು ಕೂಡ ಸಂದಿತ್ತು. ಇಂದು ರೇಡಿಯೊ, ಟಿವಿ, ಧ್ವನಿಸಾಂದ್ರಿಕೆಗಳು ಮತ್ತು ಅಂತರ್ಜಾಲದಲ್ಲಿ ಅತ್ಯಂತ ಪ್ರಚಲಿತವಾಗಿರುವುದು ಹೆಚ್ಚಾಗಿ ಅವರ ಭಾವಗೀತೆಗಳೇ ಆಗಿವೆ' ಎಂದರು.

ಲೇಖಕಿ ವಿಜಯಾ ಸುಬ್ಬರಾಜ್, 'ನಾನು ಸ್ನಾತಕೋತ್ತರ ಪದವಿ ವ್ಯಾಸಂಗದಲ್ಲಿ ಭಟ್ಟರ ವಿದ್ಯಾರ್ಥಿಯಾಗಿದ್ದೆ. ಅವರು ಅತ್ಯುತ್ತಮವಾದ ಪ್ರಾಧ್ಯಾಪಕರೂ ಆಗಿದ್ದರು. ಛಂದಸ್ಸುಗಳನ್ನು ಮನಮುಟ್ಟುವಂತೆ ಬೋಧಿಸುತ್ತಿದ್ದರು. ಬರವಣಿಗೆಯ ಬಗ್ಗೆ ಕೂಡ ನನಗೆ ಪ್ರೋತ್ಸಾಹಿಸುತ್ತಿದ್ದರು. ಅನಂತಮೂರ್ತಿ ಅವರ ಬಗ್ಗೆ 'ಪ್ರಜಾವಾಣಿ'ಯಲ್ಲಿ ಪ್ರಕಟವಾದ ನನ್ನ ವಿಮರ್ಶೆಯನ್ನು ಮೆಚ್ಚಿಕೊಂಡಿದ್ದರು' ಎಂದು ತಿಳಿಸಿದರು.

ವಿಶ್ವದಾದ್ಯಂತ ಮನ್ನಣೆ: ಗಾಯಕ ವೈ.ಕೆ. ಮುದ್ದುಕೃಷ್ಣ, 'ಸುಗಮ ಸಂಗೀತ ಕ್ಷೇತ್ರವು ಭಟ್ಟರನ್ನು ಎಂದಿಗೂ ಮರೆಯುವಂತಿಲ್ಲ. ಅವರಿಂದಾಗಿಯೇ ಸುಗಮ ಸಂಗೀತ ಕ್ಷೇತ್ರದಲ್ಲಿ 70ನೇ ದಶಕದ ಅಂತ್ಯದಲ್ಲಿ ಧ್ವನಿಸುರುಳಿಯ ಅಲೆ ಪ್ರಾರಂಭವಾಯಿತು. ಇದರಿಂದಾಗಿ ಭಾವಗೀತೆಗಳು ಜನಮಾನಸ ತಲುಪಿ, ಮೆಚ್ಚುಗೆಗೆ ಪಾತ್ರವಾದವು. ಕನ್ನಡದ ಭಾವಗೀತೆ ಗಾಯಕರು ಇಡೀ ಪ್ರಪಂಚವನ್ನು ಸುತ್ತುತ್ತಿದ್ದಾರೆ. ಇದಕ್ಕೆ ಮೂಲ ಕಾರಣೀಭೂತರು ಭಟ್ಟರು' ಎಂದು ಹೇಳಿದರು.

ವಿಮರ್ಶಕ ಬಸವರಾಜ ಕಲ್ಗುಡಿ, 'ಭಟ್ಟರ ವಿದ್ಯಾರ್ಥಿಯಾಗಿದ್ದ ನಾನು ಬಳಿಕ ಸಹೋದ್ಯೋಗಿಯಾಗಿ ಕಾರ್ಯನಿರ್ವಹಿಸಿದ್ದೆ. ವೈಚಾರಿಕ, ತಾಂತ್ರಿಕ ಕಾರಣಗಳಿಗಾಗಿ ಅವರೊಂದಿಗೆ ಜಗಳಗಳೂ ಆಗಿದ್ದವು. ಅವರು ತರಗತಿಗಳನ್ನು ಒಂದು ದಿನವೂ ತಪ್ಪಿಸುತ್ತಿರಲಿಲ್ಲ. ಅವರು ಭಾವಗೀತೆಗೆ ಹೊರಳಿದ್ದು ತಪ್ಪಲ್ಲ. ಆದರೆ, ಕವಿತ್ವವನ್ನು ಕಳೆದುಕೊಳ್ಳಬಾರದಿತ್ತು. ಕವಿತ್ವದ ಶಕ್ತಿ ಉಳಿಸಿಕೊಂಡಿದ್ದರೆ ಬಹಳ ಒಳ್ಳೆಯ ಕವಿಯಾಗುತ್ತಿದ್ದರು. ಆದರೆ, ಭಾವಗೀತೆಯ ಕವಿಯಾಗಿ ಉಳಿದರು' ಎಂದರು.

ಸಾಹಿತಿಗಳಾದ ಹಂ.ಪ. ನಾಗರಾಜಯ್ಯ ಹಾಗೂ ಎಂ.ಎಚ್. ಕೃಷ್ಣಯ್ಯ ಅವರು ಹಳೆಯ ಘಟನೆಗಳನ್ನು ನೆನಪಿಸಿಕೊಂಡರು.

ಸಂಕ್ಷಿಪ್ತ ಸುದ್ದಿ

ಹೆಗಡೆನಗರ ಚಾಲೆಂಜರ್ಸ್ ಕಪ್

ಯಲಹಂಕ: ಹೆಗಡೆನಗರದಲ್ಲಿ ಮಾರ್ಚ್ 19ರಿಂದ 21ರವರೆಗೆ 'ಹೆಗಡೆನಗರ ಚಾಲೆಂಜರ್ಸ್ ಕಪ್ ಟಿಸಿಸಿ-2021' ರಾಜ್ಯಮಟ್ಟದ ಟೆನ್ನಿಸ್ ಬಾಲ್ ಕ್ರಿಕೆಟ್ ಪಂದ್ಯಾವಳಿಯನ್ನು ಆಯೋಜಿಸಲಾಗಿದೆ.

ಬ್ಯಾಟರಾಯನಪುರ ಕ್ಷೇತ್ರದ ಜೆಡಿಎಸ್ ಕಾರ್ಯಾಧ್ಯಕ್ಷ ಎನ್. ವೇಣುಗೋಪಾಲ್ ಪ್ರಾಯೋಜನೆಯಲ್ಲಿ ನಡೆಯಲಿರುವ ಈ ಪಂದ್ಯಾವಳಿಯಲ್ಲಿ ಬೆಂಗಳೂರಿನ 5 ತಂಡಗಳು ಸೇರಿದಂತೆ ದಾವಣಗೆರೆ, ಮಂಗಳೂರು, ಕಲಬುರ್ಗಿ ಮತ್ತಿತರ ಜಿಲ್ಲೆಗಳ 16 ತಂಡಗಳು ಭಾಗವಹಿಸಲಿವೆ. ಸಂಪಿಗೇಹಳ್ಳಿ ಉಪವಿಭಾಗದ ಎಸಿಪಿ ನಾಗರಾಜ ಅವರು ಪಂದ್ಯಾವಳಿಯನ್ನು ಶುಕ್ರವಾರ ಬೆಳಿಗ್ಗೆ ಉದ್ಘಾಟಿಸಲಿದ್ದಾರೆ ಎಂದು ಸಂಘಟಕರಾದ ಯಾಸೀನ್ ತಿಳಿಸಿದರು.

ಪಂದ್ಯಾವಳಿಯಲ್ಲಿ ಪ್ರಥಮ ಸ್ಥಾನ ಗಳಿಸುವ ತಂಡಕ್ಕೆ ₹1 ಲಕ್ಷ ನಗದು ಮತ್ತು ಟ್ರೋಫಿ, ದ್ವಿತೀಯ ಬಹುಮಾನವಾಗಿ ₹60 ಸಾವಿರ ನಗದು ಮತ್ತು ಟ್ರೋಫಿ ನೀಡಲಾಗುವುದು ಎಂದು ಅವರು ಮಾಹಿತಿ ನೀಡಿದರು.

ಶೈಕ್ಷಣಿಕ ವರ್ಷ ಆರಂಭ: ಚಿಂತನೆ

ತುಮಕೂರು: 'ಜುಲೈ 15ರಿಂದ ಮುಂದಿನ ಶೈಕ್ಷಣಿಕ ವರ್ಷ ಆರಂಭಿಸುವ ಚಿಂತನೆ ನಡೆದಿದೆ. ಕೋವಿಡ್–19ರ 2ನೇ ಅಲೆಯ ಪರಿಣಾಮಗಳನ್ನು ನೋಡಿಕೊಂಡು ನಿರ್ಧರಿಸಲಾಗುವುದು' ಎಂದು ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವ ಎಸ್.ಸುರೇಶ್ ಕುಮಾರ್ ತಿಳಿಸಿದರು.

ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಮಾ. 1ರಿಂದ, 1ರಿಂದ 5ನೇ ತರಗತಿ ಆರಂಭಿಸುವ ಒಲವು ನನಗೂ ಇತ್ತು. ಆದರೆ ತಜ್ಞರ ಜತೆಗೆ ಚರ್ಚಿಸಿದ ನಂತರ ಆರಂಭಿಸದಿರಲು ನಿರ್ಧರಿಸಲಾಯಿತು' ಎಂದರು.

ಮಠಗಳು, ಕನ್ನಡ ಸಂಘಟನೆಗಳು ಮಾಫಿಯಾ ವಿರುದ್ಧ ಧ್ವನಿ ಎತ್ತಬೇಕು: ಎ.ಟಿ.ರಾಮಸ್ವಾಮಿ ಆಗ್ರಹ

ಬೆಂಗಳೂರು ಭೂಮಾಫಿಯಾಗಳ 'ಸ್ವರ್ಗ'!

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಭೂಮಾಫಿಯಾಗಳ 'ಸ್ವರ್ಗ'ವಾಗಿದೆ. ಈ ಮಾಫಿಯಾವನ್ನು ಬಗ್ಗು ಬಡಿದು ಸರ್ಕಾರಕ್ಕೆ ಸೇರಿದ ಅಮೂಲ್ಯ ಜಮೀನು ಉಳಿಸಿಕೊಳ್ಳುವ ಇಚ್ಛಾಶಕ್ತಿ ಸರ್ಕಾರಕ್ಕೆ ಇಲ್ಲ ಎಂದು ಜೆಡಿಎಸ್‌ನ ಎ.ಟಿ. ರಾಮಸ್ವಾಮಿ ಬೇಸರ ವ್ಯಕ್ತಪಡಿಸಿದರು.

ವಿಧಾನಸಭೆಯಲ್ಲಿ ಬಜೆಟ್ ಮೇಲಿನ ಚರ್ಚೆಯಲ್ಲಿ ಭಾಗವಹಿಸಿ ಮಾತನಾಡಿದ ಅವರು, ಬೆಂಗಳೂರು ಭೂ ಮಾಫಿಯಾಗೆ ಸಿಕ್ಕಿ ನಲುಗುತ್ತಿದೆ. ಆದರೆ, ಸರ್ಕಾರಗಳಿಗೆ ಮಾಫಿಯಾ ಹಿಡಿತದಿಂದ ಪಾರು ಮಾಡುವ ಇಚ್ಛಾ ಶಕ್ತಿ ಇಲ್ಲವಾಗಿದೆ ಎಂದು ಹೇಳಿದರು.

ಭೂಮಾಫಿಯಾ ವಿರುದ್ಧ ಮಠ ಮಾನ್ಯಗಳು, ಕನ್ನಡ ಸಂಘಟನೆಗಳು ಧ್ವನಿ ಎತ್ತಬೇಕು. ನೆಲದ ರಕ್ಷಣೆ ಮಾಡಬೇಕು ಎಂದು ಒತ್ತಾಯಿಸಿದರು.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ (ಬಿಡಿಎ) ಸೇರಿದ 4 ಸಾವಿರ ಎಕರೆ ಜಮೀನು ಕಬಳಿಕೆ ಆಗಿದೆ. ಬಿಡಿಎ ಅಧಿಕಾರಿಗಳ ಪಾತ್ರವಿಲ್ಲದೇ ಇಷ್ಟು ಪ್ರಮಾಣದ ಜಮೀನು ಕಬಳಿಕೆ ಸಾಧ್ಯವಿಲ್ಲ. ತಕ್ಷಣವೇ ವಶಕ್ಕೆ ತೆಗೆದುಕೊಳ್ಳಲು ಮಿಂಚಿನ ವೇಗದಲ್ಲಿ ಕಾರ್ಯಾಚರಣೆ ಮಾಡಬೇಕು ಎಂದು ರಾಮಸ್ವಾಮಿ ಆಗ್ರಹಿಸಿದರು.

ಸರ್ಕಾರಿ ಜಮೀನಿನಲ್ಲಿ ಸಾವಿರಾರು ಅಕ್ರಮ ಬಡಾವಣೆಗಳು ನಿರ್ಮಾಣವಾಗಿವೆ. ಇವೆಲ್ಲ ಅಧಿಕಾರಿಗಳಿಗೆ ಗೊತ್ತಿಲ್ಲದೆಯೇ ನಡೆಯುತ್ತಿಲ್ಲ. ಹಣ ಮಾಡಲು ಸ್ವರ್ಗ ಎಂಬ ಕಾರಣಕ್ಕೆ ಅಧಿಕಾರಿಗಳು ಬೆಂಗಳೂರಿಗೆ ಬರಲು ಪ್ರಭಾವಿಗಳ ಮೇಲೆ ಒತ್ತಡ ಹೇರುತ್ತಿದ್ದಾರೆ ಎಂದರು.

ಭೂಮಾಫಿಯಾ ವಿಧಾನಸೌಧದ ಸುತ್ತಲೇ ಗಿರಕಿ ಹೊಡೆಯುತ್ತಾ ಇರುತ್ತದೆ. ನಕಲಿ ದಾಖಲೆಗಳನ್ನು ಸೃಷ್ಟಿಸಿ ಭೂಮಿ ನುಂಗಿದ ಒಬ್ಬರ ಮೇಲೂ ಈವರೆಗೆ ಕ್ರಮ ಆಗಿಲ್ಲ. ಇವರನ್ನು ಗೂಂಡಾ ಕಾಯ್ದೆ ಅಡಿ ಬಂಧಿಸಬೇಕು ಎಂದು ರಾಮಸ್ವಾಮಿ ಆಗ್ರಹಿಸಿದರು.

ಬಿಬಿಎಂಪಿಯ 18 ಕಿ.ಮೀ ವ್ಯಾಪ್ತಿಯಲ್ಲಿ 5,000 ಎಕರೆ ಕೃಷಿ ಭೂಮಿಯನ್ನು ಕೃಷಿಯೇತರ ಉದ್ದೇಶಕ್ಕೆ ಮಂಜೂರಾತಿ ಮಾಡಲಾಗಿದೆ. ಇದರ ಮೌಲ್ಯ ₹50 ಸಾವಿರ ಕೋಟಿ ಆಗುತ್ತದೆ. ಈ ಪ್ರಕರಣದಲ್ಲಿ ಮಾಜಿ ಶಾಸಕರೊಬ್ಬರು ಬೇರೊಬ್ಬರಿಗೆ ಭೂಮಿ ಮಂಜೂರಾತಿ ಮಾಡಿಸಿ ಬಳಿಕ ತಮ್ಮ ಹೆಸರಿಗೆ ವರ್ಗಾಯಿಸಿಕೊಂಡರು. 5,000 ಎಕರೆ ಹಂಚಿಕೆಯನ್ನು ರದ್ದು ಮಾಡಬೇಕು ಎಂದು ರಾಮಸ್ವಾಮಿ ಒತ್ತಾಯಿಸಿದರು.

ಇದಲ್ಲದೇ, ಬೆಂಗಳೂರು ಸುತ್ತಮುತ್ತ 145 ಪ್ರಕರಣಗಳಲ್ಲಿ 1,048 ಎಕರೆ ಸರ್ಕಾರಿ ಭೂಮಿ ಮತ್ತು ಗೋಮಾಳವನ್ನು ಖಾಸಗಿ ವ್ಯಕ್ತಿಗಳಿಗೆ ಮಂಜೂರಾತಿ ಮಾಡಲಾಗಿದೆ. ಕಾನೂನು ಪ್ರಕಾರ ಇದನ್ನು ಖಾಸಗಿಯವರಿಗೆ ಕೊಡುವಂತಿಲ್ಲ. ಆದರೆ, ಉಪವಿಭಾಗಾಧಿಕಾರಿ ಒಂದೇ ಆದೇಶದಲ್ಲಿ ಖಾಸಗಿಯವರಿಗೆ ನೀಡಿದ್ದಾರೆ ಎಂದು ತಿಳಿಸಿದರು.

ಬೆಂಗಳೂರು ಮಹಾನಗರ ವ್ಯಾಪ್ತಿಯಲ್ಲಿ ಭೂ ಅಕ್ರಮದ ಬಗ್ಗೆ ಸರ್ಕಾರ ಕ್ರಮ ತೆಗೆದುಕೊಂಡರೆ 2 ವರ್ಷಗಳ ಬಜೆಟ್ ಮೊತ್ತದ ಹಣ ಸರ್ಕಾರ ಸಿಗುತ್ತದೆ. ಆದರೆ, ಸರ್ಕಾರಿ ವಕೀಲರು ಸರ್ಕಾರದ ಪರವಾಗಿ ಕೆಲಸ ಮಾಡುತ್ತಿಲ್ಲ. ನ್ಯಾಯಾಧೀಶರ ಮುಂದೆ ಸರಿಯಾಗಿ ವಾದಿಸದೇ ಬಾಯಿ ಮುಚ್ಚಿಕೊಂಡು ನಿಲ್ಲುತ್ತಿದ್ದಾರೆ. ಇದರಿಂದ ಸರ್ಕಾರಕ್ಕೆ ಹಿನ್ನಡೆ ಆಗುತ್ತಿದೆ. ಕಾನೂನು ವಿಭಾಗವನ್ನು ಬಲಪಡಿಸಬೇಕು ಎಂದು ಹೇಳಿದರು.

ಮಧ್ಯಪ್ರವೇಶಿಸಿ ಮಾತನಾಡಿದ ಕಾನೂನು ಸಚಿವ ಬಸವರಾಜ ಬೊಮ್ಮಾಯಿ, 'ಲೋಪ ಸರಿಪಡಿಸಲು ಕ್ರಮ ಕೈಗೊಳ್ಳುತ್ತೇವೆ. ವಕೀಲರು ಸರಿಯಾಗಿ ಕಾರ್ಯನಿರ್ವಹಿಸುತ್ತಿಲ್ಲ ಎಂದಾದರೆ ವಕೀಲರನ್ನು ಬದಲಿಸುವುದು ಕಂದಾಯ ಇಲಾಖೆಯ ಕಾರ್ಯದರ್ಶಿಯವರ ಕೆಲಸ ಅಲ್ಲವೇ. ಸಭೆಯಲ್ಲಿ ದೂರಿದರೆ ಏನು ಪ್ರಯೋಜನ. ಕಂದಾಯ ಇಲಾಖೆ ಈ ಪ್ರಕರಣಗಳ ನಿರ್ವಹಣೆಗಾಗಿ ವಕೀಲರ ಪ್ಯಾನಲ್ ರಚಿಸುವುದು ಸೂಕ್ತ' ಎಂದು ಹೇಳಿದರು.

ನಿಜವಾದ ಕಳ್ಳರು ಇಲ್ಲಿದ್ದಾರೆ!

'ನೈಸ್ ಜತೆ ಕೆಲವು ರಾಜಕಾರಣಿಗಳೂ ಸೇರಿದ್ದಾರೆ. ಅವರೂ ಸಾವಿರಾರು ಎಕರೆ ಭೂಮಿ ಹೊಂದಿದ್ದಾರೆ. ನಿಜವಾದ ಕಳ್ಳರು(ಸದನ) ಇಲ್ಲಿದ್ದಾರೆ. ಬಾಯಿ ಬಿಡದೇ ಮೌನವಾಗಿ ಕುಳಿತಿದ್ದಾರೆ' ಎಂದು ಬಿಜೆಪಿಯ ಬಸನಗೌಡ ಪಾಟೀಲ ಯತ್ನಾಳ್ ಹೇಳಿದರು.

'ಹೊರಗೆ ನೈಸ್ ಕಂಪನಿಯ ಖೇಣಿಯ ಬಗ್ಗೆ ಟೀಕೆ ಮಾಡುತ್ತಾರೆ. ರಾತ್ರಿ ಅವರ ಮನೆಗೆ ಹೋಗುತ್ತಾರೆ' ಎಂದು ಲೇವಡಿ ಮಾಡಿದರು.

ನೈಸ್‌ಗಾಗಿ ಸಚಿವರ ತಲೆದಂಡ

'ನೈಸ್‌ಗಾಗಿ ಕಾನೂನು ಸಚಿವರ ತಲೆದಂಡವಾಗಿದೆ. ನೈಸ್ ಅಷ್ಟು ಪ್ರಭಾವಶಾಲಿ ಇದೆ ' ಎಂದು ಜೆಡಿಎಸ್‌ನ ಎಚ್.ಡಿ.ರೇವಣ್ಣ ಅವರು ಪರೋಕ್ಷವಾಗಿ ಜೆ.ಸಿ.ಮಾಧುಸ್ವಾಮಿ ಅವರನ್ನು ಕಾನೂನು ಖಾತೆಯಿಂದ ಬದಲಾಯಿಸಿದನ್ನು ಪ್ರಸ್ತಾಪಿಸಿದರು.

ವಿಚಾರ ಗೋಷ್ಠಿಯಲ್ಲಿ ಕೆ.ರತ್ನಪ್ರಭಾ, ಕೌಶಲ ಅಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯ ಕಾರ್ಯದರ್ಶಿ ಎಸ್. ಸೆಲ್ವಕುಮಾರ್ ಮತ್ತು ಐಆರ್‌ಎಸ್ ವ್ಯವಸ್ಥಾಪಕ ನಿರ್ದೇಶಕ ಅಶ್ವಿನ್‌ಗೌಡ ಇದ್ದಾರೆ –ಪ್ರಜಾವಾಣಿ ಚಿತ್ರ

'ಶಾಲೆ ತೊರೆವ ಮಕ್ಕಳಿಗೂ ಕೌಶಲ ತರಬೇತಿ ಅಗತ್ಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 14ನೇ ವಯಸ್ಸಿಗೂ ಮೊದಲೇ ಶಾಲೆ ತೊರೆಯುವ ಮಕ್ಕಳಿಗೆ ಆ ವಯಸ್ಸಿನಲ್ಲೇ ಕೌಶಲ ತರಬೇತಿ ನೀಡುವ ಅಗತ್ಯವಿದೆ ಎಂದು ಕೌಶಲ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷೆ ಕೆ. ರತ್ನಪ್ರಭಾ ಅಭಿಪ್ರಾಯಪಟ್ಟರು.

ಕೌಶಲ ತರಬೇತಿಗೆ ಇರುವ ಅವಕಾಶಗಳು ಕುರಿತ ಆಯೋಜಿಸಿದ್ದ ವಿಚಾರಗೋಷ್ಠಿಯಲ್ಲಿ ಅವರು ಮಾತನಾಡಿದರು.

'ಗ್ರಾಮೀಣ ಭಾಗದಲ್ಲಿ ಹಲವು ಕಾರಣದಿಂದ ಮಕ್ಕಳು 10ನೇ ತರಗತಿಗೆ ಓದು ನಿಲ್ಲಿಸುತ್ತಾರೆ. ಆ ಸಂದರ್ಭದಲ್ಲಿ ಅವರಿಗೆ ಕೌಶಲ ತರಬೇತಿ ನೀಡಬೇಕೇ, ಬೇಡವೇ ಎಂಬುದು ಈಗಲೂ ಚರ್ಚಾ ವಿಷಯವೇ ಆಗಿದೆ. ಆದರೆ, ಅಂತಹ ಮಕ್ಕಳನ್ನು ಗುರುತಿಸಿ ಕೌಶಲ ತರಬೇತಿ ನೀಡಿದರೆ ಪರಿಣಾಮಕಾರಿಯಾಗಿ ಮಕ್ಕಳ ಭವಿಷ್ಯ ರೂಪಿಸಲು ನೆರವಾಗಲಿದೆ' ಎಂದರು.

'18 ವರ್ಷ ತುಂಬುವವರೆಗೂ ಅವರಿಗೆ ಪೂರ್ಣಾವಧಿ ಕೆಲಸಕ್ಕೆ ನೇಮಿಸುವ ಬದಲು, ಅಲ್ಪಾವಧಿ ಕೆಲಸ ಮಾಡಿಸುವುದರಿಂದ ಅವರ ವಯಸ್ಸಿನ ಮೇಲೆ ಯಾವುದೇ ಒತ್ತಡ ಬೀರಿದಂತಾಗುವುದಿಲ್ಲ. ಅಲ್ಲದೆ, ಅವರು ಪ್ರೌಢಾವಸ್ಥೆಗೆ ಬರುವುದರೊಳಗೆ ಆ ಮಕ್ಕಳ ಅನುಭವದ ಜೊತೆಗೆ ಕೌಶಲವನ್ನೂ ಮೈಗೂಡಿಸಿಕೊಳ್ಳಲಿದ್ದಾರೆ' ಎಂದು ಹೇಳಿದರು.

ಸಂವಾದ ಹಾಗೂ ವಿಚಾರ ಗೋಷ್ಠಿಯಲ್ಲಿ 17ಕ್ಕೂ ಹೆಚ್ಚು ವಲಯದ ಕೌಶಲ ಸಮಾಲೋಚಕ ಸದಸ್ಯರು ಭಾಗವಹಿಸಿದ್ದರು.

ನನ್ನಿಂದ ನೋವಾಗಿದ್ದರೆ ನಿವೃತ್ತಿ ಪಡೆಯುವೆ: ಸಾ.ರಾ.ಮಹೇಶ್

ಪ್ರಜಾವಾಣಿ ವಾರ್ತೆ

ಸಾ.ರಾ.ಮಹೇಶ್

ಮೈಸೂರು: 'ನೀವೇ ನಮ್ಮ ನಾಯಕರು ಎಂದು ಹೇಳುತ್ತಾ ಬಂದಿದ್ದೇನೆ. ನಾನು ಯಾವತ್ತೂ ನಿಮ್ಮ ಜತೆ ಪೈಪೋಟಿ ನಡೆಸಿಲ್ಲ. ಬನ್ನಿ, ನಾಳೆಯೇ ಜವಾಬ್ದಾರಿ ಹೊತ್ತುಕೊಳ್ಳಿ. ಎಚ್.ಡಿ.ಕುಮಾರಸ್ವಾಮಿ ಜತೆ ಸೇರಿ ಪಕ್ಷ ಕಟ್ಟಿ' ಎಂದು ಶಾಸಕ ಸಾ.ರಾ.ಮಹೇಶ್, ಪಕ್ಷದ ಚಟುವಟಿಕೆಗಳಿಂದ ದೂರವೇ ಉಳಿದಿರುವ ಜಿ.ಟಿ.ದೇವೇಗೌಡ ಅವರಿಗೆ ಆಹ್ವಾನ ನೀಡಿದರು.

'ನೀವು ಸಕ್ರಿಯವಾಗಿಲ್ಲ ಎಂಬ ಕಾರಣಕ್ಕೆ ನಾನು ಓಡಾಡುತ್ತಿದ್ದೇನೆ. ನನ್ನ ಈ ಓಡಾಟದಿಂದ ನಿಮಗೆ ನೋವಾಗಿದ್ದರೆ ದೂರ ಸರಿಯುವೆ. ಇನ್ನು ಮುಂದೆ ಚುನಾವಣೆಗೆ ನಿಲ್ಲಲ್ಲ ಎಂದು ಚಾಮುಂಡಿಬೆಟ್ಟದಲ್ಲಿ ಪ್ರಮಾಣ ಮಾಡಿ ರಾಜಕೀಯದಿಂದ ನಿವೃತ್ತಿಯಾಗುತ್ತೇನೆ. ನೀವು ಕಾರ್ಯಕರ್ತರ ಜತೆ ಸೇರಿಕೊಂಡು ಪಕ್ಷವನ್ನು ಉಳಿಸುವ ಕೆಲಸ ಮಾಡಿ' ಎನ್ನುತ್ತಾ ಅವರು ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಭಾವುಕರಾದರು.

'ನೀವು ಪದೇ ಪದೇ ನನ್ನನ್ನು ಟೀಕಿಸುತ್ತಿದ್ದೀರಿ. ಎಷ್ಟೇ ಟೀಕೆ ಮಾಡಿದರೂ ನಿಮ್ಮ ಬಗ್ಗೆ ಗೌರವ ಇಟ್ಟುಕೊಂಡಿದ್ದೇನೆ. ನಾನು ಏನು ಅನ್ಯಾಯ ಮಾಡಿದ್ದೇನೆ? ನಿಮ್ಮ ಜತೆ ಇರುವ ಕಾರ್ಯಕರ್ತರಲ್ಲಿ ನಾನೂ ಒಬ್ಬ ಎಂಬುದನ್ನು ದಯವಿಟ್ಟು ಅರ್ಥಮಾಡಿಕೊಳ್ಳಿ, ನನ್ನ ಮೇಲೆ ದ್ವೇಷ ಏಕೆ' ಎಂದು ಪ್ರಶ್ನಿಸಿದರು.

'ಶಕುನಿ' ಹೇಳಿಕೆಗೆ ಕಣ್ಣೀರು: ಜಿ.ಟಿ. ದೇವೇಗೌಡ ಅವರು ತಮ್ಮನ್ನು 'ಶಕುನಿ' ಎಂದು ಕರೆದದ್ದಕ್ಕೆ ಬೇಸರ ವ್ಯಕ್ತಪಡಿಸಿ ಸುದ್ದಿಗೋಷ್ಠಿಯಲ್ಲಿ ಅವರು ಕಣ್ಣೀರಿಟ್ಟರು.

'ಶಕುನಿ ಇಲ್ಲದಿದ್ದರೆ ಮಹಾಭಾರತ ನಡೆಯುತ್ತಿತ್ತಾ? ದುಷ್ಟಶಕ್ತಿಗಳ ನಿರ್ನಾಮ ಆಗುತ್ತಿತ್ತಾ? ಮಂಥರೆ ಇಲ್ಲದಿದ್ದರೆ ರಾಮಾಯಣ ನಡೆಯುತ್ತಿತ್ತಾ? ಶಬರಿ ಶಾಪ ವಿಮೋಚನೆ ಆಗುತ್ತಿತ್ತಾ? ರಾವಣನ ಸಂಹಾರ, ರಾಮರಾಜ್ಯ ಸ್ಥಾಪನೆ ಆಗುತ್ತಿತ್ತಾ? ಎನ್ನುತ್ತಲೇ ಮತ್ತೆ ಭಾವುಕರಾದರು.

'ಚಾಮುಂಡಿಬೆಟ್ಟದಲ್ಲಿ ನನ್ನ ಕಣ್ಣೀರು ಹಾಕಿಸಿದ್ದ ಒಬ್ಬರು (ಎಚ್.ವಿಶ್ವನಾಥ್) ಈಗ ಅನುಭವಿಸುತ್ತಾ ಇದ್ದಾರೆ. ಇದೀಗ ನೀವು ಕೂಡ ಚಾಮುಂಡಿಬೆಟ್ಟದಲ್ಲಿ ನನ್ನ ಬಗ್ಗೆ ಮಾತನಾಡಿದ್ದೀರಿ. ಸತ್ಯಾಸತ್ಯತೆ, ಪಕ್ಷ ನಿಷ್ಠೆಯನ್ನು ತಾಯಿ ಚಾಮುಂಡೇಶ್ವರಿ ತೀರ್ಮಾನಿಸುವಳು' ಎಂದರು.



ಸ್ತ್ರೀಶಕ್ತಿ ಗುಂಪಿನ ಸದಸ್ಯರಿಗೆ ಸಾಲದ ಚೆಕ್ ವಿತರಿಸಲಾಯಿತು.

ಸ್ತ್ರೀಶಕ್ತಿ ಗುಂಪಿಗೆ ₹5 ಲಕ್ಷ ಸಾಲ

ಯಲಹಂಕ: ಕುಟುಂಬ ಮತ್ತು ಸಮಾಜದ ಅಭಿವೃದ್ಧಿಯಲ್ಲಿ ಮಹಿಳೆಯರ ಕೊಡುಗೆ ಅಪಾರವಾಗಿದೆ. ಈ ದಿಸೆಯಲ್ಲಿ ಮಹಿಳೆಯರನ್ನು ಕಡೆಗಣಿಸದೆ, ಆಕೆಯ ಸರ್ವಾಂಗೀಣ ಬೆಳವಣಿಗೆಗೆ ಪ್ರೋತ್ಸಾಹ ನೀಡಬೇಕಾದುದು ಅತ್ಯಗತ್ಯ ಎಂದು ಮಾಜಿ ಉಪಮೇಯರ್ ಎನ್.ಇಂದಿರಾ ಹೇಳಿದರು.

ಕರ್ನಾಟಕ ಜಾತ್ಯತೀತ ಸಮಾಜವಾದಿ ಸಂಘಟನೆ, ಬ್ಯಾಟರಾಯನಪುರ ಕ್ಷೇತ್ರಘಟಕದ ಆಶ್ರಯದಲ್ಲಿ ಜಕ್ಕೂರು ಗ್ರಾಮದಲ್ಲಿ ಆಯೋಜಿಸಿದ್ದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, 'ಮಗುವಿನ ಲಾಲನೆ-ಪಾಲನೆಯಿಂದ ಹಿಡಿದು, ಕುಟುಂಬ ನಿರ್ವಹಣೆ ಸೇರಿದಂತೆ ಎಲ್ಲ ಜವಾಬ್ದಾರಿಗಳನ್ನು ಯಶಸ್ವಿಯಾಗಿ ನಿಭಾಯಿಸುತ್ತಿರುವುದು ಮಹಿಳೆಯರಲ್ಲಿರುವ ಶಕ್ತಿ ಏನೆಂಬುದನ್ನು ಸಾಬೀತುಪಡಿಸಿದೆ' ಎಂದರು.

'ಸಂವಿಧಾನದಲ್ಲಿ ಮಹಿಳೆಯರಿಗಾಗಿ ಹಲವಾರು ಹಕ್ಕುಗಳನ್ನು ನೀಡಿರುವುದರಿಂದ ಇಂದು ಸಮಾಜದಲ್ಲಿ ಉನ್ನತ ಸ್ಥಾನಗಳನ್ನು ಅಲಂಕರಿಸಲು ಮತ್ತು ಆಸ್ತಿ ಅನುಭವಿಸುವ ಹಕ್ಕು ದೊರೆತಿರುವುದಕ್ಕೆ ಮಹಿಳೆಯರು ಅಂಬೇಡ್ಕರ್ ಅವರನ್ನು ಎಂದಿಗೂ ಮರೆಯಲು ಸಾಧ್ಯವಿಲ್ಲ' ಎಂದು ಸ್ಮರಿಸಿದರು.

ಸಾಮಾಜಿಕ ಕಾರ್ಯಕರ್ತೆ ಮೀನಾಕ್ಷಿ ಶೇಷಾದ್ರಿ ಮಾತನಾಡಿ, 'ಗುರಿ ಮತ್ತು ಸಾಧಿಸುವ ಛಲವಿರದಿದ್ದರೆ ಯಾವುದೇ ಸಾಧನೆ ಮಾಡಲು ಸಾಧ್ಯವಿಲ್ಲ. ಈ ದಿಸೆಯಲ್ಲಿ ಮಹಿಳೆಯರು ಸುತ್ತಮುತ್ತ ನಡೆಯುತ್ತಿರುವ ವಿದ್ಯಮಾನಗಳ ಬಗ್ಗೆ ತಿಳಿದುಕೊಂಡು, ನಿಮ್ಮ ಅಭಿವೃದ್ಧಿಗಾಗಿ ಅಗತ್ಯವಿರುವ ಸಂಪರ್ಕವನ್ನು ನೀವೇ ವೃದ್ಧಿಸಿಕೊಳ್ಳಬೇಕು. ತಾಯಂದಿರು ಹೆಣ್ಣು-ಗಂಡು ಮಕ್ಕಳನ್ನು ಮೇಲುಕೀಳೆಂದು ಭಾವಿಸದೆ ಸಮಾನತೆಯಿಂದ ಬೆಳೆಸಬೇಕು' ಎಂದರು.

ಇದೇ ಸಂದರ್ಭದಲ್ಲಿ ಜಕ್ಕೂರು ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ವತಿಯಿಂದ ಸ್ತ್ರೀಶಕ್ತಿ ಗುಂಪಿನ 10 ಸದಸ್ಯರಿಗೆ ತಲಾ ₹50 ಸಾವಿರದಂತೆ ₹5 ಲಕ್ಷ ಸಾಲಸೌಲಭ್ಯದ ಚೆಕ್ ವಿತರಿಸಲಾಯಿತು.

ಕನ್ನಡ ಜಾನಪದ ಪರಿಷತ್‌ನ ರಾಜ್ಯ ಸಂಚಾಲಕಿ ಡಾ.ವಿ.ಕನಕತಾರಾ, ಸಂಘಟನೆಯ ರಾಜ್ಯಘಟಕದ ಅಧ್ಯಕ್ಷ ರವಿಕುಮಾರ್, ಉಪಾಧ್ಯಕ್ಷೆ ರತ್ನಮ್ಮ, ಸದಸ್ಯೆ ಜಯಲಕ್ಷ್ಮಿ ರವಿಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

'ಸಿಮೆಂಟ್ ಮಿಕ್ಸಿಂಗ್ ಕಂಪನಿ ತೆರವುಗೊಳಿಸಿ'

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಜನರ ಆರೋಗ್ಯದ ಮೇಲೆ ಪರಿಣಾಮ ಬೀರುವ ಸಿಮೆಂಟ್ ಮಿಕ್ಸಿಂಗ್ ಕಂಪನಿಗಳನ್ನು ತೆರವುಗೊಳಿಸಬೇಕು ಎಂದು ಒತ್ತಾಯಿಸಿ ಕರ್ನಾಟಕ ರಕ್ಷಣಾ ವೇದಿಕೆ ಯುವ ಗರ್ಜನೆ ಹಾಗೂ ಆದಿ ಜಾಂಬವ ಜನ ಸಂಘದ ಕಾರ್ಯಕರ್ತರು ಪೂರ್ವ ತಾಲ್ಲೂಕು ವಿಶೇಷ ತಹಶೀಲ್ದಾರ್ ಶಾರದಾ ಅವರಿಗೆ ಮನವಿ ಸಲ್ಲಿಸಿದರು.

ವೇದಿಕೆಯ ಅಧ್ಯಕ್ಷ ವೈಟ್ ಫೀಲ್ಡ್ ಪ್ರವೀಣ್, 'ದೊಡ್ಡಬನಹಳ್ಳಿ ಗ್ರಾಮ ಪಂಚಾಯತಿ ವ್ಯಾಪ್ತಿಯ ಗೋರವಿಗೆರೆ ಕಾಲೊನಿ ಮತ್ತು ಕಾಟಂನಲ್ಲೂರು ಮಾರ್ಗದಲ್ಲಿ ಕಳೆದ ಮೂರು ವರ್ಷದ ಹಿಂದೆ ಹತ್ತಾರು ಸಿಮೆಂಟ್ ಮಿಕ್ಸಂಗ್ ಕಾರ್ಖಾನೆಗಳು ಅನಧಿಕೃತವಾಗಿ ತಲೆ ಎತ್ತಿವೆ' ಎಂದು ಆರೋಪಿಸಿದರು.

ಆದಿ ಜಾಂಬವ ಜನ ಸಂಘದ ಬೆಂಗಳೂರು ಯುವ ಘಟಕ ಅಧ್ಯಕ್ಷ ವೇಣುಮಾದರ್, 'ಕಾರ್ಖಾನೆಗಳಿಂದ ವಿಷಪೂರಿತ ಗಾಳಿ, ದೂಳಿನಿಂದ ಸುತ್ತಮುತ್ತಲಿನ ಗ್ರಾಮಸ್ಥರಿಗೆ ಅಲರ್ಜಿ, ಆಸ್ತಮಾ ಸೇರಿದಂತೆ ಅನೇಕ ಆರೋಗ್ಯ ಸಮಸ್ಯೆಗಳು ಕಾಣಿಸಿಕೊಳ್ಳುತ್ತಿವೆ. ಪ್ರತಿನಿತ್ಯ ನೂರಾರು ಸಿಮೆಂಟ್ ವಾಹನಗಳ ಸಂಚಾರದಿಂದ ರಸ್ತೆ ಸಂಪೂರ್ಣ ಹದಗೆಟ್ಟಿದ್ದು ನೂರಾರು ಗುಂಡಿಗಳು ಬಿದ್ದಿವೆ' ಎಂದರು.

ಪ್ರವೀಣ್, ಆಶಿಕ್, ಮಧು, ಉದಯ್, ಗುಟ್ಟೆ ಮಣಿ, ಮೈಕಲ್, ರಾಜು, ಸುನಿಲ್ ಇದ್ದರು.

ರಾಜ್ಯಸಭೆಗೆ ಮಾಹಿತಿ ನೀಡಿದ ಕೇಂದ್ರ

ರಾಷ್ಟ್ರವ್ಯಾಪಿ ಎನ್‌ಆರ್‌ಸಿ ಜಾರಿ ನಿರ್ಧಾರವಾಗಿಲ್ಲ

ನವದೆಹಲಿ(ಪಿಟಿಐ): 'ದೇಶದಾದ್ಯಂತ ರಾಷ್ಟ್ರೀಯ ಪೌರತ್ವ ನೋಂದಣಿ (ಎನ್‌ಆರ್‌ಸಿ) ಜಾರಿ ಬಗ್ಗೆ ಸದ್ಯಕ್ಕೆ ಯಾವುದೇ ನಿರ್ಧಾರ ತೆಗೆದುಕೊಂಡಿಲ್ಲ' ಎಂದು ಕೇಂದ್ರ ಸರ್ಕಾರ ರಾಜ್ಯಸಭೆಗೆ ಬುಧವಾರ ಮಾಹಿತಿ ನೀಡಿದೆ.

ದೇಶದಾದ್ಯಂತ ಎನ್‌ಆರ್‌ಸಿಯನ್ನು ಜಾರಿಗೆ ತರಲು ಕೇಂದ್ರ ಸರ್ಕಾರವು ಯಾವುದಾದರೂ ಯೋಜನೆ ಹೊಂದಿದೆಯೇ ಎಂಬ ಬಗ್ಗೆ ರಾಜ್ಯಸಭೆಯಲ್ಲಿ ಕೇಳಲಾದ ಪ್ರಶ್ನೆಗೆ ಉತ್ತರಿಸಿದ ಕೇಂದ್ರ ಗೃಹಖಾತೆಯ ರಾಜ್ಯ ಸಚಿವ ನಿತ್ಯಾನಂದ ರೈ ಅವರು, 'ಈವರೆಗೆ ದೇಶದಾದ್ಯಂತ ಎನ್‌ಆರ್‌ಸಿಯನ್ನು ಸಿದ್ಧಪಡಿಸುವ ಯಾವುದೇ ನಿರ್ಧಾರವನ್ನು ಸರ್ಕಾರ ತೆಗೆದುಕೊಂಡಿಲ್ಲ' ಎಂದು ಲಿಖಿತ ಉತ್ತರದಲ್ಲಿ ತಿಳಿಸಿದ್ದಾರೆ.

ಮತ್ತೊಂದು ಪ್ರಶ್ನೆಗೆ ಉತ್ತರಿಸಿದ ರೈ, ಪೌರತ್ವ ಕಾಯ್ದೆ 1955 ಮತ್ತು ಎನ್‌ಆರ್‌ಸಿ ಅಡಿಯಲ್ಲಿ ಬಂಧನ ಕೇಂದ್ರಗಳನ್ನು ಒದಗಿಸಲು ಅವಕಾಶವಿಲ್ಲ ಎಂದೂ ಅವರು ಹೇಳಿದ್ದಾರೆ.

'ಈಗಾಗಲೇ ಶಿಕ್ಷೆಯನ್ನು ಪೂರ್ಣಗೊಳಿಸಿರುವ ವಿದೇಶಿ ಪ್ರಜೆಗಳನ್ನು ತಕ್ಷಣ ಜೈಲಿನಿಂದ ಬಿಡುಗಡೆ ಮಾಡಬೇಕು. ಅವರ ಗಡಿಪಾರು ಅಥವಾ ವಾಪಸಾತಿಗೆ ಬಾಕಿ ಇರುವಂಥವರನ್ನು ಸೂಕ್ತ ಸ್ಥಳದಲ್ಲಿರಿಸಬೇಕು ಎಂದು 2012ರ ಫೆ. 28ರಂದು ಸುಪ್ರೀಂ ಕೋರ್ಟ್ ನಿರ್ದೇಶಿಸಿದೆ' ಎಂದೂ ಅವರು ರಾಜ್ಯಸಭೆಗೆ ಮಾಹಿತಿ ನೀಡಿದ್ದಾರೆ.

ಆಝಾನ್‌ನಿಂದ ನಿದ್ರೆ ಭಂಗ: ಕುಲಪತಿ ಪತ್ರ

ಲಖನೌ: ಮಸೀದಿಯಲ್ಲಿ 'ಆಝಾನ್'ಗೆ ಧ್ವನಿವರ್ಧಕ ಬಳಸುತ್ತಿರುವುದರಿಂದ 'ಶಬ್ದ ಮಾಲಿನ್ಯ' ಆಗುತ್ತಿದ್ದು, ನಿದ್ರೆಗೆ ಭಂಗವಾಗುತ್ತಿದೆ ಎಂದು ಅಲಹಾಬಾದ್ ಕೇಂದ್ರೀಯ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಸಂಗೀತಾ ಶ್ರೀವಾಸ್ತವ ಅವರು ಜಿಲ್ಲಾಧಿಕಾರಿಗೆ ಪತ್ರ ಬರೆದಿದ್ದಾರೆ.

'ನಾನು ಯಾವುದೇ ಧರ್ಮದ ವಿರುದ್ಧ ಇಲ್ಲ. ಆದರೆ ಧಾರ್ಮಿಕ ಆಚರಣೆಗಳು ಬೇರೆಯವರಿಗೆ ತೊಂದರೆಗಳನ್ನು ಕೊಡುವಂತಿರಬಾರದು' ಎಂದು ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

'ನಿತ್ಯ ಬೆಳಿಗ್ಗೆ 5.30 ಗಂಟೆಗೆ ಸಮೀಪದ ಮಸೀದಿಯಲ್ಲಿ ಮೌಲ್ವಿಯು ಮೈಕ್‌ನಲ್ಲಿ ಜೋರಾಗಿ ಆಝಾನ್ ಮಾಡುವುದರಿಂದ ನನ್ನ ನಿದ್ರೆಗೆ ಧಕ್ಕೆಯಾಗುತ್ತಿದೆ. ಅಲ್ಲದೆ ಈದ್‌ಗೂ ಮುಂಚೆಯೇ ಅವರು 'ಸೆಹೇರಿ'ಯನ್ನು ಬೆಳಿಗ್ಗೆ 4 ಗಂಟೆಗೆ ಘೋಷಿಸುತ್ತಾರೆ. ಆಗೆಲ್ಲ ನಿದ್ರೆ ಭಂಗವಾಗುತ್ತದೆ. ಮತ್ತೆ ಎಷ್ಟೇ ಪ್ರಯತ್ನಿಸಿದರೂ ನಿದ್ರೆ ಬರುವುದಿಲ್ಲ. ಇದರಿಂದ ಇಡೀ ದಿನ ತಲೆನೋವು ಆವರಿಸುತ್ತದೆ' ಎಂದು ಹೇಳಿದ್ದಾರೆ.

'ಮೈಕ್ ಬಳಸದೆಯೇ ಆಝಾನ್ ಮಾಡಬಹುದಲ್ಲ' ಎಂದಿರುವ ಅವರು, ಧ್ವನಿ ಮಟ್ಟ ಎಷ್ಟಿರಬೇಕು ಎಂಬುದಕ್ಕೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್‌ನ ಕೆಲವು ತೀರ್ಪುಗಳನ್ನೂ ಉಲ್ಲೇಖಿಸಿದ್ದಾರೆ.

ಮೂಲಗಳ ಪ್ರಕಾರ, ಧ್ವನಿಯ ಮಟ್ಟವನ್ನು ಮಿತಿಯಲ್ಲೇ ಇರಿಸುವಂತೆ ಪೊಲೀಸರು ಮಸೀದಿ ಮೇಲ್ವಿಚಾರಕರಿಗೆ ಸೂಚಿಸಿದ್ದಾರೆ. ಅಲ್ಲದೆ ಕುಲಪತಿ ಮನೆ ಕಡೆ ಬರುವ ಮಸೀದಿಯ ಮೈಕ್‌ಗಳನ್ನು ಬಂದ್ ಮಾಡಿಸಿರುವುದಾಗಿ ಮೂಲಗಳು ತಿಳಿಸಿವೆ. ಕುಲಪತಿ ಪತ್ರಕ್ಕೆ ಮುಸ್ಲಿಂ ಧರ್ಮಗುರುಗಳಿಂದ ತೀಕ್ಷ್ಣ ಪ್ರತಿಕ್ರಿಯೆಗಳೂ ವ್ಯಕ್ತವಾಗಿವೆ. ದೇವಾಲಯಗಳಲ್ಲಿ ಭಜನೆ, ಕೀರ್ತನೆ, ಆರತಿ ಸಂದರ್ಭದಲ್ಲಿನ ಶಬ್ದ ಮಾಲಿನ್ಯದ ಬಗ್ಗೆ ಅವರು ಧ್ವನಿಯೆತ್ತಿದ್ದಾರೆ.

ಸಾವಿತ್ರಿಬಾಯಿ ಫುಲೆ ಪ್ರಶಸ್ತಿಯನ್ನು ಸಾಧಕ ಮಹಿಳೆಯರಿಗೆ ಬುಧವಾರ ಪ್ರದಾನ ಮಾಡಲಾಯಿತು. ಐಪಿಎಸ್ ಅಧಿಕಾರಿ ಡಿ. ರೂಪಾ, ಶಾಸಕಿ ಸೌಮ್ಯಾರೆಡ್ಡಿ, ಸಾಹಿತಿ ಕೆ.ಷರೀಫಾ, ಭೀಮಪುತ್ರಿ ಬ್ರಿಗೇಡ್ ಅಧ್ಯಕ್ಷೆ ರೇವತಿರಾಜ್, ರಾಜ್ಯ ಸಂಚಾಲಕ ಎ.ಆರ್.ಗೋವಿಂದಸ್ವಾಮಿ, ಸಾಮಾಜಿಕ ಕಾರ್ಯಕರ್ತ ಗೊಲ್ಲಹಳ್ಳಿ ಶಿವಪ್ರಸಾದ್, ಚಿಂತಕ ಯೋಗೇಶ್ ಮಾಸ್ಟರ್ ಇದ್ದರು ಪ್ರಜಾವಾಣಿ ಚಿತ್ರ

'ಶಿಕ್ಷಕರ ದಿನಾಚರಣೆ ಫುಲೆ ದಂಪತಿ ಹೆಸರಿನಲ್ಲಿ ನಡೆಯಬೇಕು'

ಬೆಂಗಳೂರು: 'ಭಾರತದಲ್ಲಿ ಶಿಕ್ಷಣ ವ್ಯವಸ್ಥೆ ರೂಪುಗೊಳ್ಳಲು ಕಾರಣರಾದ ಜ್ಯೋತಿಬಾ ಫುಲೆ ಮತ್ತು ಸಾವಿತ್ರಿಬಾಯಿ ಫುಲೆ ಹೆಸರಿನಲ್ಲಿ ಶಿಕ್ಷಕರ ದಿನಾಚರಣೆ ನಡೆಯಬೇಕು' ಎಂದು ಪ್ರಜಾ ಪರಿವರ್ತನ ಪಕ್ಷದ ಸಂಸ್ಥಾಪಕ ಬಿ.ಗೋಪಾಲ್ ಪ್ರತಿಪಾದಿಸಿದರು.

ಭೀಮಪುತ್ರಿ ಬ್ರಿಗೇಡ್ ಆಯೋಜಿಸಿದ್ದ ಸಾವಿತ್ರಿಬಾಯಿ ಫುಲೆ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮಾತನಾಡಿದ ಅವರು, 'ಎಲ್ಲ ಬಡವರಿಗೆ ಶಿಕ್ಷಣ ದೊರಕಿಸುವ ನಿಟ್ಟಿನಲ್ಲಿ ಶಾಲೆಗಳನ್ನು ತೆರೆಯಬೇಕು ಎಂದು ಹಂಟರ್ ಆಯೋಗದ ಮುಂದೆ ವಾದ ಮಾಡಿದವರು ಜ್ಯೋತಿಬಾ ಫುಲೆ' ಎಂದು ಹೇಳಿದರು.

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್, 'ಈ ದೇಶದ ಲಿಂಗಾನುಪಾತ ಗಮನಿಸಿದರೆ ಹೆಣ್ಣು ಮಕ್ಕಳಿಗೆ ಗರ್ಭದಲ್ಲೇ ಶೋಷಣೆ ಆಗುತ್ತಿದೆ ಎಂಬುದು ತಿಳಿಯುತ್ತದೆ. ಆಸ್ತಿಯಲ್ಲಿ ಪಾಲು ಸಿಗಬೇಕೆಂಬ ನಿಯಮವಿದ್ದರೂ, ಬಹುತೇಕ ಅಸ್ತಿ ಪುರುಷರ ಹೆಸರಿನಲ್ಲೇ ಇದೆ' ಎಂದರು.

ಶಾಸಕಿ ಸೌಮ್ಯಾರೆಡ್ಡಿ, ಐಪಿಎಸ್ ಅಧಿಕಾರಿ ಡಿ.ರೂಪಾ, ತೃತೀಯ ಲಿಂಗಿಗಳ ಪರ ಹೋರಾಟಗಾರ್ತಿ ಚಾಂದಿನಿ, ಮಿಂಟೋ ಕಣ್ಣಿನ ಆಸ್ಪತ್ರೆಯ ವೈದ್ಯಕೀಯ ನಿರ್ದೇಶಕಿ ಡಾ.ಬಿ. ಎಲ್. ಸುಜಾತಾ ರಾಥೋಡ್, ವಾಣಿ ವಿಲಾಸ ಆಸ್ಪತ್ರೆಯ ವೈದ್ಯಕೀಯ ನಿರ್ದೇಶಕಿ ಡಾ.ಗೀತಾ ಶಿವಮೂರ್ತಿ, ಸಾಹಿತಿ ಕೆ.ಷರೀಫಾ, ಹೋರಾಟಗಾರ್ತಿ ವಿನುತಾ ಮೂಲ, ಜಾನಪದ ಗಾಯಕಿ ವಡ್ಡಗೆರೆ ಕದಿರಮ್ಮ, ಪತ್ರಕರ್ತೆ ಶಶಿಕಲಾ, ರಂಗಕರ್ಮಿ ರಾಜೇಶ್ವರಿ, ಮನೋರಂಜನಿ, ಅನಾಥ ಶವಗಳನ್ನು ಸಂಸ್ಕಾರ ಮಾಡುವ ಸಾಮಾಜಿಕ ಕಾರ್ಯಕರ್ತೆ ಆಶಾ, ಶಿಕ್ಷಕಿ ಹರ್ಷಿಯಾ ಬಾನು, ಕ್ರೀಡಾಪಟುಗಳಾದ ದೀಪಿಕಾ, ಎನ್. ಸುನೈನಾ, ಬಿಎಂಟಿಸಿ ಚಾಲಕಿ ಪ್ರೇಮಾ ರಾಮಪ್ಪ ನಡಬಟ್ಟಿ, ಬುಡಕಟ್ಟು ಸಮುದಾಯಗಳ ಪರ ಹೋರಾಟಗಾರ್ತಿ ಎನ್. ವರಲಕ್ಷ್ಮಿ, ನಿರೂಪಕಿ ರೇಣುಕಾ, ಮಂಜುಳಾ ಕೊಂಡರಾಜನಹಳ್ಳಿ, ಉಪನ್ಯಾಸಕಿ ಪ್ರೇಮಪಲ್ಲವಿ, ಬೆಸ್ಕಾಂ ಲೈನ್ ವುಮನ್ ಟಿ. ಕಾವ್ಯಾ ಅವರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಸಚಿವ ಸಂಪುಟದಲ್ಲಿ ತೀರ್ಮಾನ

ಕೋರಮಂಗಲ ಕಣಿವೆ ರಾಜಕಾಲುವೆ ಟೆಂಡರ್‌ಗೆ ಅನುಮೋದನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋರಮಂಗಲ ಕಣಿವೆ ರಾಜಕಾಲುವೆಯನ್ನು ನಿರ್ಮಿಸುವ (ಸಿಟಿಜನ್ ವಾಟರ್ ವೇ ಪ್ರಾಜೆಕ್ಟ್) ಕಾಮಗಾರಿಯ ಟೆಂಡರ್‌ಗೆ ಸಚಿವ ಸಂಪುಟ ಸಭೆ ಘಟನೋತ್ತರ ಅನುಮೋದನೆ ನೀಡಿದೆ ಎಂದು ಮೂಲಗಳು ತಿಳಿಸಿವೆ.

ಈ ಯೋಜನೆಯಡಿ ಕೆ.ಆರ್. ಮಾರುಕಟ್ಟೆಯಿಂದ ಬೆಳ್ಳಂದೂರುವರೆಗೆ ರಾಜಕಾಲುವೆಯನ್ನು ನಿರ್ಮಿಸಲಾಗುವುದು. ಯೋಜನಾ ಅಂದಾಜು ವೆಚ್ಚ ₹169 ಕೋಟಿಗಳು.

ನಾಲೆ ನಿರ್ಮಾಣ ಯೋಜನೆಯು ವಿನ್ಯಾಸ, ಎಸ್‌ಟಿಪಿ ನಿರ್ಮಾಣ, ಹಾಲಿ ಇರುವ ಒಳಚರಂಡಿಯ ಜಾಲದ ದುರಸ್ಥಿ, ಪರಿಶೀಲನೆ, ಮಾರ್ಗದ ಮರು ವಿನ್ಯಾಸ, ಎಲ್ಲ ಒಳಚರಂಡಿಗಳನ್ನು ಈ ರಾಜಕಾಲುವೆಗೆ ತಿರುಗಿಸುವುದನ್ನು ಒಳಗೊಂಡಿದೆ. ಐದು ವರ್ಷಗಳ ಅವಧಿಯಲ್ಲಿ ನಿರ್ಮಾಣ, ಕಾರ್ಯಾಚರಣೆ ಮತ್ತು ವರ್ಗಾವಣೆ(ಬಿಒಟಿ) ಆಧಾರದಲ್ಲಿ ಯೋಜನೆ ಅನುಷ್ಠಾನಗೊಳಿಸಲಾಗುವುದು.

ವೆಂಕಟರಮಣೇಗೌಡ (ಸ್ಟಾರ್ ಇನ್‌ಫ್ರಾಟೆಕ್) ಎಂಬುವರು ₹179.50 ಕೋಟಿಗೆ, ಶ್ರೀನಿವಾಸರಾವ್ (ಬಿಎಸ್‌ಆರ್ ಇನ್‌ಫ್ರಾಟೆಕ್ ಇಂಡಿಯಾ ಲಿಮಿಟೆಡ್) ಎಂಬುವರು ₹186.03 ಕೋಟಿಗೆ ಬಿಡ್ ಸಲ್ಲಿಸಿದ್ದಾರೆ. ವೆಂಕಟರಮಣೇಗೌಡ ಅವರ ಟೆಂಡರ್ ಅನುಮೋದನೆ ನೀಡಿದ್ದು, ಅದರ ಸ್ಥಿರೀಕರಣಕ್ಕೆ ಸಂಪುಟ ಸಭೆಯಲ್ಲಿ ಪ್ರಸ್ತಾವನೆ ಇಡಲಾಯಿತು. ಇದಕ್ಕೆ ಒಪ್ಪಿಗೆ ಸಿಕ್ಕಿದೆ ಎಂದು ಮೂಲಗಳು ತಿಳಿಸಿವೆ.

ಬೆಂಗಳೂರು ಮಿಷನ್ 2022 ರಡಿ ಈ ಯೋಜನೆ ಕೈಗೆತ್ತಿಕೊಳ್ಳಲಾಗುವುದು. ಕಾಮಗಾರಿಯನ್ನು ನಿಗದಿ ಅವಧಿಯಲ್ಲಿ ಪೂರ್ಣಗೊಳಿಸಲು ಮುಂಗಾರಿಗೆ ಮೊದಲೇ ಆರಂಭಿಸಬೇಕು. ಇದಕ್ಕೆ ಆಡಳಿತಾತ್ಮಕ ಅನುಮೋದನೆ ಕಳೆದ ಡಿಸೆಂಬರ್‌ನಲ್ಲೇ ನೀಡಲಾಗಿದೆ.

ಈ ಯೋಜನೆಯ ಅನುಷ್ಠಾನದಿಂದ ಮಳೆ ನೀರುಗಾಲುವೆಗಳನ್ನು ಮಾಲಿನ್ಯದಿಂದರಕ್ಷಿಸಬಹುದು.ನಗರದನಾಗರೀಕರಿಗೆ ಉತ್ತಮ ವಿಹಾರ ಸ್ಥಳಗಳನ್ನು ನಿರ್ಮಿಸಲು ಸಾಧ್ಯವಾಗುತ್ತದೆ. ಅಂತರ್ಜಲ ಮಾಲಿನ್ಯವನ್ನೂ ತಪ್ಪಿಸಬಹುದು ಎಂದು ಸಭೆಯಲ್ಲಿ ವಿವರಿಸಲಾಯಿತು-.ಈ ಯೋಜನೆಗೆ ಈಗಾಗಲೇ ₹169 ಕೋಟಿ ಅನುದಾನ ಒದಗಿಸಲಾಗಿದೆ. ಹೆಚ್ಚುವರಿ ಮೊತ್ತವನ್ನು ಬಿಬಿಎಂಪಿ ಸ್ವಂತ ನಿಧಿಯಿಂದ ಭರಿಸಿಕೊಳ್ಳಲಿದೆ.

ಮಠಾಧಿಪತಿ ನೇಮಕಕ್ಕೆ ಒತ್ತಾಯ

ಬೆಂಗಳೂರು: ಯಲಹಂಕ ತಾಲ್ಲೂಕಿನ ಹುಣಸಮಾರನಹಳ್ಳಿ ಶ್ರೀ ಮದ್ದೇವಣಾಪುರ ದೇವ ಸಿಂಹಾಸನಾ ಮಠಕ್ಕೆ ಪೀಠಾಧ್ಯಕ್ಷರನ್ನು ಕೂಡಲೇ ನೇಮಕ ಮಾಡಬೇಕು ಎಂದು ಮಠದ ಅಧ್ಯಕ್ಷ ಎಸ್.ಎ. ರುದ್ರಾರಾಧ್ಯ ಒತ್ತಾಯಿಸಿದರು.

'ಮಠಕ್ಕೆ ಪೀಠಾಧಿಪತಿಯಾಗಿದ್ದ ಗುರುನಂಜೇಶ್ವರಸ್ವಾಮಿ ಅವರನ್ನು ದುರ್ವತನೆ ಕಾರಣಕ್ಕೆ ವಜಾಗೊಳಿಸಲಾಗಿದೆ. ಆದರೆ, ಈಗಲೂ ನಾನೇ ಪೀಠಾಧ್ಯಕ್ಷ ಎಂದು ಹೇಳಿಕೊಂಡು ಮಠದ ಆಸ್ತಿ ದೋಚುವ ಷಡ್ಯಂತ್ರ ನಡೆಸುತ್ತಿದ್ದಾರೆ' ಎಂದು ಸುದ್ದಿಗೋಷ್ಠಿಯಲ್ಲಿ ಬುಧವಾರ ಆರೋಪಿಸಿದರು.

ವಿವಿಧ ರಂಗಗಳಲ್ಲಿ ಸಾಧನೆ ಮಾಡಿದ ಮಹಿಳೆಯರನ್ನು ಕೃಷ್ಣಬೈರೇಗೌಡ ಸನ್ಮಾನಿಸಿದರು.

ಮನಸ್ಸುಗಳಲ್ಲಿ ಪರಿವರ್ತನೆಯಾಗದೆ ಸಮಾನತೆ ಅಸಾಧ್ಯ-ಕೃಷ್ಣಬೈರೇಗೌಡ

ಯಲಹಂಕ: 'ಮಹಿಳೆಯರು ಮತ್ತು ಪುರುಷರು ಒಂದೇ ಎಂಬ ಮನೋಭಾವ ನಮ್ಮ ಮನಸ್ಸುಗಳಲ್ಲಿ ಪರಿವರ್ತನೆಯಾಗದ ಹೊರತು, ಸಮಾಜದಲ್ಲಿ ಸಮಾನತೆ ಬರಲು ಸಾಧ್ಯವಿಲ್ಲ' ಎಂದು ಶಾಸಕ ಕೃಷ್ಣಬೈರೇಗೌಡ ಅಭಿಪ್ರಾಯಪಟ್ಟರು.

ಬ್ಯಾಟರಾಯನಪುರ ಕ್ಷೇತ್ರ ಕಾಂಗ್ರೆಸ್ ಪಕ್ಷದ ವತಿಯಿಂದ ಹುಣಸಮಾರನಹಳ್ಳಿಯಲ್ಲಿ ಆಯೋಜಿಸಿದ್ದ 'ನಮ್ಮೂರ ಸಾಧಕರು' ಕಾರ್ಯಕ್ರಮದಲ್ಲಿ ಹುಣಸಮಾರನಹಳ್ಳಿ, ಚಿಕ್ಕಜಾಲ ಹಾಗೂ ಸೊಣ್ಣಪ್ಪನಹಳ್ಳಿ ಗ್ರಾಮಪಂಚಾಯಿತಿ ವ್ಯಾಪ್ತಿಯ ಮಹಿಳಾ ಸಾಧಕಿಯರನ್ನು ಸನ್ಮಾನಿಸಿ ಮಾತನಾಡಿದರು.

ಮಾರ್ಚ್ ತಿಂಗಳನ್ನು ಸಾಧಕರ ಮಾಸವೆಂದು ಆಯ್ಕೆಮಾಡಿಕೊಂಡು, ಇದರಡಿಯಲ್ಲಿ ಯಾವುದೇ ರಂಗದಲ್ಲಿ ಅಥವಾ ಕೆಲಸದಲ್ಲಿ ಸಮಾಜಕ್ಕೆ ಮಾದರಿಯಾಗುವ ರೀತಿಯಲ್ಲಿ ಸಾಧನೆ ಮಾಡಿರುವ ಮಹಿಳೆಯರನ್ನು ಗುರುತಿಸಿ, ಸನ್ಮಾನ ಮಾಡುವ ಕಾರ್ಯಕ್ರಮವನ್ನು ಬಿಬಿಎಂಪಿ ವ್ಯಾಪ್ತಿಯ 7 ವಾರ್ಡ್ ಹಾಗೂ ಜಾಲಾ ಹೋಬಳಿಯ 10 ಗ್ರಾಮಪಂಚಾಯಿತಿಗಳ ವ್ಯಾಪ್ತಿಯಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಹೇಳಿದರು.

ರಾಜ್ಯ ಯುವ ಕಾಂಗ್ರೆಸ್ ಅಧ್ಯಕ್ಷ ರಕ್ಷಾ ರಾಮಯ್ಯ, ಸಾಮಾಜಿಕ ಕಾರ್ಯಕರ್ತೆ ಮೀನಾಕ್ಷಿ ಶೇಷಾದ್ರಿ, ಜಿಲ್ಲಾಪಂಚಾಯಿತಿ ಸದಸ್ಯರಾದ ಸಜಿತ ಅಶೋಕನ್, ಸಂಗೀತಾ ವಿಜಯಕುಮಾರ್, ಕಾಂಗ್ರೆಸ್ ಮುಖಂಡರಾದ ಕೆ.ಅಶೋಕನ್, ಎಂ. ಜಯಗೋಪಾಲಗೌಡ, ಎನ್.ಎನ್. ಶ್ರೀನಿವಾಸಯ್ಯ, ಉದಯಶಂಕರ್, ಜೆ.ಶ್ರೀನಿವಾಸ್ ಇದ್ದರು.

ಹಂಪಿ ಕನ್ನಡ ವಿಶ್ವವಿದ್ಯಾಲಯದ ವಿರುದ್ಧ ಕೃತಿಚೌರ್ಯ ಆರೋಪ

ಕುವೆಂಪು ಸಮಗ್ರ ಸಾಹಿತ್ಯದ 12ನೇ ಸಂಪುಟ ಮಾರಾಟಕ್ಕೆ ತಡೆ

ಪ್ರಜಾವಾಣಿ ವಾರ್ತೆ

ವಿಜಯನಗರ (ಹೊಸಪೇಟೆ): ಕೃತಿಚೌರ್ಯ ಪ್ರಕರಣಕ್ಕೆ ಸಂಬಂಧಿಸಿದಂತೆ ಹಂಪಿ ಕನ್ನಡ ವಿಶ್ವವಿದ್ಯಾಲಯ ಪ್ರಕಟಿಸಿರುವ ಕುವೆಂಪು ಸಮಗ್ರ ಸಾಹಿತ್ಯದ 12ನೇ ಸಂಪುಟದ ಮಾರಾಟಕ್ಕೆ ಬೆಂಗಳೂರಿನ ಹೆಚ್ಚುವರಿ ಸಿಟಿ ಸಿವಿಲ್ ಮತ್ತು ಸೆಷನ್ಸ್ ನ್ಯಾಯಾಲಯದ ನ್ಯಾಯಾಧೀಶ ಸದಾನಂದ ನಾಗಪ್ಪ ನಾಯಕ ಬುಧವಾರ (ಮಾ.17) ತಡೆಯಾಜ್ಞೆ ನೀಡಿದ್ದಾರೆ.

1974ರಲ್ಲಿ ಬರೆದ 'ಕುವೆಂಪು ಪತ್ರಗಳು' ಪುಸ್ತಕದಿಂದ ಕುವೆಂಪು ಅವರ 62 ಪತ್ರಗಳನ್ನು ಯಥಾವತ್ತಾಗಿ ತೆಗೆದುಕೊಂಡು ಹಂಪಿ ಕನ್ನಡ ವಿಶ್ವವಿದ್ಯಾಲಯವು ಕುವೆಂಪು ಸಮಗ್ರ ಸಾಹಿತ್ಯದ ಹನ್ನೆರಡನೇ ಸಂಪುಟದಲ್ಲಿ ಪ್ರಕಟಿಸಿ ಕೃತಿಚೌರ್ಯ ಮಾಡಿದೆ ಎಂದು ಆರೋಪಿಸಿ ಪುಸ್ತಕದ ಲೇಖಕ ಪುಸ್ತಕಮನೆ ಹರಿಹರಪ್ರಿಯ ಅವರು ನ್ಯಾಯಾಲಯದ ಮೊರೆ ಹೋಗಿದ್ದಾರೆ.

ಹಂಪಿ ಕನ್ನಡ ವಿಶ್ವವಿದ್ಯಾಲಯ

'ಈಗ ಸಮಗ್ರ ಕೃತಿಗಳಲ್ಲಿ 12ನೆಯ ಸಂಪುಟ ಮಾರಾಟ ಮಾಡದಂತೆ ನ್ಯಾಯಾಲಯ ತಡೆ ನೀಡಿದೆ. ಆನ್‌ಲೈನ್, ಆಫ್‌ಲೈನ್ ಹಾಗೂ ಯಾವುದೇ ಪುಸ್ತಕ ಮಳಿಗೆಯಲ್ಲಿ ಮಾರಾಟ ಮಾಡುವಂತಿಲ್ಲ. ಅಗತ್ಯ ಬಿದ್ದರೆ ಸಂಶೋಧನೆಯ ಉದ್ದೇಶಕ್ಕಾಗಿ ಮಾತ್ರ ಬಳಸಬಹುದು. ಈ ತಡೆಯಾಜ್ಞೆ ಆದೇಶ, ಪ್ರಕರಣ ಸಂಪೂರ್ಣ ಇತ್ಯರ್ಥಗೊಳ್ಳುವವರೆಗೆ ಜಾರಿಯಲ್ಲಿರುತ್ತದೆ ಎಂದು ನ್ಯಾಯಾಧೀಶರು ಆದೇಶದಲ್ಲಿ ತಿಳಿಸಿದ್ದಾರೆ' ಎಂದು ಪುಸ್ತಕಮನೆ ಹರಿಹರಪ್ರಿಯ ಅವರ ಪರ ವಾದ ಮಂಡಿಸುತ್ತಿರುವ ವಕೀಲ ಎಚ್. ಎಸ್. ವಿವೇಕಾನಂದ 'ಪ್ರಜಾವಾಣಿ'ಗೆ ತಿಳಿಸಿದ್ದಾರೆ.

'ನ್ಯಾಯಾಲಯದ ಆದೇಶ ಸ್ವಲ್ಪ ಸಮಾಧಾನ ತಂದಿದೆ. ವಿಶ್ವವಿದ್ಯಾಲಯ ಈಗಲಾದರೂ ಇದನ್ನು ಗಂಭೀರವಾಗಿ ತೆಗೆದುಕೊಳ್ಳಬೇಕು. ಕೃತಿಚೌರ್ಯ ಯಾವ ವಿಶ್ವವಿದ್ಯಾಲಯಕ್ಕೂ ಶೋಭೆ ತರುವುದಿಲ್ಲ' ಎಂದು ಪುಸ್ತಕಮನೆ ಹರಿಹರಪ್ರಿಯ ಪ್ರತಿಕ್ರಿಯಿಸಿದ್ದಾರೆ.

'ಸಂಪುಟ ಮಾರಾಟಕ್ಕೆ ನ್ಯಾಯಾಲಯ ತಡೆಯಾಜ್ಞೆ ನೀಡಿರುವ ವಿಷಯ ನನ್ನ ಗಮನಕ್ಕೆ ಬಂದಿಲ್ಲ' ಎಂದು ಕನ್ನಡ ವಿಶ್ವವಿದ್ಯಾಲಯದ ಕುಲಸಚಿವ ಪ್ರೊ.ಎ. ಸುಬ್ಬಣ್ಣ ರೈ ತಿಳಿಸಿದ್ದಾರೆ.

ಚಿತ್ರಾವಳಿ

ಸಂತೋಷ್ ಕುಮಾರ್ ಚಾರಿಟಬಲ್ ಟ್ರಸ್ಟ್, ಸಂಪುಟ ಟ್ರಸ್ಟ್ ಹಾಗೂ ಬಯಾಸ್ ಕಾರ್ಪೊರೇಷನ್ ಕಂಪನಿ ವತಿಯಿಂದ ಹಿಂದುಳಿದ ವರ್ಗಕ್ಕೆ ಸೇರಿದ 30 ವಿದ್ಯಾರ್ಥಿಗಳಿಗೆ ಅಕ್ಷಯನಗರದಲ್ಲಿ ಬುಧವಾರ ಉಚಿತವಾಗಿ ಸೈಕಲ್ ವಿತರಿಸಲಾಯಿತು. ಟ್ರಸ್ಟ್‌ನ ಪದಾಧಿಕಾರಿಗಳು, ಅಕ್ಷಯನಗರ ನಿವಾಸಿಗಳು ಹಾಗೂ ದಾನಿಗಳು ಇದ್ದರು

'ಸಾರ್ವಜನಿಕ ಸ್ವಾಮ್ಯದ ಕಾರ್ಖಾನೆಗಳನ್ನು ಖಾಸಗೀಕರಣ ಮಾಡುತ್ತಿರುವ ನಿರ್ಧಾರವನ್ನು ಸರ್ಕಾರ ಕೂಡಲೇ ಹಿಂಪಡೆಯಬೇಕು' ಎಂದು ಒತ್ತಾಯಿಸಿ ಖಾಸಗೀಕರಣ ವಿರೋಧಿ ವೇದಿಕೆ ನೇತೃತ್ವದಲ್ಲಿ ಕಾರ್ಮಿಕರು ನಗರದಲ್ಲಿ ಮಂಗಳವಾರ ಪ್ರತಿಭಟನಾ ಮೆರವಣಿಗೆ ನಡೆಸಿದರು

'ನ್ಯಾಯಮೂರ್ತಿ ಸದಾಶಿವ ಆಯೋಗದ ವರದಿಯನ್ನು ವಿಧಾನಸಭೆಯಲ್ಲಿ ಮಂಡಿಸಿ ತ್ವರಿತವಾಗಿ ಅನುಷ್ಠಾನಕ್ಕೆ ತರಲು ರಾಜ್ಯ ಸರ್ಕಾರ ಕ್ರಮ ಕೈಗೊಳ್ಳಬೇಕು' ಎಂದು ಒತ್ತಾಯಿಸಿ ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾ ಸದಸ್ಯರು ನಗರದಲ್ಲಿ ಮಂಗಳವಾರ ಪ್ರತಿಭಟನೆ ನಡೆಸಿದರು – ಪ್ರಜಾವಾಣಿ ಚಿತ್ರಗಳು

ಬಸಂತಕುಮಾರ್ ಪಾಟೀಲ, ನರಸಿಂಹಯ್ಯಗೆ ಕಸಾಪ ದತ್ತಿ ಪ್ರಶಸ್ತಿ

ಬಸಂತ ಕುಮಾರ್

ನರಸಿಂಹಯ್ಯ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) ನೀಡುವ 'ಡಾ. ರಾಜ್‌ಕುಮಾರ್ ದತ್ತಿ ಪ್ರಶಸ್ತಿ'ಗೆ ಚಲನಚಿತ್ರ ನಟ, ನಿರ್ಮಾಪಕ ಬಸಂತಕುಮಾರ್ ಪಾಟೀಲ್ ಹಾಗೂ ರಂಗ ಕಲಾವಿದ ಕೆ. ನರಸಿಂಹಯ್ಯ ಆಯ್ಕೆಯಾಗಿದ್ದಾರೆ.

ಪರಿಷತ್ತಿನ ಅಧ್ಯಕ್ಷ ಮನು ಬಳಿಗಾರ್ ನೇತೃತ್ವದ ಸಮಿತಿಯು ಬುಧವಾರ ಈ ಆಯ್ಕೆ ನಡೆಸಿದೆ. ಪ್ರಶಸ್ತಿಯು ತಲಾ ₹ 30 ಸಾವಿರ, ಫಲಕವನ್ನು ಒಳಗೊಂಡಿದೆ. ಎಂದು ಕಸಾಪ ಗೌರವ ಕಾರ್ಯದರ್ಶಿ ಕೆ. ರಾಜಕುಮಾರ್ ತಿಳಿಸಿದ್ದಾರೆ.

'ಯಡಿಯೂರಪ್ಪ ಹಿಂದುಳಿದ ಜಾತಿಗಳ ವಿರೋಧಿ' • ಕರ್ನಾಟಕ ರಾಜ್ಯ ಹಿಂದುಳಿದ ಜಾತಿಗಳ ಒಕ್ಕೂಟ ಪ್ರತಿಭಟನೆ

ಸಬಲರಿಗೆ ಮೀಸಲಾತಿ ಸಲ್ಲ: ಸಿದ್ದರಾಮಯ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರವರ್ಗ 2ಎ ಅಡಿ ಲಿಂಗಾಯತ ಪಂಚಮಸಾಲಿ ಸಮುದಾಯವನ್ನು ಸೇರ್ಪಡೆಗೊಳಿಸುವುದಾಗಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಭರವಸೆ ನೀಡಿರುವುದು ಸಾಮಾಜಿಕ ನ್ಯಾಯಕ್ಕೆ ವಿರುದ್ಧ ಎಂದು ಆರೋಪಿಸಿವು ನಗರದಲ್ಲಿ ಬುಧವಾರ ಪ್ರತಿಭಟನೆ ನಡೆಸಿತು.

ನಗರದ ಮೌರ್ಯ ವೃತ್ತದಲ್ಲಿ ನಡೆದ ಪ್ರತಿಭಟನೆ ವೇಳೆ ಮಾತನಾಡಿದ ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, 'ವಿವಿಧ ಜಾತಿಗಳಿಗೆ ಸಂಬಂಧಿಸಿದ 16 ಅಭಿವೃದ್ಧಿ ನಿಗಮಗಳು ಇವೆ. ಈ ಪೈಕಿ ವೀರಶೈವ ಲಿಂಗಾಯತ ಮತ್ತು ಒಕ್ಕಲಿಗ ಅಭಿವೃದ್ಧಿ ನಿಗಮಗಳಿಗೆ ತಲಾ ₹500 ಕೋಟಿ ಘೋಷಿಸಿ, ನೂರಾರು ಹಿಂದುಳಿದ ಜಾತಿಗಳು ಇರುವ 14 ನಿಗಮಗಳಿಗೆ ಕೇವಲ ₹500 ಕೋಟಿ ನೀಡಿದ್ದಾರೆ. ಇದು ಹಿಂದುಳಿದ ಜಾತಿಗಳಿಗೆ ಮಾಡಿದ ದ್ರೋಹ' ಎಂದು ದೂರಿದರು.

'ವೀರಶೈವ, ಒಕ್ಕಲಿಗ ಅಭಿವೃದ್ಧಿ ನಿಗಮ ಮಾಡಿರುವುದಕ್ಕೆ ವಿರೋಧವಿಲ್ಲ. ಆದರೆ, ಎಲ್ಲ ವರ್ಗಗಳನ್ನು ಸಮಾನವಾಗಿ ಕಾಣಬೇಕಿತ್ತು. ಬಿಜೆಪಿ ಸರ್ಕಾರದಲ್ಲಿ ಸಮಬಾಳು, ಸಮಪಾಲು ಎನ್ನುವುದಕ್ಕ ಭಾಷಣಕ್ಕೆ ಸೀಮಿತವಾಗಿದೆ' ಎಂದರು.

'ಹಿಂದುಳಿದ ಜಾತಿಗಳ ಒಕ್ಕೂಟವು ರಾಜ್ಯದಾದ್ಯಂತ ಈ ಹೋರಾಟವನ್ನು ತೀವ್ರಗೊಳಿಸಬೇಕು. ಈ ಹೋರಾಟಕ್ಕೆ ನನ್ನ ಬೆಂಬಲ ಇದೆ' ಎಂದೂ ಹೇಳಿದರು.

ಒಕ್ಕೂಟದ ಅಧ್ಯಕ್ಷ ಕೆ.ಎಂ. ರಾಮಚಂದ್ರಪ್ಪ, 'ಎಚ್. ಕಾಂತರಾಜು ನೇತೃತ್ವದಲ್ಲಿ ನಡೆದ ಜಾತಿವಾರು ಸಮೀಕ್ಷೆ ವರದಿಯನ್ನು ಕೂಡಲೇ ಬಿಡುಗಡೆ ಮಾಡಬೇಕು. ಡಿ. ದೇವರಾಜು ಅರಸು ನಿಗಮಕ್ಕೆ ₹2,000 ಕೋಟಿ ಅನುದಾನ ಬಿಡುಗಡೆ ಮಾಡಬೇಕು' ಎಂದರು.

'ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನಕ್ಕಾಗಿ ₹100 ಕೋಟಿ ಮಾತ್ರ ಒದಗಿಸಲಾಗಿದೆ. 2020–21ನೇ ಸಾಲಿನಲ್ಲಿ ₹395 ಕೋಟಿ ಒದಗಿಸಲಾಗಿತ್ತು. ಕಡಿಮೆ ಮಾಡಿರುವ ಅನುದಾನವನ್ನೂ ಕೂಡಲೇ ಘೋಷಿಸಬೇಕು' ಎಂದರು.

ಕಾಂಗ್ರೆಸ್ ಮುಖಂಡ ಎಚ್.ಎಂ. ರೇವಣ್ಣ, 'ಮೀಸಲಾತಿ ಒದಗಿಸುತ್ತೇವೆ ಎಂದು ಹಲವು ಸಮುದಾಯಗಳಿಗೆ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಭರವಸೆ ನೀಡಿದರು. ಅದಕ್ಕೆಂದೇ ಹಿಂದುಳಿದ ವರ್ಗಗಳ ಆಯೋಗ ಇದೆ. ಅದು ಪರಿಶೀಲಿಸಲಿದೆ ಎಂದೂ ಹೇಳಲಿಲ್ಲ. ಹೀಗಾಗಿ ಗೊಂದಲಗಳು ನಿರ್ಮಾಣವಾಗುತ್ತಿವೆ. ಭರವಸೆ ಈಡೇರಿಸಬೇಕು ಎಂದು ಎಲ್ಲ ಸಮುದಾಯದವರು ಹೋರಾಟ ಮಾಡುತ್ತಿದ್ದಾರೆ' ಎಂದರು.

ಒಕ್ಕೂಟದ ಸದಸ್ಯ 'ಮುಖ್ಯಮಂತ್ರಿ' ಚಂದ್ರು, 'ಪ್ರಬಲ ಸಮುದಾಯಗಳಿಗೆ 2ಎ ಮೀಸಲಾತಿ ಒದಗಿಸುವುದು ಸರಿಯಲ್ಲ. ಸರ್ಕಾರ ಈ ನಿಟ್ಟಿನಲ್ಲಿ ಮುಂದುವರಿದರೆ ನ್ಯಾಯಾಲಯದ ಮೊರೆ ಹೋಗುವ ಚಿಂತನೆ ಇದೆ' ಎಂದರು.

ಒಕ್ಕೂಟದ ಉಪಾಧ್ಯಕ್ಷರಾದ ಆರ್. ವೇಣುಗೋಪಾಲ, ಕೆ. ವೆಂಕಟಸುಬ್ಬರಾಜು, ಸೈದಪ್ಪ ಕೆ. ಗುತ್ತೇದಾರ್ ಇದ್ದರು.

ಪ್ರತಿಭಟನೆ ವೇಳೆ ಎಚ್‌.ಎಂ. ರೇವಣ್ಣ ಮಾತನಾಡಿದರು. ಕೆ.ಎಂ. ರಾಮಚಂದ್ರಪ್ಪ, ಎಂ.ಡಿ. ಲಕ್ಷ್ಮೀನಾರಾಯಣ, ಸಿದ್ದರಾಮಯ್ಯ, ಆರ್‌. ವೇಣುಗೋಪಾಲ, ಕೆ. ವೆಂಕಟಸುಬ್ಬರಾಜು ಇತರರು ಇದ್ದರು —ಪ್ರಜಾವಾಣಿ ಚಿತ್ರ

'ಮೀಸಲಾತಿಗೆ ಒತ್ತಾಯಿಸುವ ಸ್ವಾಮೀಜಿಗಳನ್ನು ಬಂಧಿಸಿ'

ಮೈಸೂರು: ಬಲಾಢ್ಯ ಜಾತಿಗಳಿಗೆ ಮೀಸಲಾತಿ ನೀಡಬೇಕು ಎಂದು ಒತ್ತಾಯಿಸುತ್ತಿರುವ ಸ್ವಾಮೀಜಿಗಳನ್ನು ಬಂಧಿಸಬೇಕು ಎಂದು ನಿವೃತ್ತ ಪ್ರಾಧ್ಯಾಪಕ ಮಹೇಶ್‌ಚಂದ್ರಗುರು ಆಗ್ರಹಿಸಿದರು.

ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ಹಾಗೂ ವಿವಿಧ ಸಂಘಟನೆಗಳ ವತಿಯಿಂದ ಬುಧವಾರ ಇಲ್ಲಿ ನಡೆದ 'ಕವಲುದಾರಿಯಲ್ಲಿ ಮೀಸಲಾತಿ' ಕುರಿತ ಸಮಾಲೋಚನಾ ಸಭೆಯಲ್ಲಿ ಅವರು ಮಾತನಾಡಿದರು.

'ಸದ್ಯ, ರಾಜ್ಯದಲ್ಲಿ ನಡೆಯುತ್ತಿರುವ ಮೀಸಲಾತಿ ಚಳವಳಿಯು ಸರ್ಕಾರಿ ಪ್ರಾಯೋಜಿತ ಚಳವಳಿ ಆಗಿದೆ. ಇಲ್ಲಿಯವರೆಗೆ ಭೂಮಿ, ಬಂಡವಾಳದ ಸಿಂಹಪಾಲನ್ನು ಅನುಭವಿಸಿದ ಲಿಂಗಾಯತರು, ಒಕ್ಕಲಿಗರು ಮೀಸಲಾತಿ ಕೇಳುತ್ತಿರುವುದು ಸರಿಯಲ್ಲ' ಎಂದು ಖಂಡಿಸಿದರು.

ಪ್ರೊ.ಕಾಳೇಗೌಡ ನಾಗವಾರ ಮಾತನಾಡಿ, 'ಎಲ್ಲ ರಾಜಕೀಯ ಪಕ್ಷಗಳು ಕಾರ್ಪೊರೇಟ್ ಧಣಿಗಳ ಕಾವಲುನಾಯಿಗಳಾಗಿದ್ದು, ಬಡವರ ಕೂಗನ್ನು ಯಾರೂ ಆಲಿಸುತ್ತಿಲ್ಲ' ಎಂದು ಕಿಡಿಕಾರಿದರು.

ವೇದಿಕೆ ಅಧ್ಯಕ್ಷ ಕೆ.ಎಸ್.ಶಿವರಾಮು, 'ಒಂದು ವೇಳೆ ಬಲಾಢ್ಯ ಜಾತಿಗಳಿಗೆ ಮೀಸಲಾತಿ ನೀಡಿದರೆ, ಸಂಸತ್ತಿಗೆ ಮುತ್ತಿಗೆ ಹಾಕಲಾಗುವುದು. ಪೇಜಾವರ ಶ್ರೀ ಅವರು ಅಂತರ್ಜಾತಿ ವಿವಾಹವನ್ನು ವಿರೋಧಿಸುವ ಮೂಲಕ ಹಿಂದೂ ಧರ್ಮದ ನಾಶಕ್ಕೆ ಮುನ್ನುಡಿ ಬರೆಯುತ್ತಿದ್ದಾರೆ. ಇವರ ಹೇಳಿಕೆ ಸರಿಯಲ್ಲ' ಎಂದು ಟೀಕಿಸಿದರು.

ಅಸಮಾನತೆ ನಿರ್ಮೂಲನೆಗೆ ಜಾತಿ ಹೆಸರಿನ ನಿಗಮ: ಸರ್ಕಾರ ಸಮರ್ಥನೆ

ಬೆಂಗಳೂರು: ಜಾತಿಗೊಂದು ನಿಗಮ ಸ್ಥಾಪನೆಯ ಹಿಂದೆ ಅಸಮಾನತೆ ನಿರ್ಮೂಲನೆಯ ಉದ್ದೇಶ ಇದೆ ಎಂಬ ಸಮರ್ಥನೆಯನ್ನು ಹೈಕೋರ್ಟ್‌ಗೆ ಸರ್ಕಾರ ಸಲ್ಲಿಸಿದೆ.

ಜಾತಿಗೊಂದು ನಿಗಮ ಮತ್ತು ಮಂಡಳಿ ಸ್ಥಾಪಿಸುವುದನ್ನು ಪ್ರಶ್ನಿಸಿ ಸಲ್ಲಿಕೆಯಾಗಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠ ವಿಚಾರಣೆ ನಡೆಸುತ್ತಿದೆ.

'ಲಿಂಗಾಯತ, ಮರಾಠಾ, ಬ್ರಾಹ್ಮಣ, ಆರ್ಯವೈಶ್ಯ ಅಭಿವೃದ್ಧಿ ನಿಗಮಗಳ ಸ್ಥಾಪನೆ ಪ್ರಶ್ನಿಸಿರುವ ಅರ್ಜಿಗಳಿಗೆ ಆಕ್ಷೇಪಣೆ ಸಲ್ಲಿಸಿರುವ ಸರ್ಕಾರ, ಸಂವಿಧಾನದ 162ನೇ ಪರಿಚ್ಛೇದದ ಅಡಿಯಲ್ಲಿ ಸಾಂವಿಧಾನಿಕ ಅಧಿಕಾರ ಚಲಾಯಿಸಲಾಗಿದೆ' ಎಂದು ಆಕ್ಷೇಪಣೆಯಲ್ಲಿ ತಿಳಿಸಿದೆ.

ದುರ್ಬಲ ವರ್ಗದವರ ಸಾಮಾಜಿಕ ಸ್ಥಾನಮಾನ, ಶಿಕ್ಷಣ ಮಟ್ಟ, ಸಾಂಸ್ಕೃತಿಕ ಮತ್ತು ಆರ್ಥಿಕ ಹಿಂದುಳಿದಿರುವಿಕೆ ಗಮನದಲ್ಲಿ ಇಟ್ಟುಕೊಂಡು ನಿಗಮಗಳನ್ನು ಸ್ಥಾಪಿಸಲಾಗಿದೆ ಎಂದು ವಿವರಿಸಿದೆ.

'ಬರಲಿರುವ ಉಪಚುನಾವಣೆ ಗಮನದಲ್ಲಿ ಇಟ್ಟುಕೊಂಡು ಈ ನಿಗಮಗಳನ್ನು ಸ್ಥಾಪಿಸಲಾಗಿದೆ ಎಂದು ಅರ್ಜಿದಾರರು ವಾದಿಸಿದ್ದಾರೆ. ಆದರೆ, ಚುನಾವಣೆ ಘೋಷಣೆಗೂ ಮೊದಲೇ ನಿಗಮ ಮಂಡಳಿಗಳು ಅಸ್ತಿತ್ವದಲ್ಲಿವೆ. ಕರ್ನಾಟಕ ಕ್ರಿಶ್ಚಿಯನ್ ಅಭಿವೃದ್ಧಿ ಮಂಡಳಿ, ಕರ್ನಾಟಕ ಉಪ್ಪಾರ ಅಭಿವೃದ್ಧಿ ನಿಗಮ, ವಿಶ್ವಕರ್ಮ ಅಭಿವೃದ್ಧಿ ನಿಗಮಗಳನ್ನು ಕಳೆದ 15 ವರ್ಷಗಳಲ್ಲಿ ಸ್ಥಾಪಿಸಲಾಗಿದೆ' ಎಂದು ಆಕ್ಷೇಪಣೆಯಲ್ಲಿ ಎಂದು ಸರ್ಕಾರ ತಿಳಿಸಿದೆ.

'ಬ್ರಾಹ್ಮಣ, ಮಾರಾಠಾ, ವೀರಶೈವ ಲಿಂಗಾಯತ, ಆರ್ಯವೈಶ್ಯ, ವಿಶ್ವಕರ್ಮ ಸಮುದಾಯದ ಪ್ರತಿಯೊಬ್ಬ ವ್ಯಕ್ತಿಯೂ ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕವಾಗಿ ಮುಂದಿದ್ದಾರೆ ಎಂದು ಹೇಳಲು ಆಗುವುದಿಲ್ಲ. ಅಂತವರಿಗೆ ಸಹಾಯ ಹಸ್ತ ಚಾಚುವುದು ಸರ್ಕಾರ ಕರ್ತವ್ಯ' ಎಂದು ಆಕ್ಷೇಪಣೆಯಲ್ಲಿ ವಿವರಿಸಿದೆ. ವಿಚಾರಣೆಯನ್ನು ಪೀಠ ಮಾ.31ಕ್ಕೆ ಮುಂದೂಡಿತು.

'ರಾಜಕೀಯದಲ್ಲಿಯೂ ಮೀಸಲಾತಿ ಇರಲಿ'

'ಉದ್ಯೋಗ ಮತ್ತು ಶಿಕ್ಷಣಕ್ಕಾಗಿ ಮೀಸಲಾತಿ ಬೇಕು ಎಂಬುದರ ಜೊತೆಗೆ ರಾಜಕೀಯ ಮೀಸಲಾತಿಗೂ ಹೋರಾಟ ನಡೆಯಬೇಕು. ಲೋಕಸಭೆ, ವಿಧಾನಸಭೆಯಲ್ಲಿಯೂ ಅರ್ಹರಿಗೆ ಮೀಸಲಾತಿ ನೀಡುವ ವ್ಯವಸ್ಥೆ ಬರಬೇಕು' ಎಂದು ಸಿದ್ದರಾಮಯ್ಯ ಹೇಳಿದರು.

'ಮೀಸಲಾತಿ ಕುರಿತು ಗೊಂದಲಗಳಿಗೆ ಆರ್‌ಎಸ್‌ಎಸ್‌ನವರೇ ಕಾರಣ. ಅವರು ಯಾವತ್ತೂ ಮೀಸಲಾತಿ ಪರ ಇದ್ದವರಲ್ಲ. ಈಗ ಜಾತಿ–ಜಾತಿಗಳ ನಡುವೆ ಗೊಂದಲ ನಿರ್ಮಾಣ ಮಾಡುತ್ತಿದ್ದಾರೆ' ಎಂದೂ ದೂರಿದರು.

'ಕೃಷಿ ಕಾಯ್ದೆ ಸೇರಿ ಸಮಾಜಮುಖಿ ವಿಷಯಗಳ ಬಗ್ಗೆ ಚರ್ಚೆ'

ನಾಳೆಯಿಂದ ಆರ್‌ಎಸ್‌ಎಸ್‌ನ ಪ್ರತಿನಿಧಿ ಸಭೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಷ್ಟ್ರೀಯ ಸ್ವಯಂ ಸೇವಕ ಸಂಘದ (ಆರ್‌ಎಸ್‌ಎಸ್) ಮುಂದಿನ ಕಾರ್ಯಸೂಚಿ ಹಾಗೂ ಕಾರ್ಯಕ್ರಮಗಳನ್ನು ನಿರೂಪಿಸುವ ಮಹತ್ವದ ವಾರ್ಷಿಕ ಅಧಿವೇಶನ 'ಅಖಿಲ ಭಾರತೀಯ ಪ್ರತಿನಿಧಿ ಸಭೆ' ಇದೇ 19 ಮತ್ತು 20ರಂದು ನಡೆಯಲಿದೆ. ಈ ಬಾರಿ ಕೇಂದ್ರದ ಕೃಷಿ ಕಾಯ್ದೆ, ಪರಿಸರ ಸಂರಕ್ಷಣೆ ಸೇರಿದಂತೆ ಇನ್ನಿತರ ಸಮಾಜಮುಖಿ ವಿಷಯಗಳ ಕುರಿತು ಚರ್ಚೆ ನಡೆಯಲಿದೆ.

ಬುಧವಾರ ಇಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಆರ್‌ಎಸ್‌ಎಸ್‌ನ ಅಖಿಲ ಭಾರತೀಯ ಪ್ರಚಾರ ಪ್ರಮುಖರಾದ ಅರುಣ್ ಕುಮಾರ್ ಮಾತನಾಡಿ, 'ಎರಡು ದಿನಗಳ ಸಭೆಯು ಮಾಗಡಿ ರಸ್ತೆಯಲ್ಲಿರುವ ಚನ್ನೇನಹಳ್ಳಿಯ ಜನಸೇವಾ ವಿದ್ಯಾಕೇಂದ್ರದಲ್ಲಿ ನಡೆಯಲಿದೆ. ಪ್ರತಿ ಬಾರಿ 1,500 ಪ್ರತಿನಿಧಿಗಳು ಭಾಗವಹಿಸುತ್ತಿದ್ದರು. ಕೋವಿಡ್ ಕಾರಣ ಈ ಬಾರಿ 450 ಪ್ರತಿನಿಧಿಗಳಿಗೆ ಮಾತ್ರ ಭಾಗವಹಿಸಲು ಅವಕಾಶ ನೀಡಲಾಗಿದೆ. ಉಳಿದವರು ವರ್ಚುವಲ್ ಮಾದರಿಯಲ್ಲಿ ಸೇರಿಕೊಳ್ಳಲಿದ್ದಾರೆ. ಈ ಸಭೆಯಲ್ಲಿ ರಾಜಕೀಯ ವಿಷಯಗಳ ಬಗ್ಗೆ ಚರ್ಚೆಗಳು ನಡೆಯುವುದಿಲ್ಲ. ಮುಂದಿನ ಮೂರು ವರ್ಷ ನಡೆಸಬಹುದಾದ ಸಮಾಜಮುಖಿ ವಿಷಯಗಳ ಕುರಿತು ಚರ್ಚೆ ನಡೆಸಲಾಗುವುದು' ಎಂದು ತಿಳಿಸಿದರು.

'ಸಭೆಯು ಈ ಬಾರಿ ನಾಗಪುರದಲ್ಲಿ ನಡೆಯಬೇಕಾಗಿತ್ತು. ಆದರೆ, ಅಲ್ಲಿ ಕೋವಿಡ್ ಪ್ರಕರಣಗಳು ಏರಿಕೆ ಕಂಡಿರುವ ಕಾರಣ ಬೆಂಗಳೂರಿನಲ್ಲಿಯೇ ಆಯೋಜಿಸಲಾಗಿದೆ. ಮೂರು ದಿನಗಳು ನಡೆಯುತ್ತಿದ್ದ ಸಭೆಯನ್ನು ಈ ಬಾರಿ ಎರಡು ದಿನಗಳಿಗೆ ಸೀಮಿತಗೊಳಿಸಲಾಗಿದೆ. ಸರಸಂಘಚಾಲಕರಾದ ಮೋಹನ್ ಭಾಗವತ್ ಮತ್ತು ಸರಕಾರ್ಯವಾಹರಾದ ಸುರೇಶ್ (ಭಯ್ಯಾಜೀ) ಜೋಷಿಯವರು ಈ ಸಭೆಯ ಕಲಾಪಗಳನ್ನು ನಡೆಸಲಿದ್ದಾರೆ. ಕಳೆದ ಮೂರು ವರ್ಷ ಸಂಘ ಕೈಗೊಂಡ ಕಾರ್ಯಚಟುವಟಿಕೆಯನ್ನೂ ಮೌಲ್ಯಮಾಪನ ಮಾಡಲಾಗುತ್ತದೆ. ಸಂಘದ ವಾರ್ಷಿಕ ವರದಿ, ಸಂಘಟನೆಯ ವಿಸ್ತಾರ, ಹೊಸ ಆಯಾಮಗಳು, ಕಾರ್ಯಕ್ರಮಗಳು, ಮುಂಬರುವ ವರ್ಷದ ಯೋಜನೆ ಇತ್ಯಾದಿ ವಿಷಯಗಳು ಸಭೆಯಲ್ಲಿ ಚರ್ಚೆಗೆ ಬರಲಿದೆ' ಎಂದು ವಿವರಿಸಿದರು.

ಸರಕಾರ್ಯವಾಹರ ಆಯ್ಕೆ

ಆರ್‌ಎಸ್‌ಎಸ್‌ನ ದಕ್ಷಿಣ ಮಧ್ಯ ಕ್ಷೇತ್ರೀಯ ಕ್ಷೇತ್ರ ಕಾರ್ಯವಾಹ ನಾ. ತಿಪ್ಪೇಸ್ವಾಮಿ ಮಾತನಾಡಿ, 'ಸರಕಾರ್ಯವಾಹರ ಆಯ್ಕೆಗೆ ಇದೇ ವೇಳೆ ಚುನಾವಣೆ ನಡೆಸಲಾಗುತ್ತದೆ. 289 ಅಖಿಲ ಭಾರತೀಯ ಪ್ರತಿನಿಧಿಗಳಿದ್ದು, ಇವರು ಮತದಾನ ಮಾಡಲಿದ್ದಾರೆ. ಸಾಧಾರಣವಾಗಿ ಸರ್ವಾನುಮತದಿಂದ ಆಯ್ಕೆ ನಡೆಯುತ್ತದೆ' ಎಂದರು.

'ಮುಂದಿನ ಮೂರು ವರ್ಷದ ಕಾರ್ಯಯೋಜನೆಯನ್ನು ಸಭೆಯಲ್ಲಿ ರೂಪಿಸಲಾಗುತ್ತದೆ. ನಮ್ಮ ಕಾರ್ಯದ ವಿಸ್ತಾರ ಭೌಗೋಳಿಕವಾಗಿ ಮಂಡಲದವರೆಗೂ ಆಗಬೇಕು. ನಗರ ಪ್ರದೇಶದಲ್ಲಿ 10 ಸಾವಿರ ಜನಸಂಖ್ಯೆಗೆ ವಸತಿ ಹಾಗೂ 2 ಸಾವಿರ ಜನಸಂಖ್ಯೆಗೆ ಉಪವಸತಿ ಮಟ್ಟದಲ್ಲಿ ಕಾರ್ಯದ ಬೆಳವಣಿಗೆ ದೃಷ್ಟಿಯಲ್ಲಿ ಏನು ಮಾಡಬೇಕು ಎಂದು ಚರ್ಚೆ ನಡೆಸಲಾಗುತ್ತದೆ' ಎಂದರು.

ಅಖಿಲ ಭಾರತೀಯ ಸಹ ಪ್ರಚಾರ ಪ್ರಮುಖರಾದ ನರೇಂದ್ರ ಠಾಕೂರ್, ಸುನಿಲ್ ಅಂಬೇಕರ್, ಕರ್ನಾಟಕ ದಕ್ಷಿಣ ಪ್ರಾಂತದ ಪ್ರಚಾರ ಪ್ರಮುಖ್ ಇ.ಎಸ್. ಪ್ರದೀಪ್ ಇದ್ದರು.

'ಮೀಸಲಾತಿಗೆ ವಿರೋಧ ಇಲ್ಲ'

'ಸಂವಿಧಾನದ ವ್ಯವಸ್ಥೆಯಡಿ ಕಲ್ಪಿಸಲಾಗುವ ಮೀಸಲಾತಿಗೆ ನಮ್ಮ ವಿರೋಧವಿಲ್ಲ. ಈ ಬಗ್ಗೆ ಹಲವಾರು ಬಾರಿ ಸ್ಪಷ್ಟನೆ ನೀಡಲಾಗಿದೆ. ಸಂಘವು ಸಂವಿಧಾನದ ಅಡಿಯಲ್ಲಿ ಕಾರ್ಯನಿರ್ವಹಿಸಲಿದೆ. ಈ ಬಗ್ಗೆ ಯಾವುದೇ ಗೊಂದಲವಿಲ್ಲ' ಎಂದು ಅರುಣ್ ಕುಮಾರ್ ತಿಳಿಸಿದರು.

'ಕೋವಿಡ್ ಕಾಣಿಸಿಕೊಂಡ ಬಳಿಕ ಹಲವಾರು ಸರ್ಕಾರೇತರ ಸಂಸ್ಥೆಗಳು ಸಂಘದ ಕಾರ್ಯವ್ಯಾಪ್ತಿಗೆ ಬಂದು, ಸಮಾಜಮುಖಿ ಕೆಲಸಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿವೆ. ಈ ವೇಳೆ ಭಾರತೀಯ ಜೀವನ ಪದ್ಧತಿ, ಆಯುರ್ವೇದ, ಯೋಗದ ಮಹತ್ವ ಕೂಡ ಅರಿವಿಗೆ ಬಂದಿದೆ. ಮುಂದಿನ ದಿನಗಳಲ್ಲಿ ಸಂಘಟನೆಗಳು ಹಾಗೂ ವ್ಯಕ್ತಿಗಳನ್ನು ಒಟ್ಟಾಗಿ ಕರೆದೊಯ್ಯಲು ಕೂಡ ಕಾರ್ಯಯೋಜನೆ ರೂಪಿಸಲಾಗುತ್ತದೆ' ಎಂದರು.

ಹನಿಟ್ರ್ಯಾಪ್: ಮೂಲ ವಿಡಿಯೊಗಾಗಿ ಶೋಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಿ.ಡಿ. ಪ್ರಕರಣದ ತನಿಖೆ ಚುರುಕುಗೊಳಿಸಿರುವ ವಿಶೇಷ ತನಿಖಾ ತಂಡದ (ಎಸ್‌ಐಟಿ) ಅಧಿಕಾರಿಗಳು, ಹನಿಟ್ರ್ಯಾಪ್ ಪ್ರಕರಣದಲ್ಲಿ ಆರೋಪಿಗಳ ಪಟ್ಟಿ ಸಿದ್ಧಪಡಿಸಿದ್ದಾರೆ. ಆರೋಪಿಗಳು ಚಿತ್ರೀಕರಿಸಿದ್ದರು ಎನ್ನಲಾದ ಮೂಲ ವಿಡಿಯೊಗಾಗಿ ಶೋಧ ಆರಂಭಿಸಿದ್ದಾರೆ.

ಬಿಜೆಪಿ ಶಾಸಕ ರಮೇಶ ಜಾರಕಿಹೊಳಿ ಅವರಿಗೆ ಸಂಬಂಧಿಪಟ್ಟಿದ್ದು ಎನ್ನಲಾದ ಸಿ.ಡಿ ಪ್ರಕರಣದಲ್ಲಿ ಕನ್ನಡ ಸುದ್ದಿವಾಹಿನಿಗಳಲ್ಲಿ ಕೆಲಸ ಮಾಡಿದ್ದ ವರದಿಗಾರರು ಹಾಗೂ ಎಂಜಿನಿಯರಿಂಗ್ ವಿದ್ಯಾರ್ಥಿಗಳು ಭಾಗಿಯಾಗಿರುವ ಪುರಾವೆಗಳು ಎಸ್‌ಐಟಿಗೆ ಸಿಕ್ಕಿವೆ.

ಸುದ್ದಿವಾಹಿನಿಯೊಂದರ ರಹಸ್ಯ ಕ್ಯಾಮೆರಾ ಕಾರ್ಯಾಚರಣೆಯಲ್ಲಿ ಗುರುತಿಸಿಕೊಂಡಿದ್ದ ವರದಿಗಾರ, ಆ ಸುದ್ದಿವಾಹಿನಿ ಕೆಲಸ ಬಿಟ್ಟು ರಾಜಕೀಯ ಮುಖಂಡರ ಜೊತೆ ಸೇರಿಕೊಂಡಿದ್ದ. ಆತನೇ ಇತರೆ ಆರೋಪಿಗಳ ಜೊತೆ ಸೇರಿಕೊಂಡು ಸಿ.ಡಿ ಸೃಷ್ಟಿಸಿದ್ದ ಎಂಬ ಮಾಹಿತಿಯೂ ಎಸ್‌ಐಟಿಗೆ ಲಭ್ಯವಾಗಿದೆ.

'ತಂತ್ರಜ್ಞಾನದಲ್ಲಿ ಪರಿಣಿತಿ ಹೊಂದಿದ್ದ ಆರೋಪಿಗಳು, ವ್ಯವಸ್ಥಿತವಾಗಿ ಹಲವು ವರ್ಷದಿಂದ ಕೃತ್ಯ ಎಸಗುತ್ತಿರುವ ಮಾಹಿತಿ ಇದೆ. ಅದಕ್ಕೆ ಸಂಬಂಧಪಟ್ಟ ಸಾಕ್ಷ್ಯಗಳನ್ನು ಸಂಗ್ರಹಿಸಿ, ಆರೋಪಿಗಳ ಪಟ್ಟಿ ಸಿದ್ಧಪಡಿಸಲಾಗಿದೆ. ರಮೇಶ ಜಾರಕಿಹೊಳಿ ಅವರ ಹೇಳಿಕೆಯನ್ನು ಈಗಾಗಲೇ ಪಡೆದುಕೊಂಡಿದ್ದು, ಅದರನ್ವಯವೇ ಹನಿಟ್ರ್ಯಾಪ್ ಪ್ರಕರಣದಲ್ಲಿ ಆದಷ್ಟು ಬೇಗ ಆರೋಪಿಗಳನ್ನು ಬಂಧಿಸಲಾಗುವುದು' ಎಂದೂ ಎಸ್‌ಐಟಿ ಮೂಲಗಳು ಹೇಳಿವೆ.

ಜಾಹೀರಾತು ಕಂಪನಿ, ಮನೆಯಲ್ಲಿ ಶೋಧ: ಪ್ರಕರಣದಲ್ಲಿ ಮೂಲ ವಿಡಿಯೊ ಮಹತ್ವದ ಪಡೆದುಕೊಂಡಿದೆ. ಅದಕ್ಕಾಗಿ ಎಸ್‌ಐಟಿ, ಶೇಷಾದ್ರಿಪುರದಲ್ಲಿರುವ ಜಾಹೀರಾತು ಕಂಪನಿ ಹಾಗೂ ಪ್ರಮುಖ ಆರೋಪಿಯ ಬಸವೇಶ್ವರನಗರದಲ್ಲಿರುವ ಮನೆಯಲ್ಲಿ ಬುಧವಾರ ಶೋಧ ನಡೆಸಿತು.

'ಶೋಧದ ಸಂದರ್ಭದಲ್ಲಿ ಎಲೆಕ್ಟ್ರಾನಿಕ್ ವಸ್ತುಗಳು ಹಾಗೂ ದಾಖಲೆಗಳು ಪತ್ತೆಯಾಗಿವೆ. ಆದರೆ, ಮೂಲ ವಿಡಿಯೊ ಸಿಕ್ಕಿಲ್ಲ. ಅದೇ ವಿಡಿಯೊ ಬಳಸಿಕೊಂಡೇ ಆರೋಪಿಗಳು ಸಂಕಲನ ಮಾಡಿ ಹೊಸ ವಿಡಿಯೊ ಸಿದ್ಧಪಡಿಸಿದ್ದರು' ಎಂದು ಮೂಲಗಳು ತಿಳಿಸಿವೆ.

ಬ್ಯಾಂಕ್ ಖಾತೆಗಳ ಪರಿಶೀಲನೆ: 'ವರದಿಗಾರರಾಗಿದ್ದ ಸಂದರ್ಭದಲ್ಲಿ ತಮ್ಮದೇ ತಂಡ ಕಟ್ಟಿಕೊಂಡಿದ್ದ ಆರೋಪಿಗಳು, ಗಣ್ಯ ವ್ಯಕ್ತಿಗಳು, ದೊಡ್ಡ ಉದ್ಯಮಿಗಳು ಹಾಗೂ ರಾಜಕಾರಣಿಗಳನ್ನು ಹನಿಟ್ರ್ಯಾಪ್ ಮಾಡಿ ಹಣ ಸುಲಿಗೆ ಮಾಡುತ್ತಿದ್ದ ಮಾಹಿತಿಯೂ ಇದೆ. ಈ ಬಗ್ಗೆ ವಿಸ್ತ್ರತ ಮಾಹಿತಿ ಕಲೆ ಹಾಕಲಾಗುತ್ತಿದ್ದು, ಆರೋಪ ಖಚಿತವಾದರೆ ದೊಡ್ಡ ಜಾಲವೇ ಹೊರಬೀಳಲಿದೆ' ಎಂದೂ ಮೂಲಗಳು ಹೇಳಿವೆ.

ವಿಶೇಷ ತನಿಖಾ ತಂಡ ರಚನೆ

ಬೆಳಗಾವಿ: ಬಿಜೆಪಿ ಶಾಸಕ ರಮೇಶ ಜಾರಕಿಹೊಳಿ ಅವರಿಗೆ ಸಂಬಂಧಿಸಿದ್ದು ಎನ್ನಲಾದ ಸಿ.ಡಿ ಯಲ್ಲಿರುವ ಯುವತಿ ಅಪಹರಣವಾಗಿದ್ದು, ಹುಡುಕಿ ಕೊಡುವಂತೆ ಅವರ ತಂದೆ ಇಲ್ಲಿನ ಎಪಿಎಂಸಿ ಪೊಲೀಸ್ ಠಾಣೆಗೆ ದೂರು ನೀಡಿರುವ ಹಿನ್ನೆಲೆಯಲ್ಲಿ ತನಿಖೆಗಾಗಿ ಬುಧವಾರ ವಿಶೇಷ ತಂಡ ರಚಿಸಲಾಗಿದೆ.

'ಯುವತಿಯ ತಂದೆ ನೀಡಿರುವ ದೂರು ಆಧರಿಸಿ ಎಫ್‌ಐಆರ್ ದಾಖಲಾಗಿದೆ. ಮಾರ್ಕೆಟ್ ಎಸಿಪಿ ಹಾಗೂ ಎಪಿಎಂಸಿ ಪೊಲೀಸ್ ಠಾಣೆ ಇನ್‌ಸ್ಪೆಕ್ಟರ್ ನೇತೃತ್ವದಲ್ಲಿ ತನಿಖಾ ತಂಡ ರಚಿಸಲಾಗಿದೆ. ಆ ಕುಟುಂಬದವರು ಭದ್ರತೆ ನೀಡುವಂತೆ ಕೋರಿದ್ದರೆ, ವ್ಯಾಪ್ತಿಯ ಪೊಲೀಸ್ ಠಾಣೆ ಪೊಲೀಸರು ನಿರ್ಧರಿಸುತ್ತಾರೆ' ಎಂದು ಡಿಸಿಪಿ ವಿಕ್ರಂ ಅಮಟೆ ತಿಳಿಸಿದರು.

ತಂಡವು ಯುವತಿಯ ಪತ್ತೆಗಾಗಿ ಬೆಂಗಳೂರಿಗೆ ತೆರಳುವ ಸಾಧ್ಯತೆ ಇದೆ. ಮಗಳ ಅಪಹರಣವಾಗಿದೆ ಎಂದು ತಂದೆ ಮಂಗಳವಾರವಷ್ಟೇ ಎಪಿಎಂಸಿ ಪೊಲೀಸ್ ಠಾಣೆಗೆ ದೂರು ನೀಡಿದ್ದರು. ಇದನ್ನು ಆಧರಿಸಿ ತನಿಖೆ ಆರಂಭಿಸಲಾಗಿದೆ.

ಯುವತಿಯ ಕುಟುಂಬದವರು ಅಜ್ಞಾತ ಸ್ಥಳದಲ್ಲಿದ್ದಾರೆ ಎಂಬ ಮಾಹಿತಿ ಲಭ್ಯವಾಗಿದೆ.

ಕರ್ನಾಟಕ ಸರ್ಕಾರ
ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, ಬೆಂಗಳೂರು
(ಕರ್ನಾಟಕ ಸರ್ಕಾರದ ಅಂಗ ಸಂಸ್ಥೆ)
ನಂ.8, ಎಂಎಸ್‌ಬಿ–1, 6ನೇ ಮತ್ತು 7ನೇ ಮಹಡಿ, ಕರ್ನಾಟಕ ಮಾರ್ಕೆಟಿಂಗ್ ಫೆಡರೇಷನ್ ಬಿಲ್ಡಿಂಗ್, ಕನ್ನಿಂಗ್‌ಹ್ಯಾಂ ರೋಡ್, ಬೆಂಗಳೂರು – 560052. ದೂರವಾಣಿ: 080–22283366, ಟೆಲಿಫ್ಯಾಕ್ಸ್: 080–22262288
ಸಂಖ್ಯೆ: ಕವಶಿಸಸ/ಸಕಾಇ/ಟೆಂಡರ್–35/2020–21 ದಿನಾಂಕ: 17.03.2021
ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)
ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಏಕಲವ್ಯ ಮಾದರಿ ವಸತಿ ಶಾಲೆಗಳಿಗೆ ತ್ಯಾಜ್ಯ ನೀರು ಸಂಸ್ಕರಣಾ ಘಟಕ (Sewage Treatment Plant) ಅಳವಡಿಸುವ ಕಾಮಗಾರಿಗಳಿಗೆ ಕೆಳಕಂಡಂತೆ. ಇಂಡೆಂಟ್ ಸಂಖ್ಯೆ–2745, 2749 (ಪರಿಶಿಷ್ಟ ಜಾತಿ ಗುತ್ತಿಗೆದಾರರಿಗೆ ಮಾತ್ರ). ಇಂಡೆಂಟ್ ಸಂಖ್ಯೆ–2752 (ಪರಿಶಿಷ್ಟ ವರ್ಗದ ಗುತ್ತಿಗೆದಾರರಿಗೆ ಮಾತ್ರ) ಇಂಡೆಂಟ್ ಸಂಖ್ಯೆ–2746, 2750, 2753, 2754 (ಸಾಮಾನ್ಯ ವರ್ಗದ ಗುತ್ತಿಗೆದಾರರು) ಇ–ಪೋರ್ಟಲ್ ಮುಖಾಂತರ ದಿನಾಂಕ: 18.03.2021 ರಂದು ಟೆಂಡರ್ ಕರೆಯಲಾಗಿದೆ. ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ: 19.04.2021 ರಂದು ನಿಗದಿಪಡಿಸಲಾಗಿದೆ. ಹೆಚ್ಚಿನ ವಿವರಗಳನ್ನು ವೆಬ್‌ಸೈಟ್: https://eproc.karnataka.gov.in ರಲ್ಲಿ ನೋಡಬಹುದಾಗಿದೆ.
ಸಹಿ/– ಸಹಾಯಕ ಕಾರ್ಯಪಾಲಕ ಅಭಿಯಂತರರು
ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ
DIPR/DDU/YC/3153/2020-21
ಕೋವಿಡ್‌-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಅಚ್ಚುಕಟ್ಟು ಪ್ರದೇಶ ಅಭಿವೃದ್ಧಿ ಪ್ರಾಧಿಕಾರ
ಕರ್ನಾಟಕ ಸರ್ಕಾರ (ಜಲಸಂಪನ್ಮೂಲ ಇಲಾಖೆ)
ಕಾರ್ಯನಿರ್ವಾಹಕ ಅಭಿಯಂತರರ ಕಾರ್ಯಾಲಯ, ಮಲಪ್ರಭಾ ಮತ್ತು ಘಟಪ್ರಭಾ ಯೋಜನೆ, ಕಾಡಾ, ವಿಭಾಗ ಸಂ–1, ನರಗುಂದ
e-mail - eecadadiv1nrg@gmail.com Ph/Fax No. 08377-295365
ಕ್ರ/ಕಾನಿಅನ/ತಾಂತ್ರಿಕ/ಅಲ್ಪಾವಧಿ ಟೆಂಡರ/2020–21/406 ದಿನಾಂಕ : 10/03/2021
ಅಲ್ಪಾವಧಿ ಟೆಂಡರ ಪ್ರಕಟಣೆ (ದ್ವಿ ಲಕೋಟೆಯಲ್ಲಿ)
(ಇ–ಟೆಂಡರ ಮುಖಾಂತರ ಮಾತ್ರ)
ಕಾಡಾ ಮಲಪ್ರಭಾ ಮತ್ತು ಘಟಪ್ರಭಾ ಯೋಜನಾ ವ್ಯಾಪ್ತಿ ಪ್ರದೇಶದ 2020–21ನೇ ಸಾಲಿನ ಲೆಕ್ಕಶೀರ್ಷಿಕೆ 2705 ಯೋಜನೆಯಡಿಯಲ್ಲಿ Outsourcing of the Man power Agency to Naragund division, Jamakhandi Division, & Chikkodi division and its Sub division (Indent No-489) and Out Source of the Man Power Agency to Administrative Office Belagavi (Indent No-490) ಈ ಸೇವೆಗಳಿಗೆ ಸಾಮಾನ್ಯ (General) ವರ್ಗದವರಿಂದ ದ್ವಿ ಲಕೋಟೆಯಲ್ಲಿ (2 Cover System) ಟೆಂಡರ್ ಕರೆಯಲಾಗಿದೆ. ಸದರಿ ಟೆಂಡರ್‌ಗಳನ್ನು ಆಡಳಿತಾಧಿಕಾರಿಗಳು ಕಾಡಾ ಬೆಳಗಾವಿ ಇವರ ಪರವಾಗಿ ಇ–ಪ್ರೋಕ್ಯುರ್‌ಮೆಂಟ್ ಪೋರ್ಟಲ್ ಮೂಲಕ ಅರ್ಹ ಗುತ್ತಿಗೆದಾರರಿಂದ ಆಹ್ವಾನಿಸಲಾಗಿದೆ. ಅರ್ಜಿಗಳನ್ನು ಆನ್‌ಲೈನ್‌ಗಳಲ್ಲಿ ಸಲ್ಲಿಸುವ ಹಾಗೂ ತೆರೆಯುವ ದಿನಾಂಕಗಳು ಈ ಕೆಳಗಿನಂತಿರುತ್ತವೆ. (1) ಆನ್ ಲೈನ್ ನಲ್ಲಿ ಭರ್ತಿ ಮಾಡಿದ ಟೆಂಡರಗಳನ್ನು ಸಲ್ಲಿಸುವ ಕೊನೆಯ ದಿನಾಂಕ : 22–03–2021. (16.00 ಗಂಟೆಯವರೆಗೆ) (2) ಗುತ್ತಿಗೆದಾರರ ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ : 24–03–2021. (11.00 ಗಂಟೆಗೆ) (3) ಗುತ್ತಿಗೆದಾರರ ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ : 26–03–2021. (11.00 ಗಂಟೆಗೆ)
ಹೆಚ್ಚಿನ ವಿವರಗಳಿಗಾಗಿ ಈ ಕಾರ್ಯಾಲಯವನ್ನು ಸಂಪರ್ಕಿಸುವುದು. ದೂರವಾಣಿ ಸಂಖ್ಯೆ: 08377–295365 ಹಾಗೂ ವೆಬ್‌ಸೈಟ್–www.eproc.kar.gov.in.
ಸಹಿ/– ಕಾರ್ಯನಿರ್ವಾಹಕ ಅಭಿಯಂತರು, ಮಲಪ್ರಭಾ ಮತ್ತು ಘಟಪ್ರಭಾ ಯೋಜನೆ, ಕಾಡಾ, ವಿಭಾಗ ಸಂ–1, ನರಗುಂದ.
ವಾಸಾಸಂಇ/ಗದಗ/ಎಂ.ಸಿ.ಎ/571/2020–21

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಅಭಿಯಂತರರವರ ಕಛೇರಿ
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಮೈಸೂರು–570 022.
ಸಂ.ಕಾಅ/ಗ್ರಾಕುನೀ&ನೈವಿ/ಮೈ/ಇ–ಪ್ರಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ
ಇ–ಟೆಂಡರ್ ಪ್ರಕಟಣೆ ಸಂಖ್ಯೆ 61/2020–21 ದಿನಾಂಕ: 12.03.2021
ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಮೈಸೂರುರವರು ಕರ್ನಾಟಕ ಸರ್ಕಾರದ ವಿದ್ಯುನ್ಮಾನ ಸಂಗ್ರಹಣೆ ವೇದಿಕೆ ಬೆಂಗಳೂರುರವರ ಸಹಯೋಗದೊಂದಿಗೆ, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯಲ್ಲಿ ನೊಂದಾಯಿತ/ಎನ್‌ರೋಲ್ ಮಾಡಿದ 4ನೇ ಹಾಗೂ 3ನೇ ದರ್ಜೆ ಗುತ್ತಿಗೆದಾರರು ಮತ್ತು ಮೇಲ್ಪಟ್ಟು ಟೆಂಡರ್ ನಮೂನೆ KW-1, KW-2 & KW-3 ರೀತ್ಯಾ (ಎಕ ಲಕೋಟೆ ಮತ್ತು ದ್ವಿ–ಲಕೋಟೆ ಪದ್ಧತಿಯಂತೆ) ನಂಜನಗೂಡು ತಾಲ್ಲೂಕಿನ ಒಟ್ಟು 24 ಕಾಮಗಾರಿಗಳಿಗೆ (ಅಂದಾಜು ಮೊತ್ತ ರೂ.10.00 ಲಕ್ಷಗಳಿಂದ ರೂ 100.00ಲಕ್ಷದ ವರೆಗೆ) ಇ–ಪ್ರಕ್ಯೂರ್‌ಮೆಂಟ್ ಮೂಲಕ ಇ–ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ಫಾರಂಗೆ ಅರ್ಜಿ ಸಲ್ಲಿಸಲು ಮತ್ತು ಭರ್ತಿ ಮಾಡಿದ ಫಾರಂಗಳನ್ನು ಆನ್‌ಲೈನ್ ನಲ್ಲಿ ಸಲ್ಲಿಸಲು ನಿಗಧಿತ ಅವಧಿ ದಿನಾಂಕ: 15.03.2021 ರಿಂದ 25.03.2021 ರವರೆಗೆ ಸಾಧ್ಯವಾದರೆ ಟೆಂಡರ್ ತೆರೆಯುವ ದಿನಾಂಕ: 26.03.2021 ರ ಸಂಜೆ 5.30 ಘಂಟೆಯ ನಂತರ. ಹೆಚ್ಚಿನ ವಿವರಗಳಿಗೆ ಕರ್ನಾಟಕ ಸರ್ಕಾರದ ವಿದ್ಯುನ್ಮಾನ ಸಂಗ್ರಹಣೆ ವೇದಿಕೆ ಮೂಲಕ (e-procurement portal) ವೆಬ್ ಸೈಟ್‌ನಲ್ಲಿ ಪಡೆಯಬಹುದು. https://eprockarnataka.gov.in ಈ ಬಗ್ಗೆ ಇನ್ನೂ ಹೆಚ್ಚಿನ ವಿವರಗಳಿಗಾಗಿ ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಮೈಸೂರು (ಪೋನ್ ನಂ.0821–2460495)ರವರ ಕಛೇರಿಯ ವೇಳೆಯಲ್ಲಿ ಪಡೆಯಬಹುದು.
ಸಹಿ/– ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ, ವಿಭಾಗ, ಮೈಸೂರು.
DIPR/DDMYS/MCA/1143/2020-21

ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ
ಕಾರ್ಯಪಾಲಕ ಅಭಿಯಂತರರವರ ಕಛೇರಿ ಬೆಳಗಾವಿ ವಿಭಾಗ, ಬೆಳಗಾವಿ. ಪ್ಲಾಟ ನಂ. ಸಿ–1, ಹೌಸಿಂಗ್ ಬೋರ್ಡ ಕಾಲನಿ, ಟೀಚರ್ ಕಾಲನಿ ಎದುರಿಗೆ, (ಓಂಕಾರ ನಗರ) ಹಿಂಡಲಗಾ, ಬೆಳಗಾವಿ. ದೂರವಾಣಿ ಫ್ಯಾಕ್ಸ್ ನಂ: (0831)2442294 ಇ–ಮೇಲ್:ksdb.bgmdiv@gmail.com
ಸಂ.ಕಕೊಅಮ/ಕಾಪಾಅ/ಬೆವಿ/ತಾಂ.ಶಾ/ಕ್ರಿ.ಯೋ/ಟೆಂ.ಪ್ರ/2020–21/1226 ದಿನಾಂಕ:15–03–2021
ಇ–ಪ್ರೋಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ
KW - 1, 2 & KW - 3
ಆಯುಕ್ತರು, ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ ಬೆಂಗಳೂರು ಇವರ ಪರವಾಗಿ ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ ಬೆಳಗಾವಿ ವಿಭಾಗ ಬೆಳಗಾವಿ ವಿಭಾಗ ಕಛೇರಿ ವ್ಯಾಪ್ತಿಯಲ್ಲಿ ಬರುವ 2020–21ನೇ ಸಾಲಿನ ಕ್ರಿಯಾ ಯೋಜನೆಯಡಿ ಮಂಜೂರಾದ ಉತ್ತರ ಕನ್ನಡ, ವಿಜಯಪುರ ಹಾಗೂ ಬಾಗಲಕೋಟ ಜಿಲ್ಲೆಗಳ ವ್ಯಾಪ್ತಿಯಲ್ಲಿ ನಗರ/ ಪಟ್ಟಣಗಳ ವ್ಯಾಪ್ತಿಯಲ್ಲಿ ಬರುವ ಕೊಳಗೇರಿ ಪ್ರದೇಶಗಳಲ್ಲಿ ಮೂಲಭೂತ ಸೌಕರ್ಯ ಒದಗಿಸುವ ಕಾಮಗಾರಿಗಳ ಸಲುವಾಗಿ ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಕರೆದಿರುವ ಕಾಮಗಾರಿಗಳಿಗಾಗಿ ಲೋಕೋಪಯೋಗಿ ಇಲಾಖೆಯಿಂದ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಐಟಂವಾರು ಟೆಂಡರ್‌ನ್ನು ಕರೆಯಲಾಗಿದೆ. ಹೆಚ್ಚಿನ ವಿವರ/ ವಿಚಾರಣೆ ಇ–ಪ್ರೋಕ್ಯೂರ್‌ಮೆಂಟ್‌ನ www.eproc.karnataka. gov.in ನಿಂದ ದಿನಾಂಕ:17.03.2021 ರಿಂದ ಡೌನಲೋಡ್ ಮಾಡಿಕೊಂಡು ಟೆಂಡರನ್ನು ಸಲ್ಲಿಸಲು ಕೊನೆಯ ದಿನಾಂಕ: 07.04.2021 ಸಾಯಂಕಾಲ 5.30 ಗಂಟೆಯವರೆಗೆ ಸ್ವೀಕೃತ ಟೆಂಡರ್ ತೆರೆಯುವ ದಿನಾಂಕ: 09.04. 2021 ರಂದು ಸಾಯಂಕಾಲ 4.00 ಗಂಟೆಯ ನಂತರ ತೆರೆಯಲಾಗುವುದು.
ಕಾಮಗಾರಿಗಳ ಗರಿಷ್ಟ ಟೆಂಡರ ಮೊತ್ತ ರೂ. 88.58 ಲಕ್ಷಗಳು, ಹಾಗೂ ಕನಿಷ್ಠ ಮೊತ್ತ ರೂ. 16.06 ಲಕ್ಷಗಳು ಇ.ಎಮ್.ಡಿ. ಮೊತ್ತ, ಗುತ್ತಿಗೆದಾರರ ಅರ್ಹತೆ/ ಟೆಂಡರಿನ ನಿಯಮ/ ಟೆಂಡರ್ ಪ್ರೋಸೆಸಿಂಗ್ ಶುಲ್ಕ ತುಂಬುವ ವಿಧಾನ ಇತ್ಯಾದಿ ವಿವರಗಳಿಗೆ https://eproc. karnataka.gov.in ಮೂಲಕ ಮಾಹಿತಿ ಪಡೆಯಬಹುದು ಅಥವಾ ಹೆಚ್ಚಿನ ಮಾಹಿತಿಗಾಗಿ ಕಛೇರಿಯ ದಿನದಂದು ಕಛೇರಿಯ ವೇಳೆಯಲ್ಲಿ ಪಡೆಯಬಹುದು.
ಸಹಿ/–ಕಾರ್ಯಪಾಲಕ ಅಭಿಯಂತರರು
ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ ಬೆಳಗಾವಿ ವಿಭಾಗ, ಬೆಳಗಾವಿ.
DIPR/BGM/RO-NO-1561/MCA/2020-21

ಬೆವಿಕಂ BESCOM
ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ರಾಜ್ಯ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)
(CIN-U04010KA2002SGC030438)
ಪರಿಷ್ಕೃತ ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ)
ಬೆವಿಕಂ ಈ ಕೆಳಗಿನ ವಿಚಾರಣೆ ಸಂಖ್ಯೆ ಅನ್ವಯ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ ವಿಚಾರಣೆ ಸಂಖ್ಯೆ: ಎಸ್‌ಇಇ/ಬಿಸಿಎನ್/ಇಇ(ಓ)/ಎಇಇ/20–21/207 ದಿನಾಂಕ: 16.03.2021. ಪೀಣ್ಯ ವಿಭಾಗದ 4ನೇ ಉತ್ತರ ಉಪ ವಿಭಾಗದ ವಿವಿಧ ಸ್ಥಳಗಳಾದ ಲಗ್ಗೆರೆ, ಹೆಗ್ಗನಹಳ್ಳಿ ಮತ್ತು ಕೆಂಪೇಗೌಡನಗರ ಕಾ ಮತ್ತು ಪಾ ಘಟಕಗಳ ವ್ಯಾಪ್ತಿಯಲ್ಲಿ ಹೊಸದಾಗಿ ಅಳವಡಿಸಿರುವ ಆರ್.ಎಂ.ಯುಗಳಿಗೆ Remote Terminal Units ಗಳನ್ನು ಅಳವಡಿಸಲು ಹಾಗೂ Distribution Automation Scheme ಈ ಯೋಜನೆಯನ್ನು ಕಾರ್ಯರೂಪಕ್ಕೆ ತರಲು ಈ ಟೆಂಡರ್ ಕರೆಯಲಾಗಿದೆ. ಬಿಡ್ ದಾಖಲೆಗಳ ವಿತರಣೆ: 22.03.2021 ರಿಂದ 26.03.2021 ರ 14:00 ಗಂಟೆಯವರೆಗೆ. ಬಿಡ್ ದಾಖಲೆಗಳ ಸಲ್ಲಿಸುವ ದಿನಾಂಕ: 29.03.2021 ವರೆಗೆ 16.00 ಗಂಟೆ. ಬಿಡ್ ದಾಖಲೆಗಳನ್ನು ತೆರೆಯುವ ದಿನಾಂಕ: 30.03.2021 ರ 13.00 ಗಂಟೆಗೆ ಅಥವಾ ನಂತರ. ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್‌ನಲ್ಲಿ ಭೇಟಿ ನೀಡುವ ಮೂಲಕ ಅಥವಾ ಟೆಂಡರಿಂಗ್ ವೆಬ್‌ಸೈಟ್ https://eproc.karnataka.gov.in ಗೆ ಲಾಗಿನ್ ಆಗುವ ಮೂಲಕ ಪಡೆಯಬಹುದಾಗಿದೆ. ಯಾವುದೇ ಇ–ಪಾವತಿ ಬಗ್ಗೆ ಸ್ಪಷ್ಟೀಕರಣವನ್ನು ಇ–ಪ್ರೊಕ್ಯೂರ್‌ಮೆಂಟ್ ಸಹಾಯವಾಣಿ 080–22485867 / 22485927 ಅಥವಾ ಇ–ಮೇಲ್: hphelpdesk.blr@rteservices.com ನಿಂದ ಪಡೆಯಬಹುದು.
ಸಹಿ/– ಅಧೀಕ್ಷಕ ಎಂಜಿನಿಯರ್ (ವಿ)., (ವಾ, ಕಾ ಮತ್ತು ಪಾ) ಬೆಂಗಳೂರು ಉತ್ತರ ವೃತ್ತ
ವಿದ್ಯುತ್ ಸಂಬಂಧಿತ ದೂರುಗಳಿಗೆ ಕರೆ ಮಾಡಿ: 1912
ಬೆಸ್ಕಾಂ ಮಿತ್ರ mobile app ಅನ್ನು ಡೌನ್‌ಲೋಡ್ ಮಾಡಿಕೊಳ್ಳಿ

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ ವಿಜಯಪುರ.
ಐ.ಎಫ್.ಟಿ.ಸಂ:ಕಾನಿಇಂ/ಲೋ.ಇ/ವಿ.ಜೆ.ಪಿ/ಪಿ.ಬಿ/8443/2020–21/06191
ದಿನಾಂಕ:17.03.2021
ಅಲ್ಪಾವಧಿ ಟೆಂಡರ್ ಅವಧಿ ವಿಸ್ತರಣೆ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್)
ಉಲ್ಲೇಖ:– ಈ ಕಚೇರಿ ಐ.ಎಫ್.ಟಿ. (ಟೆಂಡರ್) ಸಂ. ಕಾ.ನಿ.ಇಂ./ಲೋ.ಇ/ಬಿ.ಜೆ.ಪಿ/ಪಿ.ಬಿ/8443/2020–21/05724 ದಿ–10–03–2021
ಉಲ್ಲೇಖಿತ ಪ್ರಕಟಣೆಯಲ್ಲಿ ಅಹ್ವಾನಿಸಲಾದ ಟೆಂಡರ ಕಾಮಗಾರಿಗಳ ದಿನಾಂಕಗಳನ್ನು ಕಾರಣಾಂತರಗಳಿಂದ ಮುಂದೂಡಿ, ಈ ಕೆಳಗಿನಂತೆ ನಿಗದಿಪಡಿಸಲಾಗಿದೆ.
1) ಗುತ್ತಿಗೆದಾರರ ಪೂರ್ವ ಭಾವಿ ಸಭೆ ದಿನಾಂಕ: 22.03.2021 ರ ಮುಂಜಾನೆ 11.00 ಗಂಟೆಗೆ
2) ತುಂಬಿದ ಮೊಹರ ಬಂದ ಟೆಂಡರಗಳನ್ನು ಸ್ವೀಕರಿಸುವ ದಿನಾಂಕ: 25.03.2021 ಸಂಜೆ 4:30 ಗಂಟೆಗೆ
3) ಗುತ್ತಿಗೆಗಳನ್ನು ತೆರೆಯುವ ದಿನಾಂಕ (ತಾಂತ್ರಿಕ್ ಬೀಡ್) 26.03.2021 ಸಂಜೆ 4.31 ಗಂಟೆಗೆ
4) ಗುತ್ತಿಗೆಗಳನ್ನು ತೆರೆಯುವ ದಿನಾಂಕ (ಆರ್ಥಿಕ ಬೀಡ್) 29.03.2021 ಮುಂಜಾನೆ 11.00 ಗಂಟೆಗೆ
ಇನ್ನುಳಿದ ನಿಬಂಧನೆಗಳು / ಷರತ್ತುಗಳಲ್ಲಿ ಯಾವುದೇ ಬದಲಾವಣೆ ಇರುವದಿಲ್ಲ.
ಸಹಿ/– ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ವಿಭಾಗ, ವಿಜಯಪುರ
ವಾಸಾಸಂಇ/ವಿಜಯಪುರ/634/ಎಂಸಿಎ/2020–21

ಕಾರ್ಯಪಾಲಕ ಅಭಿಯಂತರರು
ಲೋಕೋಪಯೋಗಿ ಇಲಾಖೆ
ನಂ.1 ಕಟ್ಟಡಗಳ ವಿಭಾಗ, ಎಸ್.ಜೆ.ಪಿ. ಆವರಣ, ಬೆಂಗಳೂರು.
ದೂರವಾಣಿ: 080–22255210
(ಐ.ಎಸ್.ಓ.9001–2008 ಮಾನ್ಯತೆ ಪಡೆದಿರುವ ವಿಭಾಗ)
ಸಂ: ಕಾಅ/ಕವಿ.1/ಎಇ–4/120/2020–21 ದಿನಾಂಕ: 16.03.2021
ಅಲ್ಪಾವಧಿ ಟೆಂಡರ್ ಪ್ರಕಟಣೆ
ಮೇಲ್ಕಂಡ ಇಲಾಖೆಯು ಕೆಳಕಂಡ ಕಾಮಗಾರಿಗಳಿಗಾಗಿ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (http://eproc.karnataka.gov.in) ಮೂಲಕ ಅರ್ಹ 3ನೇ ದರ್ಜೆ ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಿದೆ.
ಕಾಮಗಾರಿ ವಿವರ: (1) ಬೆಂಗಳೂರು, ಡಾ. ಬಿ.ಆರ್.ಅಂಬೇಡ್ಕರ್ ವೀಧಿಯಲ್ಲಿನ ಎಂ.ಎಸ್.ಬಿಲ್ಡಿಂಗ್‌ನಲ್ಲಿ ಕಲರ್ ಕಾಂಟ್ರಾಸ್ಟಿಂಗ್ ಸ್ಟ್ರಿಪ್ಸ್, ಹ್ಯಾಂಡ್ರೈಲ್ ಒದಗಿಸುವುದು, ಹಾಲಿ ಇರುವ ಶೌಚಾಲಯಗಳ ದುರಸ್ತಿ, ಸಂಕೇತಗಳು, ಟ್ಯಾಕ್‌ಟೈಲ್ ರಬ್ಬರ್ ಮ್ಯಾಟ್ (ಟ್ಯಾಕ್‌ಟೈಲ್ ಫ್ಲೋರ್ ಮ್ಯಾಟ್ಸ್)ಗಳನ್ನು ಒದಗಿಸುವುದಕ್ಕೆ ವಿವರವಾದ ಅಂದಾಜು ಪಟ್ಟಿ. (ಕೆಪಿಡಬ್ಲ್ಯೂಡಿ/2019–20/ಬಿಡಿ/ಕಾಮಗಾರಿ–ಇಂಡೆಂಟ್119941). ಕಾಮಗಾರಿಯ ಅಂದಾಜು ಮೌಲ್ಯ: ರೂ.197.27 ಲಕ್ಷಗಳು. ಇಎಂಡಿ: ರೂ.2,96,000/-.
ಕಾಮಗಾರಿ ವಿವರ: (2) ಮಲ್ಲೇಶ್ವರಂ, ಕೆ.ಸಿ.ಜನರಲ್ ಆಸ್ಪತ್ರೆಯಲ್ಲಿ ಪ್ರವೇಶಿಸಬಹುದಾದ ಪಾರ್ಕಿಂಗ್ ಹಾಗೂ ಮಾರ್ಗ, ಹ್ಯಾಂಡ್ರೈಲ್ ರ್‍ಯಾಂಪ್ಸ್ 1:12, ಹಾಲಿ ಇರುವ ಶೌಚಾಲಯ (39) ಸಂಕೇತಗಳ ನವೀಕರಣ, ಟ್ಯಾಕ್‌ಟೈಲ್ ಟೈಲ್ಸ್, ರೀ–ಫ್ಲೋರಿಂಗ್ ಒದಗಿಸುವುದು (ಕೆಪಿಡಬ್ಲ್ಯೂಡಿ/2019–20/ಬಿಡಿ/ಕಾಮಗಾರಿ–ಇಂಡೆಂಟ್118966). ಕಾಮಗಾರಿಯ ಅಂದಾಜು ಮೌಲ್ಯ: ರೂ.178.85 ಲಕ್ಷಗಳು. ಇಎಂಡಿ: ರೂ.2,69,000/-. ಪ್ರತಿ ಕಾಮಗಾರಿಯ ಕಾಲಾವಧಿ: ಮಳೆಗಾಲ ಸೇರಿ ತಲಾ 3 ತಿಂಗಳು. ದಾಸ್ತಾವೇಜು ಬೆಲೆ: ಇ–ಪೋರ್ಟಲ್‌ನಲ್ಲಿ ತಿಳಿಸಿರುವಂತೆ.
ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಡೌನ್‌ಲೋಡ್ ಮಾಡಿಕೊಂಡು ಸಲ್ಲಿಸಲು ಕೊನೆಯ ದಿನಾಂಕ: 23.03.2021, ಸಂಜೆ 5.00 ಗಂಟೆವರೆಗೆ. ಟೆಂಡರ್ ತೆರೆಯುವ ದಿನಾಂಕ: 24.03.2021, ಸಂಜೆ 5.30 ಗಂಟೆಗೆ. ಹೆಚ್ಚಿನ ಮಾಹಿತಿಯನ್ನು ಮೇಲ್ಕಂಡ ಕಚೇರಿಯಿಂದ ಅಥವಾ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ http://eproc.karnataka.gov.in ಮೂಲಕ ಪಡೆಯಬಹುದು.
ವಾಸಾಸಂಇ/ಉನಿ.ನ/3130/ಎಂಸಿಎ/2020–21
ಕೋವಿಡ್‌-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ
(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)
49, ಈಸ್ಟ್ ವಿಂಗ್, 4 ಮತ್ತು 5ನೇ ಮಹಡಿ, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು–560 001. ದೂರವಾಣಿ: 080–22265383 ವೆಬ್‌ಸೈಟ್: www.kiadb.in
ನಂ.: ಐಎಡಿಬಿ/ಇಎನ್‌ಜಿಜಿ/ಇಟಿಎನ್‌ಡಿ–ಇ–ಸರ್ವೀಸ್/13882/2020–21 ದಿನಾಂಕ: 16.03.2021
ಕೆಐಎಡಿಬಿಯ ಡೊಮೈನ್ ವೆಬ್‌ಸೈಟ್, ಇ–ಮೇಲ್ ಮತ್ತು ಕ್ಲೌಡ್ ಹೋಸ್ಟಿಂಗ್‌ನ ವಾರ್ಷಿಕ ನಿರ್ವಹಣೆಯ ಸಲಹಾ ಸೇವೆಗಳನ್ನು ಒದಗಿಸಲು ಅಲ್ಪಾವಧಿ ಟೆಂಡರ್ ಆಹ್ವಾನ ಪ್ರಕಟಣೆ
(ಜಿಒಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)
ಕೆಐಎಡಿಬಿಯು ಡೊಮೈನ್ ವೆಬ್‌ಸೈಟ್, ಇ–ಮೇಲ್ ಮತ್ತು ಕ್ಲೌಡ್ ಹೋಸ್ಟಿಂಗ್‌ನ ವಾರ್ಷಿಕ ನಿರ್ವಹಣೆ ಸಲಹಾಸೇವೆಗಾಗಿ ಬೆಂಗಳೂರಿನಲ್ಲಿ ಕಛೇರಿ ಹೊಂದಿರುವ ಹಾಗೂ ಇದೇ ರೀತಿ ಕೆಲಸದಲ್ಲಿ ಅಪಾರ ಅನುಭವ ಮತ್ತು ದಾಖಲೆ ಹೊಂದಿರುವ ಪ್ರತಿಷ್ಠಿತ ಸಮಾಲೋಚಕರು / ಸಂಸ್ಥೆಗಳಿಂದ ದ್ವಿ ಲಕೋಟೆ ಬಿಡ್ ವ್ಯವಸ್ಥೆಯಡಿಯಲ್ಲಿ ಕೆಐಎಡಿಬಿಯ ಡೊಮೈನ್ ವೆಬ್‌ಸೈಟ್, ಇ–ಮೇಲ್ ಮತ್ತು ಕ್ಲೌಡ್ ಹೋಸ್ಟಿಂಗ್‌ನ ವಾರ್ಷಿಕ ನಿರ್ವಹಣೆಗಾಗಿ ಪ್ರತಿಷ್ಠಿತ ವೆಬ್ ಆಧಾರಿತ ಸೇವೆ ಒದಗಿಸುವವರಿಂದ ಪ್ರಸ್ತಾಪಿತ ಸೇವೆ ಒದಗಿಸಲು ಅಲ್ಪಾವಧಿ ಟೆಂಡರ್‌ಗಳನ್ನು ಆಹ್ವಾನಿಸಿದೆ. 2ನೇ ಕರೆ.
ಬಿಡ್ ಸಲ್ಲಿಸಲು ಕೊನೆಯ ದಿನಾಂಕ: 26.03.2021ರ ಸಂಜೆ 04:00 ಗಂಟೆವರೆಗೆ.
ಅರ್ಜಿದಾರರು ಬಿಡ್ಡಿಂಗ್ ದಸ್ತಾವೇಜುಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://eproc.karnataka.gov.in ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.
ಸಹಿ/– ಮುಖ್ಯ ಅಭಿಯಂತರರು–1 ಕೆ.ಐ.ಎ.ಡಿ.ಬಿ, ಬೆಂಗಳೂರು
ವಾಸಾಸಂಇ/ಉನಿನ/ಎಲ್‌ಸಿ/3137/2020–21
ಕೋವಿಡ್‌-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಸದಾಶಿವ ಆಯೋಗ ವರದಿ ಜಾರಿಗೆ ಸಮಾಜ ಕಲ್ಯಾಣ ಸಚಿವ ಬಿ. ಶ್ರೀರಾಮುಲು ಭರವಸೆ

‘ಶೀಘ್ರ ಸಂಪುಟ ಉಪ ಸಮಿತಿ ರಚನೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸದಾಶಿವ ಆಯೋಗದ ವರದಿ ಜಾರಿ ಸಂಬಂಧಿಸಿದಂತೆ ಆದಷ್ಟು ಬೇಗ ಸಂಪುಟ ಉಪ ಸಮಿತಿ ರಚಿಸಲಾಗುವುದು' ಎಂದು ಸಮಾಜ ಕಲ್ಯಾಣ ಸಚಿವ ಬಿ. ಶ್ರೀರಾಮುಲು ಭರವಸೆ ನೀಡಿದರು.

ವಿಧಾನಪರಿಷತ್‌ನಲ್ಲಿ ಕಾಂಗ್ರೆಸ್ಸಿನ ಆರ್. ಧರ್ಮಸೇನ ಅವರ ಪ್ರಶ್ನೆಗೆ ಉತ್ತರಿಸಿದ ರಾಮುಲು, ‘ವರದಿ ಸರ್ಕಾರಕ್ಕೆ ಸಲ್ಲಿಕೆಯಾಗಿದ್ದು, ಸಮಗ್ರವಾಗಿ ಪರಿಶೀಲಿಸಿ ಸೂಕ್ತ ಶಿಫಾರಸುಗಳನ್ನು ಮಾಡಲು 2018ರ ಮಾರ್ಚ್ 8ರಂದು ಸಂಪುಟ ಉಪ ಸಮಿತಿ ರಚಿಸಲು ತೀರ್ಮಾನಿಸಲಾಗಿತ್ತು. ಬಳಿಕ ಸರ್ಕಾರ ಬದಲಾಗಿದೆ. ಹೀಗಾಗಿ, ಸಂಪುಟ ಉಪ ಸಮಿತಿ ರಚಿಸಲು ಕ್ರಮ ಕೈಗೊಳ್ಳಲಾಗುವುದು’ ಎಂದರು.

ಈ ವೇಳೆ ಮಧ್ಯಪ್ರವೇಶಿಸಿದ ವಿರೋಧ ಪಕ್ಷದ ನಾಯಕ ಎಸ್.ಆರ್. ಪಾಟೀಲ, ‘ಉಪ ಚುನಾವಣೆ ವೇಳೆ ಸದಾಶಿವ ಆಯೋಗದ ವರದಿ ಜಾರಿ ಮಾಡುವುದಾಗಿ ಭರವಸೆ ನೀಡಿದ್ದೀರಿ, ಆಗಿಲ್ಲ. ಈಗ ಮತ್ತೆ ಉಪ ಚುನಾವಣೆ ಬಂದಿದೆ. ಕಾಲಹರಣ ಮಾಡದೆ ವರದಿ ಜಾರಿಗೊಳಿಸಿ. ಉಪಚುನಾವಣೆ ಎಂದು ಕಾಯಬೇಡಿ’ ಎಂದು ಒತ್ತಾಯಿಸಿದರು.

ವಿಧಾನಪರಿಷತ್ ಕಲಾಪದಲ್ಲಿ ಸಚಿವ ಶ್ರೀರಾಮುಲು ಮಾತನಾಡಿದರು

ಅದಕ್ಕೆ ಶ್ರೀರಾಮುಲು, ‘ಸಂಪುಟ ಉಪ ಸಮಿತಿ ರಚಿಸಬೇಕು. ಸದನದಲ್ಲಿಯೂ ಈ ಬಗ್ಗೆ ಚರ್ಚೆ ಆಗಬೇಕು. ಹಿರಿಯರ ಜೊತೆ ಮಾತನಾಡಿ ಈ ಬಗ್ಗೆ ನಿರ್ಧರಿಸಲಾಗುವುದು. ಮೊದಲು ಸಂಪುಟ ಉಪ ಸಮಿತಿ ರಚನೆ ಮಾಡುತ್ತೇವೆ. ನಂತರ ಸಮಿತಿ ನೀಡಿದ ವರದಿಯನ್ನು ಸದನದಲ್ಲಿ ಮಂಡಿಸಿ ಚರ್ಚಿಸಲಾಗುವುದು’ ಎಂದರು.

ಗುತ್ತಿಗೆದಾರರು ಆತ್ಮಹತ್ಯೆ ಹಾದಿ ಹಿಡಿಯಬೇಡಿ: ‘ಬಿಲ್ ಕಾರಣಕ್ಕೆ ಗುತ್ತಿಗೆದಾರರು ಆತ್ಮಹತ್ಯೆಗೆ ಮುಂದಾಗಬಾರದು. ಆದಷ್ಟು ಶೀಘ್ರ ಬಿಲ್ ಹಣ ಪಾವತಿ ಮಾಡಲಾಗುವುದು’ ಎಂದು ಲೋಕೋಪಯೋಗಿ ಸಚಿವರೂ ಆಗಿರುವ ಉಪ ಮುಖ್ಯಮಂತ್ರಿ ಗೋವಿಂದ ಕಾರಜೋಳ ಹೇಳಿದರು.

ಜೆಡಿಎಸ್‌ನ ಗೋವಿಂದರಾಜು ಪ್ರಶ್ನೆಗೆ ಉತ್ತರಿಸಿದ ಕಾರಜೋಳ, ‘ಬಿಲ್ ಬಾಕಿ ಇವತ್ತಿನ ಸಮಸ್ಯೆ ಅಲ್ಲ. ಎಲ್ಲ ಸರ್ಕಾರಗಳ ಅವಧಿಯಲ್ಲೂ ಬಜೆಟ್ ಹಂಚಿಕೆಗೂ ಹೆಚ್ಚಿನ ಮೊತ್ತದ ಕಾಮಗಾರಿಗೆ ಅನುಮೋದನೆ ನೀಡಲಾಗಿದೆ. ಹೀಗಾಗಿ, ಬಾಕಿ ಉಳಿದಿದೆ. ಬಾಕಿ ಇರುವ ಬಿಲ್ ಮೊತ್ತದಲ್ಲಿ ಶೇ 50 ರಷ್ಟನ್ನು ಮಾರ್ಚ್ ಅಂತ್ಯದೊಳಗೆ ಬಿಡುಗಡೆ ಮಾಡಲು ಪ್ರಯತ್ನ ಮಾಡಲಾಗುವುದು’ ಎಂದು ಭರವಸೆ ನೀಡಿದರು.

ಚಾರ್ಮಾಡಿ ಘಾಟಿಯಲ್ಲಿ ವಾಹನ ಸಂಚಾರ: ‘ಚಾರ್ಮಾಡಿ ಘಾಟ್ ರಸ್ತೆಯಲ್ಲಿ ವಾಹನ ಸಂಚಾರಕ್ಕೆ ಅವಕಾಶ ನೀಡಲು ಚಿಕ್ಕಮಗಳೂರು ಜಿಲ್ಲಾಧಿಕಾರಿಗೆ ಸೂಚನೆ ನೀಡಲಾಗಿದೆ’ ಎಂದು ಕಾರಜೋಳ ಹೇಳಿದರು.

ಕಾಂಗ್ರೆಸ್‌ನ ಹರೀಶ್ ಕುಮಾರ್ ಪ್ರಶ್ನೆಗೆ ಉತ್ತರಿಸಿದ ಅವರು, ‘ಚಾರ್ಮಾಡಿ ಘಾಟ್‌ನಲ್ಲಿ 24 ಕಿಲೋ ಮೀಟರ್ ರಸ್ತೆ ಸುಸ್ಥಿತಿಯಲ್ಲಿದೆ’ ಎಂದರು.

‘ಶಿವಮೊಗ್ಗ ವಿಮಾನ ನಿಲ್ದಾಣ ಯೋಜನೆ: ಅಕ್ರಮದ ವಾಸನೆ’

ಶಿವಮೊಗ್ಗಕ್ಕೆ ಬೆಣ್ಣೆ, ವಿಜಯಪುರಕ್ಕೆ ಸುಣ್ಣ: ಶಾಸಕ ಯತ್ನಾಳ್ ಕಿಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಮಾನ ನಿಲ್ದಾಣ ಕಾಮಗಾರಿಗೆ ಅನುದಾನ ನೀಡುವ ವಿಷಯದಲ್ಲಿ ಶಿವಮೊಗ್ಗಕ್ಕೆ ಬೆಣ್ಣೆ ಹಾಗೂ ವಿಜಯಪುರಕ್ಕೆ ಸುಣ್ಣ ಎಂಬಂತೆ ಆಗಿದೆ ಎಂದು ಬಿಜೆಪಿಯ ಬಸನಗೌಡ ಪಾಟೀಲ ಯತ್ನಾಳ್ ಕಿಡಿಕಾರಿದರು.

ವಿಧಾನಸಭೆಯಲ್ಲಿ ಬುಧವಾರ ಪ್ರಶ್ನೋತ್ತರ ಅವಧಿಯಲ್ಲಿ ಎರಡು ವಿಮಾನ ನಿಲ್ದಾಣಗಳಿಗೆ ಅನುದಾನ ಮೀಸಲಿಟ್ಟಿರುವ ಬಗ್ಗೆ ಪ್ರಶ್ನೆ ಕೇಳಿದರು. ಮೂಲಸೌಕರ್ಯ ಅಭಿವೃದ್ಧಿ ಸಚಿವ ಆನಂದ್ ಸಿಂಗ್, ‘ಶಿವಮೊಗ್ಗ ವಿಮಾನ ನಿಲ್ದಾಣ ಕಾಮಗಾರಿಗೆ ₹384 ಕೋಟಿ ಹಾಗೂ ವಿಜಯಪುರ ವಿಮಾನ ನಿಲ್ದಾಣ ಅಭಿವೃದ್ಧಿಗೆ ₹220 ಕೋಟಿ ಮೊತ್ತಕ್ಕೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ‘ ಎಂದರು.

ಆಗ ಯತ್ನಾಳ್, ’ವಿಜಯಪುರ ನಿಲ್ದಾಣದಲ್ಲಿ ದೊಡ್ಡ ವಿಮಾನಗಳ ಹಾರಾಟಕ್ಕೆ ಅವಕಾಶ ಇಲ್ಲ. ಕಾರ್ಗೊ ವ್ಯವಸ್ಥೆ ಇಲ್ಲ. ಜತೆಗೆ ಕಡಿಮೆ ಅನುದಾನ ಮೀಸಲಿಡಲಾಗಿದೆ. ಈ ತಾರತಮ್ಯ ಏಕೆ‘ ಎಂದು ಪ್ರಶ್ನಿಸಿದರು.

ಯತ್ನಾಳ್

ಆನಂದ್ ಸಿಂಗ್, ’ಶಿವಮೊಗ್ಗ ವಿಮಾನ ನಿಲ್ದಾಣ ಕಾಮಗಾರಿ ಸ್ಥಳದ ಹತ್ತಿರ ಹೈಟೆನ್ಶನ್ ವೈರ್ ಇದೆ. ಅದನ್ನು ಸ್ಥಳಾಂತರ ಮಾಡುವ ಕಾಮಗಾರಿಯೂ ಇದೆ. ಹೀಗಾಗಿ, ಹೆಚ್ಚಿನ ಅನುದಾನ ಮೀಸಲಿಡಲಾಗಿದೆ‘ ಎಂದು ಸಮಜಾಯಿಷಿ ನೀಡಿದರು.

ಯತ್ನಾಳ್, ’ಲೋಕೋಪಯೋಗಿ ಇಲಾಖೆ ನೀಡಿರುವ ಅಂದಾಜು ವೆಚ್ಚಕ್ಕಿಂತ ಗುತ್ತಿಗೆದಾರರಿಗೆ ಶೇ 15ರಷ್ಟು ಮೊತ್ತ ಹೆಚ್ಚುವರಿ ಪಾವತಿ ಮಾಡಲಾಗುತ್ತಿದೆ. ಹೈಟೆನ್ಶನ್ ವೈರ್ ಸ್ಥಳಾಂತರ ಮಾಡಲು ₹10 ಕೋಟಿ ಸಾಕು. ಯೋಜನೆಯಲ್ಲಿ ಅಕ್ರಮದ ವಾಸನೆ ಕಂಡು ಬರುತ್ತಿದೆ‘ ಎಂದು ದೂರಿದರು.

ಜೆಡಿಎಸ್‌ನ ದೇವಾನಂದ ಚವ್ಹಾಣ್, ಕಾಂಗ್ರೆಸ್‌ನ ಶಿವಾನಂದ ಪಾಟೀಲ ಮಾತನಾಡಿ, ’ವಿಜಯಪುರದಲ್ಲಿ ತೋಟಗಾರಿಕಾ ಬೆಳೆಗಳನ್ನು ಹೆಚ್ಚು ಬೆಳೆಯಲಾಗುತ್ತಿದೆ. ಕಾರ್ಗೊ ವ್ಯವಸ್ಥೆ ಇದ್ದರೆ ಈ ಉತ್ಪನ್ನಗಳನ್ನು ರಫ್ತು ಮಾಡಲು ಅನುಕೂಲವಾಗುತ್ತಿತ್ತು‘ ಎಂದು ಗಮನ ಸೆಳೆದರು.

’ವಿಜಯಪುರ ವಿಮಾನ ನಿಲ್ದಾಣಕ್ಕೆ ಹೆಚ್ಚುವರಿ ಅನುದಾನ ನೀಡುವ ಬಗ್ಗೆ ಮುಖ್ಯಮಂತ್ರಿ ಅವರೊಂದಿಗೆ ಸಮಾಲೋಚನೆ ನಡೆಸುತ್ತೇನೆ‘ ಎಂದು ಆನಂದ್ ಸಿಂಗ್ ಭರವಸೆ ನೀಡಿದರು.

’ನನ್ನ ಪ್ರಶ್ನೆ ಬಂದಾಗ ಮುಖ್ಯಮಂತ್ರಿ ಸದನದಿಂದ ಹೊರಕ್ಕೆ ಹೋಗಿದ್ದು ಏಕೆ‘ ಎಂದೂ ಯತ್ನಾಳ್ ತಗಾದೆ ಎತ್ತಿದರು. ಅದಕ್ಕೆ ಸ್ಪಂದನೆ ಸಿಗಲಿಲ್ಲ.

ಹರಿಪ್ರಸಾದ್– ಆಯನೂರು ಮಾತಿನ ಚಕಮಕಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಶ್ನೆ ಕೇಳುವ ವಿಷಯದಲ್ಲಿ ಬಿಜೆಪಿಯ ಆಯನೂರು ಮಂಜುನಾಥ್ ಮತ್ತು ಕಾಂಗ್ರೆಸ್‌ನ ಬಿ.ಕೆ. ಹರಿಪ್ರಸಾದ್ ಮಧ್ಯೆ ಜಗಳ ತಾರಕಕ್ಕೇರಿದ ವಿದ್ಯಮಾನಕ್ಕೆ ವಿಧಾನಪರಿಷತ್ ಸಾಕ್ಷಿಯಾಯಿತು.

ರಾಜ್ಯದಲ್ಲಿ ಇನ್ನೂ ಜೀವಂತವಾಗಿರುವ ಮಲ ಹೊರುವ ಪದ್ಧತಿ ಕುರಿತು ವಿಧಾನಪರಿಷತ್‌ನಲ್ಲಿ ಪ್ರಶ್ನೋತ್ತರ ಅವಧಿಯಲ್ಲಿಹರಿಪ್ರಸಾದ್ ಮಾತನಾಡುತ್ತಿದ್ದ ವೇಳೆ, 'ಚರ್ಚೆ ಬೇಡ ನೀವು ಸಚಿವರಿಗೆ ಪ್ರಶ್ನೆ ಕೇಳಿ" ಎಂದು ಸಭಾಪತಿ ಸ್ಥಾನದಲ್ಲಿದ್ದ ಉಪ ಸಭಾಪತಿ ಎಂ.ಕೆ. ಪ್ರಾಣೇಶ್ ಸಲಹೆ ನೀಡಿದರು.

ಆಗ, ‘ನಾನು ಅದನ್ನೇ ಮಾಡುತ್ತಿದ್ದೇನೆ. ನೀವು ಮಧ್ಯಪ್ರವೇಶಿಸಬೇಡಿ’ ಎಂದು ಹರಿಪ್ರಸಾದ್ ಹೇಳಿದ ಮಾತು ಗದ್ದಲಕ್ಕೆ ಕಾರಣವಾಯಿತು.

‘ಯಾರು ಕೂಡ ಪೀಠವನ್ನು ಗದರಿಸುವ ಮತ್ತು ಪೀಠದಲ್ಲಿರುವವರ ಮಾತಿಗೆ ಮಧ್ಯಪ್ರವೇಶ ಮಾಡುವ ಹಾಗಿಲ್ಲ. ಹಾಗೆ ಮಾಡಿದರೆ ಪೀಠಕ್ಕೆ ಮಾಡಿದ ಅಗೌರವ. ಅದಕ್ಕೆತಕ್ಕ ಕ್ರಮ ಕೈಗೊಳ್ಳಬೇಕು’ ಎಂದು ಆಯನೂರು ಮಂಜುನಾಥ್ ಹೇಳಿದರು. ಆಗ ಕೆರಳಿದ ಹರಿಪ್ರಸಾದ್ ಮತ್ತು ಕಾಂಗ್ರೆಸ್ಸಿನ ಇತರ ಸದಸ್ಯರು, ‘ಪ್ರಶ್ನೋತ್ತರ ಅವಧಿಯಲ್ಲಿ ಚರ್ಚೆ ಬೇಡ ಎಂದು ನಮಗೆ ಹೇಳಿ ಆಯನೂರ್‌ಗೆ ಅವಕಾಶ ನೀಡಿದ್ದೀರಿ, ಇದು ತಾರತಮ್ಯ’ ಎಂದು ಅಸಮಾಧಾನ ಹೊರಹಾಕಿದರು.

‘ನೈತಿಕತೆ ಪಾಠ ಮಾಡುವವರು ನಾಲ್ಕು ನಾಲ್ಕು ಪಕ್ಷ ಬದಲಾವಣೆ ಮಾಡಿದ್ದಾರೆ. ಅವರಿಂದ ನಾವು ಕಲಿಯಬೇಕಿಲ್ಲ’ ಎಂದು ಹರಿಪ್ರಸಾದ್ ಹೇಳಿದರು.

ಇದಕ್ಕೆ ತೀಕ್ಷ್ಣವಾಗಿ ಪ್ರತಿಕ್ರಿಯಿಸಿದ ಆಯನೂರು ಮಂಜುನಾಥ್, ‘ಯಾರೋ ರೌಡಿಗಳಿಗೆ ಹೆದರಲ್ಲ, ಚುನಾವಣೆಯಲ್ಲಿ ಗೆದ್ದು ಬಂದಿದ್ದೇನೆ, ಚಮಚಾಗಿರಿ ಮಾಡಿ ಬಂದಿಲ್ಲ. ಒಂದು ಚುನಾವಣೆ ಗೆಲ್ಲಲು ಯೋಗ್ಯತೆ ಇಲ್ಲ’ ಎಂದು ಹರಿಹಾಯ್ದರು. ಈ ವೇಳೆ ಕಾಂಗ್ರೆಸ್ ಮತ್ತು ಬಿಜೆಪಿ ಸದಸ್ಯರ ನಡುವೆ ಮಾತಿನ ಸಂಘರ್ಷ ನಡೆಯಿತು.

ಸಭಾಪತಿ ಪೀಠದಲ್ಲಿದ್ದ ಪ್ರಾಣೇಶ್, ‘ಚರ್ಚೆಗೆ ಅವಕಾಶ ಇಲ್ಲ’ ಎಂದು ಗಟ್ಟಿಧ್ವನಿಯಲ್ಲಿ ಪರಿಸ್ಥಿತಿ ತಿಳಿಗೊಳಿಸಿದರು.

ಬಳಿಕ, ‘ಅಸಾಂವಿಧಾನಿಕ ಪದ ಕಡತದಿಂದ ತೆಗೆಯಬೇಕು’ ಎಂದು ವಿರೋಧ ಪಕ್ಷದ ನಾಯಕ ಎಸ್. ಆರ್. ಪಾಟೀಲ ಪಟ್ಟುಹಿಡಿದರು. ಇದಕ್ಕೆ ಸಮ್ಮತಿಸಿದ ಪ್ರಾಣೇಶ್, ಅಸಂಬದ್ಧ ಪದ ಇದ್ದರೆ ಕಡತದಿಂದ ತೆಗೆಯಲು ಸೂಚಿಸಿದರು. ಆದರೆ, ಇದಕ್ಕೆ ಅಸಮಾಧಾನ ವ್ಯಕ್ತಪಡಿದ ಆಯನೂರು, ‘ಅಸಾಂವಿಧಾನಿಕ ಪದ ಇದ್ದರೆ ಮಾತ್ರ ವಾಪಸ್ ಪಡೆಯಬೇಕು, ನನ್ನ ಪದಗಳಿಗೆ ನಾನು ಜವಾಬ್ದಾರ. ಅದು ನನ್ನ ಹಕ್ಕು’ ಎಂದು ಪ್ರತಿಪಾದಿಸಿದರು.

ಲೇವಾದೇವಿ ಮಸೂದೆಗೆ ಒಪ್ಪಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿರೋಧ ಪಕ್ಷ ಕಾಂಗ್ರೆಸ್ ಸದಸ್ಯರ ಸಭಾತ್ಯಾಗದ ನಡುವೆಯೇ ‘ಕರ್ನಾಟಕ ಲೇವಾದೇವಿದಾರರ ತಿದ್ದುಪಡಿ ಮಸೂದೆ–2021’ಗೆ ವಿಧಾನ ಪರಿಷತ್‌ನಲ್ಲಿ ಬುಧವಾರ ಅಂಗೀಕಾರಗೊಂಡಿತು.

ಮಸೂದೆಯನ್ನು ಮಂಡಿಸಿದ ಸಹಕಾರ ಸಚಿವ ಎಸ್.ಟಿ. ಸೋಮಶೇಖರ್, ಅನುಮೋದನೆ ನೀಡುವಂತೆ ಕೋರಿದರು. ಈ ವೇಳೆ, ಕಾಂಗ್ರೆಸ್‌ನ ಬಿ.ಕೆ. ಹರಿಪ್ರಸಾದ್, ಚರ್ಚೆಯಲ್ಲಿ ಭಾಗವಹಿಸದೇ ಇರುವ ನಿರ್ಧಾರ ಪ್ರಕಟಿಸಿದರು. ‘ಕೋರ್ಟ್‌ಗೆ ಹೋಗಿ ಪ್ರತಿಬಂಧಕಾಜ್ಞೆ ತಂದಿರುವ ಸಚಿವರಿಗೆ ಪ್ರಶ್ನೆ ಕೇಳದೇ ಇರಲು ಶಾಸಕಾಂಗ ಪಕ್ಷದ ಸಭೆಯಲ್ಲಿ ನಿರ್ಧರಿಸಲಾಗಿದೆ. ಹೀಗಾಗಿ, ಸಚಿವರಿಗೆ ನಾವು ಪ್ರಶ್ನೆ ಕೇಳುವುದಿಲ್ಲ’ ಎಂದು ತಮ್ಮ ಪಕ್ಷದ ಸದಸ್ಯರೊಂದಿಗೆ ಸಭಾತ್ಯಾಗ ಮಾಡಿದರು.

ಜೆಡಿಎಸ್‌ನ ಅಪ್ಪಾಜಿ ಗೌಡ, ಗೋವಿಂದರಾಜು ಮಸೂದೆಯನ್ನು ಸ್ವಾಗತಿಸಿದರು. ಧ್ವನಿ ಮತದ ಮೂಲಕ ಮಸೂದೆಗೆ ಪರಿಷತ್ ಅಂಗೀಕಾರ ನೀಡಿತು.

ವಿಧಾನಸಭೆಯಲ್ಲಿ ನೇಕಾರರ ಸಮಸ್ಯೆ ಕುರಿತ ಚರ್ಚೆ

ಸಚಿವರಿಗೆ ಸ್ವಪಕ್ಷೀಯರಿಂದಲೇ ಮುಜುಗರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನೇಕಾರರ ಸಮಸ್ಯೆ ಕುರಿತು ಆಡಳಿತ ಪಕ್ಷದ ಸದಸ್ಯರೇ ಪದೇ ಪದೇ ಪ್ರಶ್ನೆಗಳನ್ನು ಕೇಳುವ ಮೂಲಕ ಜವಳಿ ಸಚಿವ ಶ್ರೀಮಂತ ಪಾಟೀಲ ಅವರಿಗೆ ಮುಜುಗರ ತಂದ ವಿದ್ಯಮಾನ ವಿಧಾನಸಭೆಯಲ್ಲಿ ಬುಧವಾರ ನಡೆಯಿತು.

ಪ್ರಶ್ನೋತ್ತರ ಅವಧಿಯಲ್ಲಿ ಬಿಜೆಪಿಯ ಸಿದ್ದು ಸವದಿ, ನೇಕಾರರು ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ಪ್ರಶ್ನೆ ಕೇಳಿದರು. 'ನೇಕಾರ ಸಮ್ಮಾನ್ ಯೋಜನೆಯಡಿ ನೀಡಿದ ₹2 ಸಾವಿರ ಯಾವುದಕ್ಕೂ ಸಾಲದು. ಲಾಕ್‌ಡೌನ್ ಅವಧಿಯಲ್ಲಿ ನೇಕಾರರು ತಯಾರಿಸಿದ ಸೀರೆಗಳನ್ನು ಇಲಾಖೆ ಖರೀದಿ ಮಾಡಿಲ್ಲ. ನೇಕಾರರ ಸಾಲ ಮನ್ನಾ ಯೋಜನೆಯೂ ಸಂಪೂರ್ಣ ಅನುಷ್ಠಾನಗೊಂಡಿಲ್ಲ‘ ಎಂದು ಅಸಮಾಧಾನ ವ್ಯಕ್ತಪಡಿಸಿದರು. ಇದಕ್ಕೆ ಬಿಜೆಪಿಯ ಮಹಾದೇವಪ್ಪ ಯಾದವಾಡ ಧ್ವನಿಗೂಡಿಸಿದರು.

'ಹಣಕಾಸು ಇಲಾಖೆ ಒಪ್ಪಿಗೆ ನೀಡದ ಕಾರಣ ಸೀರೆ ಖರೀದಿ ಮಾಡಲು ಸಾಧ್ಯವಾಗಲಿಲ್ಲ‘ ಎಂದು ಸಚಿವರು ಸಮಜಾಯಿಷಿ ನೀಡಿದರು.

ಬಿಜೆಪಿಯ ಗೂಳಿಹಟ್ಟಿ ಶೇಖರ್, ’ವಿದ್ಯಾ ವಿಕಾಸ ಯೋಜನೆಗೆ ಜವಳಿ ಇಲಾಖೆಯಿಂದಲೇ ಸಮವಸ್ತ್ರಗಳನ್ನು ಖರೀದಿ ಮಾಡಬೇಕಿತ್ತು‘ ಎಂದರು. ನೇಕಾರರು ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ಬಿಜೆಪಿಯ ಅಭಯ ಪಾಟೀಲ, ಕಾಂಗ್ರೆಸ್‌ನ ಅಬ್ಬಯ್ಯ ಪ್ರಸಾದ್, ಟಿ. ವೆಂಕಟರಮಣಪ್ಪ ಧ್ವನಿಗೂಡಿಸಿದರು. 'ನೇಕಾರರಿಂದಲೇ ಸಮವಸ್ತ್ರ ಖರೀದಿ ಮಾಡುವ ವಿಷಯಕ್ಕೆ ಸಂಬಂಧಿಸಿದಂತೆ ಅಧ್ಯಯನಕ್ಕೆ ತಮಿಳುನಾಡಿಗೆ ಅಧಿಕಾರಿಗಳ ತಂಡ ಕಳುಹಿಸಲಾಗಿದೆ‘ ಎಂದು ಸಚಿವರು ಉತ್ತರಿಸಿದರು.

ಬಜೆಟ್ ಮೇಲಿನ ಚರ್ಚೆ ವೇಳೆ ಸಿದ್ದು ಸವದಿ ಅವರು ನೇಕಾರರು ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ಮತ್ತೆ ಪ್ರಸ್ತಾಪಿಸಿದರು. ಸರ್ಕಾರದ ಧೋರಣೆಗೆ ಚಾಟಿ ಬೀಸಿದರು. ಇಲಾಖೆಯ ಅಧೀನದ ನಿಗಮಗಳು ಆರ್ಥಿಕ ಸಂಕಷ್ಟಕ್ಕೆ ಸಿಲುಕಿವೆ. ಆದರೆ, ಅಲ್ಲಿನ ನೌಕರರಿಗೆ ₹60 ಸಾವಿರ ಸಂಬಳ ನೀಡಲಾಗುತ್ತಿದೆ. ನೇಕಾರರಿಗೆ ₹3 ಸಾವಿರ ಕೊಡಲಾಗುತ್ತಿದೆ. ನಿಗಮಗಳ ನಿವೃತ್ತ ನೌಕರರಿಗೆ ಪಿಂಚಣಿ ನೀಡಲು ಹಣವಿಲ್ಲದ ಪರಿಸ್ಥಿತಿ ಇದೆ ಎಂದು ಹೇಳಿದರು.

ಬಜೆಟ್ ಮೇಲಿನ ಚರ್ಚೆ ವೇಳೆ ಸರ್ಕಾರವನ್ನು ಸಮರ್ಥಿಸಿ ಮಾತನಾಡಬೇಕು ಎಂದು ಸಭಾಧ್ಯಕ್ಷರ ಪೀಠದಲ್ಲಿದ್ದ ಉಪಸಭಾಧ್ಯಕ್ಷ ಆನಂದ ಮಾಮನಿ ಕಿವಿಮಾತು ಹೇಳಿದರು.

’ಹಿಂದಿನ ಸರ್ಕಾರಗಳಿಗೆ ಹೋಲಿಸಿದರೆ ನಮ್ಮ ಸರ್ಕಾರ ಚೆನ್ನಾಗಿ ಕೆಲಸ ಮಾಡುತ್ತಿದೆ. ಆದರೆ, ಸಮಸ್ಯೆಗಳನ್ನು ಹೇಳಬೇಕಲ್ಲ‘ ಎಂದು ಸಿದ್ದು ಸವದಿ ಹೇಳಿದರು.

ಬಿಜೆಪಿಯ ದೊಡ್ಡನಗೌಡ ಪಾಟೀಲ, ’ನಮ್ಮ ಮನೆಯ ದೀಪ ಎಂದು ಅದಕ್ಕೆ ಮುತ್ತು ಕೊಡಲು ಆಗುತ್ತದೆಯೇ. ಮುತ್ತು ಕೊಟ್ಟರೆ ಮುಖ ಸುಟ್ಟು ಹೋಗುತ್ತದೆ‘ ಎಂದು ಮಾರ್ಮಿಕವಾಗಿ ಹೇಳಿದರು.

ಬಿಜೆಪಿಯ ಅಪ್ಪಚ್ಚು ರಂಜನ್, ’ಆಶಾ ಕಾರ್ಯಕರ್ತೆಯರು ಹಾಗೂ ಅಂಗನವಾಡಿ ಕಾರ್ಯಕರ್ತೆಯರಿಗೆ ಇಲಾಖೆ ಮೂಲಕ ಸೀರೆಗಳನ್ನು ನೀಡಬೇಕಿತ್ತು‘ ಎಂದರು.

‘ಮಲ ಹೊರುವ ಪದ್ಧತಿ ತಡೆಗೆ ಕಠಿಣ ಕಾನೂನು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಮಲ ಹೊರುವ ಪದ್ಧತಿ ನಿಷೇಧಿಸಿದ್ದರೂ ಕೆಲವು ಕಡೆ ಇಂಥ ಘಟನೆಗಳು ನಡೆಯುತ್ತಿದೆ. ಅದನ್ನು ತಡೆಯಲು ಮುಂದಿನ ದಿನಗಳಲ್ಲಿ ಕಠಿಣ ಕಾನೂನು ಕ್ರಮ ಜಾರಿಗೆ ತರಲಾಗುವುದು’ ಎಂದು ಸಮಾಜ ಕಲ್ಯಾಣ ಸಚಿವ ಬಿ. ಶ್ರೀರಾಮುಲು ತಿಳಿಸಿದರು.

ವಿಧಾನಪರಿಷತ್ತಿನಲ್ಲಿ ಕಾಂಗ್ರೆಸ್ಸಿನ ಬಿ.ಕೆ. ಹರಿಪ್ರಸಾದ್ ಪ್ರಶ್ನೆಗೆ ಉತ್ತರಿಸಿದ ಸಚಿವರು, ‘ಕಡ್ಡಾಯವಾಗಿ ಆಧುನಿಕ ಯಂತ್ರಗಳನ್ನು ಬಳಸಿ ಶೌಚಾಲಯ ಸ್ವಚ್ಛಗೊಳಿಸಬೇಕೆಂಬ ನಿಯಮವಿದ್ದರೂ ಕೆಲವು ಕಡೆ ಇಂಥ ಅಮಾನವೀಯ ಘಟನೆಗಳು ನಡೆಯುತ್ತಲೇ ಇವೆ. ಇದಕ್ಕೆ ಕಡಿವಾಣ ಹಾಕುವ ಜೊತೆಗೆ ಪೌರ ಕಾರ್ಮಿಕರಿಗೆ ಅತ್ಯಾಧುನಿಕ ಸೌಲಭ್ಯ ಕಲ್ಪಿಸಲು ಕ್ರಮ ತೆಗೆದುಕೊಳ್ಳಬೇಕು’ ಎಂದು ಆಗ್ರಹಿಸಿದರು.

ವಿಧಾನಪರಿಷತ್ ಕಲಾಪದಲ್ಲಿ ಉಪ ಮುಖ್ಯಮಂತ್ರಿ ಗೋವಿಂದ ಕಾರಜೋಳ ಮಾತನಾಡಿದರು

ಉಪ ಮುಖ್ಯಮಂತ್ರಿ ಗೋವಿಂದ ಕಾರಜೋಳ, ‘ಸಾಮಾಜಿಕ ಕಳಕಳಿ ಇಲ್ಲದ ಕಾರಣಕ್ಕೆ ದುರಂತಗಳು ಸಂಭವಿಸುತ್ತಿದೆ. ಹೊಲಸನ್ನು ಕೈಯಿಂದ ತೆಗೆಸುವುದು, ತಲೆಯ ಮೇಲೆ ಹೊರುವುದಕ್ಕೆ ನಿಷೇಧ ಹೇರಿದೆ. ಈ ಸಮುದಾಯದ ಅಭಿವೃದ್ಧಿಗೆ ಸರ್ಕಾರ ಸಫಾಯಿ ಕರ್ಮಚಾರಿ ಆಯೋಗ ರಚಿಸಿದೆ. ಎಸ್‌ಸಿಟಿಪಿ, ಟಿಎಸ್‌ಪಿ ಅನುದಾನ ಬಳಕೆಗೂ ಅವಕಾಶ ಇದೆ. ಸಫಾಯಿ ಕರ್ಮಚಾರಿಗಳ ಅನುಕೂಲಕ್ಕೆ ಇನ್ನಷ್ಟು ಅನುದಾನ ನೀಡಲಾಗುವುದು. ಇಂಥ ಘಟನೆಗಳು ಇನ್ನು ಮುಂದೆ ಸಂಭವಿಸಿದರೆ ಅಧಿಕಾರಿಗಳನ್ನೇ ಹೊಣೆ ಮಾಡಲಾಗುವುದು’ ಎಂದರು.

ಪಶುವೈದ್ಯಕೀಯ ವಿವಿ ವಿಭಜನೆ ಪ್ರಸ್ತಾವ ಇಲ್ಲ: ‘ಬೀದರ್‌ನಲ್ಲಿರುವ ರಾಜ್ಯದ ಏಕೈಕ ಪಶು ವೈದ್ಯಕೀಯ ವಿಶ್ವವಿದ್ಯಾಲಯವನ್ನು ವಿಭಜನೆಯ ಪ್ರಸ್ತಾವ ಸರ್ಕಾರದ ಮುಂದೆ ಇಲ್ಲ’ ಎಂದು ಪಶುಸಂಗೋಪನೆ ಸಚಿವ ಪ್ರಭು ಚವ್ಹಾಣ್ ತಿಳಿಸಿದರು.

ವಿಧಾನಪರಿಷತ್ತಿನಲ್ಲಿ ಅರವಿಂದಕುಮಾರ ಅರಳಿ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ‘ವಿಶ್ವವಿದ್ಯಾಲಯದಲ್ಲಿ ಖಾಲಿ ಇರುವ ಹುದ್ದೆಗಳನ್ನು ವಿಶೇಷ ಪ್ರಕರಣವೆಂದು ಪರಿಗಣಿಸಿ ನೇಮಕಾತಿ ಪ್ರಕ್ರಿಯೆಗೆ ಅನುಮತಿ ನೀಡುವಂತೆ ಕೋರಲಾಗಿದೆ. ಆರ್ಥಿಕ ಇಲಾಖೆ ಅನುಮತಿ ನೀಡಿದ ತಕ್ಷಣ ಪ್ರಕ್ರಿಯೆ ಆರಂಭಿಸಲಾಗುವುದು’ ಎಂದರು.

ಇಸ್ರೇಲ್ ಕೃಷಿ ಪದ್ಧತಿಗೆ ಅನುದಾನ ಸ್ಥಗಿತ: ಧರಣಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಇಸ್ರೇಲ್ ಕೃಷಿ ಮಾದರಿ ಅನುಷ್ಠಾನಗೊಳಿಸುವ ಯೋಜನೆಗೆ ಅನುದಾನ ಸ್ಥಗಿತಗೊಳಿಸಿರುವುದನ್ನು ಖಂಡಿಸಿ ಜೆಡಿಎಸ್ ಸದಸ್ಯರು ವಿಧಾನಸಭೆಯಲ್ಲಿ ಬುಧವಾರ ಧರಣಿ ನಡೆಸಿದರು.

ಈ ಸಂಬಂಧ ಪ್ರಶ್ನೋತ್ತರ ಅವಧಿಯಲ್ಲಿ ಜೆಡಿಎಸ್‌ನ ನಾಗನಗೌಡ ಕಂದಕೂರ ಪ್ರಶ್ನೆ ಕೇಳಿದರು. ಕೃಷಿ ಸಚಿವ ಬಿ.ಸಿ.ಪಾಟೀಲ, ಬಜೆಟ್‌ನಲ್ಲಿ ಅನುದಾನ ಹಂಚಿಕೆ ಮಾಡದ ಪರಿಣಾಮ ಯೋಜನೆ ಜಾರಿಗೊಳಿಸಲು ಸಾಧ್ಯವಾಗಿಲ್ಲ‘ ಎಂದರು.

ನಾಗನಗೌಡ ಮಾತನಾಡಿ, ’ಮೈತ್ರಿ ಸರ್ಕಾರದ ಮುಖ್ಯಮಂತ್ರಿಯಾಗಿದ್ದ ಎಚ್.ಡಿ.ಕುಮಾರಸ್ವಾಮಿ ಈ ಯೋಜನೆಗೆ ₹150 ಕೋಟಿ ಅನುದಾನ ಮೀಸಲಿಟ್ಟಿದ್ದರು‘ ಎಂದರು. ಜೆಡಿಎಸ್‌ನ ಕೆ.ಎಂ.ಶಿವಲಿಂಗೇಗೌಡ, ’ಕೃಷಿ ಕ್ಷೇತ್ರಕ್ಕೆ ಮೀಸಲಿಟ್ಟ ಅನುದಾನ ಕಿತ್ತುಕೊಂಡಿರುವುದು ಸರಿಯಲ್ಲ‘ ಎಂದರು.

ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ, ’ಈ ಬಗ್ಗೆ ಸಚಿವರು ಉತ್ತರ ನೀಡಿದ್ದಾರೆ. ಈಗ ನಿಮ್ಮ ಪ್ರಶ್ನೆ ಕೇಳಿ‘ ಎಂದು ಜೆಡಿಎಸ್‌ನ ಎಚ್.ಕೆ.ಕುಮಾರಸ್ವಾಮಿ ಅವರಿಗೆ ಸೂಚಿಸಿದರು.

ಆಗ ಜೆಡಿಎಸ್‌ನ ಡಾ.ಕೆ.ಅನ್ನದಾನಿ, ಸಿ.ಎನ್.ಬಾಲಕೃಷ್ಣ, ಎಂ.ಕೃಷ್ಣಾರೆಡ್ಡಿ, ರಾಜ್ಯ ಸರ್ಕಾರ ಅನುದಾನ ಹಂಚಿಕೆಯಲ್ಲಿ ತಾರತಮ್ಯ ಮಾಡುತ್ತಿದೆ‘ ಎಂದು ದೂರಿದರು. ಬಳಿಕ ಸಭಾಧ್ಯಕ್ಷರ ಪೀಠದ ಎದುರು ಬಂದು ಧರಣಿ ನಡೆಸಿದರು.

’ಜೆಡಿಎಸ್ ಸದಸ್ಯರು ಸೌಜನ್ಯ ಮೀರಿ ವರ್ತಿಸುತ್ತಿದ್ದೀರಿ. ಎಲ್ಲದಕ್ಕೂ ರಾಜಕೀಯ ಎಳೆದು ತರುತ್ತೀರಿ. ಇಂತಹ ವರ್ತನೆ ಸರಿಯಲ್ಲ‘ ಎಂದು ಕಾಗೇರಿ ಎಚ್ಚರಿಕೆ ನೀಡಿದರು. ಜೆಡಿಎಸ್ ಸದಸ್ಯರು ಸಮರ್ಥಿಸಿಕೊಳ್ಳಲು ಮುಂದಾದರು. ಮೊದಲು ಧರಣಿ ಕೈಬಿಡಿ ಎಂದು ಕಾಗೇರಿ ಸೂಚಿಸಿದರು. ನಂತರ ಸದಸ್ಯರು ಧರಣಿ ಕೈಬಿಟ್ಟರು. ‘ಅನುದಾನ ನೀಡುವ ಕುರಿತು ಮುಖ್ಯಮಂತ್ರಿ ಅವರೊಂದಿಗೆ ಸಮಾಲೋಚನೆ ನಡೆಸುತ್ತೇನೆ’ ಎಂದು ಬಿ.ಸಿ.ಪಾಟೀಲ ಭರವಸೆ ನೀಡಿದರು.

‘ಶೈಕ್ಷಣಿಕ ಸಮೀಕ್ಷೆ ವರದಿ: ಪರಿಶೀಲಿಸಿ ತೀರ್ಮಾನ‘

ಬೆಂಗಳೂರು: ‘ರಾಜ್ಯದಲ್ಲಿ ನಡೆದ ‘ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ವರದಿಯನ್ನು ಸರ್ಕಾರ ಇನ್ನೂ ಸ್ವೀಕರಿಸಿಲ್ಲ. ಹಿಂದುಳಿದ ವರ್ಗಗಳ ಆಯೋಗಕ್ಕೆ ಹೊಸದಾಗಿ ಜಯಪ್ರಕಾಶ್ ಹೆಗ್ಡೆ ಅವರನ್ನು ನೇಮಿಸಲಾಗಿದ್ದು, ವರದಿಯನ್ನು ಸ್ವೀಕರಿಸುವ ಕುರಿತು ಪರಿಶೀಲಿಸಿ ಕ್ರಮ ತೆಗೆದುಕೊಳ್ಳಲಾಗುವುದು’ ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವ ಕೋಟ ಶ್ರೀನಿವಾಸ ಪೂಜಾರಿ ಹೇಳಿದರು.

ವಿಧಾನ ಪರಿಷತ್‌ನಲ್ಲಿ ಕಾಂಗ್ರೆಸ್ಸಿನ ಪಿ.ಆರ್. ರಮೇಶ್ ಕೇಳಿದ ಪ್ರಶ್ನೆಗೆ ಉತ್ತರಿಸಿದ ಸಚಿವರು, ‘ಹಿಂದುಳಿದ ವರ್ಗಗಳಿಗೆ ನ್ಯಾಯ ಕೊಡುವ ಉದ್ದೇಶದಿಂದ ಈ ಸಮೀಕ್ಷೆ ನಡೆಸಲಾಗಿದೆ’ ಎಂದರು.

‘ರಾಜ್ಯದಲ್ಲಿ ಪ್ರವರ್ಗಗಳ ಮೀಸಲಾತಿ ಪ್ರಮಾಣ ಶೇ 32ರಷ್ಟು ಇದೆ. ಈ ಪ್ರಮಾಣವನ್ನು ಹೆಚ್ಚಿಸುವಂತೆ ಹೋರಾಟಗಳು ನಡೆಯುತ್ತಿವೆ. ಮೀಸಲಾತಿ ಪ್ರಮಾಣ ಶೇ 50ರಷ್ಟು ಹೆಚ್ಚಿಸುವ ಸಂಬಂಧ ಸುಪ್ರೀಂ ಕೋರ್ಟ್ ಕೇಳಿರುವ ಅಭಿಪ್ರಾಯವನ್ನು ಶೀಘ್ರದಲ್ಲಿಯೇ ಕಳುಹಿಸಿಕೊಡಲಾಗುವುದು’ ಎಂದರು.

900 ಪಿಎಚ್‌ಸಿ ಅಭಿವೃದ್ಧಿಗೆ ಸಿಎಸ್‌ಆರ್ ನಿಧಿ

ಬೆಂಗಳೂರು: ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ (ಸಿಎಸ್‌ಆರ್) ನಿಧಿ ಬಳಸಿಕೊಂಡು ರಾಜ್ಯದ ಎಲ್ಲ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು (ಪಿಎಚ್‌ಸಿ) ಅಭಿವೃದ್ಧಿಪಡಿಸಲಾಗುವುದು ಎಂದು ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ತಿಳಿಸಿದರು.



ಸುಧಾಕರ್

ಸಿಎಸ್‌ಆರ್ ನಿಧಿ ಬಳಕೆಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರ ರಚಿಸಿರುವ ಸಿಎಸ್‌ಆರ್ ಸಮಿತಿಯ ಅಧ್ಯಕ್ಷೆ ಗೀತಾಂಜಲಿ ಕಿರ್ಲೋಸ್ಕರ್ ಜತೆ ಬುಧವಾರ ವಿಧಾನಸೌಧದಲ್ಲಿ ಸಭೆ ನಡೆಸಿದ ಬಳಿಕ ಮಾಧ್ಯಮ ಪ್ರತಿನಿಧಿಗಳ ಜತೆ ಮಾತನಾಡಿದ ಅವರು, ‘ರಾಜ್ಯದಲ್ಲಿ ಒಟ್ಟು 2,500 ಪಿಎಚ್‌ಸಿಗಳಿವೆ. ಮೊದಲ ಹಂತದಲ್ಲಿ ಸಿಎಸ್‌ಆರ್ ನಿಧಿ ಬಳಸಿ 900 ಪಿಎಚ್‌ಸಿಗಳನ್ನು ಅಭಿವೃದ್ಧಿಪಡಿಸಲಾಗುವುದು’ ಎಂದರು.

2014–15ರ ಸಂದರ್ಭದಲ್ಲಿ ರಾಜ್ಯದಲ್ಲಿನ ಕಾರ್ಪೊರೇಟ್ ಕಂಪನಿಗಳು ಸುಮಾರು ₹ 5,000 ಕೋಟಿಯಷ್ಟು ಮೊತ್ತವನ್ನು ಸಿಎಸ್‌ಆರ್ ನಿಧಿಯಡಿ ವೆಚ್ಚ ಮಾಡುತ್ತಿದ್ದವು. ಈಗ ಆ ಮೊತ್ತ ದುಪ್ಪಟ್ಟಾಗಿದೆ. ಸಿಎಸ್‌ಆರ್ ನಿಧಿಯ ಶೇಕಡ 25ರಷ್ಟನ್ನು ಆರೋಗ್ಯ ಕ್ಷೇತ್ರಕ್ಕೆ ಬಳಸಲು ಅವಕಾಶ ಕಲ್ಪಿಸಿ ಕೇಂದ್ರ ಸರ್ಕಾರ ಕಾಯ್ದೆಗೆ ತಿದ್ದುಪಡಿ ತಂದಿದೆ. ಈ ಅವಕಾಶ ಬಳಸಿಕೊಂಡು ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಅಭಿವೃದ್ಧಿಪಡಿಸಲಾಗುವುದು ಎಂದು ತಿಳಿಸಿದರು.

‘ಜೈ ಶ್ರೀರಾಮ್ ಎಂದರೆ ಪೆಟ್ರೋಲ್ ಬೆಲೆ ಇಳಿಯುತ್ತಾ?’

ಬೆಂಗಳೂರು: ‘ಪೆಟ್ರೋಲ್, ಡೀಸೆಲ್ ಬೆಲೆ ಹಿಂದೆಂದೂ ಕಾಣದಷ್ಟು ಏರಿಕೆಯಾಗಿದೆ. ಇದರಿಂದ ಜನಜೀವನ ದುಸ್ತರವಾಗಿದೆ. ಜೈ ಶ್ರೀರಾಮ್, ಜೈ ಹನುಮಾನ್ ಎಂದರೆ ಪೆಟ್ರೋಲ್ ದರ ಇಳಿಯುತ್ತಾ’ ಎಂದು ವಿಧಾನ ಪರಿಷತ್‌ನಲ್ಲಿ ಜೆಡಿಎಸ್ ಸದಸ್ಯ ಮರಿತಿಬ್ಬೇಗೌಡ ಬುಧವಾರ ಪ್ರಶ್ನಿಸಿದರು.

ಮರಿತಿಬ್ಬೇಗೌಡ

ಬಜೆಟ್ ಮೇಲಿನ ಚರ್ಚೆಯಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಪೆಟ್ರೋಲಿಯಂ ಉತ್ಪನ್ನಗಳ ದರ ಏರಿಕೆಯಿಂದ ಅಗತ್ಯ ವಸ್ತುಗಳ ಬೆಲೆಯಲ್ಲಿ ಗಣನೀಯ ಏರಿಕೆ ಉಂಟಾಗಿರುವ ಹೆಚ್ಚಳದ ಕುರಿತು ಪ್ರಸ್ತಾಪಿಸುತ್ತಾ ಅವರು ಈ ಪ್ರಶ್ನೆ ಹಾಕಿದರು. ಇದರಿಂದ ಕೆರಳಿದ ಬಿಜೆಪಿ ಸದಸ್ಯರು ತೀವ್ರ ವಿರೋಧ ವ್ಯಕ್ತಪಡಿಸಿದರು.

‘ರಾಮನನ್ನು ನೀವು ಗುತ್ತಿಗೆ ತೆಗೆದುಕೊಂಡಿದ್ದೀರಾ’ ಎಂದು ಕಾಂಗ್ರೆಸ್ ಸದಸ್ಯರು ಬಿಜೆಪಿಯವರನ್ನು ಕೇಳಿದರು. ಕೆಲಕಾಲ ಇದು ಮಾತಿನ ಸಮರಕ್ಕೆ ಕಾರಣವಾಯಿತು.

‘ಜೈ ಜವಾನ್– ಜೈ ಕಿಸಾನ್ ಎಂಬ ಘೋಷಣೆಯನ್ನು ಮಾಜಿ ಪ್ರಧಾನಿ ಲಾಲ್ ಬಹದ್ದೂರ್ ಶಾಸ್ತ್ರಿ ನೀಡಿದ್ದರು. ಈಗ ಕೇಂದ್ರದ ಬಿಜೆಪಿ ಸರ್ಕಾರ ಜೈ ಜವಾನ್ ಜೈಲ್ ಕಿಸಾನ್ ಎಂದು ಬದಲಾವಣೆ ಮಾಡಿದೆ’ ಎಂದು ಟೀಕಿಸಿದರು.

ಮಿತಿ ಮೀರಿದ ಭ್ರಷ್ಟಾಚಾರ: ರಾಜ್ಯದಲ್ಲಿ ಭ್ರಷ್ಟಾಚಾರ ಮಿತಿ ಮೀರಿದೆ. ಕೆಲವೇ ಮಂದಿ ಐಎಎಸ್ ಅಧಿಕಾರಿಗಳು ಸರ್ಕಾರ ನಡೆಸುತ್ತಿದ್ದಾರೆ. ಅಧಿಕಾರಕ್ಕೆ ಬಂದ ತಕ್ಷಣ ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ) ರದ್ದುಪಡಿಸಿ ಲೋಕಾಯುಕ್ತ ಬಲಗೊಳಿಸುವ ಭರವಸೆ ನೀಡಿದ್ದ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಈಗ ಮೌನ ತಾಳಿದ್ದಾರೆ ಎಂದು ಮರಿತಿಬ್ಬೇಗೌಡ ಆರೋಪಿಸಿದರು.

‘ಮೈಸೂರಿಗೆ ಚಿತ್ರ ನಗರಿ’

ಬೆಂಗಳೂರು: ‘ಮೈಸೂರು ಜಿಲ್ಲೆಯಲ್ಲಿಯೇ ಚಿತ್ರ ನಗರಿ ಸ್ಥಾಪಿಸಲು ತೀರ್ಮಾನಿಸಲಾಗಿದೆ’ ಎಂದು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಸಚಿವ ಸಿ.ಸಿ. ಪಾಟೀಲ ತಿಳಿಸಿದರು.

ವಿಧಾನ ಪರಿಷತ್‌ನಲ್ಲಿ ಶೂನ್ಯ ವೇಳೆಯಲ್ಲಿ ಜೆಡಿಎಸ್‌ನ ಸಂದೇಶ್ ನಾಗರಾಜು ಅವರು ಮೈಸೂರಿನಲ್ಲಿ ಚಿತ್ರನಗರಿ ಸ್ಥಾಪಿಸುವ ಕುರಿತು ಬಜೆಟ್ ಮೇಲಿನ ಚರ್ಚೆಗೆ ನೀಡುವ ಉತ್ತರದಲ್ಲಿಯೇ ಘೋಷಿಸಬೇಕೆಂದು ಆಗ್ರಹಿಸಿದಾಗ, ಸಚಿವರು ಈ ಉತ್ತರ ನೀಡಿದರು.

‘ಬೆಂಗಳೂರಿನ ಸುತ್ತಮುತ್ತ ಚಲನಚಿತ್ರ ನಗರಿ, ಚಲನಚಿತ್ರ ವಿಶ್ವವಿದ್ಯಾಲಯ ಸ್ಥಾಪಿಸಲು ಸೂಕ್ತ ಹಾಗೂ ಸುಮಾರು 50ರಿಂದ 70 ಎಕರೆ ಜಮೀನು ಲಭ್ಯ ಇಲ್ಲ. ಹೀಗಾಗಿ, ಮೈಸೂರು ಜಿಲ್ಲೆಯ ನಂಜನಗೂಡು ತಾಲ್ಲೂಕಿನ ಹಿಮ್ಮಾವು ಗ್ರಾಮದಲ್ಲಿ 110.8 ಎಕರೆ ಜಮೀನನಲ್ಲಿ ಚಿತ್ರ ನಗರಿ ಸ್ಥಾಪಿಸುವ ಉದ್ದೇಶಿಸಲಾಗಿದೆ’ ಎಂದು ಸಚಿವರು ತಿಳಿಸಿದರು.

ಕನ್ನಡ ಚಿತ್ರೋದ್ಯಮ ಪ್ರೋತ್ಸಾಹಿಸಿ, ಉತ್ತೇಜಿಸಲು ಒಳಾಂಗಣ ಮತ್ತು ಹೊರಾಂಗಣ ಚಿತ್ರೀಕರಣ, ಚಿತ್ರೀಕರಣದ ಪೋಸ್ಟ್ ಪ್ರೊಡಕ್ಷನ್ ಕೆಲಸ, ಥೀಮ್ ಪಾರ್ಕ್ ಮತ್ತಿತರ ಚಟುವಟಿಕೆಯನ್ನು ಒಂದೇ ಸೂರಿನಡಿಯಲ್ಲಿ ತರುವ ಉದ್ದೇಶದಿಂದ ಚಿತ್ರ ನಗರಿ ನಿರ್ಮಾಣ ಮಾಡುವುದಾಗಿ 2020-21ನೇ ಸಾಲಿನ ಬಜೆಟ್ ಭಾಷಣದಲ್ಲಿ ಮುಖ್ಯಮಂತ್ರಿ ಘೋಷಿಸಿದ್ದರು.

‘ನಟನಾ ಕೌಶಲ್ಯಕ್ಕೆ ಪ್ರಸಿದ್ಧಿಯಾಗಿರುವ ಕರ್ನಾಟಕದಲ್ಲಿ ಜಾಗತಿಕ ಗುಣಮಟ್ಟದ ಫಿಲಂ ಸಿಟಿಯನ್ನು ಬೆಂಗಳೂರಿನಲ್ಲಿ ಒಟ್ಟು ₹ 500 ಕೋಟಿ ವೆಚ್ಚದಲ್ಲಿ ಖಾಸಗಿ ಸಹಭಾಗಿತ್ವದಲ್ಲಿ ಸ್ಥಾಪಿಸಲಾಗುವುದು’ ಎಂದು ಹೇಳಿದ್ದರು.

ಮಾರುಕಟ್ಟೆಗಳಲ್ಲಿ ಕುಷ್ಠರೋಗಿಗಳಿಗಿದ್ದ ನಿಷೇಧ ತೆರವು

ಬೆಂಗಳೂರು: ಕರ್ನಾಟಕ ಪೌರಸಭೆಗಳ ಕಾಯ್ದೆ–1964ರಲ್ಲಿ ಕುಷ್ಠರೋಗಿಗಳನ್ನು ಮಾರುಕಟ್ಟೆಗಳಿಂದ ಹೊರಹಾಕಲು ಅವಕಾಶ ಕಲ್ಪಿಸಿದ್ದ ಸೆಕ್ಷನ್ 245ಕ್ಕೆ ತಿದ್ದುಪಡಿ ತರುವ ‘ಕರ್ನಾಟಕ ಪೌರಸಭೆಗಳ ತಿದ್ದುಪಡಿ ಮಸೂದೆ–2021’ಕ್ಕೆ ವಿಧಾನ ಪರಿಷತ್ ಬುಧವಾರ ಒಪ್ಪಿಗೆ ನೀಡಿತು.

ವಿಧಾನಸಭೆಯಲ್ಲಿ ಅಂಗೀಕಾರ ಪಡೆದಿದ್ದ ಮಸೂದೆಯನ್ನು ಪೌರಾಡಳಿತ ಸಚಿವರ ಪರವಾಗಿ ಸಭಾ ನಾಯಕ ಕೋಟ ಶ್ರೀನಿವಾಸ ಪೂಜಾರಿ ವಿಧಾನ ಪರಿಷತ್‌ನಲ್ಲಿ ಮಂಡಿಸಿದರು. ಧ್ವನಿಮತದ ಮೂಲಕ ಮಸೂದೆಗೆ ಅಂಗೀಕಾರ ನೀಡಲಾಗಿತ್ತು.

‘ಕುಷ್ಠರೋಗಿಗಳನ್ನು ಹೊರ ಹಾಕಬಹುದು‘ ಎಂಬ ಅಂಶವನ್ನು ಕೈಬಿಡುವಂತೆ ಸುಪ್ರೀಂಕೋರ್ಟ್ ನಿರ್ದೇಶನ ನೀಡಿತ್ತು. ಅದರಂತೆ, ಕಾಯ್ದೆಗೆ ತಿದ್ದುಪಡಿ ತರಲಾಗಿದೆ.

ಅಕ್ರಮ ಗಣಿಗಾರಿಕೆ ಕುರಿತ ಎಸ್‌ಐಟಿ ಅವಧಿ ವಿಸ್ತರಣೆ

3,152 ಆರೋಗ್ಯ ಕೇಂದ್ರಗಳಿಗೆ ಟೆಲಿಮೆಡಿಸಿನ್ ಸೌಲಭ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ 1,120 ಪ್ರಾಥಮಿಕ ಆರೋಗ್ಯ ಕೇಂದ್ರಗಳು ಮತ್ತು 2,032 ಆರೋಗ್ಯ ಮತ್ತು ಸ್ವಾಸ್ಥ್ಯ ಕೇಂದ್ರಗಳಲ್ಲಿ ಟೆಲಿಮೆಡಿಸಿನ್ ಸೌಲಭ್ಯ ಕಲ್ಪಿಸಲು ಸಚಿವ ಸಂಪುಟ ಸಭೆ ಒಪ್ಪಿಗೆ ನೀಡಿದೆ.

ಇದಕ್ಕಾಗಿ ರಾಷ್ಟ್ರೀಯ ಆರೋಗ್ಯ ಮಿಷನ್‌ನಿಂದ ₹18.96 ಕೋಟಿ ಸಿಗಲಿದ್ದು, ಕೆಟಿಟಿಪಿ ಕಾಯ್ದೆಯಡಿ ಅಗತ್ಯ ಸಾಧನ– ಸಲಕರಣೆಗಳನ್ನು ಖರೀದಿಸಲು ಒಪ್ಪಿಗೆ ನೀಡಲಾಗಿದೆ ಎಂದು ಮೂಲಗಳು ತಿಳಿಸಿವೆ. 2020–21 ನೇ ಸಾಲಿಗೆ 1 ರಿಂದ 10 ನೇ ತರಗತಿವರೆಗಿನ ವಿದ್ಯಾರ್ಥಿಗಳಿಗೆ ಉಚಿತ ಪಠ್ಯ ಪುಸ್ತಕಗಳನ್ನು ವಿತರಿಸಲು ₹153.91 ಕೋಟಿ ಅನುದಾನ ನೀಡಲು ಒಪ್ಪಿಗೆ ನೀಡಲಾಯಿತು. ಎಲ್ಲ ಸರ್ಕಾರಿ ಮತ್ತು ಅನುದಾನಿತ ಶಾಲಾ ವಿದ್ಯಾರ್ಥಿಗಳಿಗೆ ಹಾಗೂ 74 ಆದರ್ಶ ಶಾಲೆಗಳ(6 ನೇ ತರಗತಿಯಿಂದ 10 ನೇ ತರಗತಿ) ವಿದ್ಯಾರ್ಥಿಗಳಿಗೆ ಉಚಿತ ಪಠ್ಯ ಪುಸ್ತಕ ವಿತರಿಸಲಾಗುವುದು.

ಮಸೂದೆ ಮಂಡನೆಗೆ ಒಪ್ಪಿಗೆ:

- ಕರ್ನಾಟಕ ಸಹಕಾರಿ ಸೊಸೈಟಿಗಳ(-ತಿದ್ದುಪಡಿ) ಮಸೂದೆ 2021 ಮತ್ತು ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ) ಮಸೂದೆ
- ಕರ್ನಾಟಕ ವಿತ್ತೀಯ ಹೊಣೆಗಾರಿಕೆ ತಿದ್ದುಪಡಿ ಮಸೂದೆ 2021
- ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ತಿದ್ದುಪಡಿ ಮಸೂದೆ 2021
- ಕರ್ನಾಟಕ ರಾಜ್ಯ ಕೈಗಾರಿಕಾ ಭದ್ರತಾಪಡೆ ವೃಂದ ನೇಮಕ ನಿಯಮ 2021
- ಕರ್ನಾಟಕ ಕಾರಾಗೃಹ ಅಭಿವೃದ್ಧಿ ಮಂಡಳಿ ಮಸೂದೆ 2021
- ಕರ್ನಾಟಕ ನಗರ ಮತ್ತು ಪಟ್ಟಣ ಯೋಜನೆ 3ನೇ ತಿದ್ದುಪಡಿ ಮಸೂದೆ

ಪ್ರಮುಖ ನಿರ್ಣಯಗಳು

- ಲೋಕಾಯುಕ್ತಕ್ಕೆ ಗುತ್ತಿಗೆ ಆಧಾರದಲ್ಲಿ 12 ಹಿರಿಯ ಸಹಾಯಕ ಪಬ್ಲಿಕ್ ಪ್ರಾಸಿಕ್ಯೂಟರ್ ನೇಮಕ
- ರಾಣೆಬೆನ್ನೂರಿನಲ್ಲಿ ತಾಲ್ಲೂಕು ಮಟ್ಟದ ಆಸ್ಪತ್ರೆಯನ್ನು 50 ಹಾಸಿಗೆಗಳ ಸಾಮರ್ಥ್ಯದಿಂದ 100 ಹಾಸಿಗೆಗಳ ಸಾಮರ್ಥ್ಯಕ್ಕೆ ಮೇಲ್ದರ್ಜೆಗೇರಿಸಲು ಪರಿಷ್ಕೃತ ಅಂದಾಜು ₹10.84 ಕೋಟಿಗೆ ಅನುಮೋದನೆ.
- ಕಲ್ಯಾಣ ಕರ್ನಾಟಕ ಪ್ರದೇಶದಲ್ಲಿ ವಿಶೇಷ ನೇಮಕಾತಿಗೆ ಸಂಬಂಧಿಸಿದಂತೆ ಕರ್ನಾಟಕ ಆರೋಗ್ಯ ಮತ್ತು ಕುಟುಂಬ ಕಲ್ಯಾಣಗಳ ಸೇವೆಗಳ ನೇಮಕಾತಿ ವಿಶೇಷ ಕಾನೂನು 2020 ಕ್ಕೆ ಅನುಮೋದನೆ
- ಬೆಳಗಾವಿ ಜಿಲ್ಲೆ ಅಥಣಿ ತಾಲ್ಲೂಕಿನ ಸತ್ತಿ ಮತ್ತು ಇತರ ಎಂಟು ಗ್ರಾಮಗಳಿಗೆ ಬಹುಗ್ರಾಮ ಯೋಜನೆ ಜಾರಿಗೆ ₹45.39 ಕೋಟಿ ಅನುಮೋದನೆ. ಇದಕ್ಕೆ ಕೇಂದ್ರದ ಜಲ ಜೀವನ್ ಮಿಷನ್ ಮತ್ತು ನಬಾರ್ಡ್‌ನಿಂದ ನೆರವು ಸಿಗಲಿದೆ.
- ಬೆಳಗಾವಿ ಮತ್ತು ಮಂಗಳೂರಿನಲ್ಲಿ ₹31.66 ಕೋಟಿ ವೆಚ್ಚದಲ್ಲಿ ಕರ್ನಾಟಕ ಜರ್ಮನ್ ತಂತ್ರಜ್ಞಾನ ತರಬೇತಿ ಸಂಸ್ಥೆ ಕಟ್ಟಡ ನಿರ್ಮಾಣಕ್ಕೆ ಅನುಮೋದನೆ.
- ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಕದ್ರಿ ಮಾರುಕಟ್ಟೆ ಸಂಕೀರ್ಣ ನಿರ್ಮಾಣಕ್ಕೆ ₹12.30 ಕೋಟಿ ನೀಡಲು ಅನುಮೋದನೆ

ಕಲಬುರ್ಗಿ ರೈಲ್ವೆ ವಿಭಾಗ ರಚನೆ ಕೈಬಿಟ್ಟ ಕೇಂದ್ರ

ಒಂದನೇ ಪುಟದಿಂದ...

ಕಲಬುರ್ಗಿ ಸಂಸದ ಡಾ.ಉಮೇಶ ಜಾಧವ ಅವರ ಪ್ರಶ್ನೆಗೆ ಲಿಖಿತ ಉತ್ತರ ನೀಡಿರುವ ಗೋಯಲ್, 'ಹಿರಿಯ ರೈಲ್ವೆ ಅಧಿಕಾರಿಗಳ ತಂಡವು ರೈಲ್ವೆ ವಿಭಾಗವನ್ನು ಆರಂಭಿಸುವ ಬಗ್ಗೆ ಪರಿಶೀಲನೆ ನಡೆಸಿತು. ಕಾರ್ಯಾಚರಣೆ, ಹಣಕಾಸು, ಆಡಳಿತಾತ್ಮಕ ಸೇರಿದಂತೆ ಇತರ ಅಂಶಗಳನ್ನು ಗಮನಿಸಿದ ಬಳಿಕ ಈ ಪ್ರಸ್ತಾವ ಕೈಬಿಡಬೇಕು ಎಂದು ವರದಿ ಸಲ್ಲಿಸಿದೆ. ಈ ವರದಿಯನ್ನು ಸಕ್ಷಮ ಪ್ರಾಧಿಕಾರವು ಒಪ್ಪಿಕೊಂಡಿದೆ' ಎಂದು ತಿಳಿಸಿದ್ದಾರೆ.

ಮನಮೋಹನ್ ಸಿಂಗ್ ನೇತೃತ್ವದ ಯುಪಿಎ ಸರ್ಕಾರದಲ್ಲಿ ರೈಲ್ವೆ ಸಚಿವರಾಗಿದ್ದ ಮಲ್ಲಿಕಾರ್ಜುನ ಖರ್ಗೆ ಅವರು ಕಲಬುರ್ಗಿ ರೈಲ್ವೆ ವಿಭಾಗ ಆರಂಭಿಸುವ ನಿರ್ಧಾರವನ್ನು ಬಜೆಟ್‌ನಲ್ಲಿ ಘೋಷಿಸಿದ್ದರು. ರಾಜ್ಯ ಸರ್ಕಾರ ಇದಕ್ಕೆ ಜಮೀನು ನೀಡಿದೆ.

ಆಧಾರ್ ಕಾರ್ಡ್‌ಗೆ ಆಗದ ಜೋಡಣೆ: ಕೇಂದ್ರಕ್ಕೆ 'ಸುಪ್ರೀಂ' ನೋಟಿಸ್

4 ಕೋಟಿ ಪಡಿತರ ಚೀಟಿ ರದ್ದು

ಪ್ರಜಾವಾಣಿ ವಾರ್ತೆ

ನವದೆಹಲಿ: ಆಧಾರ್ ಕಾರ್ಡ್‌ನೊಂದಿಗೆ ಜೋಡಣೆಯಾಗಿಲ್ಲ ಎಂಬ ಕಾರಣದಿಂದ ದೇಶದಾದ್ಯಂತ 4 ಕೋಟಿಗೂ ಅಧಿಕ ಪಡಿತರ ಚೀಟಿಗಳನ್ನು ರದ್ದುಪಡಿಸಿರುವ ಕುರಿತು ಪ್ರತಿಕ್ರಿಯೆ ನೀಡುವಂತೆ ಸೂಚಿಸಿ ಸುಪ್ರೀಂ ಕೋರ್ಟ್ ಕೇಂದ್ರಕ್ಕೆ ಬುಧವಾರ ನೋಟಿಸ್ ಜಾರಿಗೊಳಿಸಿದೆ.

ಪಡಿತರ ಚೀಟಿ ರದ್ದಾಗಿದ್ದರಿಂದ ಆಹಾರ ದೊರೆಯದೇ ಹಸಿವಿನಿಂದ ಮೃತಪಟ್ಟಿದ್ದಾಳೆ ಎನ್ನಲಾದ ಜಾರ್ಖಂಡ್‌ನ 11 ವರ್ಷದ ಬಾಲಕಿಯ ತಾಯಿ ಕೊಯ್ಲಿ ದೇವಿ ಅವರು ಸಲ್ಲಿಸಿರುವ ಮೇಲ್ಮನವಿಯ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಎಸ್.ಎ. ಬೊಬಡೆ ನೇತೃತ್ವದ ಪೀಠ ಈ ನೋಟಿಸ್ ಜಾರಿ ಮಾಡಿದೆ.

ಮುಖ್ಯಾಂಶಗಳು

- ಸರ್ಕಾರದ ಕ್ರಮವನ್ನು ತಪ್ಪಾಗಿ ಗ್ರಹಿಸಿ ಅರ್ಜಿ ಸಲ್ಲಿಕೆ– ಕೇಂದ್ರದ ಪರ ವಾದ
- ಆಧಾರ್ ಇರಲಿ ಅಥವಾ ಇಲ್ಲದಿರಲಿ ಆಹಾರದ ಹಕ್ಕನ್ನು ನಿರಾಕರಿಸಲಾಗದು– ಕೇಂದ್ರ

'2017ರಿಂದ ಬಾಕಿ ಇರುವ ಈ ಪ್ರಕರಣ ಅತ್ಯಂತ ಗಂಭೀರವಾಗಿದ್ದು, ನಾವು ವಿಚಾರಣೆ ಆರಂಭಿಸುತ್ತೇವೆ. ಈ ಸಂಬಂಧ ನಾಲ್ಕು ವಾರಗಳೊಳಗೆ ಪ್ರತಿಕ್ರಿಯೆ ನೀಡಬೇಕು. ಅಲ್ಲದೆ, ಈ ಮೇಲ್ಮನವಿಯನ್ನು ವ್ಯತಿರಿಕ್ತವಾಗಿ ಪರಿಗಣಿಸಬಾರದು ಎಂದು ನ್ಯಾಯಪೀಠವು ಕೇಂದ್ರ ಸರ್ಕಾರಕ್ಕೆ ಸೂಚಿಸಿದೆ.

ಆಧಾರ್ ಜೋಡಣೆ ಆಗಿಲ್ಲ ಎಂಬ ನೆಪ ಮುಂದಿರಿಸಿ ಕೇಂದ್ರ ಸರ್ಕಾರ ಅಂದಾಜು 3 ಕೋಟಿಯಷ್ಟು ಹಾಗೂ ಆಯಾ ರಾಜ್ಯ ಸರ್ಕಾರಗಳು ತಲಾ 10ರಿಂದ 15 ಲಕ್ಷದಷ್ಟು ಪಡಿತರ ಚೀಟಿಗಳನ್ನು ರದ್ದುಪಡಿಸಿವೆ ಎಂದು ಅರ್ಜಿದಾರರ ಪರ ವಕೀಲ ಕಾಲಿನ್ ಗೊನ್ಸಾಲ್ವೀಸ್ ತಿಳಿಸಿದ್ದಾರೆ.

ಬುಡಕಟ್ಟು ಜನರೇ ವಾಸಿಸುವಲ್ಲಿ ಬೆರಳಚ್ಚು (ಬಯೋಮೆಟ್ರಿಕ್) ಗುರುತಿಸುವ ಹಾಗೂ ಕಣ್ಣಿನ ಗೆರೆ ಗುರುತಿಸುವ ಐರಿಸ್ ಸ್ಕ್ಯಾನರ್‌ಗಳು ಕಾರ್ಯ ನಿರ್ವಹಿಸಿಲ್ಲದ ಉದಾಹರಣೆಗಳೂ ಇವೆ. ಬಯೋಮೆಟ್ರಿಕ್ ದೃಢೀಕರಣ ಮತ್ತು ಆಧಾರ್ ಜೋಡಣೆ ಇಲ್ಲದ್ದರಿಂದಲೇ ದೇಶದಾದ್ಯಂತ ಅಂದಾಜು 4 ಕೋಟಿ ಪಡಿತರ ಚೀಟಿಗಳನ್ನು ರದ್ದುಪಡಿಸಿದ್ದಾಗಿ ಕೇಂದ್ರ ಸರ್ಕಾರವೇ ಹೇಳಿಕೊಂಡಿದೆ ಎಂದು ಅವರು ಹೇಳಿದ್ದಾರೆ.

'ರದ್ದಾಗಿರುವ ಪಡಿತರ ಚೀಟಿಗಳು ನಕಲಿ' ಎಂದು ಕೇಂದ್ರ ಸರ್ಕಾರ ವಿವರಣೆ ನೀಡುತ್ತದೆ. ಆದರೆ, ಅಸಮರ್ಪಕ ಬಯೋಮೆಟ್ರಿಕ್ ವ್ಯವಸ್ಥೆ, ಆಧಾರ್ ಕಾರ್ಡ್ ದೊರೆಯದಿರುವಿಕೆ, ಗ್ರಾಮೀಣ ಪ್ರದೇಶಗಳಲ್ಲಿನ ಅಸಮರ್ಪಕ ಅಂತರ್ಜಾಲ ವ್ಯವಸ್ಥೆಯಂತಹ ತಾಂತ್ರಿಕ ಕಾರಣಗಳನ್ನು ಗಣನೆಗೆ ತೆಗೆದುಕೊಂಡಿಲ್ಲ ಎಂದು ಅವರು ದೂರಿದ್ದಾರೆ.

ದೇಶದಾದ್ಯಂತ ಜಾರಿಯಲ್ಲಿರುವ ಆಹಾರ ಭದ್ರತಾ ಕಾಯ್ದೆ ಅಡಿ ಜನಸಾಮಾನ್ಯರ ಕುಂದುಕೊರತೆ ನಿವಾರಣಾ ವ್ಯವಸ್ಥೆ ಇದೆ. ಆದರೂ ಸರ್ಕಾರ ಕೈಗೊಂಡ ಕ್ರಮವನ್ನು ತಪ್ಪಾಗಿ ಗ್ರಹಿಸಿ ಈ ಅರ್ಜಿ ಸಲ್ಲಿಸಲಾಗಿದೆ ಎಂದು ಕೇಂದ್ರದ ಪರ ಹಾಜರಿದ್ದ ಹೆಚ್ಚುವರಿ ಸಾಲಿಸಿಟರ್ ಜನರಲ್ ಅಮನ್ ಲೇಖಿ ಹೇಳಿದ್ದಾರೆ.

'ಆಧಾರ್ ಇರಲಿ, ಇಲ್ಲದಿರಲಿ ಆಹಾರದ ಹಕ್ಕನ್ನು ನಿರಾಕರಿಸಲಾಗದು. ಪಡಿತರ ಚೀಟಿಗೆ ಆಧಾರ್ ಜೋಡಣೆ ಆಗಿರದಿದ್ದರೆ ಪರ್ಯಾಯ ದಾಖಲೆ ಸಲ್ಲಿಸಬಹುದು' ಎಂದು ಕೇಂದ್ರ ಸ್ಪಷ್ಟಪಡಿಸಿತ್ತು ಎಂದು ಪ್ರತಿಪಾದಿಸಿದ್ದಾರೆ.

ಸುದ್ದಿ 2 ನಿಮಿಷ

ಚಂದ್ರಯಾನ–2 'ಆರ್ಬಿಟರ್' 7 ವರ್ಷಗಳವರೆಗೆ ಕಾರ್ಯಾಚರಣೆ

ನವದೆಹಲಿ: ಚಂದ್ರಯಾನ–2 ಯೋಜನೆಯಲ್ಲಿನ 'ಆರ್ಬಿಟರ್' ಏಳು ವರ್ಷಗಳವರೆಗೂ ಕಾರ್ಯನಿರ್ವಹಿಸಲಿದೆ ಎಂದು ಕೇಂದ್ರ ಸಚಿವ ಜಿತೇಂದ್ರ ಸಿಂಗ್ ಬುಧವಾರ ತಿಳಿಸಿದ್ದಾರೆ.

ಆರಂಭದಲ್ಲಿ 'ಆರ್ಬಿಟರ್' ಕೇವಲ ಒಂದು ವರ್ಷ ಕಾರ್ಯನಿರ್ವಹಿಸಬಹುದು ಎಂದು ತಿಳಿಸಲಾಗಿತ್ತು. ಆದರೆ, ಈಗ ಏಳು ವರ್ಷ ಕಾರ್ಯನಿರ್ವಹಿಸಬಹುದು ಎಂದು ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೊ) ನಿರೀಕ್ಷಿಸಿದೆ ಎಂದು ಲೋಕಸಭೆಯಲ್ಲಿ ಲಿಖಿತ ಉತ್ತರ ನೀಡಿದ್ದಾರೆ.

ಚಂದ್ರಯಾನ–2 ಅಪಾರ ಸಂಕೀರ್ಣವಾದ ಕಾರ್ಯಾಚರಣೆಯಾಗಿದೆ. ಈ ಯೋಜನೆಯು ಆರ್ಬಿಟರ್, ಲ್ಯಾಂಡರ್ ಮತ್ತು ರೋವರ್ ಅನ್ನು ಒಳಗೊಂಡಿದೆ. ಅತ್ಯಾಧುನಿಕ ತಂತ್ರಜ್ಞಾನವನ್ನು ಈ ಯೋಜನೆಯು ಒಳಗೊಂಡಿದೆ ಎಂದು ಮಾಹಿತಿ ನೀಡಿದರು.

ಚಂದ್ರಯಾನ–2 ಯೋಜನೆಯು ವೈಜ್ಞಾನಿಕ ಅಧ್ಯಯನ ನಡೆಸುವ ಉದ್ದೇಶವನ್ನು ಈ ಯೋಜನೆಯು ಈಡೇರಿಸಿದೆ ಎಂದು ಸಿಂಗ್ ತಿಳಿಸಿದ್ದಾರೆ.

ಚಂದ್ರನ ದಕ್ಷಿಣ ಧ್ರುವದಲ್ಲಿನ ವೈಜ್ಞಾನಿಕ ಸಂಶೋಧನೆಗಾಗಿ ಮಹತ್ವಾಕಾಂಕ್ಷೆಯ ಚಂದ್ರಯಾನ–2 ನೌಕೆಯನ್ನು 2019ರ ಜುಲೈ 22ರಂದು ಉಡಾವಣೆ ಮಾಡಲಾಗಿತ್ತು. ಆದರೆ, 2019ರ ಸೆಪ್ಟೆಂಬರ್ 7ರಂದು ಚಂದ್ರನ ನೆಲದಲ್ಲಿ ಲ್ಯಾಂಡರ್ ಅಪ್ಪಳಿಸಿತು. ಹೀಗಾಗಿ, ಭಾರತ ಕಂಡ ಕನಸು ಈಡೇರಲಿಲ್ಲ.

ವಿಮಾನ ಹಾರಾಟದ ವೇಳೆಯೇ ಹೆಣ್ಣು ಮಗು ಜನನ

ನವದೆಹಲಿ: ಬೆಂಗಳೂರು-ಜೈಪುರ ನಡುವೆ ವಿಮಾನ ಹಾರಾಟದ ವೇಳೆಯೇ ಇಂಡಿಗೊ ವಿಮಾನದಲ್ಲಿ ಬುಧವಾರ ಬೆಳಿಗ್ಗೆ ಗರ್ಭಿಣಿಯೊಬ್ಬರು ಹೆಣ್ಣು ಮಗುವಿಗೆ ಜನ್ಮ ನೀಡಿದ್ದಾರೆ.

ಬೆಂಗಳೂರಿನಿಂದ ಜೈಪುರಕ್ಕೆ ಇಂಡಿಗೊ (ವಿಮಾನ ಸಂಖ್ಯೆ 6ಇ 469) ಸಂಸ್ಥೆಯ ವಿಮಾನದಲ್ಲಿ ಪ್ರಯಾಣಿಸುತ್ತಿದ್ದ ಗರ್ಭಿಣಿಗೆ ಹೆರಿಗೆ ನೋವು ಕಾಣಿಸಿಕೊಂಡಿದೆ. ಈ ವೇಳೆ ಅದೇ ವಿಮಾನದಲ್ಲಿ ಪ್ರಯಾಣಿಸುತ್ತಿದ್ದ ವೈದ್ಯೆ ಡಾ. ಸುಬಹಾನಾ ನಜೀರ್ ಅವರು, ವಿಮಾನದ ಸಿಬ್ಬಂದಿಯ ನೆರವಿನಿಂದ ಆ ಮಹಿಳೆಗೆ ಸುಸೂತ್ರವಾಗಿ ಹೆರಿಗೆ ಮಾಡಿಸಿದ್ದಾರೆ' ಎಂದು ವಿಮಾನಯಾನ ಸಂಸ್ಥೆ ಹೇಳಿಕೆಯಲ್ಲಿ ತಿಳಿಸಿದೆ. 'ಆಕಾಶದಲ್ಲಿ ವಿಮಾನ ಹಾರಾಡುವ ವೇಳೆಯಲ್ಲೇ ವೈದ್ಯರು ಹೆರಿಗೆ ಮಾಡಿಸಿದ್ದಾರೆ. ತಾಯಿ ಮತ್ತು ಮಗು ಇಬ್ಬರೂ ಆರೋಗ್ಯವಾಗಿದ್ದಾರೆ' ಎಂದು ವಿಮಾನಯಾನ ಸಂಸ್ಥೆ ತಿಳಿಸಿದೆ.

ಬುಧವಾರ ಬೆಳಿಗ್ಗೆ 5.45ಕ್ಕೆ ಬೆಂಗಳೂರಿನಿಂದ ಟೇಕ್ ಆಫ್ ಆದ ಇಂಡಿಗೊ ವಿಮಾನ, 8 ಗಂಟೆ ಸುಮಾರಿಗೆ ಜೈಪುರದಲ್ಲಿ ಇಳಿಯಿತು. ಇದಕ್ಕೂ ಮೊದಲು ವಿಮಾನ ಸಿಬ್ಬಂದಿ, ಜೈಪುರ ವಿಮಾನ ನಿಲ್ದಾಣದಲ್ಲಿ ಆಂಬುಲೆನ್ಸ್ ಮತ್ತು ವೈದ್ಯರ ವ್ಯವಸ್ಥೆ ಮಾಡುವಂತೆ, ವಿಮಾನ ನಿಲ್ದಾಣ ಅಧಿಕಾರಿಗಳಿಗೆ ಮಾಹಿತಿ ನೀಡಿದ್ದರು.

ಉದ್ಯಮಿ ಅಂಬಾನಿ ಮನೆ ಮುಂದೆ ಸ್ಫೋಟಕಗಳಿದ್ದ ಕಾರು ಪತ್ತೆ ಪ್ರಕರಣದ ತನಿಖೆ

ಮುಂಬೈ ಪೊಲೀಸ್ ಆಯುಕ್ತ ವರ್ಗಾವಣೆ

ಪರಮ ಬೀರ್

ಮುಂಬೈ, ನವದೆಹಲಿ (ಪಿಟಿಐ): ಉದ್ಯಮಿ ಮುಕೇಶ್ ಅಂಬಾನಿ ಅವರ ಮನೆ ಬಳಿ ಪತ್ತೆಯಾದ ಸ್ಫೋಟಕ ವಾಹನದ ಪ್ರಕರಣವನ್ನು ಸಮರ್ಪಕವಾಗಿ ನಿಭಾಯಿಸಿಲ್ಲ ಎನ್ನುವ ಕಾರಣಕ್ಕೆ ಮುಂಬೈ ನಗರ ಪೊಲೀಸ್ ಆಯುಕ್ತ ಹುದ್ದೆಯಿಂದ ಪರಮ್ ಬೀರ್ ಸಿಂಗ್ ಅವರನ್ನು ಮಹಾರಾಷ್ಟ್ರ ಸರ್ಕಾರ ಬುಧವಾರ ವರ್ಗಾವಣೆ ಮಾಡಿದೆ.

ರಾಜ್ಯ ಪೊಲೀಸ್ ಮಹಾನಿರ್ದೇಶಕ ಹುದ್ದೆಯ (ಡಿಜಿಪಿ) ಹೆಚ್ಚುವರಿ ಅಧಿಕಾರವಹಿಸಿಕೊಂಡಿದ್ದ ಹಿರಿಯ ಐಪಿಎಸ್ ಅಧಿಕಾರಿ ಹೇಮಂತ್ ನಗರಾಳೆ ಅವರನ್ನು ನೂತನ ಪೊಲೀಸ್ ಆಯುಕ್ತರನ್ನಾಗಿ ನೇಮಿಸಲಾಗಿದೆ.

ಪರಮ್ ಬೀರ್ ಸಿಂಗ್ ಅವರನ್ನು ಗೃಹ ರಕ್ಷಕ ದಳದ ಮುಖ್ಯಸ್ಥರನ್ನಾಗಿ ನೇಮಿಸಲಾಗಿದೆ. 'ಸರ್ಕಾರ ಅತಿ ಮಹತ್ವದ ನಿರ್ಧಾರ ಕೈಗೊಂಡಿದೆ. ಹೇಮಂತ್ ನಗರಾಳೆ ಅವರನ್ನು ಮುಂಬೈ ನಗರದ ನೂತನ ಪೊಲೀಸ್ ಆಯುಕ್ತರನ್ನಾಗಿ ನೇಮಿಸಲಾಗಿದೆ. ರಜನೀಶ್ ಸೇಠ್ ಅವರಿಗೆ ಪೊಲೀಸ್ ಮಹಾನಿರ್ದೇಶಕ ಹುದ್ದೆಯ (ಡಿಜಿಪಿ) ಹೆಚ್ಚುವರಿ ಅಧಿಕಾರ ನೀಡಲಾಗಿದೆ' ಎಂದು ಗೃಹ ಸಚಿವ ಅನಿಲ್ ದೇಶಮುಖ್ ಟ್ವೀಟ್ ಮಾಡಿದ್ದಾರೆ.

ಮುಖ್ಯಮಂತ್ರಿ ಉದ್ಧವ್ ಠಾಕ್ರೆ ಅವರನ್ನು ಭೇಟಿಯಾದ ಬಳಿಕ ಅನಿಲ್ ದೇಶಮುಖ್ ಈ ನಿರ್ಧಾರ ಪ್ರಕಟಿಸಿದ್ದಾರೆ. ಆಡಳಿತಾರೂಢ ಶಿವಸೇನಾ, ಎನ್‌ಸಿಪಿ ಮತ್ತು ಕಾಂಗ್ರೆಸ್ ಮೈತ್ರಿಕೂಟದ ನಾಯಕರ ಸರಣಿ ಸಭೆಗಳ ಬಳಿಕ ಮಹಾ ವಿಕಾಸ್ ಅಘಾಡಿ ಸರ್ಕಾರ ಪೊಲೀಸ್ ಆಯುಕ್ತರನ್ನು ಬದಲಾಯಿಸುವ ನಿರ್ಧಾರ ಕೈಗೊಂಡಿದೆ. ಮುಖ್ಯಮಂತ್ರಿ ಉದ್ಧವ್ ಠಾಕ್ರೆ ಮತ್ತು ಎನ್‌ಸಿಪಿ ಮುಖ್ಯಸ್ಥ ಶರದ್ ಪವಾರ್ ಸಹ ಸೋಮವಾರ ಇದೇ ಪ್ರಕರಣದ ಬಗ್ಗೆ ಚರ್ಚೆ ನಡೆಸಿದ್ದರು. ಸಿಂಗ್ ಅವರ ಸೂಚನೆಯ ಮೇರೆಗೆ ಬಾಂಬ್ ಭೀತಿಯ ಪ್ರಕರಣವನ್ನು ಸದ್ಯ ಬಂಧಿತರಾಗಿರುವ ಪೊಲೀಸ್ ಅಧಿಕಾರಿ ಸಚಿನ್ ವಾಜೆ ನಿರ್ವಹಿಸಿದ್ದರು ಎನ್ನಲಾದ ವರದಿಗಳ ಬಗ್ಗೆ ಇಬ್ಬರೂ ಚರ್ಚಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ತನಿಖೆಗೆ ಸಹಕಾರ: ಸ್ಕಾರ್ಪಿಯೊ ವಾಹನದಲ್ಲಿ ಸ್ಫೋಟಕಗಳು ತುಂಬಿದ್ದ ಪ್ರಕರಣದ ತನಿಖೆಗೆ ಪೂರ್ಣ ಸಹಕಾರ ನೀಡುವುದಾಗಿ ಮುಂಬೈ ಪೊಲೀಸ್ ಅಧಿಕಾರಿ ಸಚಿನ್ ವಾಜೆ ಬಳಸುತ್ತಿದ್ದ ಮರ್ಸಿಡಿಸ್ ಕಾರಿನ ಹಿಂದಿನ ಮಾಲೀಕರು ತಿಳಿಸಿದ್ದಾರೆ.

ವಾಜೆ ಬಳಸುತ್ತಿದ್ದ ಮರ್ಸಿಡಿಸ್ ಕಾರಿನ ಹಿಂದಿನ ಮಾಲೀಕ ಮಹಾರಾಷ್ಟ್ರದ ಧುಲೆ ಜಿಲ್ಲೆಯ ಸರನಾಶ್ ಭಾವ್ಸಾರ್. 'ನಾನು ಕಳೆದ ತಿಂಗಳು ಈ ವಾಹನವನ್ನು ಆನ್‌ಲೈನ್ ಜಾಲತಾಣದ ಮೂಲಕ ಮಾರಾಟ ಮಾಡಿದ್ದೆ. ಆದರೆ ಯಾರು ಈ ವಾಹನ ಖರೀದಿಸಿದ್ದಾರೆಂದು ಗೊತ್ತಿಲ್ಲ' ಎಂದು ಭಾವ್ಸಾರ್ ಟಿವಿ ವಾಹಿನಿಯೊಂದಕ್ಕೆ ಹೇಳಿಕೆ ನೀಡಿದ್ದಾರೆ.

'ನನಗೆ ಸಚಿನ್ ವಾಜೆ ಯಾರು ಅಂತ ಗೊತ್ತಿಲ್ಲ. ಮಂಗಳವಾರ ಅವರ ಹೆಸರನ್ನು ಕೇಳಿದ ನಂತರವೇ, ಈ ಪ್ರಕರಣದ ವಿಚಾರ ಗೊತ್ತಾಯಿತು' ಎಂದು ಭಾವ್ಸಾರ್ ಹೇಳಿದ್ದಾರೆ.

ಈ ವಿಚಾರಕ್ಕೆ ಸಂಬಂಧಿಸಿದಂತೆ ಎನ್‌ಐಎ ಅಧಿಕಾರಿಗಳಾಗಲೀ ಅಥವಾ ಪೊಲೀಸರಾಗಲೀ ಭಾವ್ಸಾರ್ ಅವರನ್ನು ಇಲ್ಲಿವರೆಗೂ ಸಂಪರ್ಕಿಸಿಲ್ಲ.

ನಾಲ್ಕನೇ ದಿನವೂ ಪೊಲೀಸ್ ಅಧಿಕಾರಿ ಕಾಝಿ ವಿಚಾರಣೆ: ಉದ್ಯಮಿ ಮುಕೇಶ್ ಅಂಬಾನಿ ಮನೆ ಬಳಿ ಸ್ಫೋಟಕಗಳಿದ್ದ ವಾಹನ ಪತ್ತೆಯಾದ ಪ್ರಕರಣಕ್ಕೆ ಸಂಬಂಧಿಸಿದಂತೆ ಮುಂಬೈ ಅಪರಾಧ ವಿಭಾಗದ ಅಧಿಕಾರಿ ರಿಯಾಜುದ್ದೀನ್ ಕಾಝಿ ಅವರನ್ನು ಸತತ ನಾಲ್ಕನೇ ದಿನವಾದ ಬುಧವಾರವೂ ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) ವಿಚಾರಣೆ ನಡೆಸಿದೆ.

ಸಹಾಯಕ ಪೊಲೀಸ್ ಇನ್‌ಸ್ಪೆಕ್ಟರ್ ಆಗಿರುವ ಕಾಝಿ ಸದ್ಯ ಅಪರಾಧ ವಿಭಾಗದ ಗುಪ್ತ ದಳ ಘಟಕದಲ್ಲಿ (ಸಿಐಯು) ಕಾರ್ಯನಿರ್ವಹಿಸುತ್ತಿದ್ದಾರೆ.

ಬಂಧಿತರಾಗಿರುವ ಪೊಲೀಸ್ ಅಧಿಕಾರಿ ಸಚಿನ್ ವಾಜೆ ವಾಸಿಸುತ್ತಿದ್ದ ಠಾಣೆಯ ಸಾಕೇತ್ ಪ್ರದೇಶದಿಂದ ಫೆಬ್ರುವರಿ 27ರಂದು ಸಿಸಿಟಿವಿಗಳ ಡಿಜಿಟಲ್ ವಿಡಿಯೊ ರಿಕಾರ್ಡ್‌ಗಳನ್ನು (ಡಿವಿಆರ್) ಕಾಝಿ ಸಂಗ್ರಹಿಸಿದ್ದರು. ಸಾಕ್ಷ್ಯಗಳನ್ನು ನಾಶಪಡಿಸಲು ಡಿವಿಆರ್ ಸಂಗ್ರಹಿಸಲಾಗಿತ್ತು ಎನ್ನುವ ಅನುಮಾನವನ್ನು ಎನ್‌ಐಎ ವ್ಯಕ್ತಪಡಿಸಿದೆ.

ಫೆಬ್ರುವರಿ 25ರಂದು ಅಂಬಾನಿ ಅವರ ಮನೆ ಬಳಿ ಪತ್ತೆಯಾದ ಸ್ಕಾರ್ಪಿಯೊ ವಾಹನದ ನಕಲಿ ನಂಬರ್ ಪ್ಲೇಟ್‌ಗಳನ್ನು ಸಹ ಕಾಝಿ ಸಂಗ್ರಹಿಸಿದ್ದರು ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಅಪರಾಧ ವಿಭಾಗದ ಮತ್ತೊಬ್ಬ ಸಹಾಯಕ ಪೊಲೀಸ್ ಇನ್‌ಸ್ಪೆಕ್ಟರ್ ಪ್ರಕಾಶ್ ಹೊವಾಳ್ ವಿಚಾರಣೆಯನ್ನು ಸಹ ಬುಧವಾರ ನಡೆಸಲಾಗಿದೆ.

ವಾಜೆಗೆ ಸೂಚನೆ ನೀಡಿದ್ದು ಯಾರು?

ಬಂಧಿತರಾಗಿರುವ ಪೊಲೀಸ್ ಅಧಿಕಾರಿ ಸಚಿನ್ ವಾಜೆಗೆ ಸೂಚನೆ ನೀಡುತ್ತಿದ್ದರು ಎನ್ನಲಾದ ವ್ಯಕ್ತಿಗಳನ್ನು ಎನ್‌ಐಎ ವಿಚಾರಣೆ ನಡೆಸುವ ಸಾಧ್ಯತೆ ಇದೆ. ಕೆಲವು ವ್ಯಕ್ತಿಗಳ ಸೂಚನೆಯ ಮೇರೆಗೆ ವಾಜೆ ಕಾರ್ಯನಿರ್ವಹಿಸುತ್ತಿರುವುದು ಗೊತ್ತಾಗಿದೆ. ತನಿಖೆಯ ಸಂದರ್ಭದಲ್ಲಿ ಕೆಲವು ಸಾಕ್ಷ್ಯಗಳು ಸಹ ದೊರೆತಿವೆ. ಅಂತಹ ವ್ಯಕ್ತಿಗಳನ್ನು ವಿಚಾರಣೆಗೆ ಕರೆಸಲಾಗುವುದು ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಘಟನೆಯ ಹೊಣೆಯನ್ನು ಹೊತ್ತುಕೊಂಡು ಟೆಲಿಗ್ರಾಂ ಆ್ಯಪ್‌ನಲ್ಲಿ ಜೈಷ್–ಉಲ್–ಹಿಂದ್ ಸಂಘಟನೆ ಪೋಸ್ಟ್ ಮಾಡಿದ್ದ ಪತ್ರದ ಬಗ್ಗೆಯೂ ತನಿಖೆ ಮಾಡಲಾಗುವುದು. ದೆಹಲಿ ಪೊಲೀಸ್ ವಿಶೇಷ ಘಟಕವು ಈಗಾಗಲೇ ಇಂಡಿಯನ್ ಮುಜಾಹಿದ್ದೀನ್ ಸಂಘಟನೆಯ ಸಹಚರ ತೆಹಸ್ರೀನ್ ಅಖ್ತರ್‌ನನ್ನು ವಶಕ್ಕೆ ಪಡೆದಿದೆ. ಈತ ಸುಧಾರಿತ ಸ್ಫೋಟಕಗಳ ಬಗ್ಗೆ ಪರಿಣತಿ ಪಡೆದಿದ್ದಾನೆ ಎಂದು ತಿಳಿಸಿದ್ದಾರೆ.

ಅಖ್ತರ್‌ನ ವಿಚಾರಣೆ ಬಳಿಕ ಮೊಬೈಲ್ ಸೇರಿದಂತೆ ಕೆಲವು ಸಾಕ್ಷ್ಯಗಳನ್ನು ಸಂಗ್ರಹಿಸಲಾಗಿದೆ. ಈ ಬಗ್ಗೆಯೂ ವಾಜೆ ಅವರನ್ನು ಪ್ರಶ್ನಿಸಲಾಗುವುದು ಎಂದು ತಿಳಿಸಿದ್ದಾರೆ. ಈ ಪ್ರಕರಣದ ಮಹತ್ವ ಸುಳಿವು ಲಭ್ಯವಾಗಿದೆ. ಶೀಘ್ರ ಈ ಪ್ರಕರಣದ ಹಿಂದಿನ ಸಂಚು ಬಯಲು ಮಾಡಲಾಗುವುದು ಎಂದು ತಿಳಿಸಿದ್ದಾರೆ.

16 ವರ್ಷಗಳ ಸುದೀರ್ಘ ಅವಧಿಗೆ ಅಮಾನತುಗೊಂಡಿದ್ದ ಸಚಿನ್ ವಾಜೆ ಅವರಿಗೆ ಮತ್ತೆ ಗೌರವ ಪಡೆದುಕೊಳ್ಳುವುದು ಮುಖ್ಯವಾಗಿತ್ತು. ಹೀಗಾಗಿಯೇ ಈ ಸಂಚಿನ ಭಾಗವಾಗಲು ಒಪ್ಪಿಕೊಂಡಿರುವ ಸಾಧ್ಯತೆಗಳಿರಬಹುದು ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಘಾಟ್ಕೋಪರ್ ಸ್ಫೋಟ ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರ ವಶದಲ್ಲಿದ್ದ ಶಂಕಿತ ಆರೋಪಿ ಖ್ವಾಜಾ ಯುನುಸ್ 2003ರಲ್ಲಿ ಸಾವಿಗೀಡಾಗಿದ್ದ. ಹೀಗಾಗಿ, ಈ ಪ್ರಕರಣಕ್ಕೆ ಸಂಬಂಧಿಸಿದಂತೆ ವಾಜೆ ಅವರನ್ನು 2004ರಲ್ಲಿ ಅಮಾನತುಗೊಳಿಸಲಾಗಿತ್ತು.

'ವಾಜೆ ಅಮಾನತು ರದ್ದು ಕೋರಿದ್ದ ಉದ್ಧವ್'

ದೆಹಲಿ: 'ಪೊಲೀಸ್ ಅಧಿಕಾರಿ ಸಚಿನ್ ವಾಜೆ ಅವರ ಅಮಾನತು ಆದೇಶವನ್ನು ರದ್ದುಪಡಿಸುವಂತೆ 2018ರಲ್ಲಿ ಶಿವಸೇನಾ ಅಧ್ಯಕ್ಷರಾಗಿದ್ದ ಉದ್ಧವ್ ಠಾಕ್ರೆ ಕೋರಿದ್ದರು' ಎಂದು ಮಹಾರಾಷ್ಟ್ರ ವಿಧಾನಸಭೆ ವಿರೋಧ ಪಕ್ಷದ ನಾಯಕ ದೇವೇಂದ್ರ ಫಡಣವೀಸ್ ಬುಧವಾರ ಬಹಿರಂಗಪಡಿಸಿದ್ದಾರೆ.

'2018ರಲ್ಲಿ ನಾನು ಮಹಾರಾಷ್ಟ್ರ ಮುಖ್ಯಮಂತ್ರಿಯಾಗಿದ್ದೆ. ಆಗ ನಾನು ಗೃಹ ಖಾತೆಯನ್ನು ಸಹ ಹೊಂದಿದ್ದೆ. ಅಮಾನತುಗೊಂಡಿದ್ದ ವಾಜೆ ಅವರನ್ನು ಪೊಲೀಸ್ ಇಲಾಖೆಯಲ್ಲಿ ಮರು ನೇಮಿಸಿಕೊಳ್ಳುವಂತೆ ಉದ್ಧವ್ ಠಾಕ್ರೆ ಆಗ ದೂರವಾಣಿ ಕರೆ ಮಾಡಿದ್ದರು. ಬಳಿಕ, ಶಿವಸೇನಾದ ಕೆಲವು ಸಚಿವರು ಸಹ ಇದೇ ವಿಷಯಕ್ಕೆ ನನ್ನನ್ನು ಭೇಟಿಯಾಗಿ ಮನವಿ ಸಲ್ಲಿಸಿದ್ದರು' ಎಂದು ಸುದ್ದಿಗಾರರಿಗೆ ತಿಳಿಸಿದ್ದಾರೆ.

ಗ್ವಾಲಿಯರ್ ವಾಯುನೆಲೆಯಲ್ಲಿ ಬುಧವಾರ ಬೆಳಿಗ್ಗೆ ತರಬೇತಿ ವೇಳೆ ಮಿಗ್ 21 ಬಿಸೊನ್ ಯುದ್ಧವಿಮಾನವು ಪತನಗೊಂಡಿದ್ದು, ದುರಂತದಲ್ಲಿ ಭಾರತೀಯ ವಾಯುಪಡೆಯ ತಂಡದ ಮುಖ್ಯಸ್ಥ ಎ. ಗುಪ್ತಾ ಸಾವನ್ನಪ್ಪಿದ್ದಾರೆ.

ಬಿಜೆಪಿ ಸಂಸದ ರಾಮ್ ಸ್ವರೂಪ್ ಮೃತದೇಹ ಮನೆಯಲ್ಲಿ ಪತ್ತೆ

ಶಿಮ್ಲಾ: ಹಿಮಾಚಲ ಪ್ರದೇಶದ ಬಿಜೆಪಿ ಸಂಸದ ರಾಮ್ ಸ್ವರೂಪ್ ಶರ್ಮಾ (62) ಅವರ ಮೃತದೇಹವು ದೆಹಲಿಯಲ್ಲಿರುವ ಅವರ ಮನೆಯಲ್ಲಿ ಬುಧವಾರ ಪತ್ತೆಯಾಗಿದೆ.



ರಾಮ್ ಸ್ವರೂಪ್

ಶರ್ಮಾ ಮೃತದೇಹವು ಅವರ ಕೋಣೆಯಲ್ಲಿ ನೇಣು ಬಿಗಿದ ಸ್ಥಿತಿಯಲ್ಲಿ ಪತ್ತೆಯಾಗಿದೆ. ಆ ಕೋಣೆಯನ್ನು ಒಳಗಿನಿಂದ ಲಾಕ್ ಮಾಡಲಾಗಿತ್ತು. ಘಟನಾ ಸ್ಥಳದಿಂದ ಯಾವುದೇ ಮರಣ ಪತ್ರ ಸಿಕ್ಕಿಲ್ಲ. ಇದು ಆತ್ಮಹತ್ಯೆ ಪ್ರಕರಣವೇ ಎಂಬುದರ ಬಗ್ಗೆ ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು. ಕಳೆದ ಹಲವು ತಿಂಗಳಿನಿಂದ ರಾಮ್ ಶರ್ಮಾ ಅವರು ಅನಾರೋಗ್ಯದಿಂದ ಬಳಲುತ್ತಿದ್ದರು.

'ರಾಮ್ ಶರ್ಮಾ ಅವರು ತಮ್ಮ ಫೋನ್ ಕರೆಗೆ ಉತ್ತರಿಸುತ್ತಿರಲಿಲ್ಲ. ಅವರ ಆಪ್ತ ಸಹಾಯಕ ನಮಗೆ ಈ ಬಗ್ಗೆ ಮಾಹಿತಿ ನೀಡಿದರು. ತಕ್ಷಣವೇ ಅವರ ಮನೆಗೆ ತೆರಳಿ ಬಾಗಿಲು ಮುರಿದು ಒಳಗೆ ಪ್ರವೇಶಿಸಿದಾಗ ದೇಹವು ಫ್ಯಾನಿಗೆ ನೇಣು ಬಿಗಿದ ಸ್ಥಿತಿಯಲ್ಲಿತ್ತು. ಅವರನ್ನು ಆಸ್ಪತ್ರೆಗೆ ಕರೆದೊಯ್ಯಲಾಯಿತು. ಆದರೆ ಆಸ್ಪತ್ರೆಗೆ ತಲುಪುವ ಮುನ್ನವೇ ಅವರು ಮೃತಪಟ್ಟಿದ್ದರು' ಅವರು ಮಾಹಿತಿ ನೀಡಿದರು.

ಹಳ್ಳಿಗಳಿಗೆ ಸೋಂಕು ಹರಡದಂತೆ ತಡೆಯಿರಿ: ಮೋದಿ

ಒಂದನೇ ಪುಟದಿಂದ...

'ಸೋಂಕು ಗ್ರಾಮೀಣ ಪ್ರದೇಶಕ್ಕೆ ಹಬ್ಬಿದರೆ, ಈಗಿರುವ ವ್ಯವಸ್ಥೆಗಳಲ್ಲಿ ಕೊರತೆಯಾಗುವುದರಿಂದ ಈಗಿನಿಂದಲೇ ಅಗತ್ಯವಿರುವ ಎಲ್ಲ ರೀತಿಯ ಕ್ರಮಗಳನ್ನು ಕೈಗೊಳ್ಳಲೇಬೇಕು' ಎಂದು ನಿರ್ದೇಶನ ನೀಡಿದರು.

'ಮಹಾರಾಷ್ಟ್ರ ಮತ್ತು ಪಂಜಾಬ್‌ಗಳಲ್ಲಿ ಅತಿ ಹೆಚ್ಚು ಪ್ರಕರಣಗಳು ಪತ್ತೆಯಾಗುತ್ತಿವೆ. ಮಾರ್ಚ್ 1ರಿಂದ 15ರ ಅವಧಿಯಲ್ಲಿ ದೇಶದ 70 ಜಿಲ್ಲೆಗಳಲ್ಲಿ ಶೇಕಡ 150ರಷ್ಟು ಪ್ರಕರಣಗಳು ಹೆಚ್ಚಾಗಿವೆ. ಮಧ್ಯಪ್ರದೇಶದ ರತ್ಲಾಮ್ (ಶೇಕಡ 500), ಛತ್ತೀಸಗಡದ ಸುರಜಪುರದಲ್ಲಿ (ಶೇಕಡ 425) ಮಹಾರಾಷ್ಟ್ರದ ನಾಂದೇಡ್‌ನಲ್ಲಿ (ಶೇಕಡ 360) ಮತ್ತು ಮಧ್ಯಪ್ರದೇಶದ ಗ್ವಾಲಿಯರ್‌ನಲ್ಲಿ (ಶೇಕಡ 360) ಅತಿ ಹೆಚ್ಚು ಪ್ರಕರಣಗಳು ಪತ್ತೆಯಾಗಿವೆ. ತಕ್ಷಣವೇ ನಾವು ನಿಯಂತ್ರಣ ಕ್ರಮಗಳನ್ನು ಕೈಗೊಳ್ಳದಿದ್ದರೆ ವ್ಯಾಪಕವಾಗಿ ಹಬ್ಬುತ್ತದೆ' ಎಂದು ಎಚ್ಚರಿಕೆ ನೀಡಿದರು.

'ಆರ್‌ಟಿ–ಪಿಸಿಆರ್ ಪರೀಕ್ಷೆಗಳನ್ನು ಹೆಚ್ಚಿಸಬೇಕು. ಒಟ್ಟಾರೆ ಪರೀಕ್ಷೆಯಲ್ಲಿ ಶೇಕಡ 70ರಷ್ಟು ಆರ್‌ಟಿ–ಪಿಸಿಆರ್ ಪರೀಕ್ಷೆಗಳನ್ನು ಕೈಗೊಳ್ಳಬೇಕು. ಛತ್ತೀಸಗಡ, ಉತ್ತರ ಪ್ರದೇಶ, ಕೇರಳ ಮತ್ತು ಒಡಿಶಾ ರಾಜ್ಯಗಳು ಬಹುತೇಕ ಆಂಟಿಜೆನ್ ಪರೀಕ್ಷೆ ಮೇಲೆ ಅವಲಂಬನೆಯಾಗಿವೆ. ಪರೀಕ್ಷೆಯ ಈ ಕಾರ್ಯತಂತ್ರವನ್ನು ಬದಲಾಯಿಸಿಕೊಳ್ಳಬೇಕು' ಎಂದು ಸೂಚಿಸಿದ್ದಾರೆ. 'ಕೋವಿಡ್–19 ವಿರುದ್ಧದ ಹೋರಾಟದಲ್ಲಿ ಭಾರತ ಯಶಸ್ವಿಯಾಗಿದೆ. ಆದರೆ, ಇದು ಅತಿಯಾದ ಆತ್ಮವಿಶ್ವಾಸಕ್ಕೆ ಮತ್ತು ನಿರ್ಲಕ್ಷ್ಯಕ್ಕೆ ಕಾರಣವಾಗಬಾರದು' ಎಂದರು. ಸಭೆಯಲ್ಲಿ ಪಶ್ಚಿಮ ಬಂಗಾಳ ಮತ್ತು ಛತ್ತೀಸಗಡ ಸೇರಿದಂತೆ ಕೆಲ ರಾಜ್ಯಗಳ ಮುಖ್ಯಮಂತ್ರಿಗಳು ಭಾಗವಹಿಸಿರಲಿಲ್ಲ ಎಂದು ಮೂಲಗಳು ತಿಳಿಸಿವೆ.

ಪ್ರಧಾನಿ ನೀಡಿದ ಸಲಹೆಗಳು

- ಸೋಂಕು ಹಬ್ಬುವುದನ್ನು ತಡೆಯಲು 'ಮೈಕ್ರೊ ಕಂಟೈನ್ಮೆಂಟ್' ವಲಯಗಳನ್ನು ರೂಪಿಸಬೇಕು.
- ಲಸಿಕಾ ಕೇಂದ್ರಗಳನ್ನು ರಾಜ್ಯ ಸರ್ಕಾರಗಳು ಹೆಚ್ಚಿಸಬೇಕು. ಅದು ಸರ್ಕಾರಿ ಅಥವಾ ಖಾಸಗಿ ಆಸ್ಪತ್ರೆಗಳಾಗಬಹುದು
- ಲಸಿಕೆಯನ್ನು ವ್ಯರ್ಥ ಮಾಡಬಾರದು. ತೆಲಂಗಾಣ ಮತ್ತು ಆಂಧ್ರಪ್ರದೇಶ ಹಾಗೂ ಉತ್ತರಪ್ರದೇಶದಲ್ಲಿ ಅತಿ ಹೆಚ್ಚು ವ್ಯರ್ಥವಾಗುತ್ತಿದೆ. ಲಸಿಕೆಯನ್ನು ಏಕೆ ವ್ಯರ್ಥ ಮಾಡುತ್ತಿದ್ದೀರಿ?

ಲಾಕ್‌ಡೌನ್, ಕರ್ಫ್ಯೂ ಇಲ್ಲ: ಬಿಎಸ್‌ವೈ

ಒಂದನೇ ಪುಟದಿಂದ...

'ರಾಜ್ಯದಲ್ಲಿರುವ 3,500ಕ್ಕೂ ಹೆಚ್ಚಿನ ಲಸಿಕಾ ಕೇಂದ್ರಗಳಲ್ಲಿ ಲಸಿಕೆ ಅಭಿಯಾನ ತೀವ್ರಗೊಳಿಸಲಾಗುವುದು. ಪ್ರತಿ ದಿನ 3 ಲಕ್ಷ ಜನರಿಗೆ ಲಸಿಕೆ ನೀಡುವ ಗುರಿ ಹಾಕಿಕೊಳ್ಳಲಾಗಿದೆ' ಎಂದೂ ಹೇಳಿದರು.

'ಎರಡು ಮತ್ತು ಮೂರನೇ ಹಂತದ ಪಟ್ಟಣಗಳಲ್ಲಿ ಪರೀಕ್ಷೆ ಪ್ರಮಾಣ ಹೆಚ್ಚಳಕ್ಕೆ ಪ್ರಧಾನಿ ಸೂಚಿಸಿದ್ದಾರೆ. ಸದ್ಯ ಆರೋಗ್ಯ ಕೇಂದ್ರಗಳಲ್ಲಿ ಮಾತ್ರ ಲಸಿಕೆ ಹಾಕಲಾಗುತ್ತಿದೆ. ವೃದ್ಧಾಶ್ರಮ, ಅಪಾರ್ಟ್‌ಮೆಂಟ್ ಸಮುಚ್ಚಯ, ದುರ್ಗಮ ಪ್ರದೇಶಗಳಲ್ಲೂ ಲಸಿಕೆ ಅಭಿಯಾನಕ್ಕೆ ಅನುಮತಿ ಕೇಳಿದ್ದೇವೆ' ಎಂದರು.

'ರಾಜ್ಯದಲ್ಲಿ 2,042 ಆಸ್ಪತ್ರೆಗಳು ಕೋವಿಡ್ ಲಸಿಕೆಗೆ ನೋಂದಾಯಿಸಿಕೊಂಡಿವೆ. ಈ ಪೈಕಿ, 1,439 ಆಸ್ಪತ್ರೆಗಳಲ್ಲಿ ಲಸಿಕೆ ಅಭಿಯಾನ ಆರಂಭಿಸಿಲ್ಲ. ಈ ಆಸ್ಪತ್ರೆಗಳಲ್ಲೂ ಲಸಿಕೆ ಹಾಕಲು ಕ್ರಮವಹಿಸಲು ಸೂಚಿಸಿದ್ದಾರೆ. ಶೇ 93ರಷ್ಟು ಆರ್‌ಟಿಪಿಸಿಆರ್ ಟೆಸ್ಟಿಂಗ್ ಗುರಿ ಸಾಧಿಸಲಾಗಿದ್ದು, ಇದಕ್ಕೆ ಕೇಂದ್ರ ಗೃಹ ಸಚಿವರಿಂದ ಶ್ಲಾಘನೆ ಸಿಕ್ಕಿದೆ. ಬೀದರ್, ಕಲಬುರ್ಗಿ, ಬೆಂಗಳೂರು ಜಿಲ್ಲೆಗಳಿಗೆ ಪ್ರತ್ಯೇಕ ಕಾರ್ಯತಂತ್ರ ರೂಪಿಸಲು ಸಲಹೆ ಕೊಟ್ಟಿದ್ದಾರೆ. ಪ್ರತಿ ದಿನ 3 ಲಕ್ಷ ಲಸಿಕೆ ಹಾಕುವ ಗುರಿ ಹೊಂದಲಾಗಿದೆ. ಲಸಿಕೆಗಳು ವ್ಯರ್ಥ ಆಗುವುದನ್ನು ತಡೆಯಲು ಪ್ರಧಾನಿ ಸೂಚಿಸಿದ್ದಾರೆ' ಎಂದೂ ಮುಖ್ಯಮಂತ್ರಿ ಹೇಳಿದರು.

ಕೋವಿಡ್ ಅಂಕಿ–ಅಂಶ

ಆಧಾರ: ಕೋವಿಡ್19 ಇಂಡಿಯಾ, ಒಆರ್‌ಜಿ ವರ್ಲ್ಡೋಮೀಟರ್

	ವಿಶ್ವ	ಭಾರತ	ರಾಜ್ಯ
ಒಟ್ಟು ಪ್ರಕರಣ / ಒಟ್ಟು ಸೋಂಕಿತರು	12.14 ಕೋಟಿ ▲	1.147 ಕೋಟಿ ▲	9,63,614 ▲
ಸಕ್ರಿಯ ಪ್ರಕರಣ	2.07 ಕೋಟಿ	2.47 ಲಕ್ಷ ▲	10,220 ▼
ಗುಣಮುಖ	9.79 ಕೋಟಿ ▲	1.10 ಕೋಟಿ ▼	9,40,968 ▲
ಸಾವು	26.85 ಲಕ್ಷ ▲	1.59 ಲಕ್ಷ ▲	12,407 ▲
ದಿನದ ವರದಿ: ಹೊಸ ಪ್ರಕರಣ	3.40 ಲಕ್ಷ ▼	28,869 ▲	1,275 ▲
ದಿನದ ವರದಿ: ಗುಣಮುಖ	4.07 ಲಕ್ಷ ▲	17,764 ▼	479 ▼
ದಿನದ ವರದಿ: ಸಾವು	6,754 ▲	187 ▲	04 ▼

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ): 84,124 ಬ್ರೆಜಿಲ್ ▲; 53,231 ಅಮೆರಿಕ ▲; 29,995 ಫ್ರಾನ್ಸ್

ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು (ಲಕ್ಷಗಳಲ್ಲಿ): 73.23 ಅಮೆರಿಕ ▲; 37.41 ಫ್ರಾನ್ಸ್ ▲; 11.22 ಬ್ರೆಜಿಲ್ ▼

ಎಲ್ಲಿ ಹೆಚ್ಚು ಸಾವು: ▲53,080 ಮಹಾರಾಷ್ಟ್ರ; ▲12,564 ತಮಿಳುನಾಡು; ▲10,948 ದೆಹಲಿ

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ): ▲ 23.70 ಮಹಾರಾಷ್ಟ್ರ; 10.96 ಕೇರಳ ▲; 8.92 ಆಂಧ್ರಪ್ರದೇಶ

134 ಐಸಿಯುನಲ್ಲಿ ಇರುವವರು ▲

ಪ್ರಜಾವಾಣಿ ಗ್ರಾಫಿಕ್ಸ್

'ಏರುಗತಿ ಮುಂದುವರಿದರೆ ವಿಚಾರಣೆ'

'ಕೋವಿಡ್ ಪ್ರಕರಣಗಳ ಏರುಗತಿ ಮುಂದುವರಿದರೆ ಮುಂದಿನ ದಿನಗಳಲ್ಲಿ ರಾಜ್ಯ ಸರ್ಕಾರದ ವಿರುದ್ಧ ವಿಚಾರಣೆ ಕೈಗೆತ್ತಿಕೊಳ್ಳಲಾಗುವುದು' ಎಂದು ಹೈಕೋರ್ಟ್ ಎಚ್ಚರಿಕೆ ನೀಡಿದೆ. ಕೋವಿಡ್‌ಗೆ ಸಂಬಂಧಿಸಿದ ವಿಷಯಗಳ ಕುರಿತು ವಿಚಾರಣೆ ನಡೆಸುತ್ತಿರುವ ಮುಖ್ಯ ನ್ಯಾಯಮೂರ್ತಿ ನೇತೃತ್ವದ ವಿಭಾಗೀಯ ಪೀಠ ಈ ಅಭಿಪ್ರಾಯಪಟ್ಟಿದೆ.

'ಕಳೆದ ಕೆಲ ದಿನಗಳಲ್ಲಿ ಕೋವಿಡ್ ಪ್ರಕರಣ ಹೆಚ್ಚುತ್ತಿರುವುದನ್ನು ಹೈಕೋರ್ಟ್ ಗಮನಿಸುತ್ತಿದೆ. ವಿಶೇಷವಾಗಿ ಬೆಂಗಳೂರು ನಗರ ಜಿಲ್ಲೆಯಲ್ಲಿ ಗಣನೀಯವಾಗಿ ಏರಿಕೆಯಾಗುತ್ತಿದೆ. ಈ ಪ್ರವೃತ್ತಿ ಮುಂದುವರಿದರೆ ಬಿಬಿಎಂಪಿ ಮತ್ತು ಇತರ ಪ್ರಾಧಿಕಾರಿಗಳ ವಿರುದ್ಧ ವಿಚಾರಣೆ ಆರಂಭಿಸಬೇಕಾಗುತ್ತದೆ' ಎಂದು ತಿಳಿಸಿದ ಪೀಠವು ಮಾ.25ಕ್ಕೆ ವಿಚಾರಣೆ ಮುಂದೂಡಿತು.

10 ಸಾವಿರ ದಾಟಿದ ಸಕ್ರಿಯ ಪ್ರಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಬುಧವಾರ 1,275 ಪ್ರಕರಣಗಳು ದೃಢಪಟ್ಟಿವೆ. ಮೂರು ತಿಂಗಳಲ್ಲಿ 24 ಗಂಟೆಗಳ ಅವಧಿಯಲ್ಲಿ ವರದಿಯಾದ ಗರಿಷ್ಠ ಪ್ರಕರಣಗಳು ಇವಾಗಿದ್ದು, ಸಕ್ರಿಯ ಪ್ರಕರಣಗಳ ಸಂಖ್ಯೆ 10 ಸಾವಿರದ ಗಡಿ (10,220) ದಾಡಿದೆ.

ರಾಜ್ಯದಲ್ಲಿ ಡಿಸೆಂಬರ್ ಕೊನೆಯ ವಾರದಿಂದ ಪ್ರಕರಣಗಳ ಸಂಖ್ಯೆ ಇಳಿಮುಖ ಕಂಡಿತ್ತು. 500ರ ಗಡಿಯ ಆಸುಪಾಸಿಗೆ ಬಂದಿದ್ದ ಹೊಸ ಪ್ರಕರಣಗಳ ಸಂಖ್ಯೆ ಮೂರು ವಾರದಿಂದ ಮತ್ತೆ ಏರುಗತಿ ಪಡೆದುಕೊಂಡಿದೆ. 48 ಗಂಟೆಗಳ ಅವಧಿಯಲ್ಲಿ 2,410 ಮಂದಿ ಸೋಂಕಿತರಾಗಿರುವುದು ಖಚಿತಪಟ್ಟಿದೆ. ಈ ತಿಂಗಳು 17 ದಿನಗಳಲ್ಲಿ 12,363 ಮಂದಿ ಕೊರೊನಾ ಸೋಂಕಿತರಾಗಿರುವುದು ಪರೀಕ್ಷಾ ವರದಿಯಿಂದ ದೃಢಪಟ್ಟಿದೆ. ಈ ಅವಧಿಯಲ್ಲಿ ಪ್ರತಿನಿತ್ಯ ಸರಾಸರಿ 727 ಪ್ರಕರಣಗಳು ದೃಢಪಟ್ಟಿವೆ.

ಸೋಂಕಿತರಲ್ಲಿ ಬೆಂಗಳೂರಿನಲ್ಲಿ ಮೂವರು ಹಾಗೂ ಮೈಸೂರಿನಲ್ಲಿ ಒಬ್ಬರು ಮೃತಪಟ್ಟಿದ್ದಾರೆ. ಈವರೆಗೆ ಸಾವಿಗೀಡಾದವರ ಸಂಖ್ಯೆ 12,407ಕ್ಕೆ ತಲುಪಿದೆ. ಕೋವಿಡ್ ಪೀಡಿತರಲ್ಲಿ ಮತ್ತೆ 479 ಮಂದಿ ಚೇತರಿಸಿಕೊಂಡಿದ್ದಾರೆ. ಈವರೆಗೆ ಗುಣಮುಖರಾದವರ ಸಂಖ್ಯೆ 9.40 ಲಕ್ಷ ದಾಟಿದೆ. ತೀವ್ರ ನಿಗಾ ಘಟಕಕ್ಕೆ (ಐಸಿಯು) ದಾಖಲಾಗುವವರ ಸಂಖ್ಯೆ ಹೆಚ್ಚಳವಾಗಿದ್ದು, ಸದ್ಯ 134 ಮಂದಿಗೆ ಐಸಿಯುನಲ್ಲಿ ಚಿಕಿತ್ಸೆ ಒದಗಿಸಲಾಗುತ್ತಿದೆ.

2 ಕೋಟಿ ದಾಟಿದ ಪರೀಕ್ಷೆ: ರಾಜ್ಯದಲ್ಲಿ ಕೋವಿಡ್ ಪರೀಕ್ಷೆಗಳ ಸಂಖ್ಯೆಯನ್ನು ಏರಿಕೆ ಮಾಡಲಾಗಿದೆ. ಒಂದು ದಿನದ ಅವಧಿಯಲ್ಲಿ 86,648 ಮಂದಿಗೆ ಪರೀಕ್ಷೆ ಮಾಡಲಾಗಿದೆ. ಈವರೆಗೆ ನಡೆಸಲಾದ ಪರೀಕ್ಷೆಗಳ ಸಂಖ್ಯೆ 2 ಕೋಟಿ ಗಡಿ ದಾಟಿದೆ. ಇದರಲ್ಲಿ 1.59 ಕೋಟಿ ಪರೀಕ್ಷೆಗಳನ್ನು ಆರ್‌ಟಿ–ಪಿಸಿಆರ್ ವಿಧಾನದ ಮೂಲಕ ನಡೆಸಲಾಗಿದೆ.

ಪರೀಕ್ಷೆ ಗುರಿ ಒಂದು ಲಕ್ಷಕ್ಕೆ ಏರಿಕೆ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ ಏರುಗತಿ ಪಡೆದ ಕಾರಣ ದೈನಂದಿನ ಪರೀಕ್ಷೆಗಳ ಗುರಿಯನ್ನು ಒಂದು ಲಕ್ಷಕ್ಕೆ ಹೆಚ್ಚಿಸಿ ಆರೋಗ್ಯ ಕಲ್ಯಾಣ ಇಲಾಖೆ ಸುತ್ತೋಲೆ ಹೊರಡಿಸಿದೆ.

ಜನವರಿ ತಿಂಗಳ ಕೆಲ ದಿನಗಳು ದಿನವೊಂದಕ್ಕೆ ಲಕ್ಷದ ಗಡಿ ದಾಟುತ್ತಿದ್ದ ಕೋವಿಡ್ ಪರೀಕ್ಷೆಗಳ ಸಂಖ್ಯೆಯನ್ನು ಬಳಿಕ 70,500ಕ್ಕೆ ಇಳಿಕೆ ಮಾಡಲಾಗಿತ್ತು. ಆದರೆ, ಈಗ ಪ್ರಕರಣಗಳ ಸಂಖ್ಯೆ ಹೆಚ್ಚಳವಾಗುತ್ತಿರುವ ಕಾರಣ ಪರೀಕ್ಷೆಯ ಸಂಖ್ಯೆಯನ್ನು ಏರಿಕೆ ಮಾಡಲು ಎಲ್ಲ ಜಿಲ್ಲಾಧಿಕಾರಿಗಳಿಗೆ ಇಲಾಖೆ ಸೂಚಿಸಿದೆ.

ಕೋವಿಡ್ ತಾಂತ್ರಿಕ ಸಲಹಾ ಸಮಿತಿಯ ಶಿಫಾರಸು ಮತ್ತು ಸರ್ಕಾರದ ಸೂಚನೆ ಮೇರೆಗೆ ಕೋವಿಡ್ ಪರೀಕ್ಷೆಗಳ ಸಂಖ್ಯೆಯನ್ನು ಹೆಚ್ಚಳ ಮಾಡಲು ನಿರ್ಧರಿಸಲಾಗಿದೆ. ಶೀತಜ್ವರ ಮಾದರಿಯ ಅನಾರೋಗ್ಯ ಸಮಸ್ಯೆ (ಐಎಲ್‌ಐ), ಉಸಿರಾಟದ ಸಮಸ್ಯೆ (ಸಾರಿ) ಸೇರಿದಂತೆ ರೋಗದ ಲಕ್ಷಣ ಹೊಂದಿರುವವರಿಗೆ ಆರ್‌ಟಿ–ಪಿಸಿಆರ್ ವಿಧಾನದಲ್ಲಿ ಪರೀಕ್ಷೆ ನಡೆಸಬೇಕು. ರೋಗದ ಲಕ್ಷಣಗಳನ್ನು ಹೊಂದಿರದವರ ಮಾದರಿಗಳನ್ನು ಪೂಲಿಂಗ್ ವಿಧಾನದಲ್ಲಿ (ಒಂದೇ ಬಾರಿ ಹಲವು ಮಾದರಿ ಪರೀಕ್ಷೆ) ಪರೀಕ್ಷೆ ನಡೆಸಬೇಕು. ಪ್ರಯೋಗಾಲಯದ ಸಾಮರ್ಥ್ಯದ ಅನುಸಾರ ಜಿಲ್ಲಾವಾರು ಪರೀಕ್ಷೆಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ನಡೆಸಬೇಕು ಎಂದು ಸುತ್ತೋಲೆಯಲ್ಲಿ ತಿಳಿಸಲಾಗಿದೆ.



ನಿಮ್ಮ ಉತ್ತರವು ಎ ಬಿ ಸಿ ಸಾಲಿನ ಕ್ರಮದಲ್ಲಿ ಇದ್ದು, ಪ್ರತಿ ಸಾಲು ಎಡದಿಂದ ಬಲಕ್ಕೆ ಇರಬೇಕು.

ಪ್ರಜಾವಾಣಿ

ಮಾದರಿ ಉದಾಹರಣೆಗೆ ಇಲ್ಲಿ ಸ್ಕ್ಯಾನ್ ಮಾಡಿ

ಚಿತ್ರಬಂಧ

ಕಣ್ಣಿಗೆ ಗೊಂದಲವಾಗಿ ಕಾಣುವ ಚಿತ್ರವನ್ನು ಕಲ್ಪನೆಯಲ್ಲಿ ಚಿತ್ರಿಸಿ ಬಹುಮಾನ ಗೆಲ್ಲಿ

ಬಂಪರ್ ಬಹುಮಾನ*
ONE PLUS 7 PRO ಮೊಬೈಲ್

ಹೆಚ್ಚು ಹೆಚ್ಚು ಭಾಗವಹಿಸಿ ಬಂಪರ್ ಬಹುಮಾನವನ್ನು ಗೆಲ್ಲುವ ಅವಕಾಶ ನಿಮ್ಮದಾಗಿಸಿಕೊಳ್ಳಿ

14 ಅದೃಷ್ಟಶಾಲಿಗಳಿಗೆ, ಪ್ರತಿದಿನ ₹500 ಬೆಲೆಯ ಅಮೆಝಾನ್ ಗಿಫ್ಟ್ ವೌಚರ್

ಸರಿಯಾದ ಉತ್ತರದ ಕ್ರಮವನ್ನು PVCB A <3ಸಂಖ್ಯೆ> B <3ಸಂಖ್ಯೆ> C <3ಸಂಖ್ಯೆ> ಎಂದು ಟೈಪ್ ಮಾಡಿ, ಇಂದು ರಾತ್ರಿ 8 ರೊಳಗೆ 9246020020 ಗೆ SMS ಮಾಡಿ.

ಉತ್ತರಿಸುವ ಕ್ರಮದ ಉದಾಹರಣೆ: PVCB A143 B276 C859

*ಷರತ್ತುಗಳು ಅನ್ವಯ

ನಿನ್ನೆಯ ಉತ್ತರ: A184 B 936 C572

ರೀಡಿಂಗ್ ಕಾಂಪ್ರೆಹೆನ್ಶನ್



ಕೇಂದ್ರ ಸರ್ಕಾರದ ಸ್ಪರ್ಧಾತ್ಮಕ ಪರೀಕ್ಷೆ

ಸಿದ್ಧತೆಯೇ ವಿಭಿನ್ನ

ಡಾ. ರವಿ ಎಸ್.ಆರ್.

ರಾಜ್ಯ ಸರ್ಕಾರ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಹೋಲಿಸಿದಾಗ ಕೇಂದ್ರ ಸರ್ಕಾರದ ಪರೀಕ್ಷೆ ವಿಧಾನ, ಪಠ್ಯಕ್ರಮ, ಕಾಂಪಿಟೀಟಿವ್ ರೇಟ್ ವಿಭಿನ್ನವಾಗಿರುತ್ತವೆ. ಈ ಹಿನ್ನೆಲೆಯಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗಳ ತಯಾರಿಯನ್ನು ವಿದ್ಯಾರ್ಥಿಗಳು ವಿಭಿನ್ನ ಶೈಲಿಯಲ್ಲಿ ಮಾಡಬೇಕಾಗುತ್ತದೆ. ಕೇಂದ್ರ ಸರ್ಕಾರಿ ಪರೀಕ್ಷೆಗಳಲ್ಲಿ ಬ್ಯಾಂಕಿಂಗ್, ಎಸ್.ಎಸ್.ಸಿ., ರೈಲ್ವೆ, ಡಿ.ಆರ್.ಡಿ.ಒ, ಪೋಸ್ಟಲ್ ಮುಂತಾದ ಪರೀಕ್ಷೆಗಳಲ್ಲಿ ತಾರ್ಕಿಕ ಗಣಿತ ಮತ್ತು ಮಾನಸಿಕ ಸಾಮರ್ಥ್ಯ ಬಹಳ ಪ್ರಮುಖ ಪಾತ್ರ ವಹಿಸುತ್ತವೆ.

ಈ ಎಲ್ಲಾ ಪರೀಕ್ಷೆಗಳಲ್ಲಿ ಪಠ್ಯಕ್ರಮ ಒಂದೇ ರೀತಿಯಂತೆ ಗೋಚರಿಸಿದರೂ, ಪ್ರಶ್ನೆಗಳ ಗುಣಮಟ್ಟ ಬೇರೆ ಬೇರೆ ರೀತಿಯಾಗಿರುತ್ತದೆ. ಉದಾ: ಬ್ಯಾಂಕಿಂಗ್ ಪರೀಕ್ಷೆಯಲ್ಲಿ ತಾರ್ಕಿಕ ಗಣಿತ, ಮಾನಸಿಕ ಸಾಮರ್ಥ್ಯಕ್ಕೆ ಹೆಚ್ಚು ಒತ್ತು ಕೊಟ್ಟಿರುತ್ತಾರೆ. ಈ ಕಾರಣಕ್ಕಾಗಿ ಈ ಪರೀಕ್ಷೆಗಳಲ್ಲಿ ಹೆಚ್ಚಿನ ಅಭ್ಯಾಸ ಅವಶ್ಯಕವಾಗಿರುತ್ತದೆ. ರೀಸನಿಂಗ್ ಪ್ರಶ್ನೆಗಳನ್ನು ಎದುರಿಸಬೇಕಾದಾಗ ಹೆಚ್ಚಿನ ಕಾಲಾವಕಾಶವನ್ನು ತೆಗೆದುಕೊಳ್ಳುವುದರಿಂದ ಅದೇ ಪ್ರಶ್ನೆ ಪತ್ರಿಕೆಯಲ್ಲಿರುವ ಇಂಗ್ಲಿಷ್, ಸಾಮಾನ್ಯ ಜ್ಞಾನ, ಆಪ್ಟಿಟ್ಯೂಡ್ ಭಾಗಗಳನ್ನು ವಿದ್ಯಾರ್ಥಿಗಳು ಕೈ ಬಿಡುತ್ತಾರೆ. ಈ ಕಾರಣಕ್ಕಾಗಿ ಇಂತಹ ಪರೀಕ್ಷೆಗಳಲ್ಲಿ ಯಶಸ್ಸಿನ ಪ್ರಮಾಣ ತುಂಬಾ ಕಡಿಮೆಯಾಗಿರುತ್ತದೆ. ಇಂತಹ ಸಮಸ್ಯೆಯಿಂದ ಹೊರಬರಲು ಯಾವುದೇ ಸುಲಭ ಉಪಾಯವಿಲ್ಲ. ಯಾವ ಭಾಗದಲ್ಲಿ ನಿಮಗೆ ನ್ಯೂನ್ಯತೆ ಇದೆಯೋ ಅದನ್ನು ಸರಿಪಡಿಸಿಕೊಳ್ಳಲು ಆ ವಿಷಯಗಳ ಬಗ್ಗೆ ನಿರಂತರ ಅಭ್ಯಾಸದಿಂದ ಮಾತ್ರ ನೀವು ಪರೀಕ್ಷೆಯಲ್ಲಿ ಟೈಂ ಮ್ಯಾನೇಜ್‌ಮೆಂಟ್ ಮಾಡಲು ಸಾಧ್ಯ. ಇದಕ್ಕೆ ಇರುವ ಒಂದೇ ಮಾರ್ಗವಿದು.

> ಕೇಂದ್ರ ಸರ್ಕಾರದ ಹುದ್ದೆಗಳಿಗೆ ನಡೆಯುವ ಸ್ಪರ್ಧಾತ್ಮಕ ಪರೀಕ್ಷೆಗಳ ರೀತಿಯೇ ಬೇರೆ. ಹೀಗಾಗಿ ವಿಭಿನ್ನ ರೀತಿಯಲ್ಲಿ ಅಧ್ಯಯನ ನಡೆಸಬೇಕಾಗುತ್ತದೆ.

ಕೇಂದ್ರ ಸರ್ಕಾರದ ಪರೀಕ್ಷೆಗಳಲ್ಲಿ ಪ್ರಶ್ನೆಗಳನ್ನು ಕೇಳುವಲ್ಲಿ ವೈವಿಧ್ಯತೆಯಿರುತ್ತದೆ. ಉದಾ: ರೈಲ್ವೆ ಮತ್ತು ಎಸ್.ಎಸ್.ಸಿ. ಈ ಪರೀಕ್ಷೆಗಳಲ್ಲಿ ಬ್ಯಾಂಕಿಂಗ್ ಪರೀಕ್ಷೆಗಳಲ್ಲಿ ಇಲ್ಲದ ಬೇರೆ ಬೇರೆ ಕಡೆಯ ವಿಷಯಗಳಲ್ಲಿ ಗಮನ ಹರಿಸುತ್ತಾರೆ.

ಭಾಷಾ ಸಮಸ್ಯೆ ಎದುರಿಸುವುದು ಹೇಗೆ?

ಕೇಂದ್ರ ಸರ್ಕಾರದ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಲು ಎಲ್ಲಾ ವಿಷಯಗಳ ಕಡೆಗೆ ಗಮನ ಹರಿಸುವುದು ಬಹಳ ಮುಖ್ಯ. ಮೆಂಟಲ್ ಎಬಿಲಿಟಿ ಭಾಗದಲ್ಲಿ ಬಹಳ ಚೆನ್ನಾಗಿ ಅಭ್ಯಾಸ ಮಾಡಿ, ಇಂಗ್ಲಿಷ್ ಜ್ಞಾನವಿಲ್ಲದಿದ್ದರೆ ಆ ಪರೀಕ್ಷೆಗಳ ಮುಂದಿನ ಹಂತಕ್ಕೆ ಅರ್ಹತೆ ಪಡೆಯಲು ಸಾಧ್ಯವಾಗುವುದಿಲ್ಲ. ಹಾಗಾಗಿ ಎಲ್ಲಾ ಸ್ಪರ್ಧಾರ್ಥಿಗಳು 6ನೇ ತರಗತಿಯಿಂದ 12ನೇ ತರಗತಿಯವರೆಗೆ ಎನ್.ಸಿ.ಇ.ಆರ್.ಟಿ ಪುಸ್ತಕಗಳಾದ ಮಾನವಿಕ ವಿಷಯಗಳು ಮತ್ತು ವಿಜ್ಞಾನ ವಿಷಯದಲ್ಲಿ 11 ಮತ್ತು 12ನೇ ತರಗತಿಯ ಪುಸ್ತಕಗಳನ್ನು ಸಂಪಾದಿಸಿ ಓದುವುದರಿಂದ ಕೇಂದ್ರ ಸರ್ಕಾರ ಪರೀಕ್ಷೆಗಳಿಗೆ ವ್ಯವಸ್ಥಿತವಾದ ಸಿದ್ಧತೆಯಾಗುತ್ತದೆ. ಸಾಮಾನ್ಯವಾಗಿ ಪ್ರಾದೇಶಿಕ ಭಾಷೆಯ ವಿದ್ಯಾರ್ಥಿಗಳಿಗೆ ಇರುವ ಕೊರತೆಯೆಂದರೆ ಭಾಷಾ ಸಮಸ್ಯೆ. ಇದರಿಂದ ಪ್ರಶ್ನೆ ಪತ್ರಿಕೆಯನ್ನು ಅರ್ಥೈಸುವಲ್ಲಿ ವಿಫಲರಾಗಿರುತ್ತಾರೆ.

ಈ ಕಾರಣದಿಂದ 10ನೇ ತರಗತಿವರೆಗೆ ಇಂಗ್ಲಿಷ್ ಮತ್ತು ಹಿಂದಿ ಭಾಷೆಯನ್ನು ಅಭ್ಯಾಸ ಮಾಡುವುದರಿಂದ ಪ್ರಶ್ನೆಗಳನ್ನು ಸುಲಭವಾಗಿ ಅರ್ಥೈಸಿಕೊಳ್ಳಲು ಸಾಧ್ಯವಾಗುತ್ತದೆ. ಸಂವಿಧಾನದ 8ನೇ ಅನುಸೂಚಿಯಲ್ಲಿರುವ ಅಧಿಕೃತ ಭಾಷೆಗಳಲ್ಲಿ ಪ್ರಶ್ನೆ ಪತ್ರಿಕೆ ನೀಡಿದರೆ ಅಭ್ಯರ್ಥಿಗಳಿಗೆ ಇದು ಬಹಳ ಉಪಯೋಗವಾಗುತ್ತಿತ್ತು. ಈಗಾಗಲೇ, ರೈಲ್ವೆ ಪರೀಕ್ಷೆಯ ಸಿ ಮತ್ತು ಡಿ ಗ್ರೂಪ್ ಪರೀಕ್ಷೆಗಳಿಗೆ ಪ್ರಾದೇಶಿಕ ಭಾಷೆಗಳಲ್ಲಿ ಪ್ರಶ್ನೆ ಪತ್ರಿಕೆ ನೀಡುತ್ತಿದ್ದರೂ ಬ್ಯಾಂಕಿಂಗ್, ಎಸ್.ಎಸ್.ಸಿ. ಮುಂತಾದ ಪರೀಕ್ಷೆಗಳಲ್ಲಿ ಈಗಲೂ ಹಿಂದಿ ಮತ್ತು ಇಂಗ್ಲಿಷ್ ಭಾಷೆಯಲ್ಲಿಯೇ ಪ್ರಶ್ನೆ ಪತ್ರಿಕೆ ನೀಡುತ್ತಿರುವುದರಿಂದ ವಿದ್ಯಾರ್ಥಿಗಳು ಎರಡೂ ಭಾಷೆಗಳತ್ತ ಗಮನ ಹರಿಸಿ ಪರೀಕ್ಷೆಗೆ ಸಿದ್ಧತೆ ನಡೆಸುವುದು ಉತ್ತಮ.

ಕೇಂದ್ರ ಸರ್ಕಾರಿ ಉದ್ಯೋಗಕ್ಕೆ ಸೇರಬೇಕು ಎಂದು ನಿರ್ಧಾರ ಮಾಡಿದ ಮೇಲೆ ನಮ್ಮ ಮಾತೃಭಾಷೆಯ ಜೊತೆ ಇಂಗ್ಲಿಷ್ ಭಾಷೆಗೂ ಒತ್ತುಕೊಟ್ಟು ಅಧ್ಯಯನ ನಡೆಸುವುದು ಸೂಕ್ತ. ಸಾಮಾನ್ಯವಾಗಿ ಶಾಲಾ ಹಂತದಲ್ಲೇ ಭಾಷಾಜ್ಞಾನವನ್ನು ಚೆನ್ನಾಗಿ ಬೆಳೆಸಿಕೊಂಡರೆ ಮುಂದೆ ಸ್ಪರ್ಧಾತ್ಮಕ ಪರೀಕ್ಷೆ ಎದುರಿಸುವುದು ಸುಲಭ.

ದಿನಪತ್ರಿಕೆ, ಎಲೆಕ್ಟ್ರಾನಿಕ್ ಮಾಧ್ಯಮದಲ್ಲಿ ಬರುವ ವಿಷಯಾಧಾರಿತ ಚರ್ಚೆಗಳು, ಅನುವಾದಗಳು, ಪರೀಕ್ಷಾ ದಿನಾಂಕದ ಒಂದು ವರ್ಷದ ಹಿಂದಿನಿಂದ ಪೂರ್ವಭಾವಿಯಾಗಿ ಸಿದ್ಧತೆ ನಡೆಸಿದರೆ, ಕೇಂದ್ರ ಸರ್ಕಾರದ ಹುದ್ದೆಗಳಲ್ಲಿ ಕನ್ನಡಿಗರು ಬಹು ಸಂಖ್ಯೆಯಲ್ಲಿ ಆಯ್ಕೆಯಾಗಲು ಸಾಧ್ಯ. ಎಷ್ಟು ಜನರು ಒಂದು ಹುದ್ದೆಗೆ ಅರ್ಜಿಯನ್ನು ಸಲ್ಲಿಸಿದ್ದಾರೆಂಬುದು ಮುಖ್ಯವಲ್ಲ. 'ನಾನು ಆ ಪರೀಕ್ಷೆಗೆ ಹೇಗೆ ಸಿದ್ಧತೆ ನಡೆಸಿದ್ದೇನೆ' ಎಂಬುದು ಮುಖ್ಯವಾಗಿರುತ್ತದೆ.

(ಲೇಖಕ: ನಿರ್ದೇಶಕರು, ನವೋದಯ ಫೌಂಡೇಶನ್, ಐಎಎಸ್ ಸ್ಪರ್ಧಾತ್ಮಕ ಪರೀಕ್ಷೆ ತರಬೇತಿ ಕೇಂದ್ರ, ಮೈಸೂರು)

ಪಠ್ಯ ಗ್ರಹಿಕೆ

ಏನಿದು ಸ್ಕಿಮ್ಮಿಂಗ್, ಸ್ಕ್ಯಾನಿಂಗ್ ವಿಧಾನ?

ಅರುಣ ಬ. ಚೂರಿ

- ಆರ್.ಸಿ ವಿಭಾಗ ಉತ್ತರಿಸಲು ಗರಿಷ್ಠ ಐದು ನಿಮಿಷ ಮೀಸಲಿಡಿ.
- ಪ್ರತಿದಿನ ನಾಲ್ಕು ಆರ್.ಸಿ ಅಭ್ಯಾಸ ಮಾಡಿ.
- ವಿವಿಧ ಟೋನ್‌ಗಳ (ಎಥಿಕಲ್, ಟೆಕ್ನಿಕಲ್, ಹ್ಯೂಮರಸ್ ಸರ್‌ಕಾಸ್ಟಿಕ್, ಐರನಿಕಲ್, ಕ್ರಿಟಿಕಲ್) ಆರ್.ಸಿ ಅಭ್ಯಸಿಸುವ ಮೂಲಕ ಉಳಿದ ವಿಭಾಗಗಳ ಜ್ಞಾನ ಹೆಚ್ಚಿಸಿಕೊಳ್ಳಬಹುದು.
- ಈ ವಿಭಾಗದಲ್ಲಿ ದೊರೆತ ಹೊಸ/ ಕ್ಲಿಷ್ಟಕರ ಪದಗಳನ್ನು ಪಟ್ಟಿ ಮಾಡಿಕೊಂಡು ಹೆಚ್ಚು ಪದಗಳ ಜ್ಞಾನ ಬೆಳೆಸಿಕೊಳ್ಳಿ.
- ಈ ವಿಭಾಗದಲ್ಲಿ ಓದುವುದು, ಗ್ರಹಿಸುವುದು ಮುಖ್ಯವಾದ್ದರಿಂದ ಓದುವ ನಿರರ್ಗಳತೆ ಹೆಚ್ಚಿಸಿಕೊಳ್ಳಿ.

(ಮುಂದುವರಿದ ಭಾಗ)

ಸ್ಪರ್ಧಾತ್ಮಕ ಪರೀಕ್ಷೆಗೆ ಓದುವ ಸ್ಪರ್ಧಾರ್ಥಿಗಳಿಗೆ ಇಂಗ್ಲಿಷ್ ವಿಷಯದಲ್ಲಿ ಪಠ್ಯದ ಗ್ರಹಿಕೆ (ರೀಡಿಂಗ್ ಕಾಂಪ್ರೆಹೆನ್ಶನ್) ಎನ್ನುವುದು ಸುಲಭವಾಗಿ ಅಂಕ ಗಳಿಸುವ ವಿಭಾಗ. ಆದರೆ ಇದರಲ್ಲಿ ಕೆಲವು ವಿಧಾನಗಳನ್ನು ಅಳವಡಿಸಿಕೊಂಡರೆ ಪ್ರಶ್ನೆಗಳಿಗೆ ವೇಗವಾಗಿ ಉತ್ತರಿಸಬಹುದು.

ಸ್ಕಿಮ್ಮಿಂಗ್ ಮತ್ತು ಸ್ಕ್ಯಾನಿಂಗ್– ಇವು ಲೇಖನ ಓದುವ ಎರಡು ವಿಧಾನಗಳು

1. ಸ್ಕಿಮ್ಮಿಂಗ್: ಇದು ಲೇಖನದ ಉದ್ದೇಶ ಮತ್ತು ವಿವರವಾದ ಅರ್ಥವನ್ನು ಗಮನಿಸದೆ ಕೇವಲ ಸಾಮಾನ್ಯ ಕಲ್ಪನೆಯನ್ನು ಪಡೆಯಲು ವೇಗವಾಗಿ ಓದುವ ಒಂದು ವಿಧಾನ.

ಉದಾಹರಣೆ: ಇದರಲ್ಲಿ ಕೇವಲ ಸೂಕ್ತವಾದ ಮತ್ತು ಅವಶ್ಯಕವಾದ ಸಾಲುಗಳನ್ನು ಮಾತ್ರ ಓದುವುದು ಹಾಗೂ ನಿಖರವಾದ ಪದಗಳ ಅರ್ಥ ತಿಳಿದುಕೊಳ್ಳುವ ಅವಶ್ಯಕತೆ ಇರುವುದಿಲ್ಲ.

ಓದುವ ವಿಧಾನ: ಇದರಲ್ಲಿ ಪ್ರಾರಂಭಿಕ ಹಾಗೂ ಅಂತ್ಯದ ಸಾಲುಗಳನ್ನು ಮಾತ್ರ ಓದಬೇಕಾಗುತ್ತದೆ. ಶೀರ್ಷಿಕೆ, ಉಪ ಶೀರ್ಷಿಕೆ, ಬೋಲ್ಡ್ ಕ್ಯಾಪ್ಷನ್, ಇಟಾಲಿಕ್... ಇಂತಹ ಹೈಲೈಟ್ ಮಾಡಿದ ಪದಗಳನ್ನು ಗಮನವಿಟ್ಟು ಓದಿರಿ.

2. ಸ್ಕ್ಯಾನಿಂಗ್: ಇದು ಲೇಖನದ ನಿರ್ದಿಷ್ಟ ಪಠ್ಯವನ್ನು ಹುಡುಕುವ ತಂತ್ರವನ್ನು ಸೂಚಿಸುತ್ತದೆ.

ಉದಾಹರಣೆ: ಇದರಲ್ಲಿ ಪ್ರಶ್ನೆಗಳಿಗೆ ಉತ್ತರಿಸಲು ಕೆಲವು ಶಬ್ದಗಳ ನಿರ್ದಿಷ್ಟ ಅರ್ಥ ಹುಡುಕುವ ಅವಶ್ಯಕತೆ ಇರುತ್ತದೆ. ಸ್ಕ್ಯಾನಿಂಗ್‌ಗಾಗಿ ಪೂರ್ತಿ ಲೇಖನವನ್ನು ಕನಿಷ್ಠ ಒಂದು ಬಾರಿಯಾದರೂ ಓದಲೇಬೇಕಾದ ಅವಶ್ಯಕತೆ ಇರುತ್ತದೆ.

ಓದುವ ವಿಧಾನ: ಇದರಲ್ಲಿ ಅಗತ್ಯವಿರುವ ವಿವರವನ್ನು ಪಡೆಯಲು ಶೀರ್ಷಿಕೆ ಹಾಗೂ ಉಪ ಶೀರ್ಷಿಕೆ ಮತ್ತು ಪದಗಳ ನಿರ್ದಿಷ್ಟ ಅರ್ಥಗಳ ಬಗ್ಗೆ ತಿಳಿದಿರುವುದು ಅವಶ್ಯಕ.

ಒಟ್ಟಿನಲ್ಲಿ ಪ್ರಶ್ನೆಗಳಿಗೆ ಅನುಸಾರವಾಗಿ ಸ್ಕಿಮ್ಮಿಂಗ್ ಅಥವಾ ಸ್ಕ್ಯಾನಿಂಗ್ ಯಾವುದು ಅವಶ್ಯಕ ಎಂಬುದನ್ನು ವಿದ್ಯಾರ್ಥಿಗಳು ಹೆಚ್ಚು ಅಭ್ಯಾಸದಿಂದ ತಿಳಿದುಕೊಳ್ಳಬೇಕು.

ಉದಾಹರಣೆಗೆ ಎಲ್ಲಿ, ಯಾವಾಗ, ಎಷ್ಟು, ಸಮಾನಾರ್ಥಕ, ವಿರುದ್ಧಾರ್ಥಕ, ನುಡಿಗಟ್ಟಿನ ಅರ್ಥ ಮುಂತಾದ ನೇರವಾದಂತಹ ಪ್ರಶ್ನೆಗಳಿಗೆ ಸ್ಕಿಮ್ಮಿಂಗ್ ಅನುಸರಿಸಿದರೆ ಸೂಕ್ತ ಹಾಗೂ ಲೇಖಕರ ಮನೋಭಾವ (ಟೋನ್), ಥೀಮ್, ಶೀರ್ಷಿಕೆ, ಯಾವುದು ಸರಿ, ಯಾವುದು ತಪ್ಪು ಇಂತಹ ಪರೋಕ್ಷ ಪ್ರಶ್ನೆಗಳಿಗೆ ಹೆಚ್ಚು ಸಮಯದ ಅವಶ್ಯಕತೆ ಇರುವ ಸ್ಕ್ಯಾನಿಂಗ್ ಮಾರ್ಗ ಅನುಸರಿಸಬೇಕಾಗುವುದು.

ಉತ್ತರಿಸುವ ಬಗೆ

- ಮೊದಲು ಆರ್‌ಸಿ ಯನ್ನು ಗಮನಿಸಿದ ತಕ್ಷಣ ಪ್ರಶ್ನೆಗಳ, ಶಬ್ದಗಳ ಹಾಗೂ ಲೇಖನದ ಕ್ಲಿಷ್ಟತೆಯ ಮಟ್ಟ ಪರಿಶೀಲಿಸಿರಿ. ಸುಲಭವಿದ್ದಲ್ಲಿ ಮಾತ್ರ ಮೊದಲು ಉತ್ತರಿಸಲು ಪ್ರಾರಂಭಿಸಿ. ಒಂದು ವೇಳೆ ಮಧ್ಯಮ ಕ್ಲಿಷ್ಟತೆಯಿಂದ ಇದ್ದರೆ ಪರೀಕ್ಷಾ ಸಮಯದ ಮಧ್ಯದಲ್ಲಿಯೇ ಉತ್ತರಿಸಿ.ಕೊನೆಗೆ ಉತ್ತರಿಸಲು ಯೋಚಿಸಿದಲ್ಲಿ ಪೂರ್ತಿ ಲೇಖನ ಓದಲು ಸಾಧ್ಯವಾಗದೆ ಇರಬಹುದು. ನೇರವಾದ ಹಾಗೂ ಸರಳವಾದ ಪ್ರಶ್ನೆಗಳಿಗೂ ಸಹ ಉತ್ತರಿಸಲು ಸಮಯಾವಕಾಶ ದೊರಕದೇ ಹೋಗಬಹುದು.
- ಮೊದಲು ಪ್ರಶ್ನೆಗಳನ್ನು ಓದಿ ಕೀ ವರ್ಡ್ಸ್ ಗುರುತು ಮಾಡಿಕೊಳ್ಳಿ.
- ಪ್ರಶ್ನೆಗಳಿಗೆ ತಕ್ಕಂತೆ ಸ್ಕಿಮ್ಮಿಂಗ್ ಅಥವಾ ಸ್ಕ್ಯಾನಿಂಗ್ ವಿಧಾನ ಅನುಸರಿಸಿ.
- ಪ್ರಶ್ನೆಗಳಿಗೆ ಉತ್ತರಿಸಲು ಲೇಖನದ ಹೊರತಾಗಿ ನಿಮ್ಮ ಸ್ವಂತ ಯೋಚನೆಯನ್ನು ಬಳಸಬೇಡಿ, ನಿಮ್ಮ ಜ್ಞಾನ ಲೇಖನದ ಗ್ರಹಿಕೆಯಲ್ಲಿ ಮೀಸಲಿರಬೇಕೆ ಹೊರತು ಲೇಖನದಲ್ಲಿರದ ಸರಿಯಾದ ಉತ್ತರ ನೀಡುವಲ್ಲಿ ಅಲ್ಲ.

ಉದಾಹರಣೆಗೆ ಲೇಖನದ ಪ್ರಕಾರ ಕರ್ನಾಟಕದಲ್ಲಿ 30 ಜಿಲ್ಲೆಗಳು, ಅದು ಹಳೆಯ ಲೇಖನ ಎಂದಿಟ್ಟುಕೊಳ್ಳಿ. ನಿಮ್ಮ ಅಧ್ಯಯನದ ಪ್ರಕಾರ ಇತ್ತೀಚಿಗೆ ಉದಯಗೊಂಡ ವಿಜಯನಗರ ಸೇರಿ ಕರ್ನಾಟಕದಲ್ಲಿ 31 ಜಿಲ್ಲೆಗಳು. ಈಗ ಪ್ರಶ್ನೆಯಲ್ಲಿ ಕರ್ನಾಟಕದಲ್ಲಿ ಜಿಲ್ಲೆಗಳು ಎಷ್ಟು ಎಂದು ಕೇಳಿದಾಗ ನೀವು ಲೇಖನದ ಪ್ರಕಾರ 30 ಎಂಬ ಉತ್ತರ ನೀಡಬೇಕೆ ಹೊರತು ನಿಮ್ಮ ಜ್ಞಾನದ ಪ್ರಕಾರ 31 ಎಂಬ ಉತ್ತರವಲ್ಲ. ಏಕೆಂದರೆ 31 ಆ ಲೇಖನದಲ್ಲಿ ಇಲ್ಲ.

- ಕೆಲವು ನೇರವಾದ ಪ್ರಶ್ನೆಗಳಿಗೆ ಆಯ್ಕೆಗಳನ್ನು ಕಡಿತಗೊಳಿಸುವ ಮೂಲಕ(option elimination) ಕಡಿಮೆ ಸಮಯದಲ್ಲಿ ಉತ್ತರಿಸಿ.
- ಇವುಗಳಲ್ಲಿ ಯಾವ ವಾಕ್ಯಗಳು ಸರಿ ಅಥವಾ ತಪ್ಪು ಎಂಬಂಥ ಪ್ರಶ್ನೆಗಳಿಗೆ ಗಮನವಿಟ್ಟು ಪ್ರಶ್ನೆಗಳನ್ನು ಓದಿ ಉತ್ತರಿಸಿ. ಉದಾಹರಣೆಗೆ ಇವುಗಳಲ್ಲಿ ಯಾವುದು ಸರಿಯಲ್ಲ ಎಂದು ಕೇಳಿದಾಗ ನೀವು ಸರಿ ಇರುವ ಆಯ್ಕೆಗೆ ಉತ್ತರಿಸುವ ಸಾಧ್ಯತೆ ಇರುತ್ತದೆ. ಹಾಗೆಯೇ ಇವುಗಳಲ್ಲಿ ಯಾವ ವಾಕ್ಯಗಳು ಸರಿ ಎಂಬ ಪ್ರಶ್ನೆ ಕೇಳಿದಾಗ ಒಂದು ವಾಕ್ಯ ಸರಿ ಕಂಡ ತಕ್ಷಣ ಅದೇ ಆಯ್ಕೆಗೆ ಉತ್ತರಿಸಬೇಡಿ. ಕಾರಣ ಅದರಲ್ಲಿ ಒಂದಕ್ಕಿಂತ ಹೆಚ್ಚು ವಾಕ್ಯಗಳು ಸರಿಯಿರಬಹುದು.

ಪ್ರತಿದಿನ ಕನಿಷ್ಠ ನಾಲ್ಕು ಆರ್.ಸಿ ಅಭ್ಯಸಿಸುವುದರಿಂದ ಈ ವಿಭಾಗದಲ್ಲಿ ಹೆಚ್ಚು ಅಂಕಗಳನ್ನು ಗಳಿಸಬಹುದು.

ಪ್ರಜಾವಾಣಿ ಉದ್ಯೋಗ ವಾರ್ತೆ

ಮಂಡ್ಯ ನ್ಯಾಯಾಲಯದಲ್ಲಿ ಬೆರಳಚ್ಚುಗಾರರ ಹುದ್ದೆಗಳು

ಮಂಡ್ಯ ಜಿಲ್ಲಾ ನ್ಯಾಯಾಲಯದಲ್ಲಿ ಖಾಲಿ ಇರುವ ಬೆರಳಚ್ಚುಗಾರರ ಹುದ್ದೆಗಳ ಭರ್ತಿಗೆ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತರು ವೆಬ್‌ಸೈಟ್‌ನಲ್ಲಿ ಅರ್ಜಿ ಡೌನ್‌ಲೋಡ್ ಮಾಡಿಕೊಂಡು ಭರ್ತಿ ಮಾಡಿ ಕಳುಹಿಸಬೇಕು.

ಹುದ್ದೆ: ಬೆರಳಚ್ಚುಗಾರರು

ಸ್ಥಳ: ಮಂಡ್ಯ, **ಹುದ್ದೆಗಳ ಸಂಖ್ಯೆ:** 8

ವಿದ್ಯಾರ್ಹತೆ: ಅರ್ಜಿ ಸಲ್ಲಿಸ ಬಯಸುವ ಅಭ್ಯರ್ಥಿಗಳು ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ನಡೆಸುವ ಎಸ್ಸೆಸ್ಸೆಲ್ಸಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು. ಕನ್ನಡ ಮತ್ತು ಆಂಗ್ಲ ಬೆರಳಚ್ಚು ಹಿರಿಯ ಶ್ರೇಣಿ ಪರೀಕ್ಷೆ ಅಥವಾ ತತ್ಸಮಾನ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿರಬೇಕು.

ವಯೋಮಿತಿ: ಕನಿಷ್ಠ 18 ವರ್ಷ, ಸಾಮಾನ್ಯ ವರ್ಗಕ್ಕೆ ಗರಿಷ್ಠ 35, 2ಎ, 2ಬಿ, 3ಎ, 3ಬಿ ವರ್ಗದ ಅಭ್ಯರ್ಥಿಗಳಿಗೆ 38, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ – 1 ರ ಅಭ್ಯರ್ಥಿಗಳಿಗೆ 40 ವರ್ಷ ನಿಗದಿ ಮಾಡಲಾಗಿದೆ.

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: ಏಪ್ರಿಲ್ 3, 2021

ಅರ್ಜಿ ಸಲ್ಲಿಸುವ ವಿಳಾಸ: ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮಂಡ್ಯ ಜಿಲ್ಲೆ, ಮಂಡ್ಯ.

ವೆಬ್‌ಸೈಟ್ ವಿಳಾಸ: https://districts.ecourts.gov.in/mandya

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

Grandma Climbs a Tree -Ruskin Bond

ಇಂಗ್ಲಿಷ್

ಎಸ್ಸೆಸ್ಸೆಲ್ಸಿ

Poem – 01

Ruskin Bond a well-known Indian English laureate famous for his over thirty books focused on young readers – Children. This poem is taken from his Autobiography 'Scenes from a Writer's Life', where he talks about his beloved granny and her life's best scenes who used to play a card game called Patience or Solitaire every evening all alone.

The poet is very generous enough in bringing about the ingenious nature of his grandmother in the whole of the poem in an exquisite manner.

He begins the poem calling his grandma as genius in climbing trees not just by announcing so but also states her wit of climbing any type or kind of tree both widespread and straight tall ones and stresses on the quick time (in a trice) she takes to do so expressing it proudly that she does it every time with no hassle but as a matter of ease.

Poet says her grandma had been enjoying this daringly different hobby ever since she was six years old which was learnt from her loving brother in a wonderfully wholehearted way leaving away the usually acclaimed piece of enjoyments for that age by justifying this beautiful thought as her grandma had this gift for being happier in a tree than in a lift. It clearly depicts the innocent yet sublime behavior everyone would accustom themselves to during their childhood to learn and habituate to certain hobbies to almost an inseparable part of their life – this is brought about very delicately in lines 5 – 6 in the poem.

Grandma was known for her undefeated streak of climbing trees with no known failures but still as years passed by her age became a constraint in continuing it and also kith and kin were always asking her to stop doing it as she grew old and act wisely as per age and stay calm and relaxed without taking risks and lead agedness gracefully as all other normally do. Poet doesn't miss to bring out the courage and immense love towards the passion of his grandma while quoting her words – 'Well I'll grow disgracefully, I can do it better'. It is noteworthy to get to know the poet's wit in showcasing the family's support to grandma's opinion of continuing her childish habits and desires and also their concern towards her safety knowing there were no trees available in any of the gardens at their vicinity.

to be continued

ಪ್ರಜಾವಾಣಿ ನೋಡಿಯೊ

ಹತ್ತನೇ ತರಗತಿಯ ಇಂಗ್ಲಿಷ್ ಮಾಧ್ಯಮದ ಜೀವಶಾಸ್ತ್ರ ವಿಭಾಗದ 'ಅವರ್ ಎನ್‌ವಿರಾನ್ಮೆಂಟ್' ಪಾಠವನ್ನು ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

https://bit.ly/3ttxgSn

ಸೌರಕೋಶಗಳ ಉಪಯೋಗಗಳು

ದ್ವಿತೀಯ ಪಿಯುಸಿ

ಭೌತಶಾಸ್ತ್ರ

1) ಉಪಗ್ರಹ ಮತ್ತು ವ್ಯೋಮ ನೌಕೆಗಳಲ್ಲಿ ಬಳಸುತ್ತಾರೆ
2) ಮನೆಗಳಲ್ಲಿ ಬಳಸುತ್ತಾರೆ
3) ಕೆಲ ಕ್ಯಾಲ್ಕುಲೇಟರ್‌ಗಳಲ್ಲಿ ಬಳಸುತ್ತಾರೆ.

ಡಿಜಿಟಲ್ ಎಲೆಕ್ಟ್ರಾನಿಕ್ಸ್ ಮತ್ತು ಲಾಜಿಕ್ ಗೇಟ್‌ಗಳು

ದ್ವಿಮಾನ ಸಂಖ್ಯೆಯಲ್ಲಿ ಎರಡು ಸ್ಥಾನಗಳು ಮಾತ್ರ ಇದ್ದು ಅವು o(oV) ಮತ್ತು 1(5V) ಇದ್ದು ಇವುಗಳನ್ನು ಡಿಜಿಟಲ್ ಎಲೆಕ್ಟ್ರಾನಿಕ್ಸ್‌ನಲ್ಲಿ ಎರಡು ವೋಲ್ಟೇಜ್‌ನ ಮಟ್ಟಗಳನ್ನಾಗಿ ಉಪಯೋಗಿಸುತ್ತಾರೆ. ಇಂತಹ ಸಂಜ್ಞೆಗಳನ್ನು ಡಿಜಿಟಲ್ ಸಂಖ್ಯೆಗಳು ಎನ್ನುವರು. ಅಂದರೆ ಡಿಜಿಟಲ್ ಮಂಡಲದಲ್ಲಿ ಇನ್‌ಪುಟ್ ಮತ್ತು ಔಟ್‌ಪುಟ್‌ಗಳನ್ನು ಎರಡು ಬೆಲೆಗಳಲ್ಲಿ ಮಾತ್ರ ಅನುಮತಿಸಲಾಗುವುದು.

ಲಾಜಿಕ್ ಗೇಟ್‌ಗಳು

ಭುಕ್ತ ಮತ್ತು ನಿರ್ಗತ ವೋಲ್ಟೇಜ್‌ಗಳ ನಡುವಿನ ಕೆಲವೊಂದು ತಾರ್ಕಿಕ ಸಂಬಂಧಗಳನ್ನು ಕಲ್ಪಿಸುವ ಮಂಡಲವೇ ಗೇಟ್.

1) NOT ಗೇಟ್



(a)

Input	Output
A	Y
0	1
1	0

(b)

ಭುಕ್ತ ಇದ್ದಾಗ 0 ನಿರ್ಗತ 1 ಮತ್ತು ಭುಕ್ತ 1 ಇದ್ದಾಗ ನಿರ್ಗತ 0 ಇರುತ್ತದೆ. ಆದ್ದರಿಂದ NOT ಗೇಟ್ ಅನ್ನು ವಿದ್ಯುತ್ ಪರಿವರ್ತಕ ಸಾಧನವಾಗಿ ಬಳಸುತ್ತಾರೆ.

ನಿರ್ಗತ $Y = \overline{A}$

2) OR ಗೇಟ್



(a)

ಭುಕ್ತ		ನಿರ್ಗತ
A	B	Y
0	0	0
0	1	1
1	0	1
1	1	1

OR ಗೇಟನಲ್ಲಿ 2 ಅಥವಾ ಹೆಚ್ಚಿನ ಭುಕ್ತಗಳು ಮತ್ತು 1 ನಿರ್ಗತವಿರುತ್ತದೆ. ಭುಕ್ತ A ಅಥವಾ ಭುಕ್ತ B ಎರಡೂ ಭುಕ್ತಗಳು 1 ಆಗಿದ್ದಾಗ ನಿರ್ಗತ Y ಯು 1 ಬರುತ್ತದೆ. ಅಂದರೆ ಯಾವುದೇ ಭುಕ್ತ ಹೆಚ್ಚು ಇದ್ದಾಗ ನಿರ್ಗತವು ಹೆಚ್ಚು ಇರುತ್ತದೆ.

ನಿರ್ಗತ: $Y = A + B$

3) AND ಗೇಟ್



(a)

ಭುಕ್ತ		ನಿರ್ಗತ
A	B	Y
0	0	0
0	1	1
1	0	1
1	1	1

(b)

AND ಗೇಟ್‌ನಲ್ಲಿ ಎರಡು ಅಥವಾ ಹೆಚ್ಚಿನ ಭುಕ್ತಗಳು ಮತ್ತು ಒಂದು ನಿರ್ಗತವಿರುತ್ತದೆ. ಭುಕ್ತ A ಮತ್ತು B ಗಳೆರಡು 1 ಆಗಿದ್ದಾಗ ಮಾತ್ರ ನಿರ್ಗತ Y ಯು 1 ಆಗಿರುತ್ತದೆ. ಅಂದರೆ ಭುಕ್ತಗಳೆಲ್ಲವೂ ಹೆಚ್ಚಿದ್ದಾಗ ಮಾತ್ರ ನಿರ್ಗತ ಹೆಚ್ಚಿರುತ್ತದೆ.

ನಿರ್ಗತ: $Y = A.B$

4) NAND ಗೇಟ್



(a)

Input		Output
A	B	Y
0	0	1
0	1	1
1	0	1
1	1	0

(b)

ಇದು NOT ಗೇಟ್ ಅನ್ನು ಅನುಸರಿಸಿರುವ ಒಂದು AND ಗೇಟ್ ಆಗಿದ್ದು A ಭುಕ್ತ ಮತ್ತು B ಗಳೆರಡು 1 ಆಗಿದ್ದಾಗ ಬರುವ ನಿರ್ಗತ Y ಯು 0 ಆಗಿರುತ್ತದೆ.

ನಿರ್ಗತ $Y = \overline{A.B}$

5) NOR ಗೇಟ್



(a)

Input		Output
A	B	Y
0	0	1
0	1	0
1	0	0
1	1	0

(b)

ಇದು NOT ಗೇಟ್ ಅನ್ನು ಅನುಸರಿಸಿರುವ ಒಂದು OR ಗೇಟ್ ಆಗಿದ್ದು ಭುಕ್ತ A ಮತ್ತು B ಗಳೆರೆಡು 0 ಆಗಿದ್ದಾಗ NOR ಗೇಟ್‌ನ ನಿರ್ಗತ Y ಯು 1 ಆಗಿರುತ್ತದೆ.

ನಿರ್ಗತ: $Y = \overline{A + B}$

NAD ಮತ್ತು NDR ಗೇಟ್‌ಗಳು ಸಾರ್ವತ್ರಿಕ ಗೇಟ್‌ಗಳಾಗಿದ್ದು, ಇವುಗಳನ್ನು ಬಳಸಿಕೊಂಡು ಮೂಲಭೂತ ಗೇಟ್‌ಗಳಾದ OR, AND ಮತ್ತು NOT ಗೇಟುಗಳನ್ನು ಪಡೆಯಬಹುದು.

(ಪಾಠಗಳ ಸಂಯೋಜನೆ: ಆಕಾಶ್ ಇನ್‌ಸ್ಟಿಟ್ಯೂಟ್, ಬೆಂಗಳೂರು)

ಪ್ರಜಾವಾಣಿ ನೋಡಿಯೊ

ದ್ವಿತೀಯ ಪಿಯುಸಿ ಭೌತಶಾಸ್ತ್ರ ವಿಭಾಗದ 'ಬೋರ್ಸ್ ಹೈಡ್ರೋಜನ್ ಆಟಂ' ಇಂಗ್ಲಿಷ್ ಪಾಠವನ್ನು ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

https://bit.ly/3qUroA1

ಸುಭಾಷಿತ

ಹೆಚ್ಚಿನದನ್ನು ಬಯಸುವುದು ಎದೆ ನೋವಿಗೆ ಆಹ್ವಾನ ಇತ್ತಂತೆ.

–ಸ್ಟೀಫನ್ ಕಿಂಗ್

ಸಿಹಿಬೆಲ್ಲದ ಹಿಂದಿನ ಕಹಿಸತ್ಯ ಬಹಿರಂಗ ಆಗಬೇಕಿದೆ ಆಲೆಮನೆಗಳ ಮಾನರಕ್ಷಣೆ

ಆಲೆಮನೆ ಎಂದಾಕ್ಷಣ ಮೋಹಕ ಪರಿಮಳ ಮತ್ತು ಚೇತೋಹಾರಿ ಪರಿಸರವೇ ನೆನಪಿಗೆ ಬರುತ್ತದೆ. ಸಕ್ಕರೆಗೆ ಹೋಲಿಸಿದರೆ ಆಲೆಮನೆಯ ಬೆಲ್ಲ ಎಂದರೆ ಮಾಲಿನ್ಯರಹಿತ, ಖನಿಜಯುಕ್ತ, ಸಾವಯವ ಸಿಹಿಯೆಂದೇ ನಂಬಿಕೆಯಿದೆ. ಹಬ್ಬ ಹರಿದಿನಗಳಲ್ಲಿ ಶುದ್ಧ ಪಳಪಳ ಹೊಳೆಯುವ ಸಕ್ಕರೆಗಿಂತ ಗ್ರಾಮ್ಯ ಬೆಲ್ಲಕ್ಕೇ ಹೆಚ್ಚು ಸಾಂಪ್ರದಾಯಿಕ ಮೌಲ್ಯವಿದೆ. ಆದರೆ ಅದಕ್ಕೂ ರಾಸಾಯನಿಕ ಸೇರಿಸಿ ಹೆಸರು ಕೆಡಿಸಿ ಲಾಭಕೋರರು ಜನರ ಆರೋಗ್ಯಕ್ಕೂ ಧಕ್ಕೆ ತರುತ್ತಿದ್ದಾರೆ. 'ಮಂಡ್ಯ ಬೆಲ್ಲ' ಎಂತಲೇ ಖ್ಯಾತಿ ಪಡೆದಿದ್ದ ಅಚ್ಚುಬೆಲ್ಲ ಬಹುದೊಡ್ಡ ಪ್ರಮಾಣದಲ್ಲಿ ದೂರದ ರಾಜ್ಯಗಳಿಗೂ ರವಾನೆಯಾಗುತ್ತದೆ. ಆದರೆ, ಅತೀವ ಕಲಬೆರಕೆಯಿಂದಾಗಿ ಈಗ ಗುಜರಾತ್, ಕೇರಳ ರಾಜ್ಯಗಳು ಮಂಡ್ಯ ಬೆಲ್ಲವನ್ನು ತಿರಸ್ಕರಿಸುತ್ತಿದ್ದು, ರಾಜಸ್ಥಾನ, ಮಧ್ಯಪ್ರದೇಶಗಳೂ ಬದಲೀ ಬೆಲ್ಲಕ್ಕಾಗಿ ಶೋಧಿಸುತ್ತಿರುವುದಾಗಿ ವರದಿಗಳು ಬಂದಿವೆ. ಬಂಗಾರದ ಬಣ್ಣದ ಬೆಲ್ಲಕ್ಕೆ ಬೇಡಿಕೆ ಹೆಚ್ಚಿರುವುದರಿಂದಾಗಿ ಆಲೆಮನೆಗಳಲ್ಲಿ ಈ ಕರಾಳ ದಂಧೆ ವ್ಯಾಪಕವಾಗುತ್ತಿದ್ದು ಉತ್ತರದ ರಾಜ್ಯಗಳಿಂದ ಬಂದವರು ನಡೆಸುವ ಬೆಲ್ಲದ ಬಟ್ಟಿಗಳಲ್ಲಿ ಯದ್ವಾತದ್ವಾ ರಾಸಾಯನಿಕ ಮಿಶ್ರಣ ಆಗುತ್ತಿರುವುದಾಗಿ ವಿಜ್ಞಾನಿಗಳು ಹೇಳಿದ್ದಾರೆ. ಬೆಲ್ಲದಲ್ಲಿ ಸಿಹಿಯ ಸಾಂದ್ರತೆಯನ್ನು ಹೆಚ್ಚಿಸಲೆಂದು ಸಕ್ಕರೆ ಕಾರ್ಖಾನೆಗಳ ಕಾಕಂಬಿಯನ್ನೂ ಸೇರಿಸುತ್ತಿರುವುದನ್ನು ಆಹಾರ ಗುಣಮಟ್ಟ ತಪಾಸಣಾ ಅಧಿಕಾರಿಗಳು ಪತ್ತೆ ಮಾಡಿದ್ದಾರೆ. ಎರಡು ವರ್ಷಗಳ ಹಿಂದೆಯೇ ತಮಿಳುನಾಡಿನ ಮಧುರೆಯಲ್ಲಿ ಬೆಲ್ಲದ ವ್ಯಾಪಾರಿಗಳೇ ಕೆಮಿಕಲ್ ಸಿಂಪಡಣೆ ಮಾಡಿ ಹಳದಿ ಬೆಲ್ಲದಲ್ಲಿ ತಯಿಸಿಕೊಳ್ಳುವುದು ಬೆಳಕಿಗೆ ಬಂದಿತ್ತು. ನಮ್ಮ ಆಹಾರ ಗುಣಮಟ್ಟ ತಪಾಸಣೆ ಮಾಡುವ ಅಧಿಕಾರಿಗಳು ಆ ಹಂತದಲ್ಲೇ ಎಚ್ಚರ ವಹಿಸಿದ್ದಿದ್ದರೆ ಮಂಡ್ಯದ ಬೆಲ್ಲ ಹೀಗೆ ಪರ ರಾಜ್ಯಗಳಿಂದ ತಿರಸ್ಕೃತವಾಗುವ ಮಟ್ಟಕ್ಕೆ ತನ್ನ ಹೆಸರನ್ನು ಕೆಡಿಸಿಕೊಳ್ಳುತ್ತಿರಲಿಲ್ಲ.

ಆಹಾರ ಗುಣಮಟ್ಟ ತಪಾಸಣೆ ಕಟ್ಟುನಿಟ್ಟಾಗಿ ನಡೆಯದಿದ್ದರೆ ಏನೆಲ್ಲಾ ಅನರ್ಥಗಳಾಗುತ್ತವೆ. ಭಾರತದ ಚಹಾಪುಡಿ, ಮೆಣಸಿನಕಾಯಿ, ಬಾಸ್ಮತಿ ಅಕ್ಕಿ, ಉಪ್ಪು, ಶಾವಿಗೆ, ವಿವಿಧ ಬಗೆಯ ತೈಲ, ಪೇಯ ಹೀಗೆ 202 ಖಾದ್ಯ ದ್ರವ್ಯಗಳು ವಿದೇಶಗಳಿಂದ ಪದೇ ಪದೇ ತಿರಸ್ಕೃತವಾಗಿ ಬರುತ್ತಿದ್ದು, ಜಗತ್ತಿನ ಮೂರು ಅತಿ ಕಳಪೆ ರಫ್ತುದೇಶಗಳ ಪೈಕಿ ಭಾರತವೂ ಒಂದೆಂಬ ಅಪಖ್ಯಾತಿ ನಮ್ಮದಾಗಿದೆ. ವಿದೇಶಗಳಲ್ಲೇನೋ ಕಟ್ಟುನಿಟ್ಟಿನ ತಪಾಸಣೆ ಇರುತ್ತದೆ. ನಮ್ಮಲ್ಲೇ ಬಳಕೆಯಾಗುವ ಸಾಮಗ್ರಿಗಳ ಗುಣಮಟ್ಟದ ಗತಿಯೇನು? ಕೆಲವು ಹಾಲಿನ ಉತ್ಪನ್ನಗಳಲ್ಲಿ ಯೂರಿಯಾ ಮತ್ತು ಸುಣ್ಣದ ಕಲಬೆರಕೆ ಆಗುತ್ತಿದ್ದ ಬಗ್ಗೆ ವರದಿಗಳಿವೆ. ಹಸುಗಳ ದೇಹಕ್ಕೆ ಆಂಟಿ ಬಯಾಟಿಕ್ ಮತ್ತು ಆಕ್ಸಿಟೋಸಿನ್ ತೂರಿಸಿ ಅಕ್ರಮ ಹಣವನ್ನು ಹಿಂಡುವ ದಂಧೆಕೋರರಿಗೂ ನಮ್ಮಲ್ಲಿ ಕೊರತೆ ಇಲ್ಲ. ದೇಶದ ಸುಪ್ರಸಿದ್ಧ ಕಂಪನಿಗಳೂ ಜೇನಿಗೆ ಸಕ್ಕರೆ ಪಾಕವನ್ನು ಸೇರಿಸಿ ಮಾರುತ್ತಿರುವುದು ಈಚೆಗೆ ಪತ್ತೆಯಾಗಿದೆ. ಬೆಲ್ಲದ ಕಲಬೆರಕೆಯ ವಿಷಯ ಇವೆಲ್ಲಕ್ಕಿಂತ ಗಂಭೀರ. ಸಕ್ಕರೆಯನ್ನು ಬಿಳಿವಿಷ ಎಂದು ಪರಿಗಣಿಸುವವರು ಸಕ್ಕರೆಯ ಬದಲಿಗೆ ಬೆಲ್ಲವನ್ನು ಬಳಸುತ್ತಾರೆ. ಪೋಷಕಾಂಶಗಳೇ ಇಲ್ಲದ ಸಕ್ಕರೆಗೆ ಹೋಲಿಸಿದರೆ ಬೆಲ್ಲದಲ್ಲಿ ಕಬ್ಬಿಣದ ಜೊತೆ ಅಷ್ಟಿಷ್ಟು ಕ್ಯಾಲ್ಸಿಯಂ, ಮೆಗ್ನೀಷಿಯಂ ಮುಂತಾದ ಲವಣಗಳು ಇವೆ. ಈಗ ಬೆಲ್ಲದಲ್ಲೂ ಫಾಸ್ಫಾರಿಕ್ ಆ್ಯಸಿಡ್, ಸ್ಯಾಚುರೇಟೆಡ್ ಮುಂತಾದ ಕೆಮಿಕಲ್ ಇದೆಯೆಂದು ಕಹಿ ಸತ್ಯ ಗೊತ್ತಾದಾಗ ಸಿಹಿಗೆ ಏನು ಮಾಡಬೇಕು? ಸುಶಿಕ್ಷಿತ ಅನುಕೂಲಸ್ಥರೇನೊ ಹೆಚ್ಚು ಬೆಲೆ ತೆತ್ತು ಮಾಲ್‌ಗಳಲ್ಲಿ ಆಕರ್ಷಕ ಲೇಬಲ್ ಹಚ್ಚಿಕೊಂಡಿರುವ 'ಅಪ್ಪಟ' ಸಾವಯವ ಬೆಲ್ಲವನ್ನು ಖರೀದಿಸಬಹುದು (ಅಂಥ ದುಬಾರಿ ಬೆಲ್ಲಕ್ಕೂ ಆಹಾರ ಗುಣಮಟ್ಟ ಖಾತರಿಯ ಅಧಿಕೃತ ಲಾಂಛನ ಇರುವುದಿಲ್ಲ, ಆ ಮಾತು ಬೇರೆ). ಇನ್ನು, ಬೆಳಗಾದರೆ ಬೇಕರಿಗಳಿಗೆ ಮುಗಿಬೀಳುವ ಗ್ರಾಹಕರು, ಲೇಬಲ್ ಇಲ್ಲದ ಅಗ್ಗದ ಬೆಲ್ಲವನ್ನೇ ಖರೀದಿಸಬೇಕಾದ ಸಾಮಾನ್ಯ ಜನರು, ಕಪ್ಪು ಬೆಲ್ಲವೇ ಸಾವಯವ ಬೆಲ್ಲವೆಂದು ನಂಬಿದವರು- ಹೀಗೆ ಎಲ್ಲರಿಗೂ ಸಿಹಿವಿಷದ ಸೇವನೆಯೇ? ಇದಕ್ಕಿಂತ ಮಹತ್ವದ್ದೆಂದರೆ ಬೆಲ್ಲದಿಂದಾಗಿಯೇ ಮಂಡ್ಯ ಮತ್ತು ಬೆಳಗಾವಿ ಜಿಲ್ಲೆಗಳು 'ಒಂದು ಜಿಲ್ಲೆ ಒಂದು ಉತ್ಪನ್ನ' ಎಂಬ ವಿಶೇಷ ಅಭಿಧಾನಕ್ಕೆ ಆಯ್ಕೆಯಾಗಿದ್ದು, ಈ ಸಂದರ್ಭದಲ್ಲೇ ಮಂಡ್ಯ ಬೆಲ್ಲಕ್ಕೆ ಕೆಟ್ಟ ಹೆಸರು ಬಂದಿದೆ. ರಾಜ್ಯದಾದ್ಯಂತ ಆಲೆಮನೆಗಳ ತಪಾಸಣೆ, ಅಂಗಡಿಗಳಲ್ಲಿ ಬೆಲ್ಲದ ಗುಣಮಟ್ಟ ಪರೀಕ್ಷೆ ನಡೆಸುವ, ಗ್ರಾಹಕರಲ್ಲಿ ಜಾಗೃತಿ ಮೂಡಿಸುವ ಕ್ರಮ ಶೀಘ್ರ ಜರುಗಬೇಕಿದೆ. ಚಿನ್ನದ ಬಣ್ಣದ್ದೆಲ್ಲ ಚೆನ್ನೆಂಬ ಭ್ರಮೆಯಿಂದ ಮೊದಲು ನಾವು ಪಾರಾಗಬೇಕಿದೆ.

> ರಾಜ್ಯದಾದ್ಯಂತ ಆಲೆಮನೆಗಳ ತಪಾಸಣೆ, ಅಂಗಡಿಗಳಲ್ಲಿ ಬೆಲ್ಲದ ಗುಣಮಟ್ಟ ಪರೀಕ್ಷೆ ನಡೆಸುವ, ಗ್ರಾಹಕರಲ್ಲಿ ಜಾಗೃತಿ ಮೂಡಿಸುವ ಕ್ರಮ ಶೀಘ್ರ ಜರುಗಬೇಕಿದೆ

ದಿನದ ಟ್ವೀಟ್

ಸ್ಥಗಿತಗೊಳಿಸುವುದು ಒಳ್ಳೆಯದು

ಹಲವಾರು ಬಾರಿ ಪತನಗೊಂಡಿದ್ದರೂ ಮಿಗ್-21 ಯುದ್ಧ ವಿಮಾನಗಳ ಸಂಚಾರವನ್ನು ನಾವು ಸ್ಥಗಿತಗೊಳಿಸಿಲ್ಲವೇಕೆ? ನಮ್ಮ ಅನೇಕ ಯೋಧರು ಈ ಹಿಂದೆಯೂ ಅವಘಡಗಳಲ್ಲಿ ಪ್ರಾಣ ಕಳೆದುಕೊಂಡಿದ್ದಾರೆ. ಮಿಗ್– 21 ವಿಮಾನ ಬುಧವಾರ ಪತನಗೊಂಡು ಮೃತಪಟ್ಟಿರುವ ಪೈಲಟ್‌ಗೆ ನನ್ನ ಅಂತಿಮ ನಮನ.

ತುಷಾರ್ ಸಿಂಗ್ಲಾ, ನಾಗರಿಕ

25 ವರ್ಷಗಳ ಹಿಂದೆ

ಸೋಮವಾರ, 18-3-1996

● **ಮಿಗ್–21 ಆಧುನೀಕರಣಕ್ಕೆ ರಷ್ಯಾ ಜತೆ ಭಾರತ ಒಪ್ಪಂದ**

ನವದೆಹಲಿ, ಮಾರ್ಚ್ 17 (ಯುಎನ್‌ಐ)– ಭಾರತೀಯ ವಾಯುಪಡೆಯ 125 ಮಿಗ್–21 ಯುದ್ಧ ವಿಮಾನಗಳ ಆಧುನೀಕರಣಕ್ಕೆ ರಷ್ಯಾದ ವಿಮಾನ ನಿರ್ಮಾಣ ಕಂಪನಿಗಳ ಜತೆ ಭಾರತವು 1,100 ಕೋಟಿ ರೂಪಾಯಿಗಳ ಒಪ್ಪಂದವೊಂದಕ್ಕೆ ಸಹಿ ಮಾಡಿದೆ.

ರಕ್ಷಣಾ ಇಲಾಖೆಯ ಮೂಲಗಳ ಪ್ರಕಾರ, ಒಪ್ಪಂದಕ್ಕೆ ಮಾರ್ಚ್ ಒಂದರಂದು ಸಹಿ ಮಾಡಲಾಗಿದೆ. ಹೊಸ ವಿಮಾನಕ್ಕೆ ಮಿಗ್–21 ಹೋರಾಟ ಜೆಟ್ ಅನ್ನು ಅಳವಡಿಸಿ ಅತ್ಯಾಧುನಿಕ ಉಪಕರಣ ಹಾಗೂ ವ್ಯವಸ್ಥೆ ಮಾಡಬೇಕಿದೆ. ಆಧುನೀಕರಣ ಹಾಗೂ ಉನ್ನತೀಕರಣ ಆಗಿರುವ ಯುದ್ಧ ವಿಮಾನವನ್ನು ಒಪ್ಪಂದದ 29 ತಿಂಗಳ ನಂತರ ರಷ್ಯಾ ಪೂರೈಸಲಿದೆ. ಅಲ್ಲದೆ ಹೆಚ್ಚುವರಿಯಾಗಿ 50 ಮಿಗ್–21 ಹೋರಾಟ ವಿಮಾನಗಳ ಆಧುನೀಕರಣವು ಒಪ್ಪಂದದಲ್ಲಿ ಸೇರಿದೆ.

● **ಶ್ರೀಲಂಕಾ ಶಿರಕ್ಕೆ ವಿಶ್ವಕಪ್ ಕಿರೀಟ**

ಲಾಹೋರ್, ಮಾರ್ಚ್ 17– ಪುಟ್ಟ ದ್ವೀಪದ ಕನಸು ನನಸಾಯಿತು. ಕಳೆದ ಒಂದೂವರೆ ವರ್ಷದಿಂದ ಯಶಸ್ಸನ್ನು ಕಾಣುತ್ತ ಬಂದಿದ್ದ ಶ್ರೀಲಂಕಾ, ಕ್ರಿಕೆಟ್‌ನ ಎವರೆಸ್ಟ್ ಶಿಖರವನ್ನು ಇಂದು ಯಶಸ್ವಿಯಾಗಿ ಏರಿತು. ವಿಲ್ಸ್ ವಿಶ್ವಕಪ್ ಫೈನಲ್ ಪಂದ್ಯದಲ್ಲಿ ಆಸ್ಟ್ರೇಲಿಯಾ ತಂಡವನ್ನು ಆರಾಮವಾಗಿ ಏಳು ವಿಕೆಟ್‌ಗಳಿಂದ ಸೋಲಿಸಿದ ಶ್ರೀಲಂಕಾದವರು ಮೊತ್ತಮೊದಲ ಬಾರಿಗೆ ಕ್ರಿಕೆಟ್ ಜಗತ್ತಿನ ಸಾಮ್ರಾಟರಾದರು.

50 ವರ್ಷಗಳ ಹಿಂದೆ

ಗುರುವಾರ, 18-3-1971

● **15 ಶಾಸಕರ ಪಕ್ಷಾಂತರ: ವೀರೇಂದ್ರ ಸಂಪುಟಕ್ಕೆ ಗಂಡಾಂತರ**

ಬೆಂಗಳೂರು, ಮಾರ್ಚ್ 17– ಇಂದು ಪಾದರಸ ಸದೃಶ ರಭಸದಿಂದ ನಡೆದ ಬೆಳವಣಿಗೆಯಿಂದಾಗಿ ರಾಜ್ಯದ ಮಂತ್ರಿ ಮಂಡಲ ಉರುಳಿ ಹೋಗುವ ಪರಿಸ್ಥಿತಿ ಉಂಟಾಗಿದೆ.

ವಿಧಾನಸಭೆಯ 15 ಮಂದಿ ಸಂಸ್ಥಾ ಕಾಂಗ್ರೆಸ್ ಸದಸ್ಯರು ಆಡಳಿತ ಕಾಂಗ್ರೆಸ್‌ಗೆ ಪಕ್ಷಾಂತರಗೊಂಡು, ಮುಖ್ಯಮಂತ್ರಿ ವೀರೇಂದ್ರ ಪಾಟೀಲರು ಬಹುಮತ ಕಳೆದುಕೊಂಡಿದ್ದಾರೆಂದು ಆಡಳಿತ ಕಾಂಗ್ರೆಸ್ ನಾಯಕರು ಘೋಷಿಸಿದುದೇ ಅಲ್ಲದೆ ರಾಜ್ಯಪಾಲರಿಗೂ ತಿಳಿಸಿದರು.

ಈ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಸಂಜೆ ಅವಸರದಲ್ಲಿ ಸೇರಿದ ಸಂಸ್ಥಾ ಕಾಂಗ್ರೆಸ್ ಸಭೆ ಶ್ರೀ ವೀರೇಂದ್ರ ಪಾಟೀಲ್ ಅವರ ನಾಯಕತ್ವದಲ್ಲಿ ವಿಶ್ವಾಸವನ್ನು ಪ್ರತಿಪಾದಿಸಿ, ನಾಲ್ಕು ತಿಂಗಳ ಕಾಲದ ಬಜೆಟನ್ನು ಅಂಗೀಕರಿಸಿದ ನಂತರ ಮುಂದಿನ ನಡೆ ಕುರಿತು ಚರ್ಚಿಸಲು ತೀರ್ಮಾನಿಸಿತು.

● **ಸಂಸತ್ ಕಾಂಗ್ರೆಸ್ ಪಕ್ಷದ ನಾಯಕರಾಗಿ ಇಂದಿರಾ**

ನವದೆಹಲಿ, ಮಾರ್ಚ್ 17– ಮಧ್ಯಂತರ ಚುನಾವಣೆಗಳಲ್ಲಿ ಭಾರಿ ಜಯ ಗಳಿಸಿ ವಿಜಯೋತ್ಸಾಹದಿಂದಿರುವ ಆಡಳಿತ ಕಾಂಗ್ರೆಸ್ ಸಂಸತ್ ಪಕ್ಷವು ಭಾರಿ ಕೋಲಾಹಲ, ಪ್ರಶಂಸೆಗಳ ನಡುವೆ ಇಂದಿರಾ ಗಾಂಧಿ ಅವರನ್ನು ಪಕ್ಷದ ನಾಯಕರನ್ನಾಗಿ ಸರ್ವಾನುಮತದಿಂದ ಆರಿಸಿತು.

ಐದನೆಯ ಲೋಕಸಭೆಗೆ 5 ವರ್ಷಗಳ ಅವಧಿಗೆ ಪಕ್ಷದ ನಾಯಕಿಯಾಗಿ ಆಯ್ಕೆಯಾದ ಬಗ್ಗೆ ಔಪಚಾರಿಕ ಪ್ರಕಟಣೆ, ಜಯ ಘೋಷಗಳ ನಂತರ ಪಕ್ಷದ ಸದಸ್ಯರಿಗೆ ಕೃತಜ್ಞತೆ ಸಲ್ಲಿಸಿದ ಇಂದಿರಾ ಅವರು, 'ಇದು ವಿಜಯೋತ್ಸವಕ್ಕೆ ಸಮಯವಲ್ಲ; ಸಮಾಜವಾದದ ಹಾದಿಯಲ್ಲಿ ರಾಷ್ಟ್ರ ಮತ್ತು ಜನತೆಯನ್ನು ಮುನ್ನಡೆಸುವ ಬೃಹತ್ ಕಾರ್ಯ ನಮ್ಮ ಮುಂದಿದೆ' ಎಂದು ಕರೆ ನೀಡಿದರು.

ಭಾರತ ಕ್ರಿಕೆಟ್ ತಂಡದ ಯುವ ಮತ್ತು ಅನುಭವಿ ಆಟಗಾರರಲ್ಲಿ ಸಮತೋಲನ ಸಾಧಿಸುವ ಸವಾಲಿದೆ

ಭಾರತಕ್ಕೆ ಬೆಂಚ್ ಶಕ್ತಿಯೇ ಸವಾಲು

ವಿಶ್ಲೇಷಣೆ

ಗಿರೀಶ ದೊಡ್ಡಮನಿ

ಕ್ರಿಕೆಟ್‌ನಲ್ಲಿ ಈಗ ಆಡುತ್ತಿರುವ ವೇಗದ ಬೌಲರ್‌ಗಳಲ್ಲಿ ಇಂಗ್ಲೆಂಡ್‌ನ ಜೇಮ್ಸ್ ಆ್ಯಂಡರ್ಸನ್ ಮತ್ತು ಜೋಫ್ರಾ ಆರ್ಚರ್ ಅವರು ಅಗ್ರಸ್ಥಾನದಲ್ಲಿದ್ದಾರೆ. ಇವರ ಸ್ವಿಂಗ್ ಮತ್ತು ಬಿರುಸಿನ ಬೌನ್ಸರ್‌ಗಳನ್ನು ಎದುರಿಸಲು ವಿಶ್ವದ ಎಲ್ಲ ಕ್ರಿಕೆಟ್ ತಂಡಗಳ ಬ್ಯಾಟ್ಸ್‌ಮನ್‌ಗಳೂ ವಿಶೇಷ ತಯಾರಿ ನಡೆಸುತ್ತಾರೆ.

ಆದರೆ, ಭಾರತದ ಚಿಗುರುಮೀಸೆಯ ಹುಡುಗ ರಿಷಭ್ ಪಂತ್ ಈ ಇಬ್ಬರೂ ಬೌಲರ್‌ಗಳಿಗೆ ಈಚೆಗೆ ಸಿಂಹಸ್ವಪ್ನವಾಗಿಬಿಟ್ಟಿದ್ದಾರೆ. ಮೊಟೇರಾದಲ್ಲಿ ನಡೆದಿದ್ದ ಟೆಸ್ಟ್ ಪಂದ್ಯದಲ್ಲಿ ಜೇಮ್ಸ್ ಆ್ಯಂಡರ್ಸನ್ ಮತ್ತು ಟಿ20 ಪಂದ್ಯದಲ್ಲಿ ಜೋಫ್ರಾ ಆರ್ಚರ್ ವೇಗದ ಎಸೆತಗಳನ್ನು ರಿವರ್ಸ್ ಸ್ವೀಪ್ ಮೂಲಕ ಸಿಕ್ಸರ್‌ಗೆ ಎತ್ತಿದ ರಿಷಭ್ ಅಚ್ಚರಿ ಮೂಡಿಸಿದ್ದಾರೆ. ರಿಷಭ್‌ಗೆ ಇಂತಹ ದಿಟ್ಟತನ ಬಂದಿದ್ದು ಹೇಗೆ? ಇದರ ಹಿಂದೆ ಭಾರತ ತಂಡದ ಇವತ್ತಿನ ಬೆಂಚ್ ಶಕ್ತಿಯ ಪ್ರಭಾವ ಇರಬಹುದೇ?

ರಾಷ್ಟ್ರೀಯ ತಂಡದ ಕಾಯ್ದಿಟ್ಟ ಆಟಗಾರರ ಪಟ್ಟಿಯಲ್ಲಿ ಇಂದು ನಾಮುಂದು, ತಾಮುಂದು ಎಂದು ತಮ್ಮ ಸಾಮರ್ಥ್ಯ ಸಾಬೀತುಪಡಿಸಲು ಹಲವರು ಸಾಲುಗಟ್ಟಿದ್ದಾರೆ. ತಂಡದಲ್ಲಿರುವ ಅನುಭವಿ ಆಟಗಾರ ಗಾಯಗೊಂಡಾಗ ಅಥವಾ ವೈಯಕ್ತಿಕ ಕಾರಣಗಳಿಗೆ ರಜೆ ತೆಗೆದುಕೊಂಡಾಗ ಸಿಗುವ ಅವಕಾಶವನ್ನು ಸಮರ್ಥವಾಗಿ ಬಳಸಿಕೊಂಡ ಯುವಪ್ರತಿಭೆಗಳ ಉದಾಹರಣೆಗಳು ನಮ್ಮ ಕಣ್ಣ ಮುಂದೆ ಇವೆ. ಬೇರೆ ದೇಶಗಳು ಹೊಟ್ಟೆಕಿಚ್ಚು ಪಡುವಷ್ಟು ಬೆಂಚ್ ಶಕ್ತಿ ಬೆಳೆದಿದೆ.

ಇದು ತಂಡದಲ್ಲಿ ಆಂತರಿಕ ಪೈಪೋಟಿಯನ್ನೂ ಹೆಚ್ಚಿಸಿದೆ. ಆದ್ದರಿಂದಲೇ ಹೊಸ ಕೌಶಲಗಳೊಂದಿಗೆ ಛಾಪು ಮೂಡಿಸುವ ಹಂಬಲ ಆಟಗಾರರಲ್ಲಿ ಹೆಚ್ಚಾಗುತ್ತಿದೆ. ಇದು ಕೂಡ ರಿಷಭ್ ರಿವರ್ಸ್ ಸ್ವೀಪ್ ಹಿಂದಿರುವ ಕಾರಣವೆನ್ನುವುದು ನಿಸ್ಸಂಶಯ. ಏಕೆಂದರೆ, ರಿಷಭ್ ವಿಫಲರಾದರೆ, ವಿಕೆಟ್ ಕೀಪಿಂಗ್–ಬ್ಯಾಟಿಂಗ್ ಮಾಡಲು ಕೆ.ಎಲ್. ರಾಹುಲ್, ಇಶಾನ್ ಕಿಶನ್, ಸಂಜು ಸ್ಯಾಮ್ಸನ್ ಸಿದ್ಧರಾಗಿದ್ದಾರೆ. ಇದು ಕೀಪಿಂಗ್‌ಗೆ ಮಾತ್ರವಲ್ಲ ಎಲ್ಲ ವಿಭಾಗಗಳಿಗೂ ಅನ್ವಯಿಸುತ್ತದೆ.

ಭಾರತ ತಂಡದ ಆರಂಭಿಕ ಬ್ಯಾಟಿಂಗ್ ಕಳೆದ ಟೆಸ್ಟ್ ಮತ್ತು ಸೀಮಿತ ಓವರ್‌ಗಳಲ್ಲಿ ಅಸ್ಥಿರತೆಯನ್ನು ಅನುಭವಿಸಿದೆ. ಅದಕ್ಕಾಗಿಯೇ ಶುಭಮನ್ ಗಿಲ್, ಇಶಾನ್ ಕಿಶನ್ ಬೆಳಕಿಗೆ ಬಂದಿದ್ದಾರೆ. ರೋಹಿತ್, ಮಯಂಕ್ ಅಗರವಾಲ್, ಶಿಖರ್ ಧವನ್, ಕೆ.ಎಲ್.ರಾಹುಲ್, ಉಮೇಶ್ ಯಾದವ್ ಅವರಂತಹ ಅನುಭವಿಗಳು ಕೆಲವು ಪಂದ್ಯಗಳಲ್ಲಿ ಬೆಂಚ್‌ನಲ್ಲಿರಬೇಕಾಯಿತು. ಇತ್ತೀಚಿನ ದಿನಗಳಲ್ಲಿ ಸೀನಿಯರ್ ಆಟಗಾರರೂ ಯುವ ಆಟಗಾರರೊಂದಿಗೆ ಬೆಂಚ್ ಹಂಚಿಕೊಳ್ಳುತ್ತಿರುವುದು ವಿಶೇಷ. ಈ ಬೆಳವಣಿಗೆಯಿಂದ ತಂಡಕ್ಕೆ ನಿಜಕ್ಕೂ ಲಾಭವಾಗುತ್ತಿದೆ ಎನ್ನುವುದರಲ್ಲಿ ಅನುಮಾನವಿಲ್ಲ.

ಆದರೆ ಇದರ ಇನ್ನೊಂದು ಮುಖವನ್ನು ವಿಶ್ಲೇಷಿಸುವುದು ಕೂಡ ಅಗತ್ಯ. ಆಸ್ಟ್ರೇಲಿಯಾ ಪ್ರವಾಸದಲ್ಲಿ ಗಾಯಗೊಂಡು ಹೊರಬಿದ್ದಿದ್ದ ರವೀಂದ್ರ ಜಡೇಜ, ಹನುಮವಿಹಾರಿ ಅವರು ಚೇತರಿಸಿಕೊಂಡ ಮೇಲೆ ತಂಡಕ್ಕೆ ಮರಳುತ್ತಾರೆ. ಆಗ ಅವರ ಬದಲಿಗೆ ಚೆನ್ನಾಗಿ ಆಡಿದ್ದ ಯುವ ಆಟಗಾರರು ಮತ್ತೆ ಕಣದಿಂದ ಹೊರಗುಳಿಯುತ್ತಾರೆ. ಇದು ಸರಿಯೇ? ಹಾಗಿದ್ದರೆ, ಇದನ್ನು ಸರಿದೂಗಿಸಲು ಏನು ಮಾಡಬಹುದು? ಇಂಗ್ಲೆಂಡ್ ಮತ್ತು ಆಸ್ಟ್ರೇಲಿಯಾ ದೇಶಗಳ ಮಾದರಿಯಲ್ಲಿ ಭಾರತದಲ್ಲಿಯೂ ಟೆಸ್ಟ್ ಮತ್ತು ಸೀಮಿತ ಓವರ್‌ಗಳಿಗೆ ಪ್ರತ್ಯೇಕ ತಂಡಗಳನ್ನು ಮಾಡುವ ಅಗತ್ಯವಿದೆಯೇ?

ಈ ದಿಸೆಯಲ್ಲಿ ಒಂದು ಪ್ರಯೋಗ ಮಾಡಲು ಬಿಸಿಸಿಐ ಯೋಚಿಸುತ್ತಿದೆ. ಜೂನ್‌ನಲ್ಲಿ ಸೌತಾಂಪ್ಟನ್‌ನಲ್ಲಿ ನಡೆಯಲಿರುವ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಫೈನಲ್‌ನಲ್ಲಿ ಆಡಲು ವಿರಾಟ್ ಕೊಹ್ಲಿ ಬಳಗವು ತೆರಳಲಿದೆ. ಆದ್ದರಿಂದ ಅದೇ ತಿಂಗಳು ಆಯೋಜನೆಗೊಳ್ಳಬಹುದಾದ (ಇನ್ನೂ ದಿನಾಂಕ ಪ್ರಕಟವಾಗಿಲ್ಲ) ಏಷ್ಯಾ ಕಪ್ ಟೂರ್ನಿಯಲ್ಲಿ ಆಡಲು ಎರಡನೇ ತಂಡವನ್ನು ಸಿದ್ಧಗೊಳಿಸುತ್ತಿದೆಯಂತೆ. ಆ ತಂಡದಲ್ಲಿ ಪ್ರಮುಖ ಆಟಗಾರರು ಇರುವುದಿಲ್ಲ. ಬದಲಿಗೆ ಯುವ ತಂಡವು ಕಣಕ್ಕಿಳಿಯುವ ಸಾಧ್ಯತೆ ಇದೆ. ಈ ಪ್ರಯೋಗ ಯಶಸ್ವಿಯಾದರೆ, ಕೊರೊನಾ ಕಾಲದ ಬಯೋಬಬಲ್ ಒತ್ತಡಗಳನ್ನು ನಿಭಾಯಿಸಲು ಸಹಕಾರಿಯಾಗಬಹುದು.

ಇನ್ನೊಂದು ಕಡೆ ಹೊಸ ಹುಡುಗರ ಮಿಂಚಿನಾಟದ ಭರಾಟೆಯಲ್ಲಿ ಕೆಲವು ಅರ್ಹರು ಅವಕಾಶವಂಚಿತರಾಗಬಹುದು. ಇದಕ್ಕೆ ಕರ್ನಾಟಕದ ಮನೀಷ್ ಪಾಂಡೆ ಉತ್ತಮ ಉದಾಹರಣೆ. ಭಾರತ ತಂಡವನ್ನು 2015ರಿಂದಲೇ ಏಕದಿನ ಮತ್ತು ಟಿ20 ಕ್ರಿಕೆಟ್‌ನಲ್ಲಿ ಅವರು ಪ್ರತಿನಿಧಿಸುತ್ತಿದ್ದಾರೆ. ಕೆಲವು ಪಂದ್ಯಗಳಲ್ಲಿ ಜಯದ ರೂವಾರಿಯೂ ಆಗಿದ್ದಾರೆ. ರಣಜಿ ಟ್ರೋಫಿ ಟೂರ್ನಿಯಲ್ಲೂ ಅವರ ಸಾಧನೆ ಉತ್ತಮವಾಗಿದೆ. ಆದರೆ ಇದುವರೆಗೆ ಅವರಿಗೆ ಟೆಸ್ಟ್ ತಂಡದಲ್ಲಿ ಅವಕಾಶ ಸಿಕ್ಕಿಲ್ಲ. ಗುಜರಾತ್‌ನ ಪ್ರಿಯಾಂಕ್ ಪಾಂಚಾಲ್ ಅವರ ಪ್ರತಿಭೆಗೂ ತಕ್ಕ ಮನ್ನಣೆ ಸಿಕ್ಕಿಲ್ಲ. ಹೋದ ಐಪಿಎಲ್‌ನಲ್ಲಿ ಮಿಂಚಿದ್ದ ರಾಹುಲ್ ತೆವಾಟಿಯಾ, ರಾಹುಲ್ ಚಾಹರ್ ಈಗ ರಾಷ್ಟ್ರೀಯ ತಂಡದಲ್ಲಿದ್ದಾರೆ. ಈ ವಿಷಯದಲ್ಲಿ ಎಚ್ಚರ ವಹಿಸುವ ಅವಶ್ಯಕತೆ ಮಂಡಳಿಗೆ ಖಂಡಿತವಾಗಿಯೂ ಇದೆ. ಏಕೆಂದರೆ, ಪ್ರತಿಭೆಗಳಿಗೆ ಅವಕಾಶ ನೀಡುವುದು ಉತ್ತಮ ವಿಚಾರವೇನೋ ಹೌದು. ಆದರೆ, ಹೊಸ ನೀರಿನಲ್ಲಿ ಅನುಭವ ಮತ್ತು ಸಾಧನೆಯು ಕೊಚ್ಚಿಹೋಗಲು ಬಿಡುವುದು ಸೂಕ್ತವಲ್ಲ.

ಮತ್ತೊಂದೆಡೆ, ಈಗ ಬರುತ್ತಿರುವ ಆಟಗಾರರು ಈ ಹಿಂದೆ ಸುನಿಲ್ ಗಾವಸ್ಕರ್, ಸಚಿನ್ ತೆಂಡೂಲ್ಕರ್, ವೀರೇಂದ್ರ ಸೆಹ್ವಾಗ್, ಮಹೇಂದ್ರಸಿಂಗ್ ಧೋನಿ, ರಾಹುಲ್‌ದ್ರಾವಿಡ್, ಜಹೀರ್‌ಖಾನ್ ಅವರಂತೆ ಬಹಳಷ್ಟು ಪಂದ್ಯಗಳಲ್ಲಿ ಆಡುವ ಅವಕಾಶ ಪಡೆಯುವುದು ಸಾಧ್ಯವಿಲ್ಲವೆನಿಸುತ್ತದೆ. ಒಂದೊಮ್ಮೆ ಸಚಿನ್ ರನ್‌ಗಳ ದಾಖಲೆಯನ್ನು ವಿರಾಟ್ ಕೊಹ್ಲಿ ಮೀರಿ ನಿಲ್ಲಬಹುದು. ಆದರೆ ಕೊಹ್ಲಿಯ ಆ ದಾಖಲೆಯನ್ನು ಮೀರಬೇಕಾದರೆ ಯುವ ಆಟಗಾರರು ತಮ್ಮ ಮನೋದೈಹಿಕ ಸಾಮರ್ಥ್ಯದ ಮಟ್ಟವನ್ನು ಬಹಳಷ್ಟು ಹೆಚ್ಚಿಸಿಕೊಳ್ಳಬೇಕು. ಹೈಜಂಪ್ ಕ್ರೀಡೆಯಲ್ಲಿ ಪ್ರತಿಯೊಂದು ಜಿಗಿತದ ನಂತರ ಅರ್ಹತಾ ಬಾರ್ ಅನ್ನು ಎತ್ತರಿಸುವ ಮಾದರಿಯಲ್ಲಿ ಸಾಧನೆಯ ಮಟ್ಟವನ್ನು ನಿರಂತರವಾಗಿ ಹೆಚ್ಚಿಸಿಕೊಳ್ಳುತ್ತ ಸಾಗಬೇಕು. ಇಲ್ಲದಿದ್ದರೆ ಈ ಪೈಪೋಟಿಯಲ್ಲಿ ದೀರ್ಘ ಕಾಲ ಸ್ಥಾನ ಪಡೆಯುವುದು ಕಷ್ಟ.

ಪ್ರತಿವರ್ಷ ಇಂಡಿಯನ್ ಪ್ರೀಮಿಯರ್ ಲೀಗ್ ಮತ್ತು ದೇಶಿ ಟೂರ್ನಿಗಳಿಂದ ಹಲವಾರು ಯುವ ಆಟಗಾರರು ಬೆಳಕಿಗೆ ಬರುತ್ತಿದ್ದಾರೆ. ಅದರಿಂದಾಗಿ ಈ ಸ್ಪರ್ಧೆ ಏರ್ಪಟ್ಟಿದೆ. ಜೂನಿಯರ್ ಹಂತದ ರಾಷ್ಟ್ರೀಯ ತಂಡಗಳಿಗೆ ರಾಹುಲ್ ದ್ರಾವಿಡ್ ಮುಖ್ಯ ಕೋಚ್ ಆಗಿದ್ದಾಗ ಹಾಕಿದ್ದ ಅಡಿಪಾಯವೂ ಇದಕ್ಕೆ ಕಾರಣ. ಮಹೇಂದ್ರಸಿಂಗ್ ಧೋನಿ ನಾಯಕರಾಗಿದ್ದಾಗ ಯುವ ಆಟಗಾರರಿಗೆ ಸ್ಥಾನ ನೀಡಲು ಹಿಂಜರಿಯಲಿಲ್ಲ. ಟೀಕೆಗಳಿಗೆ ಜಗ್ಗಲಿಲ್ಲ. ವಿರಾಟ್ ಕೂಡ ಅದೇ ಜಾಡಿನಲ್ಲಿ ಮುಂದುವರಿದಿದ್ದಾರೆ.

'ಕ್ರಿಕೆಟ್ ಆಡಳಿತದ ಆಯಕಟ್ಟಿನ ಸ್ಥಾನಗಳಲ್ಲಿ ಸೂಕ್ತ ವ್ಯಕ್ತಿಗಳನ್ನು ಕೂರಿಸಿದಾಗ ಇಂತಹ ಬದಲಾವಣೆ ಸಾಧ್ಯ' ಎಂದು ಪಾಕಿಸ್ತಾನದ ಮಾಜಿ ಕ್ರಿಕೆಟಿಗ ಶೋಯಬ್ ಅಖ್ತರ್ ಈಚೆಗೆ ಶ್ಲಾಘಿಸಿದ್ದರು. ತಮ್ಮ ದೇಶದ ಕ್ರಿಕೆಟ್ ಮಂಡಳಿಗೆ ಪರೋಕ್ಷವಾಗಿ ಬುದ್ಧಿವಾದ ಹೇಳಿದ್ದರು. ಪಾಕ್ ಅಷ್ಟೇ ಏಕೆ, ದಕ್ಷಿಣ ಆಫ್ರಿಕಾ, ವೆಸ್ಟ್ ಇಂಡೀಸ್ ಮತ್ತು ಶ್ರೀಲಂಕಾ ತಂಡಗಳಲ್ಲಿ ಹೊಸ ಪ್ರತಿಭೆಗಳ ಹರಿವು ಕಡಿಮೆಯಾಗಿದೆ. ನಿವೃತ್ತಿ ಘೋಷಿಸಿದ ನಂತರವೂ ಎಬಿ ಡಿವಿಲಿಯರ್ಸ್ ಅವರನ್ನು ತಂಡಕ್ಕೆ ಮರಳಿ ಕರೆಸುವ ಪ್ರಯತ್ನ ದಕ್ಷಿಣ ಆಫ್ರಿಕಾದಲ್ಲಿ ನಡೆದಿತ್ತು. 1996ರ ವಿಶ್ವಕಪ್ ವಿಜೇತ ಲಂಕಾ ತಂಡವನ್ನು ಮರಳಿಕಟ್ಟಲು ಹರಸಾಹಸವೇ ನಡೆಯುತ್ತಿದೆ. ಆದರೆ ನಮ್ಮ ದೇಶದಲ್ಲಿ ಹರಿದುಬರುತ್ತಿರುವ ಪ್ರತಿಭಾನ್ವಿತ ಆಟಗಾರರ ಪ್ರವಾಹವನ್ನು ಸೂಕ್ತವಾಗಿ ನಿರ್ವಹಿಸಲು ಬಿಸಿಸಿಐ ಏನು ಹೆಜ್ಜೆಗಳನ್ನು ಇಡಲಿದೆ ಎಂಬ ಕುತೂಹಲ ಈಗ ಮೂಡಿದೆ.

ಚುರುಮುರಿ

ವ್ಯಾಕ್ಸಿನ್ ಆಯ್ತಾ?

● ಸುಧೀಂದ್ರ

ಲೆಕ್ಕ ಟ್ಯಾಲಿ ಆಗ್ತಿಲ್ಲ ಅಂತ ಆಫೀಸಲ್ಲಿ ತಲೆ ಕೆಡಿಸಿಕೊಂಡು ಕೂತಿದ್ದಾಗ 'ವ್ಯಾಕ್ಸಿನೇಶನ್ ಆಯ್ತಾ?' ಅಂತ ಕಲೀಗ್ ರಮೇಶು ಹಲ್ಕಿರಿದರು. ಕಳೆದ ಹತ್ತು ವರ್ಷಗಳಿಂದ, ಸಿಕ್ಕಾಗ್ಲೆಲ್ಲಾ 'ಯಾವಾಗ ನಿಮ್ಮ ರಿಟೈರ್‌ಮೆಂಟು?' ಅಂತ ಕೇಳ್ತಿದ್ದೋರೀಗ ಹೊಸ ವರಸೆ ಹಚ್ಕೊಂಡಿದಾರೆ.

'ನಂಗಿನ್ನೂ ಅರವತ್ತಾಗಿಲ್ಲಲ್ಲ' ಅಂದೆ. ಆದರೆ ಅನುಮಾನ ಪಿಶಾಚಿಗಳಿಂದ ಬಿಡಿಸ್ಕೊಳ್ಳೋದು ಅಷ್ಟು ಸುಲಭವಲ್ಲ. 'ಆಫೀಸಿಗೇಂತ ವಯಸ್ಸು ಕಮ್ಮಿ ಕೊಟ್ಟಿರ್ತೀರಿ, ಆದ್ರೆ ಅದೇ ಲೆಕ್ಕವಲ್ಲ. ನಿಮ್ಮಂಥ ವಯಸ್ಸಾದೋರು ವ್ಯಾಕ್ಸಿನ್ ಚುಚ್ಚಿಸ್ಕೊಳ್ದೇ ಹೆಚ್ಚೂ-ಕಮ್ಮಿಯಾದ್ರೆ ಏನು ಗತಿ?' ಎಂದರು. 'ಮಕ್ಳಿನ್ನೂ ಚಿಕ್ಕೋರು ನೋಡಿ, ಅದಕ್ಕೇ ಹೇಳ್ದೆ' ಅಂತ ಜತೆಗೆ ಒಗ್ಗರಣೆ ಹಾಕಿದ್ರು.

ಮನೆಗೆ ಬಂದ ಕೂಡ್ಲೇ ಕಾಫಿ ಕೊಟ್ಟ ಮಡದಿ, 'ನಾವು ಯಾವಾಗ್ರೀ ವ್ಯಾಕ್ಸಿನ್ ಹಾಕಿಸ್ಕೊಳ್ಳೋದು?' ಅಂದ್ಲು ಮೆಲ್ಲನೆ. ಯಾಕೋ ಇವತ್ತು ವ್ಯಾಕ್ಸಿನ್ ಪಿಶಾಚಿ ನನ್ನನ್ನು ಬಿಡೋಲ್ಲ ಅನ್ನಿಸಿತು. 'ನೀನಿನ್ನೂ ಚಿಕ್ಕಾಪುಟ್ಟ ಹುಡುಗಿ, ವಯಸ್ಸಾದೋರು ಹಾಕಿಸ್ಕೊಳ್ಳೋ ವ್ಯಾಕ್ಸಿನ್ಗೇನು ಅರ್ಜೆಂಟು?' ಎಂದು ತಾಜಾ ಮಾಡಲೆತ್ನಿಸಿದೆ. ಕೇಳ್ಲಿಲ್ಲ.

'ನಮ್ಮ ಯೋಗಾ ಕ್ಲಾಸಿಗೆ ಬರೋರಲ್ಲಿ ಅರ್ಧಕ್ಕರ್ಧ ಜನ ಈಗಾಗ್ಲೇ ಹಾಕಿಸ್ಕೊಂಡಿದಾರೆ ಗೊತ್ತಾ?' ಅಂದ್ಲು. ಮತ್ತೆ ರೇಗಿಸೋಣ ಅಂದ್ಕೊಂಡು 'ವಯಸ್ಸಾದವರ ಬ್ಯಾಚಿಗೆ ಸೇರ್ಕೋಬೇಡಾಂತ ಮೊದ್ಲೇ ಹೇಳಿದ್ದೆ, ನನ್ಮಾತು ಕೇಳ್ಲಿಲ್ಲ' ಎಂದೆ.

'ಯಾರೋ ಒಂದಿಬ್ರು ಬಿಟ್ರೆ ಉಳಿದೋರು ಚಿಕ್ಕೋರೇ. ನನ್ನ ಕ್ಲಾಸ್‌ಮೇಟ್ ಕೂಡಾ ಹಾಕಿಸ್ಕೊಂಡ್ಲು. ಕೊರೊನಾ ಕಮ್ಮಿ ಆದ್ರೆ ಅಮೆರಿಕಕ್ಕೆ ಟೂರ್ ಹೋಗ್ತಾರಂತೆ' ಅಂದ್ಲು.

ವ್ಯಾಕ್ಸಿನ್ ವಿಚಾರ ಏಕೆ ಬಂತೂಂತ ಈಗ ಗೊತ್ತಾಯ್ತು. 'ನಾವೂ ಫಾರಿನ್ ಟೂರಿಗೆ ಪ್ಲಾನ್ ಮಾಡ್ದಾಗ ನೋಡ್ಕೊಳ್ಳೋಣ. ಆಗ ವಕ್ಕರಿಸೋ ವೈರಸ್‌ಗೆ ತಕ್ಕಂಥ ವ್ಯಾಕ್ಸಿನ್ ಚುಚ್ಚಿಸ್ಕೊಳ್ಳೋಣ' ಎಂದು ಸಮಾಧಾನ ಹೇಳೋಷ್ಟರಲ್ಲಿ ಅವಳಾಗ್ಲೇ ಗರಂ ಆಗಿದ್ಲು.

'ಫೇಸ್‌ಬುಕ್‌ನಲ್ಲಿ ನಂದೂ ವ್ಯಾಕ್ಸಿನೇಶನ್ ಆಯ್ತು ಅಂತ ಅಪ್‌ಡೇಟ್ ಆದ್ರೂ ಮಾಡ್ಕೊಳ್ಳೋಣ ಅಂದ್ಕೊಂಡು ಕೇಳ್ದೆ. ಯಾವ್ದರಲ್ಲಾದ್ರೂ ನಿಮಗೆ ಇಂಟರೆಸ್ಟ್ ಇದ್ರೆ ತಾನೇ?' ಎಂದು ಮುಖ ತಿರುಗಿಸಿಕೊಂಡ್ಳು.

ಸಂಗತ

ಸಂತೋಷದ ಜಾಡು ಹಿಡಿದು...

ನಾವಿಂದು ಹೆಚ್ಚು ದುಡ್ಡು ಗಳಿಸಿ, ಹೆಚ್ಚೆಚ್ಚು ಸಂತೋಷವನ್ನು ಪಡೆದುಕೊಳ್ಳುವ ಭ್ರಮೆಯಲ್ಲಿದ್ದೇವೆ

● ಡಾ. ಜ್ಯೋತಿ

ತುಂಡು ಬಟ್ಟೆಯುಟ್ಟು, ಸಾತ್ವಿಕ ಆಹಾರ ಸೇವಿಸಿ ಅತ್ಯಂತ ಸರಳವಾಗಿ ಬದುಕಿದ್ದ ಮಹಾತ್ಮ ಗಾಂಧಿಯ ಮುಖದಲ್ಲಿ ಸದಾ ಕಾಣಿಸುತ್ತಿದ್ದ ಸಂತೃಪ್ತಿ, ವರ್ತಮಾನಕಾಲದ ಆಗರ್ಭ ಶ್ರೀಮಂತರ ಮುಖದಲ್ಲೂ ಕಾಣಿಸದಿರುವುದನ್ನು ಗಮನಿಸಿದರೆ, ಮನುಷ್ಯಜೀವನದ ಸಂತೋಷದ ಮೂಲವೆಲ್ಲಿದೆ ಎನ್ನುವ ಪ್ರಶ್ನೆ ಕಾಡುವುದು ಸಹಜ. ಹಾಗಿದ್ದಲ್ಲಿ, ಮನುಷ್ಯಜೀವನದ ಸಂತೋಷ ವಸ್ತು ಸಂಗ್ರಹದಲ್ಲಿದೆಯೇ ಮನುಷ್ಯ ಸಂಬಂಧಗಳಲ್ಲಿದೆಯೇ ಸಾಧನೆಯಲ್ಲಿದೆಯೇ ಸಮಾಜ ಸೇವೆಯಲ್ಲಿದೆಯೇ ಹೆಸರು ಮಾಡುವುದರಲ್ಲಿದೆಯೇ?... ಮನುಷ್ಯ, ಈ ಕಾಡುವ ಪ್ರಶ್ನೆಗಳಿಗೆ ಕಾಲಕಾಲಕ್ಕೆ ಉತ್ತರ ಕಂಡುಹಿಡಿಯುವ ಪ್ರಯತ್ನಗಳ ಪುರಾವೆಗಳು ಧರ್ಮ ಮತ್ತು ತತ್ವ ಚಿಂತನೆಗಳಲ್ಲಿ ಹೇರಳವಾಗಿ ಕಾಣಸಿಗುತ್ತವೆ.

ಪ್ರತಿವರ್ಷ ಮಾರ್ಚ್ 20 ಅನ್ನು 'ಅಂತರರಾಷ್ಟ್ರೀಯ ಸಂತೋಷದ ದಿನ'ವೆಂದು ಆಚರಿಸುತ್ತಾರೆ. ಸಂತೋಷವಾಗಿರುವುದು ಮನುಷ್ಯನ ಮೂಲಭೂತ ಹಕ್ಕೆಂದು ವಿಶ್ವಸಂಸ್ಥೆ ಪರಿಗಣಿಸಿ, ಅದರ ಅರಿವನ್ನು ಪಸರಿಸುವ ಸಲುವಾಗಿ 2013ರಿಂದ, ಈ ದಿನವನ್ನು ಜಗತ್ತಿನಾದ್ಯಂತ ಆಚರಿಸಲು ಆರಂಭಿಸಿತು. ಸಂತೋಷವನ್ನು ಹರಡುವ ಮೂಲಕ, ಜಗತ್ತಿನಲ್ಲಿರುವ ಅಸಮಾನತೆ ಮತ್ತು ಬಡತನ ನಿರ್ಮೂಲ ಮಾಡಿ ಮುಂದಿನ ಪೀಳಿಗೆಗಳಿಗೆ ಭೂಮಿಯನ್ನು ಸಂರಕ್ಷಿಸುವ ಮಹತ್ತರ ಉದ್ದೇಶವನ್ನು ಈ ದಿನಾಚರಣೆ ಹೊಂದಿದೆ. ಈ ವರ್ಷದ ಧ್ಯೇಯ ವಾಕ್ಯ- 'ಶಾಂತಿ, ಸಂಯಮ ಮತ್ತು ಕರುಣೆ ಕಾಯ್ದುಕೊಳ್ಳೋಣ'. ಕೊರೊನಾ ವೈರಾಣು ತಂದಿರುವ ಜಾಗತಿಕ ಮಟ್ಟದ ಸಂಕಷ್ಟಗಳ ನಡುವೆ ಸಂತೋಷದ ಹುಡುಕಾಟ ಅತ್ಯಂತ ಜರೂರಿನ ಆದ್ಯತೆಯಾಗಿದೆ. ಒಟ್ಟಿನಲ್ಲಿ, ಸಂಶೋಧನೆಗಳು ಹೇಳುವಂತೆ, ಸಂತೋಷವಾಗಿ ಇರುವವರು ಹೆಚ್ಚು ಕಾಲ ಬದುಕುತ್ತಾರೆ ಮತ್ತು ಕಡಿಮೆ ಆರೋಗ್ಯ ಸಮಸ್ಯೆಗಳನ್ನು ಎದುರಿಸುತ್ತಾರೆ.

ಇಲ್ಲಿನ ಮುಖ್ಯ ತಾತ್ವಿಕ ಪ್ರಶ್ನೆಯೆಂದರೆ, ಜೀವನದ ಗುರಿಯು ಸಂತೋಷದ ಹುಡುಕಾಟವೇ ಅಥವಾ ಮಹತ್ತರ ಸಾಧನೆಯೇ? ಈ ಪ್ರಶ್ನೆಗೆ ಉತ್ತರ ಕಂಡುಹಿಡಿಯುವ ಸಲುವಾಗಿ ಅಮೆರಿಕದಲ್ಲಿ 2016ರಲ್ಲಿ ನಡೆಸಿದ ಸಮೀಕ್ಷೆಯಲ್ಲಿ ಭಾಗವಹಿಸಿದವರಲ್ಲಿ ಶೇ 81ರಷ್ಟು ಮಂದಿಯ ಆಯ್ಕೆ ಸಂತೋಷವೇ ಹೊರತು, ಸಾಧನೆಯಾಗಿರಲಿಲ್ಲ. ಶೇ 13ರಷ್ಟು ಜನ ಮಾತ್ರ ಜೀವನ ಸಾಧನೆಯನ್ನು ಆರಿಸಿಕೊಂಡಿದ್ದರು. ಸ್ವಾರಸ್ಯವೆಂದರೆ, ಅವರ ಈ ಸಂತೋಷದ ಹುಡುಕಾಟದ ಸಾಮಾನ್ಯ ನೆಲೆಗಳೆಂದರೆ; ಮನುಷ್ಯ ಸಂಬಂಧಗಳು, ವೃತ್ತಿ, ಮನೆ ನಿರ್ವಹಣೆ, ದೈಹಿಕ ಆರೋಗ್ಯ, ಸ್ವಾದಿಷ್ಟ ಆಹಾರ... ಆದರೆ, ಇವುಗಳನ್ನು ಅರಸುತ್ತ ಎಲ್ಲೂ ಪೂರ್ಣ ಸಂತೋಷ ಸಿಗದೆ, ಕೆಲವೊಮ್ಮೆ ಅದೊಂದು ಮಾನಸಿಕ ಗೀಳಾಗಿ ಖಿನ್ನತೆಗೆ ಒಳಗಾಗುವ ಸಾಧ್ಯತೆಯು ವರ್ತಮಾನದ ವಸ್ತುನಿಷ್ಠ ಪ್ರಪಂಚದಲ್ಲಿ ಹೆಚ್ಚಾಗಿದೆ.

ಇಲ್ಲಿನ ಮುಖ್ಯ ಸಮಸ್ಯೆಯೆಂದರೆ, ಒಂದು ಕಾಲದಲ್ಲಿ ಜೀವನದ ಅತ್ಯುನ್ನತ ಮೌಲ್ಯವಾಗಿದ್ದ ಸಂತೋಷದ ಪರಿಕಲ್ಪನೆ, ಆಧುನಿಕ ಜೀವನಶೈಲಿಯಲ್ಲಿ ಸುಲಭವಾಗಿ ಖರೀದಿಸಬಹುದಾದ ಸರಕಾಗಿ ಪರಿವರ್ತನೆಯಾಗಿರುವುದು. ಇದರ ಫಲವಾಗಿ, ನಾವಿಂದು ಹೆಚ್ಚು ದುಡ್ಡು ಗಳಿಸಿ (ಹೇಗಾದರೂ ಸರಿ), ಆ ಮೂಲಕ ಹೆಚ್ಚೆಚ್ಚು ಸಂತೋಷವನ್ನು ಪಡೆದುಕೊಳ್ಳುವ ಭ್ರಮೆಯಲ್ಲಿದ್ದೇವೆ. ಈ ಭ್ರಮೆ ಏನೆಲ್ಲಾ ಅವ್ಯವಹಾರಗಳನ್ನು ಮಾಡಲು ಮನುಷ್ಯನನ್ನು ಪ್ರೇರೇಪಿಸುತ್ತಿದೆ. ಆದರೆ, ಪೂರ್ಣ ಸಂತೋಷ ಎನ್ನುವುದು ಮಾತ್ರ ಮರೀಚಿಕೆಯಾಗಿಯೇ ಉಳಿಯುತ್ತದೆ.

ಗಮನಾರ್ಹ ಅಂಶವೆಂದರೆ, ಮೂಲತಃ ಮನುಷ್ಯನ ಮನಃಸ್ಥಿತಿಯು ಕ್ಷಣಿಕ ಮತ್ತು ಅನಿಶ್ಚಿತ. ಈ ಸ್ಥಿತ್ಯಂತರದ ಮನಸ್ಸಿನಲ್ಲಿ ಸಂತೋಷದ ಪರಿಕಲ್ಪನೆ ಕೂಡ ಚಂಚಲವಾಗಿರುವ ಸಾಧ್ಯತೆಯೇ ಹೆಚ್ಚು. ಇದನ್ನು ಮೀರಿ ಮನಸ್ಸನ್ನು ಸ್ಥಿರಗೊಳಿಸಿ ಸಂತೋಷದಿಂದಿರುವುದು ಹೇಗೆ? ಯಾಕೆಂದರೆ, ಮನುಷ್ಯನನ್ನು ಜೀವನದುದ್ದಕ್ಕೂ ನೋವು, ನಿರಾಶೆ, ಬೇಸರ, ಒಂಟಿತನ ಬಾಧಿಸುತ್ತಲೇ ಇರುತ್ತವೆ. ಅದಕ್ಕಾಗಿಯೇ, ಪ್ರಾಚೀನ ತತ್ವಶಾಸ್ತ್ರಜ್ಞರು ನೋವನ್ನು ಕಡಿಮೆ ಮಾಡುವ ಮಾರ್ಗಗಳನ್ನು ಸೂಚಿಸಿ, ಅದರ ಮೂಲಕ ಜೀವನದ ಸಂತೋಷವನ್ನು ಕಾಣುವ ಸಲಹೆ ನೀಡಿದ್ದಾರೆ.

ಆದರೆ, ತತ್ವಶಾಸ್ತ್ರಜ್ಞ ಫ್ರೆಡ್ರಿಕ್ ನೀಷೆ ಹೇಳುವಂತೆ, ಮನುಷ್ಯ ಮೂಲತಃ ನೋವನ್ನು ನಿರಾಕರಿಸುವುದಿಲ್ಲ. ಬದಲಾಗಿ ಅದರಲ್ಲಿ ಅರ್ಥ ಹುಡುಕುತ್ತಾನೆ. ಒಂದುವೇಳೆ ಅರ್ಥ ಸಿಕ್ಕಿದರೆ ಎಂತಹ ಸಂಕಟವನ್ನಾದರೂ ಸಹಿಸುತ್ತಾನೆ. ಈ ರೀತಿ ಜೀವನವನ್ನು ಗ್ರಹಿಸಿದರೆ, ಅರ್ಥಪೂರ್ಣ ನೋವು, ಅರ್ಥಹೀನ ಸಂತೋಷಕ್ಕಿಂತ ಹೆಚ್ಚು ಮೌಲ್ಯಯುತವಾದುದು. ಆದರೆ, ವಸ್ತುನಿಷ್ಠ ಗ್ರಹಿಕೆಯ ಆಧುನಿಕ ಕಾಲಘಟ್ಟದ ಜನಪ್ರಿಯ ಪರಿಕಲ್ಪನೆಯಂತೆ, ಜೀವನದ ಅಂತಿಮ ಉದ್ದೇಶ ಸಂತೋಷಪ್ರಾಪ್ತಿ. ಅದು ಕೂಡ ಬಾಹ್ಯವಸ್ತುಗಳಿಂದಲೇ ವಿನಾ ಆಂತರಿಕ ಗಟ್ಟಿತನದಿಂದಲ್ಲ. ಆದರೆ, ಸಂತೋಷ ಹೊರಗಿನಿಂದ ಪಡೆಯುವ ವಸ್ತುವಲ್ಲ, ಬದಲಾಗಿ ನಾವು ಪ್ರತಿದಿನ ಮಾಡುವ ಕೆಲಸದಲ್ಲಿ ಕಂಡುಕೊಳ್ಳಬೇಕಾಗಿದೆ.

ಈ ಗೊಂದಲಗಳ ನಡುವೆ ನಮ್ಮ ಸಹಾಯಕ್ಕೆ ಬರುವುದು ಅರಿಸ್ಟಾಟಲ್‌ನ ಸಂತೋಷದ ಅನ್ವೇಷಣೆ. ಅವನ ಪ್ರಕಾರ, ಬಾಹ್ಯವಾಗಿ ದೊರಕುವ ಸಂತೋಷ, ಅದೃಷ್ಟದ ಒತ್ತೆಯಾಳು. ನಮ್ಮ ನಿಯಂತ್ರಣ ಮೀರಿದ ಘಟನೆಗಳಾದ, ದೊರಕದ ಪ್ರೀತಿ, ಬಡತನ, ಸಾಂಕ್ರಾಮಿಕ ರೋಗ, ಯುದ್ಧ, ಪ್ರಾಕೃತಿಕ ವಿಕೋಪ... ಹೀಗೆ ನಮ್ಮ ಸಂತೋಷವನ್ನು ಸದಾ ಕಸಿದುಕೊಳ್ಳಬಹುದು. ಅಂದರೆ, ಸಂತೋಷವೆನ್ನುವುದು ಶಾಶ್ವತವಾಗಿ ಗೆಲ್ಲಬಹುದಾದ ಸ್ಥಿತಿಯಲ್ಲ. ಬದಲಾಗಿ ಅಪೂರ್ಣವಾದ, ಆದರೆ ಆಂತರಿಕ ಸದೃಢತೆಯಿಂದ ನಿರಂತರವಾಗಿ ಅಭ್ಯಾಸ ಮಾಡಿ ರೂಢಿಸಿಕೊಳ್ಳಬಹುದಾದ ಜೀವನಶೈಲಿ. ಈ ಅಂಶವನ್ನು ಗುರುತಿಸುವುದರಿಂದ ಶಾಶ್ವತ ಸಂತೋಷದ ಭ್ರಾಂತಿಯಿಂದ ಸ್ವಲ್ಪ ಮಟ್ಟಿಗೆ ಹೊರಬರಬಹುದು.

ವಾಚಕರ ವಾಣಿ

ಸ್ಪರ್ಧಾತ್ಮಕ ಪರೀಕ್ಷೆ: ಮಹಿಳೆಯರಲ್ಲಿ ಜಾಗೃತಿ ಅಗತ್ಯ

ನ್ಯಾಯಾಂಗದಲ್ಲಿ ಮಹಿಳಾ ಪ್ರಾತಿನಿಧ್ಯ ಕುರಿತ ಲೇಖನ (ಪ್ರ.ವಾ., ಮಾರ್ಚ್ 16) ಸಮಂಜಸವಾಗಿದೆ. ಉನ್ನತ ಶಿಕ್ಷಣ ಪಡೆಯುವ ಮಹಿಳೆಯರ ಸಂಖ್ಯೆ ಇಂದಿನ ದಿನಗಳಲ್ಲಿ ಹೆಚ್ಚಾಗಿದ್ದರೂ ಉನ್ನತ ಹುದ್ದೆಗಳನ್ನು ಅಲಂಕರಿಸುವುದರಲ್ಲಿ ಅವರು ಹಿಂದೆ ಬಿದ್ದಿರುವುದಕ್ಕೆ ಕಾರಣ ಗಂಭೀರ ಚಿಂತನೆಯ ಕೊರತೆ, ವ್ಯವಸ್ಥೆ ಹಾಗೂ ಅದರಲ್ಲಿರುವ ಮೌಢ್ಯಗಳು. ಆನ್‌ಲೈನ್ ಆಧಾರಿತ ಮಾರುಕಟ್ಟೆ ಹಾಗೂ ಸಾಮಾಜಿಕ ಮಾಧ್ಯಮಗಳ ಪ್ರಭಾವದಿಂದಾಗಿ ಹೆಚ್ಚಿನ ಮಹಿಳೆಯರು ಸೌಂದರ್ಯ ಹಾಗೂ ತಮ್ಮ ವಸ್ತ್ರಗಳ ಬಗ್ಗೆ ವಿಪರೀತ ಅನಿಸುವಷ್ಟು ಆಸಕ್ತಿ ಬೆಳೆಸಿಕೊಂಡು, ತಮ್ಮ ಬಿಡುವಿನ ಸಮಯವನ್ನು ಹೆಚ್ಚಾಗಿ ಮೊಬೈಲ್ ಫೋನ್‌ಗಳಲ್ಲಿ ಕಳೆಯುತ್ತಿದ್ದಾರೆ. ಆನ್‌ಲೈನ್ ಶಾಪಿಂಗ್, ಅಡುಗೆ ಹಾಗೂ ಬ್ಯೂಟಿ ಟಿಪ್ಸ್ ನೋಡುವುದಕ್ಕೆ ಸಮಯ ವ್ಯಯಿಸುತ್ತಿದ್ದಾರೆ. ಇಂತಹವರಲ್ಲಿ ಗಂಭೀರ ಚಿಂತನೆ, ಅಧ್ಯಯನಶೀಲತೆ ಹಾಗೂ ಸೂಕ್ಷ್ಮ ಸಂವೇದನೆಗಳನ್ನು ಬೆಳೆಸಿ, ಸ್ಪರ್ಧಾತ್ಮಕ ಪರೀಕ್ಷೆಗಳ ಬಗ್ಗೆ ಜಾಗೃತಿ ಮೂಡಿಸುವುದು ಇಂದಿನ ಅಗತ್ಯವಾಗಿದೆ.

ಸುವರ್ಣ ಸಿ.ಡಿ., ತರೀಕೆರೆ

ಹೀಗೆ ಮಾಡಿ... ಮೀಸಲಾತಿ ಕೂಗು ನಿಲ್ಲಬಹುದು

ಪ್ರಬಲ ಜಾತಿಯ ಮುಖಂಡರು ತಾವು ಪ್ರತಿನಿಧಿಸುವ ಜಾತಿಯ ಬಡವರ ಜೊತೆ ಸಂಪತ್ತಿನ ಹಂಚಿಕೆಗಾಗಿ ಆಗ್ರಹಿಸಬೇಕು ಎಂದು ಎಚ್.ಕೆ. ಶರತ್ ಅವರು ಹೇಳಿರುವುದು (ಸಂಗತ, ಮಾರ್ಚ್ 17) ಉತ್ತಮ ಚಿಂತನೆ. ಆದರೆ ವರ್ತಮಾನದ ಸಂಗತಿಗಳು ಇದಕ್ಕೆ ವಿರುದ್ಧವಾಗಿವೆ. ಬಡವರಿಗೆ ಮೀಸಲಾದ ಅನೇಕ ಸವಲತ್ತುಗಳು ಸಿರಿವಂತರ ಪಾಲಾಗುತ್ತಿರುವುದು ನಮ್ಮೆದುರಿಗೆ ನಿಚ್ಚಳವಾಗಿ ಗೋಚರವಾಗುತ್ತಿದೆ.

ಐಷಾರಾಮಿ ಕಾರುಗಳಲ್ಲಿ ತಿರುಗಾಡುವವರು ಬಿಪಿಎಲ್ ಕಾರ್ಡ್ ಹೊಂದಿದ್ದಾರೆ. ಬಡವರಿಗೆಂದೇ ಮೀಸಲಾದ ಪಡಿತರ ಪದಾರ್ಥಗಳನ್ನು ಯಾವುದೇ ಸಂಕೋಚವಿಲ್ಲದೆ ಸಿರಿವಂತರೂ ಬಳಕೆ ಮಾಡುತ್ತಿದ್ದಾರೆ. ಆರ್ಥಿಕವಾಗಿ ಹಿಂದುಳಿದವರಿಗೆಂದು ಜಾರಿಯಾದ ಅನೇಕ ಸಬ್ಸಿಡಿಗಳು ಮತ್ತು ಸ್ಕೀಮುಗಳನ್ನು ಭೇದಭಾವವಿಲ್ಲದೆ ಸರ್ವರೂ ಅನುಭವಿಸುತ್ತಿದ್ದಾರೆ. ಖೊಟ್ಟಿ ಮೀಸಲಾತಿ ದಾಖಲೆಗಳನ್ನು ನೀಡಿ ಶೈಕ್ಷಣಿಕ ಸವಲತ್ತು ಮತ್ತು ಸರ್ಕಾರಿ ಹುದ್ದೆಗಳನ್ನು, ಉಳ್ಳವರಲ್ಲಿ ಕೆಲವರು ಕಬಳಿಸುತ್ತಿದ್ದಾರೆ. ಇವು ಹೀಗೇ ಮುಂದುವರಿದರೆ ಬಡವರು ಬಡವರಾಗೇ ಇರುತ್ತಾರೆ ಮತ್ತು ಸಿರಿವಂತರು ಮತ್ತಷ್ಟು ಪ್ರಬಲರಾಗುತ್ತಾರೆ.

ಈ ರೀತಿಯ ಅಕ್ರಮಗಳಿಗೆ ಕಡಿವಾಣ ಹಾಕಬೇಕು ಮತ್ತು ಸಿರಿವಂತರ ಮನಸ್ಸುಗಳಲ್ಲಿ ತಾವು ಅರ್ಹರಲ್ಲದ ಸೌಲಭ್ಯಗಳನ್ನು ಬಳಸದೇ ಇರುವಂತಹ ನೈತಿಕತೆಯನ್ನು ತುಂಬಬೇಕು. ಇದರಿಂದ ನಿಜವಾಗಿ ಕೆಳಸ್ತರದ ಜನರ ಅಭಿವೃದ್ಧಿಯಾಗಿ ಪ್ರಬಲ ಜಾತಿಯವರ ಮೀಸಲಾತಿಯ ಕೂಗು ನಿಲ್ಲಬಹುದು.

ಡಾ. ಕೆ.ಎಸ್.ಗಂಗಾಧರ, ಶಿವಮೊಗ್ಗ

ಸ್ಥಾವರಕ್ಕೆ ಅಳಿವಿದೆ ಎಂದು ತಿಳಿದಿದ್ದರೂ...

ನಮ್ಮೂರ ಪ್ರತಿಷ್ಠಿತ ಮಠ ಮುರುಘಾ ಮಠ. 1991ರಲ್ಲಿ ಪಟ್ಟಕ್ಕೆ ಬಂದ ಶಿವಮೂರ್ತಿ ಮುರುಘಾ ಸ್ವಾಮಿಗಳು ಮನುಷ್ಯನು ಮನುಷ್ಯನನ್ನು ಹೊರುವ 'ಪಲ್ಲಕ್ಕಿ' ತ್ಯಜಿಸಿದರು. ನಾಗರಪಂಚಮಿಯಂದು ಹಾಲನ್ನು ಕಲ್ಲು ನಾಗರಕ್ಕೆ ಎರೆಯಬೇಡಿ, ಮಕ್ಕಳಿಗೆ ಕೊಡಿ ಎಂದರು. ಮದುವೆಗಳಲ್ಲಿ ಅಕ್ಷತೆ ಹೆಸರಿನಲ್ಲಿ ಅಕ್ಕಿ ಸೂರೆ ಬೇಡ ಎಂದರು. ನನಗೆ 'ಸ್ವಾಮಿ' ಎಂಬ ಹಿರಿತನದ ಪಟ್ಟ ಬೇಡ ಎಂದು ಶರಣರಾದರು. ದುರ್ಗದ ತುಂಬೆಲ್ಲ ಆದರ್ಶ ವ್ಯಕ್ತಿ ಎಂದು ಕರೆಸಿಕೊಂಡರು. ಇತ್ತೀಚೆಗೆ ನೂರಾರು ಕೋಟಿ ವ್ಯಯದ ಬಸವಣ್ಣನ ಪುತ್ಥಳಿಗೆ ಕೈ ಹಾಕಿದ್ದಾರೆ. ಅದು ಹಿರಿಯ ಮಟ್ಟದ್ದು, ಪ್ರಪಂಚದಲ್ಲೇ ಎರಡನೇ ಸ್ಥಾನ ಎನ್ನುತ್ತಾರೆ. 256 ಅಡಿ ಎತ್ತರ, 120 ಟನ್ ಕಂಚಿನ ಬಳಕೆ ಈಗ ಬೇಕಿತ್ತೇ? ಮುಖ್ಯಮಂತ್ರಿಯವರ ಔದಾರ್ಯದಿಂದ ಈಗಾಗಲೇ ₹ 30 ಕೋಟಿ ಸಂದಾಯವಾಗಿದೆ ಎನ್ನುತ್ತಾರೆ. ಇದೇನು ಸರ್ಕಾರದ ಉಳಿತಾಯದ ಹಣವಲ್ಲ, ಸರ್ಕಾರಿ ಸಾಲದಲ್ಲಿ ಇದರ ಭಾರ ಪ್ರತೀ ಪ್ರಜೆಯ ಮೇಲೆ ಬೀಳಲಿದೆ. ಇದೇ ತರಹ ಇನ್ನೊಂದು ಕೂಡಲ ಸಂಗಮ ನಿರ್ಮಾಣಕ್ಕೆ ₹ 550 ಕೋಟಿ ಅಂದಾಜು ವೆಚ್ಚದ ಯೋಜನೆಗೆ ಶಂಕುಸ್ಥಾಪನೆಯಾಗಿದೆ. ಸ್ಥಾವರಕ್ಕೆ ಅಳಿವಿದೆ ಎಂದು ತಿಳಿದಿದ್ದರೂ ಈ ದುಂದುವೆಚ್ಚ ಏಕೆ?

ಎಂ.ಮೃತ್ಯುಂಜಯಪ್ಪ, ಚಿತ್ರದುರ್ಗ

ನಾಡಗೀತೆ: ಚಡಪಡಿಕೆ ಯಾರದ್ದು?

ನಮ್ಮ ನಾಡಗೀತೆಯನ್ನು ನಾವು ಹಾಡುವುದು ಬಹುತೇಕ ನವೆಂಬರ್‌ನಲ್ಲಿ, ಹೊರತುಪಡಿಸಿದರೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕೆಲವು ಕಾರ್ಯಕ್ರಮಗಳಲ್ಲಿ. ನಾಡಗೀತೆ ಹಾಡುವ ಸಮಯ ನಿಗದಿಗೆ ಸಂಬಂಧಿಸಿದಂತೆ ಸರ್ಕಾರಕ್ಕೆ ಬರೆದಿರುವ ಪತ್ರದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು 'ನಾಡಗೀತೆ ಹಾಡುವಾಗ ಕೆಲವರು ಯಾವಾಗ ಮುಗಿಯುತ್ತದೆ ಎಂದು ಚಡಪಡಿಸುತ್ತಾರೆ' ಎಂದು ತಿಳಿಸಿರುವುದು ದುರಂತವೇ ಸರಿ. ಏನೇ ಆಗಲಿ, ನಾಡಗೀತೆ ಹಾಡುವ ಸಮಯವನ್ನು ಕಡಿಮೆ ಮಾಡುವ ಭರದಲ್ಲಿ ಪಲ್ಲವಿ, ಚರಣ ಮತ್ತು ಪಲ್ಲವಿಯ ಪುನರಾವರ್ತನೆಗಳನ್ನು ಮೊಟಕುಗೊಳಿಸದೆ, ಮೂಲರೂಪದಲ್ಲೇ ಹಾಡಲಿ. ವರ್ಷಕ್ಕೆ ಎರಡು– ಮೂರು ಬಾರಿ ನಾಡಗೀತೆಯನ್ನು ಹಾಡುವ ಜನಸಾಮಾನ್ಯರು ಅದಕ್ಕಾಗಿ ಕೆಲವು ನಿಮಿಷಗಳನ್ನು ವ್ಯಯಿಸಲು ಚಡಪಡಿಸುವರೇ?

ದೊರೆಸ್ವಾಮಿ ಮಂಜೇಗೌಡ ಆಲೂರು, ಹಾಸನ

ರೈಲು ಸಂಪರ್ಕ: ಬೇಡಿಕೆ ಈಡೇರಿಸಿ

ಮಂಡ್ಯ ಲೋಕಸಭಾ ಕ್ಷೇತ್ರವನ್ನು ಪ್ರತಿನಿಧಿಸುತ್ತಿರುವ ಸುಮಲತಾ ಅಂಬರೀಶ್ ಅವರು ಹೆಜ್ಜಾಲ-ಚಾಮರಾಜನಗರ ನಡುವಿನ ರೈಲು ಸಂಚಾರ ಕಾಮಗಾರಿಯ ವಿಚಾರವನ್ನು ಲೋಕಸಭೆಯಲ್ಲಿ ಪ್ರಸ್ತಾಪಿಸಿರುವುದು ಸಂತಸದಾಯಕ. ಹೆಜ್ಜಾಲ, ಕನಕಪುರ, ಮಳವಳ್ಳಿ, ಕೊಳ್ಳೇಗಾಲ ಮೂಲಕ ಚಾಮರಾಜನಗರ ನಡುವೆ ರೈಲು ಸಂಪರ್ಕ ಕಲ್ಪಿಸುವ ಪ್ರಸ್ತಾವವು 1996-97ರಲ್ಲಿಯೇ ಇತ್ತು. ಆದರೆ, ಇಂದಿಗೂ ಕಾಮಗಾರಿ ಆರಂಭವೇ ಆಗಿಲ್ಲದಿರುವುದು ವಿಪರ್ಯಾಸ. ಈ ಯೋಜನೆಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ತಲಾ ಶೇ 50ರಷ್ಟು ಹಣವನ್ನು ವಿನಿಯೋಗಿಸಬೇಕಿದೆ. ಕೇಂದ್ರ ಮತ್ತು ರಾಜ್ಯದಲ್ಲಿ ಈಗ ಒಂದೇ ಪಕ್ಷ ಅಧಿಕಾರದಲ್ಲಿ ಇದೆ. ಹಣ ಭರಿಸುವ ವಿಚಾರದಲ್ಲಿ ಸಹಮತ ಸಾಧಿಸಿ, ಆದಷ್ಟು ಬೇಗ ಕಾಮಗಾರಿ ಆರಂಭಿಸಲು ಮುಂದಾದರೆ, ಇಲ್ಲಿನ ಜನರ ಎಷ್ಟೋ ವರ್ಷಗಳ ಬೇಡಿಕೆಯನ್ನು ಈಡೇರಿಸಿದಂತಾಗುತ್ತದೆ.

ಚೆಲುವರಾಜು ಕೆ., ಧನಗೆರೆ, ಕೊಳ್ಳೇಗಾಲ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ರಾಜಕೀಯದ 'ಪೊಲೀಸ್'ಗಿರಿ

ಪೊಲೀಸ್ ಇಲಾಖೆಯೊಳಗೆ ರಾಜಕಾರಣಿಗಳು ಕೈಯಾಡಿಸುತ್ತಿದ್ದಾರೆಯೇ ಅಥವಾ ಪೊಲೀಸ್ ಅಧಿಕಾರಿಗಳೇ ರಾಜಕಾರಣಿಗಳ ಅನುಯಾಯಿಗಳಾಗುತ್ತಿದ್ದಾರೆಯೇ? ಈ ಪ್ರಶ್ನೆ ಈಚಿನ ಕೆಲವು ವರ್ಷಗಳಲ್ಲಿ ಜನರನ್ನು ತೀವ್ರವಾಗಿ ಕಾಡುತ್ತಿದೆ. 'ಆಳುವ ಸರ್ಕಾರಗಳು ಬದಲಾದಂತೆ, ದೇಶದ ಗಮನಸೆಳೆದ ಕೆಲವು ಸೂಕ್ಷ್ಮ ಮತ್ತು ಪ್ರಮುಖ ಪ್ರಕರಣಗಳ ತನಿಖಾ ಹಾದಿಯೂ ಬದಲಾಗುತ್ತಿರುವುದು ಜನರ ಗಮನಕ್ಕೆ ಬರುತ್ತಿದೆ. ಕೆಲವು ವಿಚಾರಗಳಲ್ಲಿ ನ್ಯಾಯಾಲಯಗಳೇ ಪೊಲೀಸ್ ಅಧಿಕಾರಿಗಳಿಗೆ ಛೀಮಾರಿ ಹಾಕಿದ ಉದಾಹರಣೆಗಳಿವೆ. ಇದೂ ಸಾಲದೆಂಬಂತೆ, ಅಧಿಕಾರಿಗಳು 'ತಮ್ಮ ನಾಯಕ'ರ ಬಗ್ಗೆ ಮುಕ್ತವಾಗಿ ಹೊಗಳಿಕೆಯ ಮಾತುಗಳನ್ನು ಆಡಿರುವುದನ್ನು ಇತ್ತೀಚೆಗೆ ಕಂಡಿದ್ದೇವೆ. ಇದು ಒಂದೆರಡು ರಾಜ್ಯಗಳಿಗಷ್ಟೇ ಸೀಮಿತವಾಗಿಲ್ಲ, ಬಹುತೇಕ ಎಲ್ಲ ರಾಜ್ಯಗಳ ಸಾಮಾನ್ಯ ಸಮಸ್ಯೆಯಾಗಿದೆ. ಇಂಥ ಬೆಳವಣಿಗೆಗಳು ಪೊಲೀಸ್ ವ್ಯವಸ್ಥೆಯ ಮೇಲೆ ಜನರಿಗೆ ಇರುವ ವಿಶ್ವಾಸವನ್ನು ಕುಂದಿಸಿವೆ' ಎಂದು ಪೊಲೀಸರೇ ಒಪ್ಪಿಕೊಳ್ಳುತ್ತಾರೆ.

'ವರ್ಗಾವಣೆ, ಬಡ್ತಿ ಮುಂತಾಗಿ ಪೊಲೀಸ್ ಇಲಾಖೆಯ ಆಡಳಿತಾತ್ಮಕವಾದ ಪ್ರತಿಯೊಂದು ವಿಚಾರದಲ್ಲೂ ಶಾಸಕರು, ಸಚಿವರು, ಪ್ರಭಾವಿಗಳು ಮೂಗು ತೂರಿಸುತ್ತಾರೆ. ವರ್ಗಾವಣೆ ಮಾಡಿಸಬೇಕಾದರೆ ಶಾಸಕರ ಶಿಫಾರಸು ಪತ್ರದೊಂದಿಗೆ ಹೋಗಬೇಕಾದ ಸ್ಥಿತಿ ಇದೆ' ಎಂದು ಇಲಾಖೆಯಲ್ಲಿರುವ ಸಿಬ್ಬಂದಿ ಹೇಳುತ್ತಾರೆ.

ರಾಜಕೀಯ ಹಾಗೂ ಇತರ ಕೆಲವು ಮಹತ್ವಾಕಾಂಕ್ಷೆಗಳನ್ನು ಹೊಂದಿರುವ ಅಧಿಕಾರಿಗಳು ತಾವೇ ಕಾನೂನನ್ನು ಕೈಗೆತ್ತಿಕೊಂಡು ಸ್ವತಃ ಆರೋಪಿಗಳಾಗುತ್ತಿರುವುದು ಈಚಿನ ಕೆಲವು ವರ್ಷಗಳಲ್ಲಿ ಕಂಡುಬರುತ್ತಿರುವ ಆತಂಕಕಾರಿ ಬೆಳವಣಿಗೆಯಾಗಿದೆ. ಹತ್ಯೆಗೆ ಸಂಚು, ಭ್ರಷ್ಟಾಚಾರ, ಕೊಲೆ, ಘೋಷಿತ ಆದಾಯಕ್ಕೂ ಮೀರಿದ ಆಸ್ತಿ ಸಂಪಾದನೆ, ಅಪಹರಣ ಮುಂತಾದ ಗಂಭೀರ ಸ್ವರೂಪದ ಆರೋಪಗಳು ಪೊಲೀಸರ ಮೇಲೆಯೇ ಬರುತ್ತಿವೆ. ಮುಂಬೈಯ ಪೊಲೀಸ್ ಅಧಿಕಾರಿ ಸಚಿನ್ ವಾಜೆ ಅವರು ಇದಕ್ಕೆ ಈಚಿನ ಉದಾಹರಣೆಯಾಗಿದ್ದಾರೆ.

ಜೈಲು ಸೇರಿದ 'ಎನ್‌ಕೌಂಟರ್ ತಜ್ಞ'

90ರ ದಶಕದಲ್ಲಿ, ಮುಂಬೈನಲ್ಲಿ ಭೂಗತ ಪಾತಕಿಗಳ ಉಪಟಳ ವಿಪರೀತವಾದಾಗ, ಪಾತಕಿಗಳ 'ಎನ್‌ಕೌಂಟರ್' ಅನ್ನು ಪೊಲೀಸರು ಆರಂಭಿಸಿದ್ದರು. ಪೊಲೀಸ್ ಇಲಾಖೆಯಲ್ಲಿ ಆಗ ಇಂಥ 'ಎನ್‌ಕೌಂಟರ್ ಸ್ಪೆಷಲಿಸ್ಟ್'ಗಳ ಒಂದು ತಂಡವೇ ಸೃಷ್ಟಿಯಾಯಿತು. ಸಚಿನ್ ವಾಜೆ ಆ ತಂಡದ ಒಬ್ಬ ಪ್ರಮುಖ ಸದಸ್ಯರಾಗಿದ್ದರು.

ಸಚಿನ್ ವಾಜೆ

2002ರಲ್ಲಿ ಖ್ವಾಜಾ ಯೂನುಸ್ ಎಂಬ 27 ವರ್ಷ ವಯಸ್ಸಿನ ಯುವಕನ ಕಸ್ಟಡಿ ಸಾವಿನ ಪ್ರಕರಣವು ವಾಜೆ ಅವರಿಗೆ ಮುಳುವಾಯಿತು. ಭಯೋತ್ಪಾದನೆ ನಿಗ್ರಹ ಕಾಯ್ದೆಯಡಿ (ಪೋಟ) ಬಂಧನಕ್ಕೊಳಗಾಗಿದ್ದ ಯೂನುಸ್ ಅವರನ್ನು, ಹತ್ಯೆ ಮಾಡಿದ ಮತ್ತು ಘಟನೆಗೆ ಸಂಬಂಧಿಸಿದ ಸಾಕ್ಷ್ಯಗಳನ್ನು ನಾಶಮಾಡಿದ ಆರೋಪ ವಾಜೆ ಹಾಗೂ ಇತರ ಮೂವರು ಪೊಲೀಸರ ಮೇಲೆ ಬಂತು.

'ಯೂನುಸ್ ಅವರನ್ನು ಔರಂಗಾಬಾದ್‌ಗೆ ಕರೆದೊಯ್ಯುತ್ತಿದ್ದಾಗ ಅವರು ತಪ್ಪಿಸಿಕೊಂಡಿದ್ದರು' ಎಂದು ಪೊಲೀಸರು ವಾದಿಸಿದ್ದರು. ಆದರೆ, ಕಸ್ಟಡಿಯಲ್ಲಿ ಅವರ ಸಾವಾಗಿತ್ತು ಎಂಬುದು ತನಿಖೆಯಿಂದ ಸ್ಪಷ್ಟವಾಯಿತು. ಇದಾಗುತ್ತಿದ್ದಂತೆ ವಾಜೆ ಅವರನ್ನು ಅಮಾನತುಗೊಳಿಸಲಾಯಿತು. ಆ ಪ್ರಕರಣದ ವಿಚಾರಣೆ ಇನ್ನೂ ನಡೆಯುತ್ತಿದೆ. ಈ ನಡುವೆ, 2007ರಲ್ಲಿ ಇಲಾಖೆಯನ್ನು ತ್ಯಜಿಸಿದ ವಾಜೆ, ಅಧಿಕೃತವಾಗಿ ಶಿವಸೇನಾ ಸೇರಿದರು. ತಂತ್ರಜ್ಞಾನದಲ್ಲೂ ಸಾಕಷ್ಟು ಪರಿಣತರಾಗಿದ್ದ ವಾಜೆ, 'ಲೇ ಭಾರ್' ಎಂಬ ಸಾಮಾಜಿಕ ನೆಟ್‌ವರ್ಕಿಂಗ್ ತಾಣವನ್ನು ಆರಂಭಿಸಿದ್ದರು. ಜನರ ದೂರವಾಣಿ ಸಂಭಾಷಣೆಗಳನ್ನು ಕದ್ದಾಲಿಸುವ ಹಾಗೂ ಮೆಸೇಜ್‌ಗಳನ್ನು ಓದಲು ಸಾಧ್ಯವಾಗುವಂಥ ಸಾಫ್ಟ್‌ವೇರ್ ಒಂದನ್ನು ಅವರು ಅಭಿವೃದ್ಧಿಪಡಿಸಿದ್ದರು ಎಂಬ ಆರೋಪವೂ ಇದೆ.

ಸಚಿನ್ ವಾಜೆ ಅವರ ಮರ್ಸಿಡಿಸ್ ಬೆಂಜ್ ಕಾರನ್ನು ತನಿಖಾಧಿಕಾರಿಗಳು ಪರಿಶೀಲಿಸಿದ್ದಾರೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಕಾರಿನಲ್ಲಿ ಪ್ರಮುಖ ಸಾಕ್ಷ್ಯ ಲಭ್ಯವಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ

ಸುಮಾರು 16 ವರ್ಷಗಳ ನಂತರ ಅವರು ಇಲಾಖೆಗೆ ಮತ್ತೆ ಬಂದಿದ್ದಾರೆ. 'ಇಲಾಖೆಯಲ್ಲಿ ಸಿಬ್ಬಂದಿಯ ಕೊರತೆ ಇರುವುದರಿಂದ ವಾಜೆ ಅವರನ್ನು ಪುನಃ ಸೇವೆಗೆ ಕರೆಯಿಸಿಕೊಳ್ಳಲಾಗಿದೆ' ಎಂದು ಸರ್ಕಾರ ಹೇಳಿದೆ. ಆದರೆ ಸೇವೆಗೆ ಬಂದು ಕೆಲವೇ ತಿಂಗಳಲ್ಲಿ ದೊಡ್ಡ ವಿವಾದ ಸೃಷ್ಟಿಸಿ, ಅವರು ಬಂಧನಕ್ಕೆ ಒಳಗಾಗಿದ್ದಾರೆ.

ಮುಕೇಶ್ ಅಂಬಾನಿ ಅವರ ಮನೆ 'ಅಂಟಿಲಿಯಾ'ದ ಮುಂದೆ ಸ್ಫೋಟಕಗಳಿಂದ ತುಂಬಿದ್ದ ವಾಹನವನ್ನಿಟ್ಟ ಪ್ರಕರಣದಲ್ಲಿ ವಾಜೆ ಮೇಲೆ ಆರೋಪಗಳು ಬಂದಿವೆ. 'ವಾಹನದ ಮಾಲೀಕರಾಗಿದ್ದ ಮನಸುಖ್ ಹಿರೇನ್ ಅವರ ಜತೆಗೆ ವಾಜೆ ಸತತವಾಗಿ ಸಂಪರ್ಕದಲ್ಲಿದ್ದರು' ಎಂದು ವಿರೋಧ ಪಕ್ಷದ ನಾಯಕ ದೇವೇಂದ್ರ ಫಡಣವೀಸ್ ದೂರವಾಣಿ ಕರೆ ದಾಖಲೆಗಳ ಸಹಿತವಾಗಿ ಆರೋಪಿಸಿದ್ದಾರೆ.

ಅಂಬಾನಿ ಮನೆಯ ಮುಂದೆ ಪತ್ತೆಯಾಗಿದ್ದ ಕಾರು ಕಳ್ಳತನವಾಗಿತ್ತು ಎಂದು ಹಿರೇನ್ ಅವರು ಕೆಲವು ತಿಂಗಳ ಹಿಂದೆಯೇ ದೂರು ನೀಡಿದ್ದರು. ಪ್ರಕರಣದ ಕಾವು ಏರುತ್ತಿದ್ದಂತೆ ಕಾರಿನ ಮಾಲೀಕರಾಗಿದ್ದ ಹಿರೇನ್ ಅವರು ಅಸಹಜ ಸಾವನ್ನು ಕಂಡಿದ್ದು, ಅವರ ಶವವು ಕಲ್ವಾದ ನಾಲೆಯಲ್ಲಿ ಪತ್ತೆಯಾಗಿದೆ. 'ಹಿರೇನ್ ಸಾವಿನ ಹಿಂದೆ ವಾಜೆ ಕೈವಾಡವಿದೆ, ಸ್ಫೋಟಕ ಇಡಲು ಬಳಸಿದ್ದ ಕಾರನ್ನು ಹಲವು ತಿಂಗಳುಗಳಿಂದ ವಾಜೆ ಅವರು ಬಳಸುತ್ತಿದ್ದರು' ಎಂದು ಹಿರೇನ್ ಅವರ ಪತ್ನಿ ಆರೋಪಿಸಿದ್ದಾರೆ.

ಈ ಮಧ್ಯೆ ರಾಷ್ಟ್ರೀಯ ತನಿಖಾ ದಳವು (ಎನ್‌ಐಎ) ವಾಜೆ ಅವರನ್ನು 12 ಗಂಟೆಗಳ ವಿಚಾರಣೆಗೆ ಒಳಪಡಿಸಿ, ಆನಂತರ ಬಂಧಿಸಿದೆ.

ಸಲ್ವಿಂದರ್ ಸಿಂಗ್

ಪಂಜಾಬ್ ಪೊಲೀಸ್ ಇಲಾಖೆಯಲ್ಲಿ ವಿವಾದಗಳಿಂದಲೇ ಸುದ್ದಿಯಾದವರು ಸಲ್ವಿಂದರ್ ಸಿಂಗ್. ವಿವಿಧ ಲೈಂಗಿಕ ಕಿರುಕುಳ ಆರೋಪಗಳು ಇವರ ಮೇಲಿದ್ದವು. ಪಠಾಣ್‌ಕೋಟ್ ವಾಯುನೆಲೆ ಮೇಲಿನ ದಾಳಿಯಲ್ಲಿ ಸಲ್ವಿಂದರ್ ಪಾತ್ರ ಇದೆ ಎಂದು ಆರೋಪಿಸಲಾಗಿತ್ತು. ಆದರೆ ಎನ್‌ಐಎ ಇವರನ್ನು ಆರೋಪಮುಕ್ತಗೊಳಿಸಿತು. ವೃತ್ತಿಜೀವನದ ಉದ್ದಕ್ಕೂ ಒಂದಿಲ್ಲೊಂದು ವಿವಾದ ಮಾಡಿಕೊಂಡಿದ್ದ ಸಲ್ವಿಂದರ್ ಅವರಿಗೆ ಕಡ್ಡಾಯ ನಿವೃತ್ತಿಗೂ ಆದೇಶ ನೀಡಲಾಗಿತ್ತು.

2006ರಲ್ಲಿ ಪಂಜಾಬ್ ಪೊಲೀಸ್ ಇಲಾಖೆಗೆ ಸೇರಿದ ಅವರು, ಶಿರೋಮಣಿ ಅಕಾಲಿದಳ ಮುಖಂಡ ಸುಚ್ಚಾ ಸಿಂಗ್ ಲಂಘಾ ಸೇರಿದಂತೆ ರಾಜಕಾರಣಿಗಳ ಜೊತೆ ನಿಕಟ ನಂಟು ಹೊಂದಿದ್ದರು ಎಂಬ ಆರೋಪವಿತ್ತು. 2016ರಲ್ಲಿ ಆರು ಮಂದಿ ಮಹಿಳಾ ಪೊಲೀಸರು ಸಲ್ವಿಂದರ್ ವಿರುದ್ಧ ಲೈಂಗಿಕ ಕಿರುಕುಳ ಆರೋಪ ಹೊರಿಸಿದ್ದರು. 2017ರಲ್ಲೂ ಮತ್ತೊಂದು ಲೈಂಗಿಕ ಕಿರುಕುಳದ ದೂರು ದಾಖಲಾಗಿತ್ತು. 'ಘೋಷಿತ ಅಪರಾಧಿ' ಎಂದು ಕರೆಸಿಕೊಂಡ ಅವರ ಜಾಮೀನು ಅರ್ಜಿಯನ್ನು ಪಂಜಾಬ್ ಮತ್ತು ಹರಿಯಾಣ ಹೈಕೋರ್ಟ್ ವಜಾಗೊಳಿಸಿತ್ತು. ಆ ಬಳಿಕ ಕೆಲಕಾಲ ಭೂಗತರಾಗಿದ್ದ ಅವರನ್ನು ಸೇವೆಯಿಂದ ವಜಾಗೊಳಿಸಲಾಯಿತು. 2017ರ ಏಪ್ರಿಲ್‌ನಲ್ಲಿ ಅವರು ಗುರುದಾಸ್‌ಪುರ ಕೋರ್ಟ್‌ಗೆ ಶರಣಾಗಿದ್ದರು.

ಪಿ.ಪಿ. ಪಾಂಡೆ

2004ರಲ್ಲಿ ಭಾರಿ ಸದ್ದು ಮಾಡಿದ್ದ ಹಾಗೂ ರಾಜಕೀಯ ತಿರುವು ಪಡೆದಿದ್ದ ಇಶ್ರತ್ ಜಹಾಂ ಹಾಗೂ ಇತರ ಮೂವರ ನಕಲಿ ಎನ್‌ಕೌಂಟರ್ ಪ್ರಕರಣದ ಪ್ರಮುಖ ಆರೋಪಿಗಳಲ್ಲಿ ಪಿ.ಪಿ. ಪಾಂಡೆ ಒಬ್ಬರು. ವಿಶೇಷ ನ್ಯಾಯಮೂರ್ತಿ ಪಾಂಡ್ಯ ಅವರು ಪಾಂಡೆ ಅವರನ್ನು ಖುಲಾಸೆಗೊಳಿಸಿದರು.

ಎನ್‌ಕೌಂಟರ್‌ಗೂ ಮುನ್ನ ಇಶ್ರತ್ ಜಹಾಂ ಹಾಗೂ ಇತರರನ್ನು ಅಕ್ರಮವಾಗಿ ಇರಿಸಲಾಗಿದ್ದ ಖೋಡಿಯಾರ್ ಫಾರ್ಮ್‌ಗೆ ಪಾಂಡೆ ಭೇಟಿ ನೀಡಿದ್ದರು ಎಂದು ಸಿಬಿಐ ಆರೋಪಿಸಿತ್ತು. ಐಪಿಎಸ್ ಅಧಿಕಾರಿ ಡಿ.ಜಿ. ವಂಜಾರಾ ಮತ್ತು, ಪ್ರಮುಖ ಸಾಕ್ಷಿ ಹೆಚ್.ಡಿ. ಗೋಸ್ವಾಮಿ ಅವರನ್ನೂ ಭೇಟಿ ಮಾಡಿದ ಆರೋಪವಿತ್ತು. ಆದರೆ ಈ ಆರೋಪಗಳನ್ನು ಪುಷ್ಟೀಕರಿಸುವ ಯಾವುದೇ ಪ್ರಬಲ ಸಾಕ್ಷ್ಯ ಇಲ್ಲ ಎಂದು ಕೋರ್ಟ್ ಹೇಳಿತು. ಖೋಡಿಯಾರ್‌ಗೆ ಪಾಂಡೆ ಅವರ ಗನ್‌ಮ್ಯಾನ್ ಹೋಗಿದ್ದ ಬಗ್ಗೆ ಎಲ್ಲಿಯೂ ಉಲ್ಲೇಖವಾಗಿರಲಿಲ್ಲ. ಎಫ್‌ಐಆರ್ ದಾಖಲಿಸುವಂತಹ ವಿಚಾರಗಳಲ್ಲಿ ಪಾಂಡೆ ಅವರಂತಹ ಹಿರಿಯ ಅಧಿಕಾರಿಗಳು ಕಿರಿಯ ಅಧಿಕಾರಿಯ ಕಚೇರಿಗೆ ಭೇಟಿ ನೀಡುವುದನ್ನು ನಂಬಲಾಗದು ಎಂದು ಕೋರ್ಟ್ ಅಭಿಪ್ರಾಯಪಟ್ಟಿತ್ತು.

1982ರ ಬ್ಯಾಚಿನ ಐಪಿಎಸ್ ಅಧಿಕಾರಿ ಪಾಂಡೆ ಅವರನ್ನು ನಕಲಿ ಎನ್‌ಕೌಂಟರ್ ಪ್ರಕರಣದಲ್ಲಿ 19 ತಿಂಗಳು ಜೈಲಿನಲ್ಲಿ ಇರಿಸಲಾಗಿತ್ತು. 2015ರ ಫೆಬ್ರುವರಿಯಲ್ಲಿ ಜಾಮೀನಿನ ಮೇಲೆ ಹೊರಬಂದರು. ಗುಜರಾತ್ ಸರ್ಕಾರವು ಅವರಿಗೆ ಡಿಜಿಪಿ ಹುದ್ದೆಗೆ ಬಡ್ತಿ ನೀಡಿತ್ತು. ವಿವಾದದ ಕಾರಣ ಅವರು ರಾಜೀನಾಮೆ ನೀಡಿದ್ದರು. ಪ್ರಕರಣದಲ್ಲಿ ಹೆಸರು ಕೇಳಿಬಂದಿದ್ದ ಏಳು ಪೊಲೀಸ್ ಅಧಿಕಾರಿಗಳಲ್ಲಿ ಪಾಂಡೆ ಅವರೂ ಒಬ್ಬರು. ಇಶ್ರತ್ ಜಹಾಂ ಅವರ ಸ್ನೇಹಿತ ಜಾವೇದ್ ಶೇಖ್ ಹಾಗೂ ಇಬ್ಬರು ಪಾಕಿಸ್ತಾನಿ ನಾಗರಿಕರ ಹತ್ಯೆಗೆ ಸಂಚು ರೂಪಿಸಿದ, ಅಪಹರಣ ಮಾಡಿದ ಹಾಗೂ ಹತ್ಯೆ ಮಾಡಿದ ಆರೋಪವು ಇವರೆಲ್ಲರ ಮೇಲಿತ್ತು.

ದಯಾನಾಯಕ್

ಮುಂಬೈ ಪೊಲೀಸ್‌ನ ಎನ್‌ಕೌಂಟರ್ ಸ್ಪೆಷಲಿಸ್ಟ್ ಇನ್‌ಸ್ಪೆಕ್ಟರ್ ದಯಾನಾಯಕ್ ಅವರಿಗೂ ಮುಂಬೈನ ಗಣ್ಯರು, ರಾಜಕಾರಣಿಗಳು ಮತ್ತು ಬಾಲಿವುಡ್ ತಾರೆಯರ ಜತೆ ನಿಕಟ ಸಂಪರ್ಕವಿತ್ತು ಎಂಬ ಆರೋಪವಿದೆ. ತಮ್ಮ ವೇತನಕ್ಕಿಂತಲೂ ಹೆಚ್ಚಿನ ಮೊತ್ತದ ಆಸ್ತಿ ಹೊಂದಿದ ಆರೋಪದಲ್ಲಿ ಅವರು ಹಲವು ಬಾರಿ ಅಮಾನತುಗೊಂಡಿದ್ದಾರೆ.

ಕರ್ನಾಟಕದ ಕಾರ್ಕಳದ ಎಣ್ಣೆಹೊಳೆಯವರಾದ ದಯಾನಾಯಕ್, 1995ರಲ್ಲಿ ಮುಂಬೈ ಪೊಲೀಸ್ ಇಲಾಖೆಯಲ್ಲಿ ಇನ್‌ಸ್ಪೆಕ್ಟರ್ ಆಗಿ ಸೇವೆ ಆರಂಭಿಸಿದರು. 1996ರ ಡಿಸೆಂಬರ್‌ನಲ್ಲಿ ಛೋಟಾ ರಾಜನ್‌ನ ಇಬ್ಬರು ಸಹಚರರನ್ನು ಎನ್‌ಕೌಂಟರ್‌ನಲ್ಲಿ ದಯಾನಾಯಕ್ ಹತ್ಯೆ ಮಾಡಿದ್ದರು. ಇದು ಅವರ ಮೊದಲ ಎನ್‌ಕೌಂಟರ್. ಆನಂತರ ಅವರನ್ನು ವಿಶೇಷ ಸ್ಕ್ವಾಡ್‌ಗೆ ವರ್ಗಾವಣೆ ಮಾಡಲಾಗಿತ್ತು. ನಂತರದ ಕೆಲವೇ ವರ್ಷಗಳಲ್ಲಿ ದಯಾನಾಯಕ್ ಅವರು ಎನ್‌ಕೌಂಟರ್‌ನಲ್ಲಿ ಒಟ್ಟು 83 ಜನರನ್ನು ಹತ್ಯೆ ಮಾಡಿದ್ದರು.

ಮುಂಬೈ ಭೂಗತಲೋಕದ ಜತೆ ಸಂಪರ್ಕವಿದ್ದ ದಯಾನಾಯಕ್ ಅವರು, ಗ್ಯಾಂಗ್‌ಸ್ಟರ್‌ಗಳ ಪರವಾಗಿ ಎನ್‌ಕೌಂಟರ್ ನಡೆಸಿದ್ದಾರೆ ಎಂಬ ಆರೋಪವಿತ್ತು. 2000ದಲ್ಲಿ ಅವರು ತಮ್ಮ ಊರು ಎಣ್ಣೆಹೊಳೆಯಲ್ಲಿ ತಮ್ಮ ತಾಯಿ ರಾಧಾಬಾಯಿ ನಾಯಕ್ ಅವರ ಹೆಸರಿನಲ್ಲಿ ಶಾಲೆ ಆರಂಭಿಸಿದ್ದರು. ಶಾಲೆಯ ಉದ್ಘಾಟನಾ ಸಮಾರಂಭದಲ್ಲಿ ರಾಜ್ಯದ ಅಂದಿನ ಶಿಕ್ಷಣ ಸಚಿವ ಎಚ್.ವಿಶ್ವನಾಥ್, ಬಾಲಿವುಡ್ ತಾರೆ ಅಮಿತಾಬ್ ಬಚ್ಚನ್, ಮುಂಬೈನ ಹಲವು ಗಣ್ಯರು ಭಾಗವಹಿಸಿದ್ದರು. ಆನಂತರವೇ ದಯಾನಾಯಕ್ ವಿರುದ್ಧ ನಕಲಿ ಎನ್‌ಕೌಂಟರ್‌ಗಳ ಆರೋಪದ ತೀವ್ರತೆ ಹೆಚ್ಚಾಯಿತು. ದಯಾನಾಯಕ್ ವಿರುದ್ಧ ಇಲಾಖಾ ತನಿಖೆಯೂ ನಡೆಯಿತು. ಆದರೆ ಆರೋಪಗಳಿಗೆ ಪೂರಕವಾದ ಸಾಕ್ಷ್ಯಗಳಿಲ್ಲ ಎಂದು ಎಲ್ಲಾ ಆರೋಪಗಳಿಂದ ಅವರನ್ನು ಖುಲಾಸೆ ಮಾಡಲಾಯಿತು.

ನಿವೃತ್ತಿ ನಂತರವೂ ಸೇವೆಯಲ್ಲಿರುವ ವಂಜಾರಾ

ಸರ್ಕಾರ, ರಾಜಕಾರಣಿಗಳ ಪರವಾಗಿ ಎನ್‌ಕೌಂಟರ್ ನಡೆಸಿದ ಆರೋಪ ಹೊತ್ತ ಪೊಲೀಸ್ ಅಧಿಕಾರಿಗಳಲ್ಲಿ ಗುಜರಾತ್ ಕೇಡರ್‌ನ ಐಪಿಎಸ್ ಅಧಿಕಾರಿ ಡಿ.ಜಿ. ವಂಜಾರಾ ಅವರ ಹೆಸರೂ ಇದೆ. ದೇಶದಲ್ಲಿ ಹೆಚ್ಚು ಸುದ್ದಿಯಾದ ಇಶ್ರತ್ ಜಹಾಂ ನಕಲಿ ಎನ್‌ಕೌಂಟರ್ ಪ್ರಕರಣದಲ್ಲಿ ಪ್ರಮುಖ ಆರೋಪಿಯಾಗಿದ್ದ ವಂಜಾರಾ ಅವರು ಗುಜರಾತ್‌ನ ರಾಜಕಾರಣಿಗಳ ಜತೆ ಆಪ್ತ ಸಂಪರ್ಕ ಹೊಂದಿದ್ದಾರೆ ಎಂಬ ಮಾತು ಈಗಲೂ ಚಾಲ್ತಿಯಲ್ಲಿದೆ.

2004ರಲ್ಲಿ ಅಹಮದಾಬಾದ್‌ನ ಹೊರವಲಯದಲ್ಲಿ ಮುಂಬೈನ ಯುವತಿ ಇಶ್ರತ್ ಜಹಾಂ ಮತ್ತು ಮೂವರು ಸ್ನೇಹಿತರನ್ನು ವಂಜಾರಾ ನೇತೃತ್ವದ ತಂಡವು ಎನ್‌ಕೌಂಟರ್‌ನಲ್ಲಿ ಹತ್ಯೆ ಮಾಡಿತ್ತು. 2005ರಲ್ಲಿ ಗ್ಯಾಂಗ್‌ಸ್ಟರ್ ಸೊಹ್ರಾಬುದ್ದೀನ್ ಶೇಕ್, ಆತನ ಪತ್ನಿ ಮತ್ತು ಸಹಚರ ತುಳಸೀರಾಮ್ ಪ್ರಜಾಪತಿ ಅವರನ್ನು ವಂಜಾರಾ ನೇತೃತ್ವದ ತಂಡ ಆಂಧ್ರಪ್ರದೇಶದಲ್ಲಿ ಬಂಧಿಸಿತ್ತು. ಕೆಲವೇ ದಿನಗಳಲ್ಲಿ ಸೊಹ್ರಾಬುದ್ದೀನ್‌ನನ್ನು ಗುಜರಾತ್‌ನ ಗಾಂಧಿನಗರದ ಬಳಿ ಎನ್‌ಕೌಂಟರ್‌ನಲ್ಲಿ ಹತ್ಯೆ ಮಾಡಲಾಗಿತ್ತು. ಆತನ ಪತ್ನಿಯನ್ನೂ ಪೊಲೀಸರು ಕೊಂದರು ಎಂದು ಪ್ರಜಾಪತಿ ಆರೋಪ ಮಾಡಿದ್ದ. ಕೆಲವೇ ದಿನಗಳಲ್ಲಿ ಪ್ರಜಾಪತಿಯನ್ನೂ ಎನ್‌ಕೌಂಟರ್‌ನಲ್ಲಿ ಹತ್ಯೆ ಮಾಡಲಾಯಿತು.

ವಂಜಾರಾ

ಗುಜರಾತ್‌ನ ಅಂದಿನ ಗೃಹ ಸಚಿವ ಅಮಿತ್ ಶಾ ಅವರ ಆಣತಿಯಂತೆ, ವಂಜಾರಾ ಈ ಹತ್ಯೆ ನಡೆಸಿದ್ದಾರೆ ಎಂಬ ಆರೋಪ ಕೇಳಿಬಂದಿತ್ತು. ಗ್ರಾನೈಟ್ ಉದ್ಯಮಿಯಾಗಿದ್ದ ಸೊಹ್ರಾಬುದ್ದೀನ್ ಮತ್ತು ಅಮಿತ್ ಶಾ ನಡುವೆ ವ್ಯವಹಾರಕ್ಕೆ ಸಂಬಂಧಿಸಿದಂತೆ ವೈಮನಸ್ಸು ಇತ್ತು. ಹೀಗಾಗಿಯೇ ಅವನನ್ನು ಹತ್ಯೆ ಮಾಡಲಾಗಿದೆ ಎಂಬ ಆರೋಪ ಕೇಳಿಬಂದಿತ್ತು. ಈ ಪ್ರಕರಣದಲ್ಲಿ ಅಮಿತ್ ಶಾ ಹಲವು ತಿಂಗಳು ಜೈಲುವಾಸ ಅನುಭವಿಸಿದರು.

ಈ ಎರಡೂ ಎನ್‌ಕೌಂಟರ್‌ಗಳನ್ನು ನಡೆಸಿದ್ದ ವಂಜಾರಾ ಅವರು 2007ರಲ್ಲಿ ಜೈಲು ಸೇರಿದ್ದರು. 2017ರಲ್ಲಿ ಸೊಹ್ರಾಬುದ್ದೀನ್ ಶೇಕ್ ನಕಲಿ ಎನ್‌ಕೌಂಟರ್ ಪ್ರಕರಣದಿಂದ ವಂಜಾರಾ ಮತ್ತು ಅಮಿತ್ ಶಾ ಅವರನ್ನು ಖುಲಾಸೆ ಮಾಡಲಾಯಿತು. 2018ರಲ್ಲಿ ಇಶ್ರತ್ ಜಹಾಂ ನಕಲಿ ಎನ್‌ಕೌಂಟರ್ ಪ್ರಕರಣದಲ್ಲಿ ವಂಜಾರಾ ಅವರನ್ನು ಖುಲಾಸೆ ಮಾಡಲಾಯಿತು. 2014ರಲ್ಲೇ ಸೇವೆಯಿಂದ ವಂಜಾರಾ ನಿವೃತ್ತರಾಗಿದ್ದರು. ಆದರೆ 2020ರಲ್ಲಿ ಗುಜರಾತ್ ಸರ್ಕಾರವು, ವಂಜಾರಾ ಅವರಿಗಾಗಿಯೇ ನಿವೃತ್ತಿಯೋತ್ತರ ಇನ್‌ಸ್ಪೆಕ್ಟರ್ ಜನರಲ್ ಹುದ್ದೆಯನ್ನು ನೀಡಿತು.

ಕುತೂಹಲ ಕೆರಳಿಸಿದ ಕ್ಯಾಪ್ಟನ್–ಸಿಧು ಭೇಟಿ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಭಿನ್ನಾಭಿಪ್ರಾಯದ ಕಾರಣ ದೂರವಾಗಿದ್ದ ಕಾಂಗ್ರೆಸ್ ನಾಯಕರು
- ನಾಲ್ಕು ತಿಂಗಳಲ್ಲಿ ಎರಡು ಬಾರಿ ಭೇಟಿ ಮಾಡಿದ ಮುಖ್ಯಮಂತ್ರಿ-ಮಾಜಿ ಸಚಿವ
- ಸಿಧುಗೆ ಮತ್ತೆ ಸಂಪುಟದಲ್ಲಿ ಪ್ರಮುಖ ಸ್ಥಾನ ನೀಡುವ ಸಾಧ್ಯತೆ

ನವದೆಹಲಿ: ಪಂಜಾಬ್ ಮುಖ್ಯಮಂತ್ರಿ ಅಮರಿಂದರ್ ಸಿಂಗ್ ಮತ್ತು ಕಾಂಗ್ರೆಸ್ ನಾಯಕ ನವಜೋತ್ ಸಿಂಗ್ ಸಿಧು ಅವರು ಬುಧವಾರ ಭೇಟಿ ಮಾಡಿದ್ದಾರೆ. ಸಿಧು ಅವರಿಗೆ ಕ್ಯಾಬಿನೆಟ್ ದರ್ಜೆಯ ಸಚಿವ ಸ್ಥಾನ ನೀಡಲಾಗುತ್ತದೆ ಎಂಬ ವದಂತಿ ಪಂಜಾಬ್ ರಾಜಕೀಯ ವಲಯದಲ್ಲಿ ಹರಿದಾಡುತ್ತಿದೆ. ಮುಂದಿನ ವರ್ಷ ನಡೆಯಲಿರುವ ವಿಧಾನಸಭಾ ಚುನಾವಣೆಯನ್ನು ಎದುರಿಸುವ ಸಿದ್ಧತೆಯ ಭಾಗವಾಗಿ ಈ ಭೇಟಿ ನಡೆದಿದೆ ಎಂದು ಮೂಲಗಳು ಹೇಳಿವೆ.

ಅಮರಿಂದರ್ ಸಿಂಗ್ ಸಚಿವ ಸಂಪುಟದ ಸದಸ್ಯರಾಗಿದ್ದ ಸಿಧು ಅವರು, 2018ರಲ್ಲಿ ಸಂಪುಟದಿಂದ ಹೊರನಡೆದಿದ್ದರು. 2018ರಲ್ಲಿ ಪಾಕಿಸ್ತಾನ ಪ್ರಧಾನಿ ಇಮ್ರಾನ್ ಖಾನ್ ಅವರ ಪ್ರಮಾಣ ವಚನ ಕಾರ್ಯಕ್ರಮದಲ್ಲಿ ಸಿಧು ಭಾಗಿಯಾದ ಬಗ್ಗೆ ಇಬ್ಬರು ನಾಯಕರಲ್ಲೂ ಭಿನ್ನಾಭಿಪ್ರಾಯ ಮೂಡಿತ್ತು. 2019ರ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಕಳಪೆ ಸಾಧನೆ ಮಾಡಲೂ ಸಿಧು ಅವರೇ ಕಾರಣ ಎಂದು ಅಮರಿಂದರ್ ಆರೋಪಿಸಿದ್ದರು. ಇದು ಇಬ್ಬರ ನಡುವಣ ಭಿನ್ನಾಭಿಪ್ರಾಯವನ್ನು ಹೆಚ್ಚಿಸಿತ್ತು. ಈಗ ಈ ಇಬ್ಬರೂ ನಾಯಕರು ಪರಸ್ಪರ ಭೇಟಿ ಮಾಡಿರುವುದು ಕುತೂಹಲ ಕೆರಳಿಸಿದೆ.

ನಾಲ್ಕು ತಿಂಗಳ ಅವಧಿಯಲ್ಲಿ ಇಬ್ಬರು ನಾಯಕರು ಭೇಟಿ ಮಾಡುತ್ತಿರುವುದು ಇದು ಎರಡನೇ ಬಾರಿ. ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ರೈತರನ್ನು ಬೆಂಬಲಿಸಿ ಪಂಜಾಬ್‌ನಲ್ಲಿ ಟ್ರ್ಯಾಕ್ಟರ್ ಮೆರವಣಿಗೆ ಮಾಡಿದ್ದಾಗ, ಅಮರಿಂದರ್ ಮತ್ತು ಸಿಧು ಇಬ್ಬರೂ ಒಂದೇ ವೇದಿಕೆಯಲ್ಲಿ ಕಾಣಿಸಿಕೊಂಡಿದ್ದರು. ಕಾಂಗ್ರೆಸ್ ನಾಯಕ ಹರೀಶ್ ರಾವತ್ ಅವರು ಈ ಭೇಟಿಯನ್ನು ಆಯೋಜಿಸಿದ್ದರು. ಬುಧವಾರದ ಭೇಟಿಯ ಹಿಂದೆಯೂ ರಾವತ್ ಅವರ ಶ್ರಮವಿದೆ ಎಂದು ಮೂಲಗಳು ಹೇಳಿವೆ.

ಬುಧವಾರ ಮಧ್ಯಾಹ್ನಕ್ಕೆ ಇಬ್ಬರ ಭೇಟಿ ನಿಗದಿಯಾಗಿತ್ತು. ಆದರೆ ಅಮರಿಂದರ್ ಅವರು ಪ್ರಧಾನಿ ನರೇಂದ್ರ ಮೋದಿ ಜತೆಗೆ ವಿಡಿಯೊ ಸಂವಾದದಲ್ಲಿ ಇದ್ದ ಕಾರಣ, ಭೇಟಿಯು ಸಂಜೆ ವೇಳೆಗೆ ನಡೆಯಿತು. ಭೇಟಿಯ ವೇಳೆ ಏನನ್ನು ಚರ್ಚಿಸಲಾಯಿತು ಎಂಬುದನ್ನು ಇಬ್ಬರು ನಾಯಕರೂ ಬಹಿರಂಗಪಡಿಸಿಲ್ಲ. ಆದರೆ ಅಮರಿಂದರ್ ಅವರ ಮಾಧ್ಯಮ ಸಲಹೆಗಾರ ರವೀನ್ ತುಕ್ರಾಲ್ ಭೇಟಿಯ ಚಿತ್ರವನ್ನು ಬಿಡುಗಡೆ ಮಾಡಿ, 'ಇಬ್ಬರು ನಾಯಕರು ಇರುವ ಈ ಚಿತ್ರವು ಸಾವಿರಾರು ಪದಗಳಿಗೆ ಸಮ' ಎಂದು ಹೇಳಿದ್ದಾರೆ.

ಅಮರಿಂದರ್ ಸಿಂಗ್

ಸಿಧು ಅವರಿಗೆ ಸರ್ಕಾರದಲ್ಲಿ ಉನ್ನತ ಹುದ್ದೆ ನೀಡುವ ಸಾಧ್ಯತೆ ಇದೆ. ಉಪಮುಖ್ಯಮಂತ್ರಿ ಸ್ಥಾನವನ್ನೇ ನೀಡುವ ಸಾಧ್ಯತೆ ಅತ್ಯಧಿಕವಾಗಿದೆ. 2022ರ ಆರಂಭದಲ್ಲೇ ಪಂಜಾಬ್‌ನಲ್ಲಿ ವಿಧಾನಸಭಾ ಚುನಾವಣೆ ನಡೆಯಲಿದೆ. ಪಂಜಾಬ್‌ನಲ್ಲಿ ಜನಪ್ರಿಯತೆ ಹೊಂದಿರುವ ಸಿಧು ಮತ್ತು ಅಮರಿಂದರ್ ಸಿಂಗ್ ಮಧ್ಯೆ ಭೇಟಿ ನಡೆಯುವಂತೆ ಮಾಡುವಲ್ಲಿ ಕಾಂಗ್ರೆಸ್‌ನ ಹಿರಿಯ ನಾಯಕರ ಒತ್ತಾಯವೂ ಇದೆ ಎಂದು ಮೂಲಗಳು ಹೇಳಿವೆ.

ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ಮತ್ತು ನಾಯಕ ರಾಹುಲ್ ಗಾಂಧಿ ಅವರ ಜತೆ ನವಜೋತ್ ಸಿಂಗ್ ಸಿಧು ಅವರು ಉತ್ತಮ ಸಂಬಂಧ ಕಾಯ್ದುಕೊಂಡಿದ್ದಾರೆ. ಈ ಇಬ್ಬರು ನಾಯಕರೂ ಹಲವು ಸಂದರ್ಭದಲ್ಲಿ ಸಿಧು ಅವರನ್ನು ಬೆಂಬಲಿಸಿದ್ದರು. ಬುಧವಾರದ ಭೇಟಿ ನಡೆಯುವಲ್ಲಿ ಈ ಅಂಶವೂ ಪ್ರಭಾವ ಬೀರಿದೆ ಎಂದು ಮೂಲಗಳು ಹೇಳಿವೆ.

ಬಿಜೆಪಿಯಲ್ಲಿದ್ದ ಸಿಧು ಅವರು, ತಮ್ಮನ್ನು ಕಡೆಗಣಿಸಲಾಗುತ್ತಿದೆ ಎಂದು ಪಕ್ಷವನ್ನು ತೊರೆದಿದ್ದರು. ನಂತರ ಕಾಂಗ್ರೆಸ್ ಸೇರಿದ್ದರು.

ನವಜೋತ್ ಸಿಂಗ್ ಸಿಧು

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ದೆಹಲಿ ಬಿಜೆಪಿ ಘಟಕದ ಮುಖಂಡ ಕಪಿಲ್ ಮಿಶ್ರಾ ಅವರು ಮಂಗಳವಾರ ಟ್ವೀಟ್ ಮಾಡಿದ್ದು, ಮುಸ್ಲಿಂ ಯುವಕರು ಶಿವಲಿಂಗದ ಮೇಲೆ ಮೂತ್ರ ಮಾಡಿದ್ದಾರೆ ಎಂದು ಆರೋಪಿಸಿದ್ದಾರೆ. ಜತೆಯಲ್ಲಿ ಒಂದು ವಿಡಿಯೊವನ್ನೂ ಹಂಚಿಕೊಂಡಿದ್ದಾರೆ. ಇಬ್ಬರು ಯುವಕರು ದೇವಾಲಯವೊಂದರಲ್ಲಿ ಇರುವ ಮೂರ್ತಿಗಳು ಮತ್ತು ಶಿವಲಿಂಗದ ಮೇಲೆ ಮೂತ್ರ ಮಾಡುತ್ತಿರುವ ದೃಶ್ಯಗಳು ಈ ವಿಡಿಯೊದಲ್ಲಿ ಇದೆ. ವಿಡಿಯೊದಲ್ಲಿ ಇರುವ ಯುವಕರು ಮುಸ್ಲಿಮರು ಎಂದು ಟ್ವೀಟ್‌ನಲ್ಲಿ ಹೇಳಲಾಗಿದೆ. ಈ ಟ್ವೀಟ್ ಅನ್ನು 60,000ಕ್ಕೂ ಹೆಚ್ಚು ಬಾರಿ ವೀಕ್ಷಿಸಲಾಗಿದೆ. ಅಲ್ಲದೆ, 12,000ಕ್ಕೂ ಹೆಚ್ಚು ಬಾರಿ ರೀಟ್ವೀಟ್ ಮಾಡಲಾಗಿದೆ.

ಇದು ಹಳೆಯ ವಿಡಿಯೊ ಎಂದು ದಿ ಲಾಜಿಕಲ್ ಇಂಡಿಯನ್ ಮತ್ತು ಆಲ್ಟ್‌ನ್ಯೂಸ್ ಫ್ಯಾಕ್ಟ್‌ಚೆಕ್ ಪ್ರಕಟಿಸಿವೆ. ಈ ವಿಡಿಯೊವನ್ನು 2018ರಲ್ಲಿ ಯೂಟ್ಯೂಬ್‌ಗೆ ಅಪ್‌ಲೋಡ್ ಮಾಡಲಾಗಿದೆ. ಇದು ಆಂಧ್ರಪ್ರದೇಶದ ವಿಶಾಖಪಟ್ಟಣ ಜಿಲ್ಲೆಯ ಗ್ರಾಮವೊಂದರ ದೇವಾಲಯದಲ್ಲಿ ಚಿತ್ರೀಕರಿಸಿದ ವಿಡಿಯೊ. ವಿಡಿಯೊದಲ್ಲಿ ಇರುವ ಯುವಕರನ್ನು ರಮೇಶ್ ಮತ್ತು ರಮೇಶ್ ಆನಂದ್ ಎಂದು ಗುರುತಿಸಲಾಗಿದೆ. 2018ರಲ್ಲೇ ಆಂಧ್ರಪ್ರದೇಶ ಪೊಲೀಸರು ಯುವಕರನ್ನು ಬಂಧಿಸಿದ್ದಾರೆ. ಅವರಿಗೆ ಶಿಕ್ಷೆಯಾಗಿದೆ. ಇಬ್ಬರೂ ಯುವಕರು ಕ್ರೈಸ್ತ ಸಮುದಾಯಕ್ಕೆ ಸೇರಿದವರು ಎಂದು ವಿಶಾಖಪಟ್ಟಣ ಪೊಲೀಸರು ಮಾಹಿತಿ ನೀಡಿದ್ದಾರೆ. ಆದರೆ ಬಿಜೆಪಿಯ ಮುಖಂಡ ಹಳೆಯ ವಿಡಿಯೊವನ್ನು ಈಗಿನದ್ದು ಎಂದು ಹಂಚಿಕೊಳ್ಳುತ್ತಿದ್ದಾರೆ ಎಂದು ಆಲ್ಟ್‌ನ್ಯೂಸ್ ಫ್ಯಾಕ್ಟ್‌ಚೆಕ್‌ನಲ್ಲಿ ವಿವರಿಸಿದೆ.

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ

ಬದುಕಿನ ಶ್ರೀಮಂತಿಕೆ

ಇರುವನ್ನಮೀ ಬಾಳು ದಿಟವದರ ವಿವರಣೆಯ |
ಹೊರೆ ನಮ್ಮ ಮೇಲಿಲ್ಲ ನಾವದರ ಸಿರಿಯ |
ಪಿರಿದಾಗಿಸಲು ನಿಂತು ಯುಕ್ತಿಯಿಂ ದುಡಿಯುವುದೆ |
ಪುರಷಾರ್ಥ ಸಾದನೆಯೊ – ಮಂಕುತಿಮ್ಮ
|| 398 ||

ಪದ-ಅರ್ಥ: ಇರುವನ್ನಮೀ = ಇರುವನ್ನ (ಇರುವ ತನಕ) + ಈ, ದಿಟವದರ = ದಿಟ(ಸತ್ಯ) + ಅದರ, ಪಿರಿದಾಗಿಸಲು = ಹಿರಿದಾಗಿಸಲು.

ವಾಚ್ಯಾರ್ಥ: ಇರುವವರೆಗೆ ಈ ಬಾಳು ಸತ್ಯ. ಅದರ ವಿವರಣೆಯ ಜವಾಬ್ದಾರಿ ನಮ್ಮದಲ್ಲ. ಅದರ ಶ್ರೀಮಂತಿಕೆಯನ್ನು ಹೆಚ್ಚು ಮಾಡಲು ಯುಕ್ತಿಯಿಂದ ದುಡಿಯುತ್ತ ಪುರುಷಾರ್ಥ ಸಾಧನೆಯನ್ನು ಮಾಡಬೇಕು.

ವಿವರಣೆ: ನಾವು ಯಾರೂ ಅರ್ಜಿ ಹಾಕಿಕೊಂಡು ಭೂಮಿಗೆ ಬಂದವರಲ್ಲ. ನಮಗೆ ತಂದೆ-ತಾಯಿಯರ ಆಯ್ಕೆ ಇರಲಿಲ್ಲ. ನಾವು ಹುಟ್ಟು, ಜಾತಿ, ಸಾಮಾಜಿಕ ಸ್ಥಿತಿ, ಆರ್ಥಿಕ ಪರಿಸ್ಥಿತಿ ಯಾವುದೂ ನಮ್ಮ ಆಯ್ಕೆ ಆಗಿರಲಿಲ್ಲ. ಹುಟ್ಟಿ ಬೆಳೆದ ಸ್ಥಳ ಕೂಡ ನಮ್ಮ ಇಚ್ಛೆಯಂತಲ್ಲ. ಹುಟ್ಟಿ ಬಂದ ಮೇಲೆ ಬದುಕಿರುವವರೆಗೆ ಹೇಗೆ ಬದುಕುತ್ತೇವೆ ಎಂಬುದು ಮಾತ್ರ ನಮ್ಮ ಆಯ್ಕೆ. ಬದುಕಿ ಇರುವ ಅವಧಿ ಸಣ್ಣದು. ನಮಗೆ ಎರಡು ದಾರಿಗಳಿವೆ. ಒಂದು, ಇರುವ ಬದುಕನ್ನು, ಇರುವ ಅವಕಾಶಗಳನ್ನು ಬಳಸಿಕೊಂಡು ಸಂತೋಷಿಸುತ್ತ ಬೆಳೆಯುವುದು. ಮತ್ತೊಂದು, ಪ್ರತಿಯೊಂದರ, ಪ್ರತಿಯೊಬ್ಬರ ಬಗ್ಗೆ ಗೊಣಗುತ್ತ, ಕೊರಗುತ್ತ ಸವೆಯುವುದು. ನಮ್ಮ ಕೆ.ಎಸ್. ನರಸಿಂಹಸ್ವಾಮಿಯವರ ಕವನ 'ಇಕ್ಕಳ' ಗೊಣಗುಭಟ್ಟರ ಮನಸ್ಥಿತಿಯನ್ನು ಚೆನ್ನಾಗಿ ತಿಳಿಸುತ್ತದೆ.

ಚಳಿಗಾಲ ಬಂದಾಗ 'ಎಷ್ಟು ಚಳಿ' ಎಂದರು
ಬಂತಲ್ಲ ಬೇಸಿಗೆ 'ಕೆಟ್ಟ ಬಿಸಿಲು' ಎಂದರು
ಮಳೆ ಬಿತ್ತೊ, 'ಬಿಡದಲ್ಲ ಶನಿ' ಎಂಬ ಟೀಕೆ
ಇವರು ಮೆಚ್ಚುವ ವಸ್ತು ಇಲ್ಲಿಲ್ಲ ಜೋಕೆ !
- ಚಿಗುರ ಚೆನ್ನದ ನಡುವೆ ಹೂವ ಬಯಸುವರು
ಹೂಗಳ ಕಾಲದಲ್ಲಿ ಹಣ್ಣ ಹೊಗಳುವರು
'ಹಣ್ಣಿನ ಗಾತ್ರ ಪೀಚು' ಎಂದಿವರ ಟೀಕೆ
ಇವರು ಮೆಚ್ಚುವ ವಸ್ತು ಇಲ್ಲಿಲ್ಲ ಜೋಕೆ.

ಈ ಬದುಕು ಸತ್ಯ. ಅದರ ವಿವರಣೆಯನ್ನು ನೀಡುವ ಜವಾಬ್ದಾರಿ ನಮ್ಮದಲ್ಲ. ನಮ್ಮ ಜವಾಬ್ದಾರಿ ಏನಿದ್ದರೂ ಅದು ಈ ಬದುಕನ್ನು ಮತ್ತಷ್ಟು ಶ್ರೀಮಂತಗೊಳಿಸುವುದು. ಯುಕ್ತಿಯಿಂದ, ಎಚ್ಚರಿಕೆಯಿಂದ, ಪ್ರೀತಿಯಿಂದ ನಮ್ಮ ಪುರುಷಾರ್ಥಗಳ ಸಾಧನೆಯನ್ನು ಮಾಡಿಕೊಳ್ಳುವುದು. ಹೀಗೆ ಸಂಭ್ರಮದ ಬದುಕಿಗೆ ಮೂಲಸಾಮಗ್ರಿ ಧನಾತ್ಮಕ ಚಿಂತನೆ. ಪ್ರಪಂಚದಲ್ಲಿ ಒಳ್ಳೆಯದು, ಕೆಟ್ಟದ್ದು ಎರಡೂ ಇವೆ. ಯಾವುದನ್ನು ಆರಿಸಿಕೊಳ್ಳಬೇಕೆಂಬುದು ನಮಗೆ ಬಿಟ್ಟದ್ದು. ದಾಸರು ಹೇಳಿದರು, 'ನೀರ ಮೇಲಣ ಗುಳ್ಳೆ ನಿಜವಲ್ಲೊ ಹರಿಯೆ', 'ಯಾಕೆನ್ನ ಈ ರಾಜ್ಯ ಕೆಳೆತಂದೆ ಹರಿಯೆ, ಸಾಕಲಾರದೆ ಎನ್ನ ಯಾಕೆ ಪುಟ್ಟಿಸಿದೆ', 'ಅಲ್ಲಿದೆ ನಮ್ಮನೆ, ಇಲ್ಲಿರುವುದು ಸುಮ್ಮನೆ'. ಇವೆಲ್ಲ ನಮ್ಮ ಬದುಕು ಅಶಾಶ್ವತ, ಇದನ್ನು ನಂಬಿ ಕೆಡಬೇಡ ಎಂಬ ಋಣಾತ್ಮಕತೆಯನ್ನು ಹೇಳಿದಂತೆನ್ನಿಸಿದರೂ ಅದೇ ದಾಸರು, 'ತಲ್ಲಣಿಸದಿರು ಕಂಡ್ಯ ತಾಳು ಮನವೆ'. 'ಮಾನವ ಜನ್ಮ ದೊಡ್ಡದು, ಅದ ಹಾನಿ ಮಾಡಲು ಬೇಡಿ ಹುಚ್ಚಪ್ಪಗಳಿರಾ' 'ಈಸಬೇಕು, ಇದ್ದು ಜೈಸಬೇಕು' ಎಂದೂ ಧನಾತ್ಮಕತೆಯನ್ನು ಬೋಧಿಸಿದರು.

ನಾವಿರುವಲ್ಲಿ ಕಸದ ಗುಂಡಿಯೂ ಇದೆ, ಗುಲಾಬಿ ತೋಟವೂ ಇದೆ. ಯಾಕೆ ಕಸದ ಗುಂಡಿಯ ಪಕ್ಕದಲ್ಲಿ ನಿಂತು ಕೊಳಕು ವಾಸನೆ ಎಂದು ಗೊಣಗಬೇಕು? ಎದ್ದು ಗುಲಾಬಿ ತೋಟಕ್ಕೆ ಹೋಗಿ ಹೂಗುಚ್ಛ ಮಾಡಿಕೊಂಡು ಸಂಭ್ರಮ ಪಡೋಣ.

ದಿನ ಭವಿಷ್ಯ

ಗುರುವಾರ 18 ಮಾರ್ಚ್ 2021

ಶಾರ್ವರಿ ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ಫಾಲ್ಗುಣ ಮಾಸ ಶುಕ್ಲ ಪಕ್ಷ ಮಳೆ ನಕ್ಷತ್ರ ಉತ್ತರಭಾದ್ರ ಪಂಚಮಿ ಗಂ. 41-23 (ರಾ. 11-05) ಗುರುವಾರ ನಿತ್ಯ ನಕ್ಷತ್ರ ಭರಣಿ ಗಂ. 4-17 (ಬೆ. 8-14) ವೈಧೃತಿ ನಾಮ ಯೋಗ ಗಂ. 3-33 ಬವ ಕರಣ ಗಂ. 8-44 ವಿಷ ಗಂ. 37-32 ಅಮೃತಾಭಾವಃ : ರಾಹುಕಾಲ ಮ ಗಂ. 1-30 ರಿಂದ 3-00 ಗುಳಿಕ ಕಾಲ ಬೆ ಗಂ 9-00 ರಿಂದ 10-30 ಯಮಗಂಡ ಕಾಲ ಬೆ ಗಂ 6-00 ರಿಂದ 7-30 ಸೂರ್ಯೋದಯ: 6-29 ಸೂರ್ಯಾಸ್ತ: 6-27 ಅದೃಷ್ಟ ಸಂಖ್ಯೆ 1, 9

ಮೇಷ: ಉದ್ಯೋಗಸ್ಥರಿಗೆ ಮೇಲಧಿಕಾರಿಗಳ ಪ್ರಶಂಸೆ. ವಿದ್ಯಾಭ್ಯಾಸದ ಬಗ್ಗೆ ಮಕ್ಕಳಿಗೆ ಹೆಚ್ಚಿನ ಪ್ರೋತ್ಸಾಹ ನೀಡಿ. ವಾಹನ ಚಾಲನೆಯಲ್ಲಿ ಜಾಗರೂಕರಾಗಿರುವುದು ಕ್ಷೇಮ. ಪತ್ರ ವ್ಯವಹಾರಗಳಲ್ಲಿ ಮೋಸ ಹೋಗುವ ಸಾಧ್ಯತೆ.

ವೃಷಭ: ಹಿತಶತ್ರುಗಳಿಂದ ಉದ್ಯೋಗ ಕ್ಷೇತ್ರದಲ್ಲಿ ಹೆಚ್ಚಿನ ತೊಂದರೆ ಸಾಧ್ಯತೆ. ತಾಯಿಯ ಆಶೀರ್ವಾದದಿಂದ ಜೀವನದಲ್ಲಿ ಅಭಿವೃದ್ಧಿ. ಧಾರ್ಮಿಕ ಕಾರ್ಯಕ್ರಮಗಳಲ್ಲಿ ಸಕ್ರಿಯ ಪಾತ್ರ ವಹಿಸಲಿದ್ದೀರಿ.

ಮಿಥುನ: ಮಹಿಳೆಯರು ಸಾಮಾಜಿಕ ಕ್ಷೇತ್ರದಲ್ಲಿ ದುಡಿಯುವ ಅವಕಾಶ ಹೊಂದಲಿದ್ದೀರಿ. ಹಣಕಾಸು ವ್ಯವಹಾರದಲ್ಲಿ ಎಚ್ಚರಿಕೆ. ಆರ್ಥಿಕ ಸ್ಥಿತಿ ಉತ್ತಮಗೊಳ್ಳಲಿದೆ. ಸ್ನೇಹಿತರೆನಿಸಿಕೊಂಡವರಿಂದಲೇ ತೊಂದರೆ ಎದುರಾದೀತು.

ಕರ್ಕಾಟಕ: ಉನ್ನತ ಹುದ್ದೆಯಲ್ಲಿರುವವರಿಂದ ಅಭಿಮಾನದ ಮಾತುಗಳನ್ನು ಕೇಳಲಿದ್ದೀರಿ. ಮಹಿಳೆಯರ ಇಷ್ಟಾರ್ಥಗಳು ಸಿದ್ಧಿಗೊಂಡು ಮನೋಲ್ಲಾಸ. ನ್ಯಾಯಾಲಯದ ಕಟ್ಟಲೆಗಳು ವಿಳಂಬವಾಗುವ ಸಾಧ್ಯತೆ.

ಸಿಂಹ: ಸಾಮಾಜಿಕ ಗೌರವಗಳು ಪ್ರಾಪ್ತವಾಗುವ ಲಕ್ಷಣ. ಮಿತ್ರರಿಂದ ಸಹಕಾರ ದೊರಕಲಿದೆ. ಅಮೂಲ್ಯ ವಸ್ತುಗಳ ಸಂಗ್ರಹ ಮಾಡಲಿದ್ದೀರಿ. ರಾಜಕೀಯ ವ್ಯಕ್ತಿಗಳಿಗೆ ಸ್ಥಾನಮಾನಗಳ ವಿಚಾರದಲ್ಲಿ ಯಶಸ್ಸು ಸಾಧ್ಯತೆ.

ಕನ್ಯಾ: ನೆರೆಹೊರೆಯವರೊಂದಿಗೆ ವಿನಾಕಾರಣ ವೈಮನಸ್ಸು ಉಂಟಾಗಲಿದೆ. ಸಂಯಮದ ಮಾತುಗಳಿಂದ ಗೌರವ ಪ್ರಾಪ್ತವಾಗಲಿದೆ. ಮಕ್ಕಳನ್ನು ದಿನದ ಮಟ್ಟಿಗೆ ಅತ್ಯಂತ ಜತನದಿಂದ ನೋಡಿಕೊಳ್ಳಿ.

ತುಲಾ: ಆಸ್ತಿ ವಿಷಯಕ್ಕೆ ಸಂಬಂಧಿಸಿದಂತೆ ಮನಸ್ತಾಪಗಳು ಎದುರಾಗುವ ಸಾಧ್ಯತೆ. ಮಹಿಳೆಯರು ಧಾರ್ಮಿಕ ಸಮಾರಂಭಗಳಲ್ಲಿ ಪಾಲ್ಗೊಳ್ಳುವ ಸಾಧ್ಯತೆ. ಹಣಕಾಸಿನ ವಿಷಯದಲ್ಲಿ ಬೇರೆಯವರಿಗೆ ಜಾಮೀನಾಗುವುದು ಒಳಿತಲ್ಲ.

ವೃಶ್ಚಿಕ: ಮನೆ ಅಥವಾ ಆಸ್ತಿಯಲ್ಲಿ ವೃದ್ಧಿಯಾಗಲಿದೆ. ಆರ್ಥಿಕ ತೊಂದರೆಯಲ್ಲಿರುವವರಿಗೆ ಜೀವನೋಪಾಯಕ್ಕೆ ಹೊಸ ಮಾರ್ಗವೊಂದು ಗೋಚರವಾಗಲಿದೆ. ರಫ್ತು ವ್ಯವಹಾರದಲ್ಲಿ ತೊಡಗಿರುವವರಿಗೆ ಉತ್ತಮ ವ್ಯವಹಾರ.

ಧನು: ಉದ್ಯೋಗ ವ್ಯವಹಾರಗಳು ಉತ್ತಮಗೊಂಡ ಆರ್ಥಿಕ ಬಲವರ್ಧನೆ. ತಾಂತ್ರಿಕ ಯಂತ್ರೋಪಕರಣಗಳನ್ನು ಖರೀದಿಸುವ ಸಾಧ್ಯತೆ. ಅಧಿಕಾರಿಗಳಿಗೆ ಹೆಚ್ಚಿನ ಅಧಿಕಾರ ವಾ ಬಡ್ತಿ ದೊರಕುವ ಸಾಧ್ಯತೆ ಕಂಡುಬರುವುದು.

ಮಕರ: ಕೆಲಸಗಾರರ ಕೊರತೆಯಿಂದಾಗಿ ಕೆಲಸ–ಕಾರ್ಯಗಳಲ್ಲಿ ಅಡಚಣೆ. ಕೃಷಿ ಕ್ಷೇತ್ರದಲ್ಲಿ ಯಂತ್ರೋಪಕರಣಗಳ ಬಳಕೆ ಬಗ್ಗೆ ಪ್ರಯತ್ನ ಸಫಲವಾಗಲಿದೆ. ಸಂಗಾತಿಯೊಂದಿಗೆ ವಿಶೇಷ ಪ್ರಯಾಣವೊಂದನ್ನು ಕೈಗೊಳ್ಳಲಿದ್ದೀರಿ.

ಕುಂಭ: ಆರ್ಥಿಕ ಅಭಿವೃದ್ಧಿಯನ್ನು ಕಾಣಲಿದ್ದೀರಿ. ಅತಿಯಾದ ಕೆಲಸ ಕಾರ್ಯಗಳಿಂದಾಗಿ ನೇತ್ರ ಸಂಬಂಧಿ ತೊಂದರೆ ಕಾಣಿಸಿಕೊಳ್ಳುವ ಸಾಧ್ಯತೆ. ಬಂಧುಗಳ ಸಹಾಯದಿಂದ ಎದುರಾದ ತಾಪತ್ರಯಗಳಿಗೆ ಪರಿಹಾರ.

ಮೀನ: ರಕ್ಷಣಾಕಾರ್ಯದಲ್ಲಿ ತೊಡಗಿರುವವರಿಗೆ ಬಿಡುವಿಲ್ಲದ ಕೆಲಸದಿಂದ ಬಳಲಿಕೆ. ಜವಾಬ್ದಾರಿಯುತ ಕಾರ್ಯನಿರ್ವಹಣೆಯಿಂದಾಗಿ ಪ್ರಶಂಸೆ. ಮನೆಯವರೆಲ್ಲರೂ ಮೆಚ್ಚುವಂತಹ ಕಾರ್ಯವೊಂದನ್ನು ನಿರ್ವಹಿಸಲಿದ್ದೀರಿ.

ನಿಮ್ಮ ಜನ್ಮದಿನ 18-ಮಾರ್ಚ್: ಈ ದಿನ ಅತ್ಯಂತ ಶುಭಕರ. ಪುಕ್ಕಲು ಸ್ವಭಾವವನ್ನು ಬಿಟ್ಟು ಧೈರ್ಯದಿಂದ ಮುನ್ನುಗ್ಗಿದಲ್ಲಿ ನಿಮ್ಮ ಕೆಲಸಗಳು ಸುಗಮವಾಗಲಿವೆ. ಬೇರೆಯವರ ಬೆದರಿಕೆ ತಂತ್ರಗಳನ್ನು ಹತ್ತಿಕ್ಕಲು ಬಂಧುಗಳ ಸಹಾಯ ನಿಮ್ಮ ಪಾಲಿಗೆ ದೊರಕಲಿದೆ. ಬರಬೇಕಾದ ಆಸ್ತಿಯಲ್ಲಿ ಪಾಲು ಪಡೆಯಲಿದ್ದೀರಿ.

ಪದಬಂಧ 4540 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಮಾನವಿಟ್ಟುಕೊಂಡು ಮಾಡಿರುವ ಹೋಲಿಕೆ (4)
3.ಕ್ರಮಕ್ಕೆ ಅನುಸಾರವಾದುದು (4)
5.ಜಲಾಶಯ ಇಲ್ಲಿ ಕಾಣುತ್ತಿದೆ (3)
6.ಅತ್ತಿತ್ತ ನೋಡುವಾಗ ಮೊಟ್ಟೆ ಕಾಣಿಸಿತಲ್ಲಾ?! (2)
7.ಕೆಲಸಕ್ಕೆ ಬಾರದ ಮಾತಿದು (5)
10.ಕೆಡುಕಾಗಲೆಂದು ಬಯಸಿ ಹೇಳುವ ಮಾತು (2)
12.ಒನಪು ತೋರಿದಾಗ ಬಂದ ಸ್ಮರಣೆ (3)
14.ಈತ ಅದೃಷ್ಟವಿಲ್ಲದವನು (4)
15.ವನದಲ್ಲಿ ಕಾಣಿಸಿದ ಬೆಳವಣಿಗೆ (4)

ಮೇಲಿಂದ ಕೆಳಕ್ಕೆ

1.ಜನಿವಾರವನ್ನು ಹೀಗೂ ಹೇಳುವರು (4)
2.ಹಳೆಯದನ್ನು ಪುನಃ ಹೊಸತು ಮಾಡುವಿಕೆ (5)
3.ಹಿರಿಯ ಸಹೋದರನಿವನು (2)
4.ಕೊಬ್ಬಿದ ಆನೆಯಿದು (4)
5.ತಮ್ಮ ಬಾರಿಸಿದ ಚರ್ಮ ವಾದ್ಯ (3)
7.ನೆನಪು ಮಾಡಿಕೊಂಡು ತೋರಿದ ಬಿನ್ನಾಣ (3)
8.ಬೆಳ್ಳಿ ಹಬ್ಬವಿದು (5)
9.ಮನದೊಳಗಿರುವ ಕುಲ (4)
11.ಇದು ಸಂಪೂರ್ಣ ಅರಿವು (4)
13.ತೊಂದರೆಯೂ ಆದ ಕ್ಷೌರ! (2)



4539ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಗೊಟಾಯಿಸು 3.ಬಾಲರವಿ 5.ತಪ್ಪಲೆ 6.ಕೆತ್ತನೆ 8.ಸಂಯುಕ್ತ 9.ಮಚ್ಚಿಗೆ 10.ಕನಕ 12.ಹವೀಜ 14.ಕವಳಿಗೆ 15.ಗರಗಸ

ಮೇಲಿಂದ ಕೆಳಕ್ಕೆ: 1.ಗೊರಕೆ 2.ಸುತ 3.ಬಾಲೆ 4.ವಿಮುಕ್ತ 7.ನೆಲಮಾಳಿಗೆ 8.ಸಂಖ್ಯಾವಾಚಕ 9.ಅಷ್ಟಕ 11.ಕಳಸ 12.ಹಗಿ 13.ಜಗ

ಸುಡೊಕು 4926

	4				1	8	2	
8		9						5
	6					3		7
	8			1			5	
9		3	5	2	8	4		6
	5			3			8	
5		4		8			7	
2	9		1		7	5		4
		6		4			9	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

4925 ಸುಡೊಕು

9	2	5	1	8	3	4	7	6
6	8	4	7	2	5	3	1	9
7	3	1	4	6	9	2	5	8
4	7	9	8	1	6	5	3	2
3	6	2	5	4	7	8	9	1
1	5	8	3	9	2	6	4	7
8	9	7	2	5	4	1	6	3
5	1	6	9	3	8	7	2	4
2	4	3	6	7	1	9	8	5

ಜೋಯಾಲುಕ್ಕಾಸ್ ವಿಶೇಷ ಕೊಡುಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿನ್ನಾಭರಣಗಳ ಮಾರಾಟ ಮಳಿಗೆ ಜೋಯಾಲುಕ್ಕಾಸ್, ಆಭರಣ ತಯಾರಿಕಾ ವೆಚ್ಚದ ಮೇಲೆ ಗ್ರಾಹಕರಿಗೆ ಶೇಕಡ 50ರಷ್ಟು ರಿಯಾಯಿತಿ ಘೋಷಿಸಿದ್ದು, ರಿಯಾಯಿತಿಯು ಭಾನುವಾರದವರೆಗೂ (ಮಾ. 21) ಲಭ್ಯವಿರಲಿದೆ.

‘ಆಭರಣ ತಯಾರಿಕಾ ವೆಚ್ಚವು ನಮ್ಮ ಮಳಿಗೆಗಳಲ್ಲಿ ಅತ್ಯಂತ ಸ್ಪರ್ಧಾತ್ಮಕವಾಗಿದೆ. ಶೇ 50ರಷ್ಟು ರಿಯಾಯಿತಿ ಕೊಡುಗೆಯು ಗ್ರಾಹಕರಿಗೆ ಅತಿ ದೊಡ್ಡ ಉಳಿತಾಯವನ್ನು ಖಾತರಿಪಡಿಸುತ್ತದೆ. ಸಾವಿರಾರು ಗ್ರಾಹಕರು ಈಗಾಗಲೇ ಇದರ ಪ್ರಯೋಜನ ಪಡೆದುಕೊಂಡಿದ್ದಾರೆ’ ಎಂದು ಜೋಯಾಲುಕ್ಕಾಸ್ ಸಮೂಹದ ಅಧ್ಯಕ್ಷ ಜಾಯ್ ಅಲುಕ್ಕಾಸ್ ಹೇಳಿದ್ದಾರೆ. ಜೋಯಾಲುಕ್ಕಾಸ್‌ನ ಎಲ್ಲ ಮಳಿಗೆಗಳಲ್ಲಿ ಈ ಕೊಡುಗೆ ಲಭ್ಯವಿದೆ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	14,910
ಇಂದಿನ ಅಂತ್ಯ	14,721
▼	189
ದಿನದ ಕನಿಷ್ಠ	14,696

ವಿನಿಮಯ ದರ

$ ಡಾಲರ್	72.55
£ ಪೌಂಡ್	100.97
€ ಯುರೊ	86.38
¥ ಯೆನ್ (100ಕ್ಕೆ)	66

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹385
12 ಮೊಟ್ಟೆಗೆ	₹52
ಮೈಸೂರು	
100 ಮೊಟ್ಟೆಗೆ	₹388

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1580 (1580)
ಸೋಯಾ (ರಿಫೈನ್ಡ್)	₹1280 (1280)
ಸೂರ್ಯಕಾಂತಿ (ರಿಫೈನ್ಡ್)	₹1800 (1810)
ಪಾಮೋಲಿನ್	₹1230 (1230)

ಬೆಂಗಳೂರು ಈರುಳ್ಳಿ ಧಾರಣೆ

ಕ್ವಿಂಟಲ್‌ಗೆ

ದೊಡ್ಡ	₹1500-1800
ಮಧ್ಯಮ	₹1000-1500
ಸಣ್ಣ	₹500-1000

ತೆಂಗು ಧಾರಣೆ (ಸಾವಿರಕ್ಕೆ)

1ನೇ ದರ್ಜೆ ₹24000-30000

2ನೇ ದರ್ಜೆ ₹16000-25000

ಫೇಸ್‌ಬುಕ್, ಗೂಗಲ್‌ನಿಂದ ಸುದ್ದಿ ಮಾಧ್ಯಮಗಳೊಂದಿಗೆ ಆದಾಯ ಹಂಚಿಕೆ

ಆಸ್ಟ್ರೇಲಿಯಾ ಮಾದರಿ ಕಾನೂನಿಗೆ ಆಗ್ರಹ

ನವದೆಹಲಿ (ಪಿಟಿಐ): ಸ್ಥಳೀಯ ಸುದ್ದಿ ಮಾಧ್ಯಮ ಸಂಸ್ಥೆಗಳಿಗೆ ತಂತ್ರಜ್ಞಾನ ವಲಯದ ದೈತ್ಯ ಕಂಪನಿಗಳಾದ ಫೇಸ್‌ಬುಕ್ ಮತ್ತು ಗೂಗಲ್ ಹಣ ಪಾವತಿ ಮಾಡಬೇಕು ಎಂಬ ಕಾನೂನು ಭಾರತದಲ್ಲೂ ಜಾರಿಗೆ ಬರಬೇಕು ಎಂದು ಬಿಜೆಪಿ ನಾಯಕ ಸುಶೀಲ್ ಕುಮಾರ್ ಮೋದಿ ಅವರು ರಾಜ್ಯಸಭೆಯಲ್ಲಿ ಬುಧವಾರ ಆಗ್ರಹಿಸಿದರು.

ಈ ಬಗೆಯ ಕಾನೂನನ್ನು ಆಸ್ಟ್ರೇಲಿಯಾ ಈಗಾಗಲೇ ರೂಪಿಸಿದೆ. ‘ಗೂಗಲ್, ಫೇಸ್‌ಬುಕ್ ಮತ್ತು ಯೂಟ್ಯೂಬ್ ತಾವು ಈಗ ಉಚಿತವಾಗಿ ಬಳಸಿಕೊಳ್ಳುತ್ತಿರುವ ಸುದ್ದಿಗಳಿಗೆ ಪ್ರತಿಯಾಗಿ ಪತ್ರಿಕೆಗಳು ಹಾಗೂ ಟಿ.ವಿ. ವಾಹಿನಿಗಳಿಗೆ ಹಣ ಕೊಡುವಂತೆ

ಸುಶೀಲ್

ಸರ್ಕಾರ ಕ್ರಮ ಕೈಗೊಳ್ಳಬೇಕು’ ಎಂದು ಮೋದಿ ಅವರು ಶೂನ್ಯವೇಳೆಯಲ್ಲಿ ಒತ್ತಾಯಿಸಿದರು.

ಸುದ್ದಿ ಮಾಧ್ಯಮ ಸಂಸ್ಥೆಗಳು ಕೊಡುವ ಸುದ್ದಿಗೆ ನ್ಯಾಯಸಮ್ಮತವಾದ ಸಂಭಾವನೆ ಪಾವತಿ ಆಗುವಂತೆ ಮಾಡುವ ವಿಶ್ವದ ಮೊದಲ ಕಾನೂನಿಗೆ ಆಸ್ಟ್ರೇಲಿಯಾದ ಸಂಸತ್ತು ಕಳೆದ ತಿಂಗಳು ಅನುಮೋದನೆ ನೀಡಿದೆ. ಇದನ್ನು ಕೇಂದ್ರ ಸರ್ಕಾರವೂ ಅನುಕರಿಸಬೇಕು ಎಂದು ಮೋದಿ ಅವರು ಹೇಳಿದರು.

‘ಸಾಮಾಜಿಕ ಜಾಲತಾಣಗಳು ಹಾಗೂ ಒಟಿಟಿ ವೇದಿಕೆಗಳನ್ನು ನಿಯಂತ್ರಿಸಲು ನಿಯಮ ರೂಪಿಸಿದ ಮಾದರಿಯಲ್ಲೇ ಕೇಂದ್ರವು ಆಸ್ಟ್ರೇಲಿಯಾ ಮಾದರಿಯ ಕಾನೂನನ್ನೂ ರೂಪಿಸಬೇಕು. ಆಗ ನಾವು ಗೂಗಲ್‌ನಂತಹ ಕಂಪನಿಗಳು ಸಾಂಪ್ರದಾಯಿಕ ಮಾಧ್ಯಮ ಸಂಸ್ಥೆಗಳ ಜೊತೆ ತಮ್ಮ ಆದಾಯ ಹಂಚಿಕೊಳ್ಳುವಂತೆ ಮಾಡಲು ಸಾಧ್ಯ’ ಎಂದರು.

ಇದಕ್ಕೆ ಪ್ರತಿಯಾಗಿ, ರಾಜ್ಯಸಭೆಯ ಸಭಾಪತಿ ಎಂ. ವೆಂಕಯ್ಯ ನಾಯ್ಡು ಅವರು, ‘ಈ ಸಲಹೆಯು ಪರಿಗಣಿಸಲು ಯೋಗ್ಯವಾಗಿದೆ’ ಎಂದು ಹೇಳಿದರು.

ಜಾಹೀರಾತುಗಳು ತಂತ್ರಜ್ಞಾನ ವಲಯದ ಕಂಪನಿಗಳ ವೆಬ್‌ಸೈಟ್‌ಗಳಿಗೆ ಹೋಗುತ್ತಿರುವ ಕಾರಣ ಸಾಂಪ್ರದಾಯಿಕ ಮಾಧ್ಯಮಗಳು ಅತ್ಯಂತ ಕಷ್ಟದ ಪರಿಸ್ಥಿತಿಯನ್ನು ಎದುರಿಸುತ್ತಿವೆ ಎಂದು ಮೋದಿ ಕಳವಳ ವ್ಯಕ್ತಪಡಿಸಿದರು.

ಸಾಂಪ್ರದಾಯಿಕ ಸುದ್ದಿ ಮಾಧ್ಯಮಗಳು ವಿಶ್ವಾಸಾರ್ಹ ಸುದ್ದಿ ನೀಡಲು ಆ್ಯಂಕರ್‌ಗಳನ್ನು, ಪತ್ರಕರ್ತರನ್ನು, ವರದಿಗಾರರನ್ನು ನೇಮಿಸಿಕೊಳ್ಳಲು ದೊಡ್ಡ ಪ್ರಮಾಣದಲ್ಲಿ ಬಂಡವಾಳ ಹೂಡಿಕೆ ಮಾಡಿರುತ್ತವೆ. ಆದರೆ, ಈ ಮಾಧ್ಯಮಗಳ ಮುಖ್ಯ ಆದಾಯ ಮೂಲವಾದ ಜಾಹೀರಾತು ಈಚಿನ ಕೆಲವು ವರ್ಷಗಳಲ್ಲಿ ತಂತ್ರಜ್ಞಾನ ವಲಯದ ದೈತ್ಯರ ಕಡೆ ಹೋಗುತ್ತಿವೆ. ಇದರಿಂದಾಗಿ ಸುದ್ದಿ ಮಾಧ್ಯಮಗಳು ಆರ್ಥಿಕ ಬಿಕ್ಕಟ್ಟು ಎದುರಿಸುತ್ತಿವೆ ಎಂದು ಮೋದಿ ಹೇಳಿದರು.

ಆಸ್ಟ್ರೇಲಿಯಾ ದೇಶವು ಒಂದು ಮೇಲ್ಪಂಕ್ತಿ ಹಾಕಿಕೊಟ್ಟಿದೆ. ಈಗ ಫ್ರಾನ್ಸ್ ಮತ್ತು ಇತರ ಕೆಲವು ಐರೋಪ್ಯ ರಾಷ್ಟ್ರಗಳು ಜಾಹೀರಾತು ಆದಾಯ ಹಂಚಿಕೊಳ್ಳುವ ಕಾನೂನು ರೂಪಿಸುತ್ತಿವೆ ಎಂದು ಮೋದಿ ಅವರು ಸದನಕ್ಕೆ ವಿವರಿಸಿದರು.

ಸ್ಥಳೀಯವಾಗಿ ಸಿದ್ಧಪಡಿಸಿದ ವ್ರ್ಯಾಂಗ್ಲರ್ ಬಿಡುಗಡೆ

ನವದೆಹಲಿ (ಪಿಟಿಐ): ಬಿಡಿಭಾಗಗಳನ್ನು ಸ್ಥಳೀಯವಾಗಿ ಜೋಡಿಸಿ, ಸಿದ್ಧಪಡಿಸಿರುವ ಪ್ರೀಮಿಯಂ ಎಸ್‌ಯುವಿ ‘ವ್ರ್ಯಾಂಗ್ಲರ್’ನ ಆವೃತ್ತಿಯನ್ನು ಜೀಪ್ ಇಂಡಿಯಾ ಕಂಪನಿಯು ಮಾರುಕಟ್ಟೆಗೆ ಬಿಡುಗಡೆ ಮಾಡಿದೆ. ಇದರ ಎಕ್ಸ್‌ ಷೋರೂಂ ಬೆಲೆ ₹ 53.9 ಲಕ್ಷದಿಂದ ಆರಂಭವಾಗುತ್ತದೆ.

ಅನ್‌ಲಿಮಿಟೆಡ್ ಮತ್ತು ರುಬಿಕಾನ್ ಎಂಬ ಎರಡು ವೇರಿಯಂಟ್‌ಗಳಲ್ಲಿ ಇದು ಲಭ್ಯವಿದ್ದು, ಬೆಲೆಯು ಕ್ರಮವಾಗಿ ₹ 53.9 ಲಕ್ಷ ಮತ್ತು ₹ 57.9 ಲಕ್ಷ ಇದೆ ಎಂದು ಕಂಪನಿ ತಿಳಿಸಿದೆ.

ಎರಡೂ ವೇರಿಯಂಟ್‌ಗಳು ಬಿಎಸ್‌–6 ಮಾನದಂಡಕ್ಕೆ ಅನುಗುಣವಾಗಿದ್ದು, 2 ಲೀಟರ್ ಟರ್ಬೊ ಪೆಟ್ರೋಲ್ ಎಂಜಿನ್ ಹೊಂದಿವೆ. 8 ಸ್ಪೀಡ್ ಆಟೊಮೆಟಿಕ್ ಗಿಯರ್ ಬಾಕ್ಸ್ ಹೊಂದಿವೆ.

‘ದಂತಕಥೆಯಂತೆ ಆಗಿರುವ ವ್ರ್ಯಾಂಗ್ಲರ್ ಹೊಂದಲು ಭಾರತದ ಗ್ರಾಹಕರು ಯಾವಾಗಲೂ ಬಯಸುತ್ತಿದ್ದರು. ಭಾರತದಲ್ಲಿಯೇ ಜೋಡಿಸಿರುವ ಎಸ್‌ಯುವಿಯನ್ನು ಇಂದು ಅವರಿಗೆ ನೀಡಲು ಸಂತೋಷವಾಗುತ್ತಿದೆ’ ಎಂದು ಜೀಪ್ ಇಂಡಿಯಾದ ವ್ಯವಸ್ಥಾಪಕ ನಿರ್ದೇಶಕ ಪ್ರತಾಪ್ ದತ್ತಾ ಅವರು ವರ್ಚುವಲ್ ಕಾರ್ಯಕ್ರಮದಲ್ಲಿ ತಿಳಿಸಿದರು.

ಸೌದಿಯಿಂದ ಆಮದು ತಗ್ಗಿಸಲು ಚಿಂತನೆ

ನವದೆಹಲಿ (ರಾಯಿಟರ್ಸ್): ಭಾರತದ ಕಚ್ಚಾ ತೈಲ ಸಂಸ್ಕರಣಾ ಕಂಪನಿಗಳು ಸೌದಿ ಅರೇಬಿಯಾದಿಂದ ಆಮದು ಮಾಡಿಕೊಳ್ಳುವ ಕಚ್ಚಾ ತೈಲದ ಪ್ರಮಾಣವನ್ನು ಮೇ ತಿಂಗಳಿನಲ್ಲಿ ಶೇಕಡ 25ರಷ್ಟು ಕಡಿಮೆ ಮಾಡಲು ಚಿಂತನೆ ನಡೆಸಿವೆ.

ಕಚ್ಚಾ ತೈಲ ಪೂರೈಕೆಯನ್ನು ಹೆಚ್ಚಿಸಬೇಕು ಎಂದು ಭಾರತ ಮಾಡಿಕೊಂಡ ಮನವಿಗೆ ಸೌದಿ ಅರೇಬಿಯಾ ಮನ್ನಣೆ ನೀಡಿಲ್ಲ. ಈಗ ತೈಲ ಸಂಸ್ಕರಣಾ ಕಂಪನಿಗಳು ಹೊಂದಿರುವ ಆಲೋಚನೆಯು, ಮಧ್ಯಪ್ರಾಚ್ಯದಿಂದ ತೈಲ ಆಮದು ಪ್ರಮಾಣ ತಗ್ಗಿಸಬೇಕು ಎಂದು ಸರ್ಕಾರ ಕೈಗೊಂಡಿರುವ ತೀರ್ಮಾನದ ಒಂದು ಭಾಗ ಎಂದು ಮೂಲಗಳು ವಿವರಿಸಿವೆ.



ಇಂಡಿಯನ್ ಆಯಿಲ್ ಕಾರ್ಪೊರೇಷನ್ (ಐಒಸಿ), ಭಾರತ್ ಪೆಟ್ರೋಲಿಯಂ ಕಾರ್ಪೊರೇಷನ್ (ಬಿಪಿಸಿಎಲ್), ಹಿಂದುಸ್ತಾನ್ ಪೆಟ್ರೋಲಿಯಂ ಕಾರ್ಪೊರೇಷನ್ (ಎಚ್‌ಪಿಸಿಎಲ್) ಮತ್ತು ಎಂಆರ್‌ಪಿಎಲ್ ಕಂಪನಿಗಳು ಮೇನಲ್ಲಿ ಒಟ್ಟು ಅಂದಾಜು 1.08 ಕೋಟಿ ಬ್ಯಾರಲ್ ಕಚ್ಚಾ ತೈಲ ತರಿಸಿಕೊಳ್ಳಲು ಸಿದ್ಧತೆ ನಡೆಸಿವೆ.

ಸಾಮಾನ್ಯವಾಗಿ, ದೇಶದ ಸರ್ಕಾರಿ ಸ್ವಾಮ್ಯದ ತೈಲ ಸಂಸ್ಕರಣಾ ಕಂಪನಿಗಳು ಸೌದಿ ಅರೇಬಿಯಾದಿಂದ ಪ್ರತಿ ತಿಂಗಳು ಸರಾಸರಿ 1.47 ಕೋಟಿಯಿಂದ 1.48 ಕೋಟಿ ಬ್ಯಾರಲ್‌ನಷ್ಟು ಕಚ್ಚಾ ತೈಲವನ್ನು ತರಿಸಿಕೊಳ್ಳುತ್ತವೆ.

ಪೆಟ್ರೋಲಿಯಂ ರಫ್ತು ದೇಶಗಳ ಒಕ್ಕೂಟ (ಒಪೆಕ್) ಮತ್ತು ಆ ದೇಶಗಳ ಮಿತ್ರದೇಶಗಳ ಸಂಘಟನೆಯು (ಒಪೆಕ್ +) ತೈಲ ಪೂರೈಕೆಯನ್ನು ಹೆಚ್ಚಿಸಬೇಕು ಎಂದು ಭಾರತ ಮತ್ತೆ ಮತ್ತೆ ಮನವಿ ಮಾಡಿಕೊಂಡಿತ್ತು. ಆದರೆ ಒಪೆಕ್ + ಒಕ್ಕೂಟವು ಏಪ್ರಿಲ್ ತಿಂಗಳಿನಲ್ಲಿಯೂ ತೈಲೋತ್ಪಾದನೆ ಹೆಚ್ಚಿಸದಿರಲು ತೀರ್ಮಾನಿಸಿದೆ.

ಎಫ್‌ಐಸಿಸಿಐ ಮತ್ತು ಐಬಿಎ ಜಂಟಿ ಸಮೀಕ್ಷೆ

ಎನ್‌ಪಿಎ ಹೆಚ್ಚಳ ನಿರೀಕ್ಷೆ

ಮುಂಬೈ (ಪಿಟಿಐ): ಬ್ಯಾಂಕ್‌ಗಳಲ್ಲಿನ ವಸೂಲಾಗದ ಸಾಲದ (ಎನ್‌ಪಿಎ) ಪ್ರಮಾಣವು 2020ರ ದ್ವಿತೀಯಾರ್ಧದಲ್ಲಿ ಸುಧಾರಿಸಿದ್ದರೂ, ಅದು 2021ರ ಮೊದಲ ಆರು ತಿಂಗಳಲ್ಲಿ ಮತ್ತೆ ಹೆಚ್ಚಳ ಆಗುವ ಸಾಧ್ಯತೆ ಇದೆ ಎಂದು ಎಫ್‌ಐಸಿಸಿಐ ಮತ್ತು ಐಬಿಎ ನಡೆಸಿರುವ ಜಂಟಿ ಸಮೀಕ್ಷೆ ಹೇಳಿದೆ.

2020ರ ಜುಲೈ–ಡಿಸೆಂಬರ್ ಅವಧಿಯಲ್ಲಿ ಈ ಸಮೀಕ್ಷೆ ನಡೆದಿದೆ. ಸರ್ಕಾರಿ, ಖಾಸಗಿ ಮತ್ತು ವಿದೇಶಿ ಬ್ಯಾಂಕ್‌ಗಳನ್ನೂ ಒಳಗೊಂಡು ಒಟ್ಟಾರೆ 20 ಬ್ಯಾಂಕ್‌ಗಳ ಅಭಿಪ್ರಾಯ ಸಂಗ್ರಹಿಸಿ ವರದಿ ಸಿದ್ಧಪಡಿಸಲಾಗಿದೆ.

ಅಭಿಪ್ರಾಯ ನೀಡಿರುವ ಬ್ಯಾಂಕ್‌ಗಳ ಪೈಕಿ ಶೇಕಡ 68ರಷ್ಟು ಬ್ಯಾಂಕ್‌ಗಳು ‘2021ರ ಮೊದಲಾರ್ಧದಲ್ಲಿ ಬ್ಯಾಂಕ್‌ಗಳ ಎನ್‌ಪಿಎ ಶೇ 10ಕ್ಕಿಂತ ಅಧಿಕ ಮಟ್ಟದಲ್ಲಿ ಇರಲಿದೆ’ ಎಂದು ಹೇಳಿವೆ. ಎನ್‌ಪಿಎ ಪ್ರಮಾಣ ಶೇ 12ನ್ನೂ ಮೀರಲಿದೆ ಎಂದು ಶೇ 37ರಷ್ಟು ಬ್ಯಾಂಕ್‌ಗಳು ಹೇಳಿವೆ.

ಪ್ರವಾಸ ಮತ್ತು ಆತಿಥ್ಯ, ಎಂಎಸ್‌ಎಂಇ (ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಪ್ರಮಾಣ ಉದ್ದಿಮೆಗಳು), ವಿಮಾನಯಾನ ಮತ್ತು ರೆಸ್ಟೋರೆಂಟ್ ವಲಯಗಳ ಎನ್‌ಪಿಎ ಪ್ರಮಾಣವು ಗರಿಷ್ಠವಾಗಿ ಇರಲಿದೆ ಎಂದು ಬ್ಯಾಂಕ್‌ಗಳು ಅಂದಾಜು ಮಾಡಿವೆ.

ಆರ್‌ಬಿಐ ಜನವರಿಯಲ್ಲಿ ಬಿಡುಗಡೆ ಮಾಡಿರುವ ಹಣಕಾಸು ಸ್ಥಿರತೆ ವರದಿಯ ಪ್ರಕಾರ 2021ರ ಸೆಪ್ಟೆಂಬರ್ ವೇಳೆಗೆ ಸರಾಸರಿ ಎನ್‌ಪಿಎ ಶೇ 13.5ಕ್ಕೆ ಏರಿಕೆಯಾಗುವ ಸಾಧ್ಯತೆ ಇದೆ.

ಎಂಎಸ್‌ಎಂಇ ವಲಯಕ್ಕೆ ಒಂದು ಬಾರಿ ಸಾಲ ಮರುಹೊಂದಾಣಿಕೆಗೆ ಅವಕಾಶ ನೀಡಬೇಕು ಎನ್ನುವ ಬೇಡಿಕೆಯು ತೀವ್ರವಾಗಲಿದೆ. ಮೂಲಸೌಕರ್ಯ, ಔಷಧ ಮತ್ತು ಆಹಾರ ಸಂಸ್ಕರಣಾ ವಲಯಗಳು ದೀರ್ಘಾವಧಿಯ ಸಾಲಕ್ಕಾಗಿ ಹೆಚ್ಚು ಬೇಡಿಕೆ ಇಡುತ್ತಿವೆ ಎಂದು ವರದಿ ಹೇಳಿದೆ.

ಸಂಕ್ಷಿಪ್ತ ಸುದ್ದಿ

ಎರಡು ವರ್ಷಗಳಲ್ಲಿ ಬಿಎಸ್‌ಎನ್‌ಎಲ್ 4ಜಿ ಸೇವೆ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ಭಾರತ್ ಸಂಚಾರ್ ನಿಗಮ್ ಲಿಮಿಟೆಡ್ (ಬಿಎಸ್‌ಎನ್‌ಎಲ್) ಕಂಪನಿಯು 4ಜಿ ಸೇವೆ ಒದಗಿಸುವ ಕಾರ್ಯವು ಇನ್ನು 18ರಿಂದ 24 ತಿಂಗಳುಗಳಲ್ಲಿ ಪೂರ್ಣಗೊಳ್ಳುವ ನಿರೀಕ್ಷೆ ಇದೆ ಎಂದು ಕೇಂದ್ರವು ಸಂಸತ್ತಿಗೆ ತಿಳಿಸಿದೆ.

ಬಿಎಸ್‌ಎನ್‌ಎಲ್ ಕಂಪನಿಯನ್ನು ಖಾಸಗಿಯವರಿಗೆ ಮಾರಾಟ ಮಾಡುವ ಯಾವ ಆಲೋಚನೆಯೂ ಕೇಂದ್ರ ಸರ್ಕಾರಕ್ಕೆ ಇಲ್ಲ ಎಂದು ದೂರಸಂಪರ್ಕ ಖಾತೆ ರಾಜ್ಯ ಸಚಿವ ಸಂಜಯ್ ಧೋತ್ರೆ ಅವರು ಲೋಕಸಭೆಯಲ್ಲಿ ಲಿಖಿತ ಉತ್ತರದಲ್ಲಿ ಹೇಳಿದ್ದಾರೆ.

ದೇಶದಲ್ಲಿ 2ಜಿ ಮೊಬೈಲ್ ಸಂಪರ್ಕ ವ್ಯವಸ್ಥೆಯನ್ನು ಕೊನೆಗೊಳಿಸುವ ಇರಾದೆ ಇದೆಯೇ ಎಂಬ ಪ್ರಶ್ನೆಗೆ ಧೋತ್ರೆ ಅವರು, ‘ಹಾಗೇನೂ ಇಲ್ಲ’ ಎಂದು ಉತ್ತರಿಸಿದ್ದಾರೆ. ಯಾವ ತಂತ್ರಜ್ಞಾನವನ್ನು ಬಳಸಿ ಸೇವೆಗಳನ್ನು ನೀಡಬೇಕು ಎಂಬುದು ದೂರಸಂಪರ್ಕ ವಲಯದ ಕಂಪನಿಗಳ ಆಯ್ಕೆಗೆ ಬಿಟ್ಟ ವಿಚಾರ ಎಂದು ತಿಳಿಸಿದ್ದಾರೆ.

ಸಲಿಂಗಿಗಳ ವಿವಾಹ ನಿಷೇಧ ಅಸಾಂವಿಧಾನಿಕ

ಟೋಕಿಯೊ (ಎಪಿ): ಸಲಿಂಗಿಗಳ ವಿವಾಹವನ್ನು ನಿಷೇಧಿಸಿರುವ ಸರ್ಕಾರದ ಕ್ರಮ ಅಸಾಂವಿಧಾನಿಕ ಎಂದು ಜಪಾನ್‌ನ ಸಪ್ಪೋರೊ ಜಿಲ್ಲಾ ಕೋರ್ಟ್ ಬುಧವಾರ ತೀರ್ಪು ನೀಡಿದೆ.

ಸಲಿಂಗಿಗಳ ವಿವಾಹಕ್ಕೆ ಕಾನೂನು ಮಾನ್ಯತೆ ನೀಡದ ಏಳು ದೇಶಗಳ ಗುಂಪಿನ ಸದಸ್ಯ ರಾಷ್ಟ್ರವಾಗಿರುವ ಜಪಾನ್‌ನಲ್ಲಿ ಇದೇ ಮೊದಲ ಬಾರಿಗೆ ಸಲಿಂಗಿಗಳ ಹಕ್ಕುಗಳನ್ನು ಎತ್ತಿ ಹಿಡಿದಂತಾಗಿದೆ.

ಸರ್ಕಾರ ತಮಗೆ ಪರಿಹಾರ ನೀಡಬೇಕು ಎಂಬ ಅರ್ಜಿದಾರರ ಕೋರಿಕೆಯನ್ನು ಕೋರ್ಟ್ ವಜಾಗೊಳಿಸಿದೆ. ‘ವಿವಾಹವಾಗುವುದರಿಂದ ಲಭಿಸುವ ಕಾನೂನುಬದ್ಧ ಪ್ರಯೋಜನಗಳು ಭಿನ್ನಲಿಂಗಿಗಳಂತೆ ಸಲಿಂಗಿ ದಂಪತಿಗೂ ಸಿಗಬೇಕು’ ಎಂದು ಕೋರ್ಟ್‌ ಅಭಿಪ್ರಾಯಪಟ್ಟಿದೆ.

ತಮ್ಮ ವಿವಾಹಕ್ಕೆ ಮಾನ್ಯತೆ ನೀಡಬೇಕು ಎಂದು ಕೋರಿ ಸಾಕಷ್ಟು ಸಂಖ್ಯೆಯ ಸಲಿಂಗಿ ಜೋಡಿಗಳು ಅರ್ಜಿ ಸಲ್ಲಿಸಿದ್ದು, ಈ ತೀರ್ಪಿನಿಂದ ಅರ್ಜಿದಾರರಿಗೆ ಅನುಕೂಲವಾಗಲಿದೆ ಎಂದು ಹೇಳಲಾಗುತ್ತಿದೆ.

ಅಟ್ಲಾಂಟಾ: ಗುಂಡಿನ ದಾಳಿ: ಎಂಟು ಮಂದಿ ಸಾವು

ಅಟ್ಲಾಂಟಾ, ಅಮೆರಿಕ: ಇಲ್ಲಿನ ಎರಡು ಮಸಾಜ್ ಪಾರ್ಲರ್‌ಗಳು ಮತ್ತು ಉಪನಗರಗಳಲ್ಲಿ ಮಂಗಳವಾರ ಸಂಜೆ ನಡೆದ ಗುಂಡಿನ ದಾಳಿಯಲ್ಲಿ ಎಂಟು ಮಂದಿ ಸಾವನ್ನಪ್ಪಿದ್ದು, ಮೃತಪಟ್ಟಿರುವವರಲ್ಲಿ ಹಲವರು ಏಷ್ಯಾ ಮೂಲದ ಮಹಿಳೆಯರಾಗಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಘಟನೆಗೆ ಸಂಬಂಧಿಸಿದಂತೆ ನೈರುತ್ಯ ಜಾರ್ಜಿಯಾದಲ್ಲಿ 21 ವರ್ಷದ ಶಂಕಿತ ವ್ಯಕ್ತಿಯನ್ನು ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಮಾರಾಟದ ಒತ್ತಡ: ನಾಲ್ಕನೇ ದಿನವೂ ವಹಿವಾಟು ಇಳಿಕೆ

ಮುಂಬೈ (ಪಿಟಿಐ): ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್ ಮತ್ತು ಬ್ಯಾಂಕಿಂಗ್ ಕಂಪನಿಗಳ ಷೇರುಗಳು ಮಾರಾಟದ ಒತ್ತಡಕ್ಕೆ ಒಳಗಾಗಿದ್ದರಿಂದ ಬುಧವಾರ ಷೇರುಪೇಟೆ ಸೂಚ್ಯಂಕಗಳು ಇಳಿಕೆಯ ಹಾದಿ ಹಿಡಿದವು. ಇದರಿಂದಾಗಿ ಸತತ ನಾಲ್ಕನೇ ದಿನವೂ ನಕಾರಾತ್ಮಕ ವಹಿವಾಟು ನಡೆದಂತಾಗಿದೆ.

ಅಮೆರಿಕದ ಕೇಂದ್ರೀಯ ಬ್ಯಾಂಕ್ ಫೆಡರಲ್ ರಿಸರ್ವ್‌ನ ಸಭೆ ಹಾಗೂ ಜಾಗತಿಕ ಮಾರುಕಟ್ಟೆಗಳಲ್ಲಿನ ಇಳಿಮುಖ ವಹಿವಾಟಿನಿಂದಾಗಿ ಸೂಚ್ಯಂಕಗಳು ಇಳಿಕೆ ಕಂಡವು ಎಂದು ತಜ್ಞರು ಹೇಳಿದ್ದಾರೆ. ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ 562 ಅಂಶ ಇಳಿಕೆ ಕಂಡು 49,802 ಅಂಶಗಳಿಗೆ ತಲುಪಿತು.

ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 189 ಅಂಶ ಇಳಿಕೆಯಾಗಿ 14,721 ಅಂಶಗಳಲ್ಲಿ ವಹಿವಾಟು ಅಂತ್ಯವಾಗಿದೆ.



ಕೋವಿಡ್ ಪ್ರಕರಣಗಳ ಸಂಖ್ಯೆ ಹೆಚ್ಚಳ, ಅಮೆರಿಕದ ಕೇಂದ್ರ ಬ್ಯಾಂಕ್ ಫೆಡರಲ್ ರಿಸರ್ವ್‌ನ ಸಭೆ ಹಾಗೂ ಕಚ್ಚಾ ತೈಲ ದರ ಏರಿಕೆಯು ದೇಶಿ ಷೇರುಪೇಟೆಗಳ ಮೇಲೆ ಪರಿಣಾಮ ಬೀರಿತು ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವೀಸಸ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ಬಿಎಸ್‌ಇ ಮಿಡ್ ಮತ್ತು ಸ್ಮಾಲ್ ಕ್ಯಾಪ್ ಸೂಚ್ಯಂಕಗಳು ಶೇ 2.28ರವರೆಗೂ ಇಳಿಕೆ ಕಂಡಿವೆ.

₹ 5.55 ಲಕ್ಷ ಕೋಟಿ ನಷ್ಟ

ನಾಲ್ಕು ದಿನಗಳ ವಹಿವಾಟಿನಲ್ಲಿ ಸೆನ್ಸೆಕ್ಸ್ 1,477.89 ಅಂಶಗಳಷ್ಟು ಇಳಿಕೆ ಕಂಡಿದ್ದರಿಂದ ಹೂಡಿಕೆದಾರರ ಸಂಪತ್ತಿನ ಮೌಲ್ಯ ₹ 5.55 ಲಕ್ಷ ಕೋಟಿಗಳಷ್ಟು ಕರಗಿದೆ. ಇದರಿಂದಾಗಿ ಷೇರುಪೇಟೆಯ ಬಂಡವಾಳ ಮೌಲ್ಯ ₹ 203.71 ಲಕ್ಷ ಕೋಟಿಗಳಿಗೆ ಇಳಿಕೆಯಾಗಿದೆ.

ಇ–ಕಾಮರ್ಸ್ ಕಂಪನಿಗಳ ವಿರುದ್ಧ ದೂರು: ಗೋಯಲ್

ನವದೆಹಲಿ (ಪಿಟಿಐ): ಕೆಲವು ಇ-ಕಾಮರ್ಸ್ ಕಂಪನಿಗಳು ವಿದೇಶಿ ನೇರ ಬಂಡವಾಳ ಹೂಡಿಕೆ (ಎಫ್‌ಡಿಐ) ನಿಯಮ ಉಲ್ಲಂಘಿಸಿವೆ ಎಂಬ ದೂರುಗಳು ಬಂದಿದ್ದು, ಜಾರಿ ನಿರ್ದೇಶನಾಲಯದಿಂದ (ಇ.ಡಿ.) ತನಿಖೆ ನಡೆಸಲು ಅಗತ್ಯ ಕ್ರಮ ತೆಗೆದುಕೊಳ್ಳಲಾಗಿದೆ ಎಂದು ಸರ್ಕಾರ ತಿಳಿಸಿದೆ.

ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪೀಯೂಷ್ ಗೋಯಲ್ ಅವರು ಈ ಕುರಿತು ಲೋಕಸಭೆಗೆ ಬುಧವಾರ ಲಿಖಿತ ಉತ್ತರ ನೀಡಿದ್ದಾರೆ.

ಭಾರತದಲ್ಲಿ ದೊಡ್ಡ ಗಾತ್ರದ ಇ-ಕಾಮರ್ಸ್ ಕಂಪನಿಗಳ ವಹಿವಾಟಿಗೆ ನಿಷೇಧ ಹೇರುವ ಕುರಿತು ಅಖಿಲ ಭಾರತ ವಾಣಿಜ್ಯ ಮತ್ತು ಕೈಗಾರಿಕಾ ಮಂಡಳಿಯಿಂದ (ಎಐಸಿಸಿಐ) ಯಾವುದೇ ಮನವಿ ಬಂದಿಲ್ಲ ಎಂದು ಅವರು ಹೇಳಿದ್ದಾರೆ.

2020ರ ಜನವರಿ–ಡಿಸೆಂಬರ್ ಅವಧಿಯಲ್ಲಿ ಭಾರತವು ಚೀನಾ, ಅಮೆರಿಕ, ಯುಎಇ, ಸೌದಿ ಅರೇಬಿಯಾ

ಮತ್ತು ಇರಾಕ್‌ನಿಂದ ಸರಕುಗಳನ್ನು ಆಮದು ಮಾಡಿಕೊಂಡಿದೆ ಎಂದು ವಾಣಿಜ್ಯ ಮತ್ತು ಕೈಗಾರಿಕಾ ರಾಜ್ಯ ಸಚಿವ ಹರ್‌ದೀಪ್ ಸಿಂಗ್ ಪುರಿ ಮಾಹಿತಿ ನೀಡಿದ್ದಾರೆ.

ಚೀನಾದಿಂದ ದೂರಸಂಪರ್ಕ ಸಾಧನಗಳು, ಕಂಪ್ಯೂಟರ್ ಹಾರ್ಡ್‌ವೇರ್ ಮತ್ತು ಬಿಡಿಭಾಗಗಳು, ರಸಗೊಬ್ಬರ, ಎಲೆಕ್ಟ್ರಾನಿಕ್ಸ್ ಬಿಡಿಭಾಗಗಳು ಮತ್ತು ಉಪಕರಣಗಳು, ವಿದ್ಯುತ್ ಯಂತ್ರೋಪಕರಣಗಳನ್ನು ಆಮದು ಮಾಡಿಕೊಳ್ಳಲಾಗಿದೆ ಎಂದು ಅವರು ತಿಳಿಸಿದ್ದಾರೆ.

ಚೀನಾ, ಹಾಂಗ್‌ಕಾಂಗ್ ಅಧಿಕಾರಿಗಳ ಮೇಲೆ ಅಮೆರಿಕ ನಿರ್ಬಂಧ

ಹಾಂಗ್‌ಕಾಂಗ್: ರಾಷ್ಟ್ರೀಯ ಭದ್ರತಾ ಕಾಯ್ದೆ ಮೂಲಕ ಪ್ರಜಾಪ್ರಭುತ್ವಪರ ಹೋರಾಟ ಹತ್ತಿಕ್ಕುವುದನ್ನು ಚೀನಾ ಹಾಗೂ ಹಾಂಗ್‌ಕಾಂಗ್ ಮುಂದುವರಿಸಿರುವ ಕಾರಣ, ಉಭಯ ರಾಷ್ಟ್ರಗಳಿಗೆ ಸೇರಿದ 24 ಅಧಿಕಾರಿಗಳ ಮೇಲೆ ಅಮೆರಿಕ ನಿರ್ಬಂಧ ಹೇರಿದೆ.

‘ಹಾಂಗ್‌ಕಾಂಗ್ ಸ್ವಾಯತ್ತತೆ ಕಾಯ್ದೆ’ ಅಡಿ 24 ಪ್ರಮುಖ ಅಧಿಕಾರಿಗಳ ಮೇಲೆ ನಿರ್ಬಂಧ ಹೇರಿರುವುದನ್ನು ವಾಷಿಂಗ್ಟನ್‌ನಲ್ಲಿ ಮಂಗಳವಾರ ಘೋಷಿಸಲಾಯಿತು.

ಚೀನಾ ಕಮ್ಯುನಿಸ್ಟ್ ಪಾರ್ಟಿಯ ಪಾಲಿಟ್ ಬ್ಯುರೊ ಸದಸ್ಯ ವಾಂಗ್ ಚೆನ್, ಚೀನಾ ಸಂಸತ್‌ನ ಸ್ಥಾಯಿ ಸಮಿತಿಯಲ್ಲಿ ಹಾಂಗ್‌ಕಾಂಗ್‌ನ ಪ್ರತಿನಿಧಿಯಾಗಿರುವ ಟಾಮ್ ಯಿಯು–ಚುಂಗ್ ನಿರ್ಬಂಧಕ್ಕೆ ಒಳಗಾಗಿರುವ ಪ್ರಮುಖರು.

ಹಾಂಗ್‌ಕಾಂಗ್‌ನಲ್ಲಿ ಜಾರಿಗೊಳಿಸಿರುವ ವಿವಾದಾತ್ಮಕ ರಾಷ್ಟ್ರೀಯ ಭದ್ರತಾ ಕಾಯ್ದೆಯ ಕರಡನ್ನು ಟಾಮ್ ಯಿಯು–ಚುಂಗ್ ಸಿದ್ಧಪಡಿಸಿದ್ದಾರೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	900-950
ನಡುಗೋಲು	1000-1050
ರಾಶಿ	1200-1300
ರಾಶಿ ಉತ್ತಮ	1300-1400
ಜರಡಿ	1500-1550
ಹೆರಕಿದ್ದು	1900-2000
ಹಸಿರು ಸಾಧಾರಣ	1300-1400
ಹಸಿರು ಉತ್ತಮ	1700-1750
ಹಸಿರು ಅತಿ ಉತ್ತಮ	1900-2000
ಕಾಳು ಮೆಣಸು	355
ಅಡಿಕೆ	
ಬಂಟ್ವಾಳ	
ಕೋಕ	10000-22500
ಹೊಸತು	23500-40500
ಹಳತು	42500-50500
ಪುತ್ತೂರು	
ಕೋಕ	9500-24000
ಹೊಸತು	28500-40500
ಸಿದ್ದಾಪುರ	
ಬಿಳಿಗೋಟು	21399-28669
ಚಾಲಿ	34439-36769
ಕೋಕ	18799-29869
ಕೆಂಪುಗೋಟು	26099-30099
ರಾಶಿ	38509-41799
ತಟ್ಟಿಬೆಟ್ಟೆ	29079-37039
ಶಿವಮೊಗ್ಗ ಎಪಿಎಂಸಿ	
ಬೆಟ್ಟೆ	40400-43399
ಗೊರಬಲು	16060-32569
ರಾಶಿ	37669-42555
ಸರಕು	50009-77000
ರಾಮನಗರ ರೇಷ್ಮೆ	
ಮಿಶ್ರತಳಿ (ಸಿ.ಬಿ)	271-397
ದ್ವಿತಳಿ (ಬಿ.ವಿ)	296-447

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	10100	10050	9950	134.5 ಸೆಂಟ್ಸ್
ಎಸಿ	3975	3900	3925	
ಆರ್‌ಪಿ	5200	5200	5225	
ಆರ್‌ಸಿ	3000	3050	2950	1406 ಡಾಲರ್ಸ್

ಮುಂಬೈ ಧಾರಣೆ

ಶೇಂಗಾ

17-3-2021

ಜಾವಾ 70/80(ಹೊಸ)	10950-11000
ಜಾವಾ 80/90(ಹೊಸ)	10450-10500
ದಪ್ಪ ಮಧ್ಯಪ್ರದೇಶ(ಹೊಸ)	9800-9900
ದಪ್ಪ ಗುಜರಾತ್(ಹೊಸ)	9000-9100

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1590 (1590)
ಒಂದು ವಾರದ ಡೆಲಿವರಿ	1585 (1585)
ಸೋಯಾ ಕಚ್ಚಾ	1257 (1250)
ಪಾಮ್ ವಾರದ ಡೆಲಿವರಿ	1228 (1228)
ಸೂರ್ಯಕಾಂತಿ ಎಣ್ಣೆ ಕಚ್ಚಾ	1750 (1770)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10 ಗ್ರಾಂ 44,650 (44,650)

ಬೆಳ್ಳಿ ಕೆ.ಜಿ 66,700 (66,700)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಪ್ರಜಾವಾಣಿ
FOR ADVERTISEMENT QUERIES
• OBITUARY
• REMEMBRANCES
Contact:
Santhosh : 9880856233
Vishal : 9845114560
Ravi : 9606912256
Office: 080-45557160 /163 /164

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Drivers

ಬೈಕ್ ರೈಡರ್ಸ್ ಬೇಕಾಗಿದ್ದಾರೆ! ನೀವು ಬೈಕ್ ಹೊಂದಿದ್ದೀರಾ ಪಾರ್ಟ್ ಟೈಮ್ ಅಥವಾ ಫುಲ್ ಟೈಮ್ ಕೆಲಸ ಹುಡುಕುತ್ತಿದ್ದೀರಾ ಬೇಕಾದ ದಾಖಲೆಗಳು ಬೈಕ್.ಆರ್ ಸಿ. ಡಿಎಲ್.ಹಾಗೂ ಆಂಡ್ರಾಯ್ಡ್ ಮೊಬೈಲ್ ಹೊಂದಿರಬೇಕು. ಕೂಡಲೇ ಕರೆ ಮಾಡಿ 080-47096073

General

TVS ಬ್ರಿಟಾನಿಯಾ ವಿಡಿಯೋಕಾನ್ ಗಳಿಗೆ 7th,SSLC,PUC, ಡಿಗ್ರಿಯವರು ITI ನವರುಗಳು ಕರ್ನಾಟಕದ ಎಲ್ಲಾ ಜಿಲ್ಲೆಗಳಿಗೆ ನೇರನೇಮಕಾತಿಯಿರುತ್ತದೆ. ESI, PF ನೊಂದಿಗೆ 16,600-60,000/- ವಸತಿಯೂಟವಿರುತ್ತದೆ. ಸಂಪರ್ಕಿಸಿ:7760014526, 9739544856

WORK FROM HOME ಮನೆಯಿಂದಲೆ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000ವರೆಗೆ ಸಂಪಾದಿಸಿ. ಕನ್ನಡ/ ಇಂಗ್ಲೀಷ್ ಓದಲು, ಬರೆಯಲು ಬರುವ ಎಲ್ಲರಿಗೂ ಅವಕಾಶ. ಕೊರಿಯರ್ ಸೌಲಭ್ಯವಿದೆ. 8884875553/ 8884875554

ಮಹಿಳೆಯರಿಗೆ ಮಹಿಳೆಯರಿಗೆ ಮಹಿಳೆಯರಿಗೆ ಮನೆಯಿಂದಲೇ ಕಾಲ್ ಸೆಂಟರ್ ಮಾಡುವಂತಹ ಕೆಲಸ. ಹೆಚ್ಚಿನ ಮಾಹಿತಿಗೆ ನಿಮ್ಮ ಹೆಸರು ಊರಿನ ಹೆಸರು ವಾಟ್ಸಾಪ್ ಮಾಡಿ ವಾಟ್ಸಾಪ್ ಮಾಡಿ ವಾಟ್ಸಾಪ್ ಮಾಡಿ. 9916766429

ತಕ್ಷಣ ಬೇಕಾಗಿದ್ದಾರೆ ಹೊಸದಾದ ಕಂಪನಿಗಳಿಗೆ ಆಫೀಸ್‌ಗಳಿಗೆ MNC ಕಂಪನಿಗಳಿಗೆ ಹಾಗೂ ಎಲ್ಲಾಜಿಲ್ಲೆಗಳಿಗೆ ಯುವಕಯುವತಿಯರು ಕೆಲಸಕ್ಕೆ ಬೇಕಾಗಿದ್ದಾರೆ 7th,SSLC, PUC, ITI Degree Pass/Fail ಆದವರಿಗೆ, ಉಚಿತ ವಸತಿಯೂಟದೊಂದಿಗೆ ESI/PF ನೊಂದಿಗೆ ಸಂಬಳ 16,800/- ರಿಂದ 45000/- ದವರೆಗೆ. 9538606888, 9886275111

ಬೇಕಾಗಿದ್ದಾರೆ ನೇರನೇಮಕಾತಿ TOYOTA, ಟಾಟಾ ಮೋಟಾರ್ಸ್, TVS, ಬ್ರಿಟಾನಿಯಾಗಳಿಗೆ SSLC, PUC, ITI ನವರು.ಡಿಗ್ರಿಯವರುಗಳು 16,800-56,000/- ವಸತಿಯೂಟವಿದೆ. 7795049766, 7795048129

Part-Time Jobs

ಮನೆಯಿಂದಲೇ ಕುಳಿತು ಆಫ್‌ಲೈನ್ ಡೇಟಾ ಎಂಟ್ರಿ, ಕನ್ನಡ,ಇಂಗ್ಲೀಷ್ ಬುಕ್ ರೈಟಿಂಗ್ ಫಾರಂ ಫಿಲ್ಲಿಂಗ್ ಕೆಲಸ ಗಳಿಸಿ 15,000-18,000/-. ಕೊರಿಯರ್,ಬುಕ್,ಪೆನ್ ಚಾರ್ಜಸ್ ನಾವೇ ಕೊಡುತ್ತೇವೆ. 9611625051, 9741133555

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000-15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

Situation Required

Candidates looking for job can contact us on phone/whatsapp/SMS/Whats app/ e-mail and share your name and actual location, you can also visit our office to only drop your CV in the candidate CV drop Box-no meeting with staff is allowed.
WE ARE HIRING
Executives in leading Private Bank
300+ Vacancies in Bangalore-Immediate joining
* Financial Services experienced prefd.
* Fresh Graduates can also apply.
* Attractive Salary + Incentive.
Walk-in or call for interview 18th to 20th March, 2021, between 10 am to 5 pm
iprocess
i-Process Services (India) Pvt. Ltd.
Ist Floor, CM Complex, 2nd Cross, Cambridge Layout, Sai baba Temple Road, Ulsoor, Bangalore 560008
Email: careers@iprocess.in
Apply immediately
99581 50432
98717 20078

Wanted

ತಕ್ಷಣ ಬೇಕಾಗಿದ್ದಾರೆ: TVS, TOYOTA, VOLVO ಮುಂತಾದ ಕಂಪನಿ ಹಾಗೂ ಆಫೀಸ್ ವರ್ಕ್ ಗಳಿಗೆ ಯುವಕ ಯುವತಿಯರು. ವಸತಿಯೂಟದೊಂದಿಗೆ 15800-55000/- 7411720917, 7411720918

ಬೆಂಗಳೂರಿನ ನಾಗಸಂದ್ರ ಮೆಟ್ರೋ ಸ್ಟೇಷನ್ ಹತ್ತಿರವಿರುವ ತೋಟ ಮತ್ತು ಮನೆ ಕೆಲಸ ಮಾಡಲು ಗಂಡ-ಹೆಂಡತಿ ಬೇಕಾಗಿದ್ದಾರೆ. ವಸತಿ ಉಚಿತ. ಸಂಪರ್ಕಿಸಿ: 9845026475, 9845510722.

ವ್ಯಾಪಾರ

Business to Business

Finance

ಸುಲಭದಲ್ಲಿ ಹಾಗೂ ತಕ್ಷಣವೇ ಸಾಲ ಪಡೆಯಿರಿ!!! 5 ಲಕ್ಷದಿಂದ 5 ಕೋಟಿಯವರೆಗೆ ಕೃಷಿ, ಸ್ಥಿರಾಸ್ತಿ, ವ್ಯಾಪಾರ, ವೈಯಕ್ತಿಕ, ಶಿಕ್ಷಣ, ಸ್ವಾಧೀನ ಮತ್ತು ಪ್ರಾಜೆಕ್ಟ್ ಫೈನಾನ್ಸ್ ಗಳಿಗೆ, ಕೃಷಿಕರು /ಎನ್.ಪಿ.ಎ/ಸಿಬಿಲ್ ಪ್ರಕರಣಗಳಿಗೂ ಸ್ವಾಗತ. 9625768775.

ಭವಿಷ್ಯ

Astrology

★||ಕೊಳ್ಳೇಗಾಲದ ಪ್ರಖ್ಯಾತ ಮೋಡಿಮಾಂತ್ರಿಕರು||★ ನಿಮ್ಮ ಸಮಸ್ಯೆ ಯಾವುದೇಯಿದ್ದರೂ ಶ್ರೀ ಭದ್ರಕಾಳಿದೇವಿಯ ಬಲಿಷ್ಠ ಪೂಜೆಯಿಂದ ಗ್ಯಾರಂಟಿ ಪರಿಹಾರ. ವಿಶೇಷ ಸೂಚನೆ: ನಮ್ಮ ಮೋಡಿ ಸಿದ್ಧಾಂತ ತಪ್ಪದು. ಸ್ತ್ರೀ ಮೋಡಿ, ಪುರುಷ ಮೋಡಿಗಾರರು. ಮೋಡಿ ಕೃಷ್ಣಪ್ಪ. 9880877747

★||ಶ್ರೀಚಾಮುಂಡೇಶ್ವರಿದೇವಿ ಆರಾಧಕರು||★ ಕೇರಳದ ಅಘೋರಿ ನಾಗಸಾಧು ಮೋಡಿಮಾಂತ್ರಿಕರು ಮಾಟಮಂತ್ರ, ಸ್ತ್ರೀ-ಪುರುಷ ವಶೀಕರಣ ಇನ್ನಾವುದೇ ಕಠಿಣಸಮಸ್ಯೆಗಳಿದ್ದರೂ ತಕ್ಷಣ ಪರಿಹಾರ.ಶ್ರೀರಾಘವೇಂದ್ರ ಆಚಾರ್ಯರು. 8050061378

★||ಶ್ರೀಪ್ರಸಿದ್ಧ ರಕ್ತಕಾಂಡೇಶ್ವರಿಯ||★ ಮಾಟಮಂತ್ರ, ಪ್ರೀತಿಪ್ರೇಮ, ಸ್ತ್ರೀಪುರುಷ ವಶೀಕರಣ ಹಣಕಾಸಿನ ತೊಂದರೆ ಕೊಳ್ಳೇಗಾಲದ ಮೋಡಿ ಪೂಜಾಶಕ್ತಿಯಿಂದ ಶಾಶ್ವತ ಪರಿಹಾರ. ಪಂಡಿತ್.ಕಾಶೀನಾಥಭಟ್ 8050018724

ಅಂಬಾಭವಾನಿ ಜ್ಯೋತಿಷ್ಯಾಲಯ: ಕೊಳ್ಳೇಗಾಲದ ನಂ.1 ವಶೀಕರಣ ಸ್ಪೆಷಲಿಸ್ಟ್ ದೇವಿಪ್ರಸಾದ್ (ಉಚಿತ ಭವಿಷ್ಯ ಖಚಿತ ಪರಿಹಾರ) ನಿಮ್ಮ ಸಮಸ್ಯೆಗಳೇನೆಯಿರಲಿ 2ದಿನದಲ್ಲಿ ಪರಿಹಾರ.9886755306

ನಂ.1 ವಶೀಕರಣ ಸ್ಪೆಷಲಿಸ್ಟ್: ಪ್ರೀತಿಯಲ್ಲಿ ಮೋಸ, ಇಷ್ಟಪಟ್ಟವರು ನಿಮ್ಮಂತಾಗಲು, ಸ್ತ್ರೀಪುರುಷ ವಶೀಕರಣ, ದಾಂಪತ್ಯ ಕಲಹ ಪರಿಹಾರಕ್ಕೆ ಶ್ರೀಕಾಂತ್ ದಾಸ್. 8217472895

★||ವಶೀಕರಣ ಸ್ಪೆಷಲಿಸ್ಟ್||★ ಇಷ್ಟಪಟ್ಟವರು ನಿಮ್ಮಂತೆ ಆಗಲು ನೋಡುವ ಮೂಲಕ ಮಾತನಾಡುವ ಮೂಲಕ ಹೆಸರಿನ ಮೂಲಕ ಸ್ತ್ರೀವಶೀಕರಣ 27ನಿಮಿಷಗಳಲ್ಲಿ ಪರಿಹಾರ. 9900511008

ವಿಶೇಷ ವ್ಯಕ್ತಿಯಾಗಬೇಕಾ? ಪರಿಹರಿಸುವ ವಿದ್ಯೆಗಳನ್ನು, ವಶೀಕರಣದ ವ್ಯಂಜನವನ್ನು ಮನೆಯಲ್ಲಿದ್ದುಕೊಂಡೇ ಕಲಿತುಕೊಳ್ಳಿ. ಸಮಸ್ಯೆಗಳಿಗೂ, ರೋಗಕ್ಕೂ, ವ್ಯಾಪಾರಕ್ಕೂ, ಪರಿಹಾರಕ್ಕಾಗಿ ಹಣಕಾಸಿನ ಸಹಾಯವಿದೆ. 8884826120

ನಂ.1 ವಶೀಕರಣ ಸ್ಪೆಷಲಿಸ್ಟ್: ಪ್ರೀತಿಯಲ್ಲಿ ನಂಬಿಮೋಸ, ಇಷ್ಟಪಟ್ಟವರು ನಿಮ್ಮಂತಾಗಲು, ಸ್ತ್ರೀಪುರುಷ ವಶೀಕರಣ, ದಾಂಪತ್ಯ ಕಲಹ 2ದಿನಗಳಲ್ಲಿ ಪರಿಹಾರ. 8792564467

ವಾಹನ

Four Wheelers Selling

Others

TATA Yodha ಟೆಸ್ಟ್ ಡ್ರೈವ್ ಮಾಡಿದ ನಂತರವು ಬೇರೆ ಪಿಕ್‌ಅಪ್ ವಾಹನ ಖರೀದಿಸಿದಲ್ಲಿ ನಮ್ಮಿಂದ ₹5,000/-* ಪಡೆಯಿರಿ
TATA YODHA ವಾಹನದ ಮೇಲೆ ಆಕರ್ಷಕ ಕೊಡುಗೆಗಳೊಂದಿಗೆ
YODHA
1700 Kg Payload
8.4 x 5.7 ft
73.6kW ಇಂಜಿನ್
ಕೊಡುಗೆಗಳು ₹25,000/-* ದವರೆಗೆ
ಎಕ್ಸ್‌ಚೇಂಜ್ ₹25,000/-* ದವರೆಗೆ
ಕೇವಲ ₹2,360/– ಪಾವತಿಸಿ 2 ವರ್ಷ/ 75,000 ಕಿ.ಮೀ. ಮೇಂಟೆನೆನ್ಸ್ ಪಡೆಯಿರಿ
ಹೆಚ್ಚಿನ ವಿವರಗಳಿಗಾಗಿ ಕರೆಮಾಡಿ
Bangalore/Mysore 95389 35533
Bangalore -72597 84441 96208 63338
Tumkur/Davanagere/ Chitradurga-7829055525
Mangalore/Shivamogga/ Udupi/Hassan/ Chikkamagalur/Karwar 9880142353
Hubli/Haveri/Gadag/Bellary/ Raichur - 9620955858
Bagalkot/Bijapur/Gulbarga/ Belgaum/Bidar 8095202223
* ಷರತ್ತುಗಳು ಅನ್ವಯಿಸುತ್ತವೆ.

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

DH ಪ್ರಜಾವಾಣಿ Classifieds
EFFECTIVE FROM JUNE 3rd, 2020
DECCAN HERALD & PRAJAVANI CLASSIFIEDS PACKAGE RATES

PUBLICATION	TEXT AD RATE PER INS FOR 15 WORDS	CLASSIFIEDS DISPLAY RATE PER SQCM
DH ALL KARNATAKA+ PV BENGALURU	1020/-	480/-
PV ALL KARNATAKA	900/-	430/-

*GST applicable

SPECIAL SCHEMES ALL CATEGORY

PAY	2	And	GET	1	Free
PAY	3	And	GET	2	Free
PAY	5	And	GET	5	Free

For More Details
Contact: 9880856233 | 9731810277
9901641752 | 9845114560 | 9886213331

ಭಾರತ–ಇಂಗ್ಲೆಂಡ್ ನಾಲ್ಕನೇ ಟಿ20 ಇಂದು; ಟಾಸ್ ಒಲಿದವರಿಗೆ ಜಯದ ಅವಕಾಶ ಹೆಚ್ಚು

ಗೆಲುವಿನ ಒತ್ತಡದಲ್ಲಿ ವಿರಾಟ್ ಬಳಗ

ಅಹಮದಾಬಾದ್ (ಪಿಟಿಐ): ಮೊಟೇರಾದ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಗುರುವಾರ ನಡೆಯಲಿರುವ ಭಾರತ ಮತ್ತು ಇಂಗ್ಲೆಂಡ್ ನಡುವಣ ನಾಲ್ಕನೇ ಟ್ವೆಂಟಿ–20 ಪಂದ್ಯದಲ್ಲಿ ಟಾಸ್ ಜಯಿಸುವವರು ಯಾರು ಎಂಬ ಬಗ್ಗೆಯೇ ಹೆಚ್ಚು ಚರ್ಚೆ ನಡೆಯುತ್ತಿದೆ.

ಅದಕ್ಕೆ ಕಾರಣ ಕಳೆದ ಮೂರು ಪಂದ್ಯಗಳಲ್ಲಿಯೂ ಟಾಸ್ ಜಯಿಸಿದ ತಂಡವೇ ಜಯಭೇರಿ ಬಾರಿಸಿದ್ದು. ಇಲ್ಲಿ ರಾತ್ರಿ ಇಬ್ಬನಿಯಲ್ಲಿ ಕೈಜಾರುವ ಚೆಂಡಿನಲ್ಲಿ ಬೌಲಿಂಗ್ ಮಾಡುವುದು ಸ್ಪಿನ್ನರ್‌ಗಳಿಗೆ ಸವಾಲಾಗುತ್ತಿದೆ. ಜೊತೆಗೆ ಪಿಚ್ ಕೂಡ ಚೇಸಿಂಗ್ ನಲ್ಲಿ ಬ್ಯಾಟಿಂಗ್‌ಗೆ ಹೆಚ್ಚು ಅನುಕೂಲವಾಗುತ್ತಿದೆ. ಆದ್ದರಿಂದಲೇ ಟಾಸ್ ಜಯಿಸಿದವರು ಮೊದಲು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿದ್ದಾರೆ.

ಎರಡು ಬಾರಿ ಟಾಸ್ ಗೆದ್ದ ಏಯಾನ್ ಮಾರ್ಗನ್ ಸರಣಿಯಲ್ಲಿ 2–1ರ ಮುನ್ನಡೆ ಸಾಧಿಸಿದ್ದಾರೆ. ಎರಡನೇ ಪಂದ್ಯದಲ್ಲಿ ಚೇಸಿಂಗ್‌ನಲ್ಲಿ ಮಿಂಚಿದ್ದ ವಿರಾಟ್ ಕೊಹ್ಲಿ ಮತ್ತು ಇಶಾನ್ ಕಿಶನ್ ಆತಿಥೇಯರಿಗೆ ಜಯದ ಕಾಣಿಕೆ ನೀಡಿದ್ದರು. ಈ ಪಂದ್ಯದಲ್ಲಿ ಭಾರತವು ಜಯಿಸಲೇಬೇಕಾದ ಒತ್ತಡದಲ್ಲಿದೆ. ಸೋತರೆ ಸರಣಿಜಯದ ಆಸೆಯೂ ಕಮರುತ್ತದೆ.

ಭಾರತ ತಂಡವು ಸೋತ ಎರಡೂ ಪಂದ್ಯಗಳಲ್ಲಿ ಅಗ್ರಕ್ರಮಾಂಕದ ಬ್ಯಾಟ್ಸ್‌ಮನ್‌ಗಳ ವೈಫಲ್ಯ ಎದ್ದು ಕಂಡಿದೆ. ದೊಡ್ಡ ಮೊತ್ತವನ್ನು ಪೇರಿಸಲು ಸಾಧ್ಯವಾಗಿಲ್ಲ.

ರೋಹಿತ್ ಶರ್ಮಾ ಮತ್ತು ಶಿಖರ್ ಧವನ್

ಮುಖ್ಯಾಂಶಗಳು

- ಸರಣಿಯಲ್ಲಿ ಸತತ ಎರಡು ಅರ್ಧಶತಕ ಗಳಿಸಿರುವ ವಿರಾಟ್ ಕೊಹ್ಲಿ
- ರಾಹುಲ್‌ಗೆ ವಿಶ್ರಾಂತಿ; ಸೂರ್ಯಕುಮಾರ್, ಶಿಖರ್ ಧವನ್‌ಗೆ ಅವಕಾಶ ಸಾಧ್ಯತೆ

ಆರಂಭಿಕ ಬ್ಯಾಟ್ಸ್‌ಮನ್ ಕೆ.ಎಲ್. ರಾಹುಲ್ ಮೂರು ಪಂದ್ಯಗಳ ಪೈಕಿ ಒಂದರಲ್ಲಿ ಮಾತ್ರ ಒಂದು ರನ್ ಮಾಡಿದ್ದಾರೆ. ಉಳಿದೆರಡರಲ್ಲಿ ಖಾತೆ ತೆರೆಯದೇ ಔಟಾಗಿದ್ದಾರೆ. ಅವರಿಗೆ ಇನ್ನೊಂದು ಅವಕಾಶ ಲಭಿಸುವ ಸಾಧ್ಯತೆ ಅತ್ಯಲ್ಪ.

ಮೊದಲ ಪಂದ್ಯದಲ್ಲಿ ವೈಫಲ್ಯ ಅನುಭವಿಸಿದ್ದ ಶಿಖರ್ ಧವನ್ ಬದಲು ಎರಡನೇ ಪಂದ್ಯದಲ್ಲಿ ಆಡಿದ್ದ ಇಶಾನ್ ಕಿಶನ್ ಮಿಂಚಿದ್ದರು. ಮೂರನೇ ಪಂದ್ಯದಲ್ಲಿ ರೋಹಿತ್ ಶರ್ಮಾ ಕಣಕ್ಕಿಳಿದಿದ್ದರು. ಆದರೆ ಅವರು ನಿರೀಕ್ಷಿತ ಮಟ್ಟದಲ್ಲಿ ಆಡಿರಲಿಲ್ಲ. ಮಂಗಳವಾರದ ಪಂದ್ಯದಲ್ಲಿ ವಿರಾಟ್ ಕೊಹ್ಲಿ ಏಕಾಂಗಿ ಹೋರಾಟ ಮಾತ್ರ ತಂಡದ ಗೌರವ ಉಳಿಸಿತ್ತು. ಆದರೆ ಜಯ ದಕ್ಕಿರಲಿಲ್ಲ.

ಶ್ರೇಯಸ್ ಅಯ್ಯರ್, ರಿಷಭ್ ಪಂತ್, ಹಾರ್ದಿಕ್ ಪಾಂಡ್ಯ ರನ್ ಗಳಿಕೆಗೆ ಸ್ವಲ್ಪ ಕಾಣಿಕೆ ನೀಡಿದ್ದಾರೆ. ಅದರಿಂದಾಗಿ ಮಧ್ಯಮಕ್ರಮಾಂಕದಲ್ಲಿ ಭರವಸೆ ಮೂಡಿದೆ. ಆದರೆ ತಂಡಕ್ಕೆ ಟಾಸ್ ಸೋತು ಮತ್ತೆ ಬ್ಯಾಟಿಂಗ್ ಮಾಡುವ ಪ್ರಸಂಗ ಬಂದರೆ, 200 ರನ್‌ಗಳ ಆಸುಪಾಸಿನ ಮೊತ್ತ ಗಳಿಸಿದರೆ ಮಾತ್ರ ಎದುರಾಳಿಗಳಿಗೆ ದಿಟ್ಟ ಸವಾಲು ಒಡ್ಡಬಹುದು. ಅದಕ್ಕಾಗಿ ಉತ್ತಮ ಆರಂಭ ಅವಶ್ಯಕ. ಇಂಗ್ಲೆಂಡ್‌ನ ವೇಗಿ ಜೋಫ್ರಾ ಆರ್ಚರ್, ಮಾರ್ಕ್ ವುಡ್, ಕ್ರಿಸ್ ಜೋರ್ಡಾನ್ ಅವರನ್ನು ಎದುರಿಸಿ ನಿಲ್ಲಬೇಕು.

ಜೋಸ್ ಬಟ್ಲರ್, ಜಾನಿ ಬೆಸ್ಟೋ ಅವರು ಉತ್ತಮ ಲಯದಲ್ಲಿದ್ದಾರೆ. ಆದ್ದರಿಂದ ಪ್ರವಾಸಿ ಬಳಗದ ಆತ್ಮವಿಶ್ವಾಸ ಹೆಚ್ಚಿಸಿದೆ. ಅವರೂ ಸೇರಿದಂತೆ ತಂಡದಲ್ಲಿರುವ ಒಟ್ಟು ಎಂಟು ಬ್ಯಾಟ್ಸ್‌ಮನ್‌ಗಳನ್ನು ಕಟ್ಟಿಹಾಕಲು ಶಿಸ್ತಿನ ಬೌಲಿಂಗ್ ಮಾಡುವುದು ಆತಿಥೇಯರಿಗೆ ಅನಿವಾರ್ಯ. ಕ್ಯಾಚ್‌ಗಳನ್ನು ಕೈಚೆಲ್ಲುವ ಚಟವನ್ನು ಬಿಟ್ಟರೆ ಗೆಲುವಿನ ಹಾದಿ ಸುಗಮವಾಗಬಹುದು.

ತಂಡಗಳು: ಭಾರತ: ವಿರಾಟ್ ಕೊಹ್ಲಿ (ನಾಯಕ), ರೋಹಿತ್ ಶರ್ಮಾ (ಉಪನಾಯಕ), ಕೆ.ಎಲ್. ರಾಹುಲ್, ಶಿಖರ್ ಧವನ್, ಶ್ರೇಯಸ್ ಅಯ್ಯರ್, , ಇಶಾನ್ ಕಿಶನ್, ಸೂರ್ಯಕುಮಾರ್ ಯಾದವ್, ರಿಷಭ್ ಪಂತ್ (ವಿಕೆಟ್‌ಕೀಪರ್), ಹಾರ್ದಿಕ್ ಪಾಂಡ್ಯ, ಯಜುವೇಂದ್ರ ಚಾಹಲ್, ಭುವನೇಶ್ವರ ಕುಮಾರ್, ಅಕ್ಷರ್ ಪಟೇಲ್, ವಾಷಿಂಗ್ಟನ್ ಸುಂದರ್, ಶಾರ್ದೂಲ್ ಠಾಕೂರ್, ನವದೀಪ್ ಸೈನಿ, ದೀಪಕ್ ಚಾಹರ್, ರಾಹುಲ್ ತೆವಾಟಿಯಾ.

ಇಂಗ್ಲೆಂಡ್: ಏಯಾನ್ ಮಾರ್ಗನ್ (ನಾಯಕ), ಜಾಸ್ ಬಟ್ಲರ್, ಜೇಸನ್ ರಾಯ್, ಲಿಯಾಮ್ ಲಿವಿಂಗ್‌ಸ್ಟೋನ್, ಡೇವಿಡ್ ಮಲಾನ್, ಬೆನ್ ಸ್ಟೋಕ್ಸ್, ಮೋಯಿನ್ ಅಲಿ, ಆದಿಲ್ ರಶೀದ್, ರೀಸ್ ಟಾಪ್ಲೆ, ಕ್ರಿಸ್ ಜೋರ್ಡಾನ್, ಮಾರ್ಕ್ ವುಡ್, ಸ್ಯಾಮ್ ಕರನ್, ಟಾಮ್ ಕರನ್. ಸ್ಯಾಮ್ ಬಿಲಿಂಗ್ಸ್, ಜಾನಿ ಬೆಸ್ಟೊ, ಜೋಫ್ರಾ ಆರ್ಚರ್

ಪಂದ್ಯ ಆರಂಭ: ರಾತ್ರಿ 7

ನೇರಪ್ರಸಾರ: ಸ್ಟಾರ್ ನೆಟ್‌ವರ್ಕ್

ಸಿಂಧುಗೆ ಗೆಲುವಿನ ಆರಂಭ

ಆಲ್ ಇಂಗ್ಲೆಂಡ್ ಬ್ಯಾಡ್ಮಿಂಟನ್: ಅಶ್ವಿನಿ–ಸಿಕ್ಕಿ ರೆಡ್ಡಿಗೆ ಜಯ

ಬರ್ಮಿಂಗ್‌ಹ್ಯಾಂ (ಪಿಟಿಐ): ವಿಶ್ವಚಾಂಪಿಯನ್, ಭಾರತದ ಪಿ.ವಿ. ಸಿಂಧು ಅವರು ಆಲ್ ಇಂಗ್ಲೆಂಡ್ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನಲ್ಲಿ ಶುಭಾರಂಭ ಮಾಡಿದ್ದಾರೆ. ಬುಧವಾರ ನಡೆದ ಮೊದಲ ಸುತ್ತಿನಲ್ಲಿ ಪಂದ್ಯದಲ್ಲಿ ಅವರು 21–11, 21–17ರಿಂದ ಮಲೇಷ್ಯಾದ ಸೋನಿ ಚೀಹ ಅವರನ್ನು ಮಣಿಸಿದರು.

ಅಪಘಾತದಲ್ಲಿ ಗಂಭೀರ ಗಾಯಗೊಂಡು ಒಂದು ವರ್ಷದ ನಂತರ ಕಣಕ್ಕೆ ಇಳಿದ ಜಪಾನ್‌ನ ಕೆಂಟೊ ಮೊಮೊಟ 21–13, 22–20ರಿಂದ ಭಾರತದ ಪರುಪಳ್ಳಿ ಕಶ್ಯಪ್ ಅವರಿಗೆ ಆಘಾತ ನೀಡಿದರು. ಎಂಟನೇ ಶ್ರೇಯಾಂಕದ ಶ್ರೀಕಾಂತ್ ಅವರನ್ನು ಶ್ರೇಯಾಂಕರಹಿತ ಐರ್ಲೆಂಡ್ ಆಟಗಾರ ನುಗ್ಯೆನ್ ನ್ಹಾಟ್ 21–11, 15–21, 21–12ರಲ್ಲಿ ಮಣಿಸಿದರು.

ಮಹಿಳೆಯರ ಡಬಲ್ಸ್‌ನಲ್ಲಿ ಅಶ್ವಿನಿ ಪೊನ್ನಪ್ಪ ಮತ್ತು ಎನ್.ಸಿಕ್ಕಿ ರೆಡ್ಡಿ ಜೋಡಿ ಥಾಯ್ಲೆಂಡ್‌ನ ಬೆನ್ಯಪ ಏಮ್ಸರ್ಡ್ ಮತ್ತು ನುಂಟಕರ್ನ್ ಏಮ್ಸರ್ಡ್ ವಿರುದ್ಧ 21–14, 21–12ರಲ್ಲಿ ಜಯ ಸಾಧಿಸಿದರು.

ಪಿ.ವಿ.ಸಿಂಧು

ದೂರವಾದ ಆತಂಕ; ಸುಗಮವಾದ ಹಾದಿ: ಕೋವಿಡ್–19 ಇರುವುದು ದೃಢಪಟ್ಟ ಮೂವರು ಬ್ಯಾಡ್ಮಿಂಟನ್ ಪಟುಗಳ ಮರುಪರೀಕ್ಷೆಯ ವರದಿ ನೆಗೆಟಿವ್ ಬಂದಿರುವುದರಿಂದ ಭಾರತದ ಸ್ಪರ್ಧಾಳುಗಳ ಹಾದಿ ಸುಗಮವಾಗಿದೆ.

ಮೂವರು ಆಟಗಾರರು ಮತ್ತು ಒಬ್ಬರು ನೆರವು ಸಿಬ್ಬಂದಿಯ ವರದಿ ಮಂಗಳವಾರ ಪಾಸಿಟಿವ್ ಬಂದಿತ್ತು. ಆದರೆ ಬುಧವಾರ ಆಯೋಜಕರ ವತಿಯಿಂದ ನಡೆದ ಪರೀಕ್ಷೆಯ ವರದಿ ಸಮಾಧಾನ ತಂದಿದೆ.

ಎಲ್ಲ ದೇಶಗಳ ತಂಡಗಳ ವ್ಯವಸ್ಥಾಪಕರಿಗೆ ಇಮೇಲ್ ಕಳುಹಿಸಿರುವ ವಿಶ್ವ ಬ್ಯಾಡ್ಮಿಂಟನ್ ಫೆಡರೇಷನ್ ಮರು ಪರೀಕ್ಷೆಯಲ್ಲಿ ಎಲ್ಲರ ವರದಿಯೂ ನೆಗೆಟಿವ್ ಬಂದಿದ್ದು ಟೂರ್ನಿ ಆರಂಭಿಸಲು ಯಾವ ಆತಂಕವೂ ಇಲ್ಲ ಎಂದು ಹೇಳಿದೆ. ಸಾಮಾಜಿಕ ತಾಣಗಳ ಮೂಲಕ ಮಾಹಿತಿ ನೀಡಿರುವ ಭಾರತದ ಮುಖ್ಯ ಕೋಚ್ ಮಥಾಯಿಸ್ ಬೋಯೆ 'ತಂಡದಲ್ಲಿ ಯಾರಿಗೂ ಕೋವಿಡ್ ಇಲ್ಲ. ನಮ್ಮವರೆಲ್ಲರೂ ಆಡಲು ಸಜ್ಜಾಗಿದ್ದಾರೆ' ಎಂದು ಬರೆದುಕೊಂಡಿದ್ದಾರೆ.

ಆತಂಕ ಮತ್ತು ಗೊಂದಲದಿಂದಾಗಿ ಟೂರ್ನಿಯನ್ನು ಕೆಲವು ತಾಸು ತಡವಾಗಿ ಆರಂಭಿಸಲು ನಿರ್ಧರಿಸಲಾಗಿತ್ತು.

ಮಹಿಳಾ ಏಕದಿನ ಕ್ರಿಕೆಟ್: ಮಿಥಾಲಿ ರಾಜ್ ಅರ್ಧಶತಕ

ಕೊನೆಯ ಪಂದ್ಯದಲ್ಲೂ ಭಾರತಕ್ಕೆ ನಿರಾಸೆ

ಲಖನೌ: ಮೂರು ಪಂದ್ಯಗಳಲ್ಲಿ ಸೋತು ಸರಣಿ ಕೈಚೆಲ್ಲಿದ್ದ ಭಾರತ ಮಹಿಳಾ ತಂಡ ಕೊನೆಯ ಪಂದ್ಯದಲ್ಲಿ ಗೆದ್ದು ಗೌರವ ಉಳಿಸಿಕೊಳ್ಳಲು ನಡೆಸಿದ ಪ್ರಯತ್ನವೂ ವಿಫಲಗೊಂಡಿತು. ಇಲ್ಲಿನ ಏಕಾನ ಕ್ರೀಡಾಂಗಣದಲ್ಲಿ ಬುಧವಾರ ನಡೆದ ಏಕದಿನ ಸರಣಿಯ ಐದನೇ ಪಂದ್ಯದಲ್ಲಿ ದಕ್ಷಿಣ ಆಫ್ರಿಕಾ ಐದು ವಿಕೆಟ್‌ಗಳಿಂದ ಜಯ ಗಳಿಸಿ 4–1ರಲ್ಲಿ ಸರಣಿಯನ್ನು ತನ್ನದಾಗಿಸಿಕೊಂಡಿತು.

ಮೊದಲು ಬ್ಯಾಟಿಂಗ್ ಮಾಡಿದ ಭಾರತದ ಪರವಾಗಿ ನಾಯಕಿ ಮಿಥಾಲಿ ರಾಜ್ (79; 104 ಎಸೆತ, 8 ಬೌಂಡರಿ, 1 ಸಿಕ್ಸರ್) ಏಕಾಂಗಿ ಹೋರಾಟ ನಡೆಸಿದರು. ಹರ್ಮನ್‌ಪ್ರೀತ್ ಕೌರ್ ಉತ್ತಮ ಲಯದಲ್ಲಿದ್ದಾಗಲೇ ಗಾಯಗೊಂಡು ನಿವೃತ್ತಿ ಪಡೆದುಕೊಂಡರು. ಇವರಿಬ್ಬರನ್ನು ಒಳಗೊಂಡಂತೆ ಅಗ್ರ ಕ್ರಮಾಂಕದ ಐವರು ಮಾತ್ರ ಎರಡಂಕಿ ಮೊತ್ತ ದಾಟಿದರು.

ಮಿಥಾಲಿ ರಾಜ್

ಭಾರತವನ್ನು 188 ರನ್‌ಗಳಿಗೆ ಆಲೌಟ್ ಮಾಡಿದ ದಕ್ಷಿಣ ಆಫ್ರಿಕಾ 48,2 ಓವರ್‌ಗಳಲ್ಲಿ 5 ವಿಕೆಟ್ ಕಳೆದುಕೊಂಡು ಗುರಿ ಮುಟ್ಟಿತು. 27 ರನ್‌ಗಳಿಗೆ 3 ವಿಕೆಟ್ ಕಳೆದುಕೊಂಡರೂ ಮಧ್ಯಮ ಕ್ರಮಾಂಕದ ಮಿಗ್ನನ್ ಡು ಪ್ರೀಜ್ (57; 100 ಎ, 4 ಬೌಂ) ಮತ್ತು ಅನೆಕಿ ಬಾಶ್ (58; 70 ಎ, 8 ಬೌಂ) ಅಮೋಘ ಬ್ಯಾಟಿಂಗ್ ಮೂಲಕ ತಂಡಕ್ಕೆ ಆಧಾರವಾದರು. ಮರಿಜನೆ ಕಾಪ್ ಮತ್ತು ನಡೈನ್ ಡಿ ಕ್ಲಾರ್ಕ್ ಕೊನೆಯಲ್ಲಿ ಜಯದ ಔಪಚಾರಿಕತೆಯನ್ನು ಮುಗಿಸಿದರು.

ಸಂಕ್ಷಿಪ್ತ ಸ್ಕೋರು: ಭಾರತ: 49.3 ಓವರ್‌ಗಳಲ್ಲಿ 188 (ಮಿಥಾಲಿ ರಾಜ್ ಔಟಾಗದೆ 79, ಹರ್ಮನ್‌ಪ್ರೀತ್ ಕೌರ್ 30, ಪ್ರಿಯಾ ಪೂನಿಯಾ 18; ನಡೈನ್ ಡಿ ಕ್ಲಾರ್ಕ್ 35ಕ್ಕೆ3, ನೊಂಡುಮಿಸೆ ಶಾಂಗಸೆ 43ಕ್ಕೆ 2, ತೂಮಿ ಶೇಖುಖೂನ್ 26ಕ್ಕೆ 2). ದಕ್ಷಿಣ ಆಫ್ರಿಕಾ: 48.2 ಓವರ್‌ಗಳಲ್ಲಿ 5ಕ್ಕೆ 189 (ಮಿಗ್ನನ್ ಡು ಪ್ರೀಜ್ 57, ಅನೆಕಿ ಬಾಶ್ 58, ಮರಿಜನೆ ಕಾಪ್ ಔಟಾಗದೆ 36; ರಾಜೇಶ್ವರಿ ಗಾಯಕವಾಡ್ 13ಕ್ಕೆ 3, ದಯಾಳನ್ ಹೇಮಲತಾ 44ಕ್ಕೆ 1). ಫಲಿತಾಂಶ: ದಕ್ಷಿಣ ಆಫ್ರಿಕಾ ತಂಡಕ್ಕೆ 5 ವಿಕೆಟ್ ಜಯ. 4–1ರಲ್ಲಿ ಸರಣಿ ಗೆಲುವು.

ಐಸಿಸಿ ಟಿ20 ರ‍್ಯಾಂಕಿಂಗ್: ಐದನೇ ಸ್ಥಾನಕ್ಕೆ ವಿರಾಟ್

ದುಬೈ (ಪಿಟಿಐ): ಭಾರತ ಕ್ರಿಕೆಟ್ ತಂಡದ ನಾಯಕ ವಿರಾಟ್ ಕೊಹ್ಲಿ ಅವರು ಐಸಿಸಿ ಟ್ವೆಂಟಿ–20 ಬ್ಯಾಟ್ಸ್‌ಮನ್‌ಗಳ ರ‍್ಯಾಂಕಿಂಗ್‌ನಲ್ಲಿ ಅಗ್ರ ಐದರೊಳಗಿನ ಸ್ಥಾನಕ್ಕೆ ಮರಳಿದ್ದಾರೆ. ಇಂಗ್ಲೆಂಡ್ ಎದುರು ನಡೆಯುತ್ತಿರುವ ಸರಣಿಯಲ್ಲಿ ಉತ್ತಮ ಸಾಮರ್ಥ್ಯ ತೋರುತ್ತಿದ್ದು, ಅವರ ಸ್ಥಾನದಲ್ಲಿ ಬಡ್ತಿಗೆ ಕಾರಣವಾಗಿದೆ.

ರ‍್ಯಾಂಕಿಂಗ್‌ನಲ್ಲಿ ಕೊಹ್ಲಿ ಸದ್ಯ ಐದನೇ ಸ್ಥಾನದಲ್ಲಿದ್ದಾರೆ. ಇಂಗ್ಲೆಂಡ್ ವಿರುದ್ಧ ನಡೆದ ಎರಡು ಹಾಗೂ ಮೂರನೇ ಪಂದ್ಯದಲ್ಲಿ ಕ್ರಮವಾಗಿ 73 ಹಾಗೂ 77 ರನ್ ಗಳಿಸಿದ ಅವರು ಒಂದು ಸ್ಥಾನ ಏರಿಕೆ ಕಂಡಿದ್ದಾರೆ. ಅವರ ಬಳಿ ಈಗ 744 ರೇಟಿಂಗ್ ಪಾಯಿಂಟ್‌ಗಳಿವೆ.

ಸರಣಿಯ ಎರಡು ಪಂದ್ಯಗಳಲ್ಲಿ ಸೊನ್ನೆ ಸುತ್ತಿರುವ ಕೆ.ಎಲ್.ರಾಹುಲ್ ಅವರು ನಾಲ್ಕನೇ ಸ್ಥಾನದಲ್ಲೇ ಮುಂದುವರಿದಿದ್ದಾರೆ. ಶ್ರೇಯಸ್ ಅಯ್ಯರ್ 31ನೇ ಹಾಗೂ ರಿಷಭ್ ಪಂತ್ 80ನೇ ಕ್ರಮಾಂಕಗಳಿಗೆ ಬಡ್ತಿ ಪಡೆದಿದ್ದಾರೆ.


ವಿರಾಟ್ ಕೊಹ್ಲಿ–ಪಿಟಿಐ ಚಿತ್ರ

ಸಂಕ್ಷಿಪ್ತ ಸುದ್ದಿ

ನೀರಜ್‌ಗೆ ಚಿನ್ನ

ಪಟಿಯಾಲ (ಪಿಟಿಐ): ಜಾವೆಲಿನ್ ಥ್ರೋ ಅಥ್ಲೀಟ್ ನೀರಜ್ ಚೋಪ್ರಾ, ಇಲ್ಲಿ ನಡೆಯುತ್ತಿರುವ 24ನೇ ರಾಷ್ಟ್ರೀಯ ಫೆಡರೇಷನ್ ಕಪ್ ಸೀನಿಯರ್ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ನಲ್ಲಿ ಬುಧವಾರ ಚಿನ್ನದ ಪದಕ ಗೆದ್ದರು.


ನೀರಜ್ ಚೋಪ್ರಾ

ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಸ್ಪರ್ಧಿಸಲಿರುವ ಸಂಭವನೀಯ ಅಥ್ಲೀಟ್ ಆಗಿರುವ ನೀರಜ್ ತಮ್ಮದೇ ಹಳೆಯ ದಾಖಲೆಯನ್ನು ಉತ್ತಮಪಡಿಸಿಕೊಂಡರು. ಅವರು 87.80 ಮೀಟರ್ಸ್ ದೂರ ಜಾವೆಲಿನ್ ಎಸೆದರು. ಪುರುಷರ ಮೂರು ಸಾವಿರ ಮೀಟರ್ ಸ್ಟೀಪಲ್‌ಚೇಸ್‌ನಲ್ಲಿ ಅವಿನಾಶ್ ಸಬ್ಳೆ ಚಿನ್ನದ ಪದಕಕ್ಕೆ ಕೊರಳೊಡ್ಡಿದರು. 8ನಿಮಿಷ, 20.20 ಸೆಕೆಂಡುಗಳಲ್ಲಿ ಗುರಿ ತಲುಪಿ ತಮ್ಮದೇ ಹಳೆಯ ದಾಖಲೆಯನ್ನು ಮೀರಿದರು.

ಶಾಟ್‌ಪಟ್‌ನಲ್ಲಿ ತಜಿಂದರ್ ಪಾಲ್ ತೂರ್ 20.58 ಮೀಟರ್ಸ್ ದೂರ ಎಸೆದು ಚಿನ್ನದ ಪದಕವನ್ನು ಜಯಿಸಿದರು.

ಟೆನಿಸ್: ಬೋಪಣ್ಣ–ಖುರೇಷಿಗೆ ಸೋಲು

ಅಕಪಲ್ಕೊ (ಪಿಟಿಐ): ಆರು ವರ್ಷಗಳ ಬಳಿಕ ಜೊತೆಯಾಗಿ ಕಣಕ್ಕಿಳಿದಿದ್ದ ಭಾರತ–ಪಾಕಿಸ್ತಾನ ಟೆನಿಸ್ ಜೋಡಿ ರೋಹನ್ ಬೋಪಣ್ಣ–ಐಸಾಮ್ ಉಲ್ ಹಕ್ ಅವರು ಮೊದಲ ಪಂದ್ಯದಲ್ಲಿ ಸೋಲು ಅನುಭವಿಸಿದ್ದಾರೆ.

ಇಲ್ಲಿ ನಡೆದ ಎಟಿಪಿ 500 ಟೂರ್ನಿಯ ಡಬಲ್ಸ್ ಮೊದಲ ಸುತ್ತಿನಲ್ಲಿ ಬುಧವಾರ ಬೋಪಣ್ಣ–ಖುರೇಷಿ 7-6, 2-6, 1-10ರಿಂದ ಬ್ರೆಜಿಲ್–ಬ್ರಿಟನ್ ಆಟಗಾರರಾದ ಬ್ರೂನೋ ಸೋರ್ಸ್–ಜೆಮಿ ಮರೆ ಎದುರು ಸೋತರು.

ಇಂದಿನಿಂದ ಕಬಡ್ಡಿ

ಬೆಂಗಳೂರು: ನಗರದ ಆಚಾರ್ಯ ಪಾಠಶಾಲಾ ಶಿಕ್ಷಣ ಸಂಸ್ಥೆಯ ಆಶ್ರಯದಲ್ಲಿ ಮಾರ್ಚ್ 18 ಹಾಗೂ 19ರಂದು ಬೆಂಗಳೂರು ಜಿಲ್ಲಾ ಮಟ್ಟದ ಕಬಡ್ಡಿ ಟೂರ್ನಿ ನಡೆಯಲಿದೆ.

ಗುರುವಾರ ಟೂರ್ನಿಯ ಉದ್ಘಾಟನೆ ನೆರವೇರಲಿದ್ದು, ಕರ್ನಾಟಕ ಕಬಡ್ಡಿ ಸಂಸ್ಥೆಯ ನಿರ್ದೇಶ ವಿ. ಜಯರಾಮ್ ಉಪಸ್ಥಿತರಿರುವರು ಎಂದು ಶಿಕ್ಷಣ ಸಂಸ್ಥೆಯ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಗಾಲ್ಫ್: ಅಗ್ರ ಸ್ಥಾನದಲ್ಲಿ ಚಿಕ್ಕರಂಗಪ್ಪ

ಗುರುಗ್ರಾಮ (ಪಿಟಿಐ): ಹಾಲಿ ಚಾಂಪಿಯನ್, ಬೆಂಗಳೂರಿನ ಚಿಕ್ಕರಂಗಪ್ಪ ಅಮೋಘ ಆಟವಾಡಿ ದೆಹಲಿ–ಎನ್‌ಸಿಆರ್ ಮುಕ್ತ ಗಾಲ್ಫ್ ಚಾಂಪಿಯನ್‌ಷಿಪ್‌ನಲ್ಲಿ ಜಂಟಿಯಾಗಿ ದಿನದ ಉತ್ತಮ ಗರಿಷ್ಠ ಮೊತ್ತ ಹಂಚಿಕೊಂಡರು. ಅಗ್ರಸ್ಥಾನವನ್ನೂ ತಮ್ಮದಾಗಿಸಿಕೊಂಡರು.

ಎರಡನೇ ದಿನದ ಅಂತ್ಯಕ್ಕೆ ಸ್ಥಳೀಯ ಗಾಲ್ಫರ್ ತಾಪಿ ಘಾಯ್ ಮತ್ತು ಚಂಡೀಗಢದ ಹರೇಂದ್ರ ಗುಪ್ತಾ ಜಂಟಿಯಾಗಿ ಎರಡನೇ ಸ್ಥಾನವನ್ನು ಹಂಚಿ ಕೊಂಡರು. ಈ ವರೆಗೆ 14 ಪ್ರಶಸ್ತಿಗಳನ್ನು ಗೆದ್ದಿರುವ ಚಿಕ್ಕರಂಗಪ್ಪ ಮೊದಲ ದಿನವಾದ ಮಂಗಳವಾರದ ಮುಕ್ತಾಯಕ್ಕೆ 12ನೇ ಸ್ಥಾನದಲ್ಲಿದ್ದರು. ಎರಡನೇ ದಿನ ಆರಂಭದಿಂದಲೇ ಅಮೋಘ ಆಟವಾಡಿ ಗಮನ ಸೆಳೆದರು.

ಬೆಂಗಳೂರಿನ ಖಲಿನ್ ಜೋಶಿ ಅವರು ಅಜಿತೇಶ್ ಜೊತೆ ನಾಲ್ಕನೇ ಸ್ಥಾನ ಹಂಚಿಕೊಂಡರು.

ಫುಟ್‌ಬಾಲ್: ಪ್ರಶಸ್ತಿ ಮೇಲೆ ಯುನೈಟೆಡ್ ಕಣ್ಣು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಾಲಿ ಚಾಂಪಿಯನ್ ಕಿಕ್‌ಸ್ಟಾರ್ಟ್ ಎಫ್‌ಸಿ ಮತ್ತು ರನ್ನರ್ ಅಪ್ ಬೆಂಗಳೂರು ಯುನೈಟೆಡ್ ಎಫ್‌ಸಿ ತಂಡಗಳು ರಾಜ್ಯ ಫುಟ್‌ಬಾಲ್ ಸಂಸ್ಥೆ ಆಶ್ರಯದಲ್ಲಿ ನಡೆಯುತ್ತಿರುವ ಸೂಪರ್ ಡಿವಿಷನ್ ತಂಡಗಳ ಮಹಿಳಾ ಲೀಗ್‌ನ ಪ್ರಶಸ್ತಿ ಮೇಲೆ ಕಣ್ಣಿಟ್ಟು ಕಣಕ್ಕೆ ಇಳಿಯಲಿವೆ. ಮಿಸಾಕ ಯುನೈಟೆಡ್ ಮತ್ತು ಮಾತೃ ಪ್ರತಿಷ್ಠಾನ ತಂಡಗಳಿಗೆ ಎರಡನೇ ಸ್ಥಾನ ಗಳಿಸುವ ಅವಕಾಶದ ಬಾಗಿಲು ತೆರೆದಿದೆ.

ಗುರುವಾರ ಮಧ್ಯಾಹ್ನ ನಡೆಯಲಿರುವ ಎರಡು ಪಂದ್ಯಗಳು ನಾಲ್ಕೂ ತಂಡಗಳಿಗೆ ಮಹತ್ವದ್ದು. 20 ಪಾಯಿಂಟ್‌ಗಳೊಂದಿಗೆ ಅಗ್ರಸ್ಥಾನದಲ್ಲಿರುವ ಕಿಕ್‌ಸ್ಟಾರ್ಟ್ ತಂಡ 19 ಪಾಯಿಂಟ್ ಗಳಿಸಿ ಎರಡನೇ ಸ್ಥಾನದಲ್ಲಿರುವ ಬೆಂಗಳೂರು ಯುನೈಟೆಡ್ ವಿರುದ್ಧ ಸೆಣಸಲಿದೆ. ಪ್ರಶಸ್ತಿ ಗೆಲ್ಲಬೇಕಾದರೆ ಯುನೈಟೆಡ್‌ಗೆ ಜಯ ಅನಿವಾರ್ಯ. ಕಿಕ್‌ಸ್ಟಾರ್ಟ್ ತಂಡ ಪಂದ್ಯವನ್ನು ಡ್ರಾ ಮಾಡಿಕೊಂಡರೂ ಪ್ರಶಸ್ತಿ ತನ್ನದಾಗಿಸಿಕೊಳ್ಳಬಹುದು.

ಈ ಪಂದ್ಯಕ್ಕೂ ಮೊದಲು ಮಿಸಾಕ ಯುನೈಟೆಡ್ ಮತ್ತು ಮಾತೃ ಪ್ರತಿಷ್ಠಾನ ನಡುವಿನ ಪಂದ್ಯ ನಡೆಯಲಿದೆ.

ಬ್ರೇವ್ಸ್, ಫುಟ್‌ಬಾಲ್ ಫ್ಯಾಕ್ಟರಿ ಜಯಭೇರಿ: ಬುಧವಾರ ನಡೆದ ಪಂದ್ಯಗಳಲ್ಲಿ ಬೆಂಗಳೂರು ಬ್ರೇವ್ಸ್ ಮತ್ತು ಇಂಡಿಯನ್ ಫುಟ್‌ಬಾಲ್ ಫ್ಯಾಕ್ಟರಿ ತಂಡಗಳು ಗೆಲುವು ದಾಖಲಿಸಿದವು. ಸ್ಲೇಜರ್ಸ್ ಬೆಳಗಾಂ ತಂಡದ ವಿರುದ್ಧ ನಡೆದ ಪಂದ್ಯದಲ್ಲಿ ಬೆಂಗಳೂರು ಬ್ರೇವ್ಸ್ 6–0ಯಿಂದ ಜಯ ಗಳಿಸಿತು. ದೀಪಾ (16ನೇ ನಿಮಿಷ), ಸುಸ್ಮಿತಾ ಜಾಧವ್ (33, 42, 55 ಮತ್ತು 58ನೇ ನಿ) ಹಾಗೂ ಆರುಷಿ ಸಂತೋಷ್ (86ನೇ ನಿ) ಗೋಲು ಗಳಿಸಿದರು.

ವಿದೇಶ ಸುದ್ದಿಗಳು

ಮೋದಿ ನಾಯಕತ್ವ ಶ್ಲಾಘಿಸಿದ ಬೋರಿಸ್

ಲಂಡನ್: ಹವಾಮಾನ ವೈಪರೀತ್ಯ ವಿರುದ್ಧದ ಜಾಗತಿಕ ಹೋರಾಟದಲ್ಲಿ ಭಾರತದ ಪ್ರಧಾನಿ ನರೇಂದ್ರ ಮೋದಿ ಅವರ ನಾಯಕತ್ವಕ್ಕೆ ಬ್ರಿಟನ್ ಪ್ರಧಾನಿ ಬೋರಿಸ್ ಜಾನ್ಸನ್ ಅವರು ಶ್ಲಾಘನೆ ವ್ಯಕ್ತಪಡಿಸಿದ್ದಾರೆ.

ಬೋರಿಸ್ ಜಾನ್ಸನ್

'ವಿಪತ್ತು ಸ್ಥಿತಿಸ್ಥಾಪಕತ್ವ ಮೂಲಸೌಕರ್ಯನಿರ್ವಹಣೆಗೆ ಸಂಬಂಧಿಸಿದಂತೆ ನಡೆದ ಬುಧವಾರ ಅಂತರರಾಷ್ಟ್ರೀಯ ವರ್ಚ್ಯುವಲ್ ಸಂವಾದ'ದಲ್ಲಿ (ಸಿಡಿಆರ್‌ಐ) ಮಾತನಾಡಿದ ಬೋರಿಸ್ ಜಾನ್ಸನ್, ಕಾರ್ಯಕ್ರಮ ಆಯೋಜಿಸಿದಕ್ಕಾಗಿ ಪ್ರಧಾನಿ ಮೋದಿ ಅವರಿಗೆ ಧನ್ಯವಾದ ಸಲ್ಲಿಸಿದರು. ಸಂವಾದಕ್ಕೆ ಮೋದಿ ಚಾಲನೆ ನೀಡಿದರು.

'ಹವಾಮಾನ ವೈಪರೀತ್ಯದ ವಿರುದ್ಧ ಜಾಗತಿಕ ಹೋರಾಟದಲ್ಲಿ ನವೀಕರಿಸಬಹುದಾದ ಇಂಧನವನ್ನು ಬಳಸಿಕೊಳ್ಳುವ ಸಾಧ್ಯತೆಗಳ ಕುರಿತ ಮೋದಿ ಅವರ ಕಲ್ಪನೆ ಅದ್ಭುತವಾದದ್ದು' ಎಂದು ಬಣ್ಣಿಸಿದ ಅವರು, ಈ ವಿಚಾರದಲ್ಲಿ ಬ್ರಿಟನ್ ಮತ್ತು ಭಾರತ ಒಗ್ಗೂಡಿ ಪರಸ್ಪರ ಹೆಚ್ಚಿನ ಗುರಿ ಸಾಧಿಸುವ ಬಗ್ಗೆ ಹಾಗೂ ಹವಾಮಾನ ವೈಪರೀತ್ಯದಿಂದ ಬಳಲುತ್ತಿರುವ ಸಣ್ಣ ದ್ವೀಪಗಳಂಥ ರಾಷ್ಟ್ರಗಳನ್ನು ಬೆಂಬಲಿಸುವ ಅಗತ್ಯತೆಯನ್ನು ಪ್ರತಿಪಾದಿಸಿದರು.

ಶಾಂತಿ ಕಾಯ್ದುಕೊಂಡರೆ ಭಾರತಕ್ಕೆ ಹೆಚ್ಚು ಆರ್ಥಿಕ ಲಾಭ: ಇಮ್ರಾನ್

ಇಸ್ಲಾಮಾಬಾದ್ (ಪಿಟಿಐ): 'ನಮ್ಮ ದೇಶದೊಂದಿಗೆ ಶಾಂತಿ ಕಾಯ್ದುಕೊಂಡರೆ ಭಾರತಕ್ಕೆ ಆರ್ಥಿಕವಾಗಿ ಹೆಚ್ಚು ಲಾಭವಾಗಲಿದೆ' ಎಂದು ಪಾಕಿಸ್ತಾನದ ಪ್ರಧಾನಿ ಇಮ್ರಾನ್ ಖಾನ್ ಬುಧವಾರ ಹೇಳಿದ್ದಾರೆ.

ಇಸ್ಲಾಮಾಬಾದ್‌ನ ಭದ್ರತೆ ಕುರಿತ ಎರಡು ದಿನಗಳ ಚರ್ಚೆಯ ಉದ್ಘಾಟನಾ ಭಾಷಣ ಮಾಡಿದ ಖಾನ್, 2018ರಲ್ಲಿ ಅಧಿಕಾರಕ್ಕೆ ಬಂದ ನಂತರ ತಮ್ಮ ಸರ್ಕಾರವು ಭಾರತದೊಂದಿಗೆ ಉತ್ತಮ ಸಂಬಂಧ ಸ್ಥಾಪಿಸಲು ಎಲ್ಲ ಪ್ರಯತ್ನಗಳನ್ನು ಮಾಡಿದೆ. ಭಾರತ ಸಹ ಪರಸ್ಪರ ಸಂಬಂಧ ಕಾಯ್ದುಕೊಳ್ಳಲು ಸಹಕರಿಸಿದೆ ಎಂದು ಅವರು ಹೇಳಿದ್ದಾರೆ.

ತೈಲ ಮತ್ತು ಅನಿಲ ಸಂಪನ್ಮೂಲದಲ್ಲಿ ಶ್ರೀಮಂತವಾಗಿರುವ ಮಧ್ಯ ಏಷ್ಯಾದ ರಾಷ್ಟ್ರಗಳಾದ ಕಜಕಿಸ್ತಾನ, ಕಿರ್ಗಿಸ್ತಾನ, ತಜಕಿಸ್ತಾನ, ತುರ್ಕಮೆನಿಸ್ತಾನ್ ಹಾಗೂ ಉಜ್ಬೆಕಿಸ್ತಾನಗಳಿಗೆ ಭಾರತವು ಪಾಕಿಸ್ತಾನದ ಮೂಲಕ ನೇರ ಸಂಪರ್ಕ ಸಾಧಿಸಿ ವ್ಯವಹರಿಸಿದರೆ, ಭಾರತಕ್ಕೂ ಆರ್ಥಿಕವಾಗಿ ಲಾಭವಾಗಲಿದೆ ಎಂದು ಖಾನ್ ಹೇಳಿದ್ದಾರೆ.

ಇಮ್ರಾನ್ ಖಾನ್ ಪಕ್ಷಕ್ಕೆ ಚುನಾವಣಾ ಆಯೋಗ ನೋಟಿಸ್

ಇಸ್ಲಾಮಾಬಾದ್: ವಿದೇಶದಿಂದ ಧನ ಸಹಾಯ ಪಡೆದಿರುವ ಕುರಿತ ದಾಖಲೆಗಳನ್ನು ರಹಸ್ಯವಾಗಿಟ್ಟಿರುವ ಬಗ್ಗೆ ತಮ್ಮ ನಿಲುವನ್ನು ತಿಳಿಸುವಂತೆ ಪಾಕಿಸ್ತಾನ ಚುನಾವಣಾ ಆಯೋಗವು ಪ್ರಧಾನಿ ಇಮ್ರಾನ್ ಖಾನ್ ನೇತೃತ್ವದ ಪಾಕಿಸ್ತಾನ ತೆಹ್ರೀಕ್–ಎ ಇನ್ಸಾಫ್ ಪಕ್ಷ ಹಾಗೂ ಪಕ್ಷದ ಆಂತರಿಕ ಪರಿಶೀಲನಾ ಸಮಿತಿಗೆ ನೋಟಿಸ್ ನೀಡಿದೆ.

ಮಾರ್ಚ್ 22ರಂದು ಆಯೋಗದ ಎದುರು ವಿಚಾರಣೆಗೆ ಹಾಜರಾಗಿ, ವಿವರಣೆ ನೀಡುವಂತೆಯೂ ಆಯೋಗ ನೋಟಿಸ್‌ನಲ್ಲಿ ವಿವರಿಸಿದೆ.

ಕರ್ನಾಟಕ ಸರ್ಕಾರ
ವಾಣಿಜ್ಯ ತೆರಿಗೆಗಳ ಇಲಾಖೆ
ವಾಣಿಜ್ಯ ತೆರಿಗೆ ಸಹಾಯಕ ಆಯುಕ್ತರವರ ಕಛೇರಿ,
ವಾಣಿಜ್ಯ ತೆರಿಗೆ ಸಂಕೀರ್ಣ, 80–ಅಡಿ ರಸ್ತೆ, ಸಿದ್ದರಾಮೇಶ್ವರ ಬಡಾವಣೆ, ತುಮಕೂರು–572103
ಕಛೇರಿ ದೂರವಾಣಿ: 0816–2291489, ಇ–ಮೇಲ್ : acctenf.tum@ka.gov.in

ಸಂಖ್ಯೆ:ವಾತೆಸಆ/ಜಾರಿ/ತು/ಜಿಸಿಆರ್–67–ಎ/2020–21 ದಿನಾಂಕ : 17.03.2021

ಅಡಿಕೆ ಮತ್ತು ಸರಕು ವಾಹನ ಹರಾಜು ಪ್ರಕಟಣೆ

ವಾಣಿಜ್ಯ ತೆರಿಗೆ ಸಹಾಯಕ ಆಯುಕ್ತರು (ಜಾರಿ) ತುಮಕೂರು ಇವರು ದಿನಾಂಕ **08.09.2020 ರಂದು 25120** ಕೆ.ಜಿ.ಅಡಿಕೆಯನ್ನು ಸರಕು ಮತ್ತು ಸರಕು ವಾಹನ ಸಂಖ್ಯೆ : UP-15-DT-8533 ನ್ನು ಸರಕು ಮತ್ತು ಸೇವಾ ತೆರಿಗೆ ಕಾಯ್ದೆ, 2017ರ ಕಲಂ 130ರ ಅಡಿಯಲ್ಲಿ ಮುಟ್ಟುಗೋಲು ಹಾಕಿಕೊಂಡಿದ್ದು, ಸದರಿ ಆದೇಶದಲ್ಲಿ ಸೃಷ್ಟಿಯಾದ ತಗಾದೆ ಮೊತ್ತವನ್ನು ವಸೂಲಿ ಮಾಡುವ ಸಂಬಂಧವಾಗಿ ಸದರಿ ಸರಕನ್ನು ಮತ್ತು ಸರಕು ವಾಹನವನ್ನು "**ಹೇಗೆ ಇದೆಯೋ ಹಾಗೆಯೇ**" ಇರುವ ಸ್ಥಿತಿಯಲ್ಲಿ ಸಾರ್ವಜನಿಕ ಹರಾಜು ಮೂಲಕ ವಿಲೇವಾರಿ ಮಾಡಲು ಇಲಾಖೆಯು ಉದ್ದೇಶಿಸಿದ್ದು, ಈ ಸಂಬಂಧ ಆಸಕ್ತಿಯುಳ್ಳ ಖರೀದಿದಾರರಿಂದ ಪಡೆದ ಸೀಲು ಮಾಡಿದ ಬಿಡ್ಡು ಲಕೋಟೆಯನ್ನು ದಿನಾಂಕ : **24.03.2021 ರಂದು ಬೆಳಿಗ್ಗೆ 11.00 ಗಂಟೆಗೆ, ಮತ್ತು ಅದೇ ದಿನದಂದು ಮಧ್ಯಾಹ್ನ 03.00 ಗಂಟೆಗೆ** ವಾಣಿಜ್ಯ ತೆರಿಗೆ ಸಹಾಯಕ ಆಯುಕ್ತರು (ಜಾರಿ) ತುಮಕೂರುರವರ ಕಛೇರಿಯಲ್ಲಿ ತೆರೆಯಲಾಗುವುದು. ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟಂತೆ ಆಸಕ್ತಿಯುಳ್ಳ ಖರೀದಿದಾರರು ಮುಚ್ಚಿದ ಲಕೋಟೆಯಲ್ಲಿ ಬಿಡ್‌ನ್ನು ಸಲ್ಲಿಸಿ ಸಾರ್ವಜನಿಕ ಹರಾಜಿನಲ್ಲಿ ಭಾಗವಹಿಸಬಹುದಾಗಿದೆ.

(1) ಮುಟ್ಟುಗೋಲು ಹಾಕಿಕೊಂಡಿರುವ ಅಡಿಕೆಯನ್ನು ವಾಣಿಜ್ಯ ತೆರಿಗೆ ಸಹಾಯಕ ಆಯುಕ್ತರು (ಜಾರಿ) ತುಮಕೂರು ಇವರ ಕಛೇರಿಯ ಆವರಣದಲ್ಲಿ ದಾಸ್ತಾನು ಮಾಡಲಾಗಿದ್ದು, ಆಸಕ್ತಿವುಳ್ಳ ಖರೀದಿದಾರರು **ದಿನಾಂಕ : 20.03.2021 ರಂದು 12.00 ಗಂಟೆಯಿಂದ 03.00 ಗಂಟೆಯವರೆಗೆ** ಕಛೇರಿಯ ವೇಳೆಯಲ್ಲಿ ಸದರಿ ಸರಕನ್ನು ಪರಿಶೀಲಿಸಬಹುದಾಗಿದೆ. (2) ತದನಂತರ ಆಸಕ್ತಿಯುಳ್ಳ ಖರೀದಿದಾರರು (ಕಡ್ಡಾಯವಾಗಿ ಜಿ.ಎಸ್.ಟಿ. ಕಾಯ್ದೆ ಅಡಿ ನೋಂದಾಯಿತರಾಗಿರತಕ್ಕದ್ದು) ಸೀಲು ಮಾಡಿದ ಬಿಡ್ ಲಕೋಟೆ ಜೊತೆಗೆ ಡಿ.ಡಿ. **ರೂ.2,00,000/– ಹಾಗೂ ರೂ.10,000/–** ಗಳನ್ನು ನೋಂದಣಿ ಅಂಚೆ ಅಥವಾ ವೈಯಕ್ತಿಕವಾಗಿ ದಿನಾಂಕ : **23.03.2021 ರ ಸಾಯಂಕಾಲ 5.00 ಗಂಟೆಯ** ಒಳಗಾಗಿ ಕಛೇರಿಗೆ ತಲುಪುವಂತೆ ಸಲ್ಲಿಸುವುದು ಕಡ್ಡಾಯವಾಗಿದೆ. ಹೆಚ್ಚಿನ ಮಾಹಿತಿಗಾಗಿ ಹಾಗು ಷರತ್ತುಗಳಿಗಾಗಿ ಮೇಲ್ಕಂಡ ಕಛೇರಿಯ ಜಾಹೀರಾತು ಫಲಕ ಮತ್ತು ಇಲಾಖೆಯ ಜಾಲತಾಣ http://ctax.kar.nic.in/publicauction.asp ರಲ್ಲಿ ಪಡೆಯಬಹುದಾಗಿದೆ.

ಸಹಿ/– ವಾಣಿಜ್ಯತೆರಿಗೆ ಸಹಾಯಕ ಆಯಕ್ತರು (ಜಾರಿ) ತುಮಕೂರು.

ವಾಸಾಸಂಇ/ಬೆಂ. ನಗರ/ಶಿರಡಿ ಸಾಯಿ/3147/2020–21

ಕೋವಿಡ್–19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.

ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ





ಕ್ರಿಕೆಟ್: ತಮಿಳುನಾಡಿಗೆ ಸೋಲುಣಿಸಿದ ಕರ್ನಾಟಕ

ವೇದಾ ಶತಕಕ್ಕೆ ಒಲಿದ ಜಯ

ಬೆಂಗಳೂರು: ವೇದಾ ಕೃಷ್ಣಮೂರ್ತಿ ಸೊಗಸಾದ ಶತಕ (103, 81 ಎಸೆತ, 14 ಬೌಂಡರಿ, 2 ಸಿಕ್ಸರ್) ಬಲದಿಂದ ಕರ್ನಾಟಕ ತಂಡವು ಬಿಸಿಸಿಐ ಟ್ರೋಫಿ ಮಹಿಳಾ ಏಕದಿನ ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ 86 ರನ್‌ಗಳಿಂದ ತಮಿಳುನಾಡು ತಂಡವನ್ನು ಸೋಲಿಸಿತು.

ವೇದಾ ಕೃಷ್ಣಮೂರ್ತಿ

ಚೆನ್ನೈನ ಎಸ್‌ಆರ್‌ಎಂಸಿ ಕ್ರೀಡಾಂಗಣದಲ್ಲಿ ಬುಧವಾರ ನಡೆದ ಪಂದ್ಯದಲ್ಲಿ ಕರ್ನಾಟಕ ತಂಡ ಮೊದಲು ಬ್ಯಾಟಿಂಗ್ ಮಾಡಿ ಆರು ವಿಕೆಟ್‌ಗೆ 294 ರನ್ ಗಳಿಸಿತು. ಇದಕ್ಕುತ್ತರವಾಗಿ ತಮಿಳುನಾಡು 49ನೇ ಓವರ್‌ನಲ್ಲಿ 208 ರನ್‌ಗಳಿಗೆ ಆಲೌಟ್ ಆಯಿತು.

ಕರ್ನಾಟಕದ ವಿ.ಆರ್. ವನಿತಾ (21) ಹಾಗೂ ಎಸ್. ಶುಭಾ (60) ಮೊದಲ ವಿಕೆಟ್ ಜೊತೆಯಾಟದಲ್ಲಿ 39 ರನ್ ಸೇರಿಸಿದರು. ಮೂರನೇ ವಿಕೆಟ್ ಜೊತೆಯಾಟದಲ್ಲಿ ಶುಭಾ ಜೊತೆಗೂಡಿದ ವೇದಾ ಮಿಂಚಿನ ಬ್ಯಾಟಿಂಗ್ ಮಾಡಿದರು. ಇವರಿಬ್ಬರ ಜೊತೆಯಾಟದಲ್ಲಿ 109 ರನ್‌ಗಳು ಹರಿದುಬಂದವು. ನಿಕಿ ಪ್ರಸಾದ್ (ಔಟಾಗದೆ 39) ಕೊಡುಗೆ ನೀಡಿದರು.

ಸೋಲಿನಲ್ಲೂ ಗಮನಸೆಳೆದ ತಮಿಳುನಾಡು ತಂಡದ ಆರ್ಷಿ ಚೌಧರಿ (96) ಕೇವಲ ನಾಲ್ಕು ರನ್‌ಗಳಿಂದ ಶತಕ ತಪ್ಪಿಸಿಕೊಂಡರು. ಎಂ.ಎಸ್.ಶೈಲಜಾ (56) ಅರ್ಧಶತಕ ದಾಖಲಿಸಿದರು. ಆದರೆ ಉಳಿದ ಆಟಗಾರ್ತಿಯರ ವೈಫಲ್ಯ ತಂಡದ ಸೋಲಿಗೆ ಕಾರಣವಾಯಿತು. ಬೌಲಿಂಗ್‌ನಲ್ಲೂ ಬೆಳಗಿದ ಕರ್ನಾಟಕದ ನಿಕಿ ಪ್ರಸಾದ್ (43ಕ್ಕೆ 3) ತಂಡದ ಜಯದಲ್ಲಿ ಪ್ರಮುಖ ಪಾತ್ರ ವಹಿಸಿದರು.

ಸಂಕ್ಷಿಪ್ತ ಸ್ಕೋರು: ಕರ್ನಾಟಕ: 50 ಓವರ್‌ಗಳಲ್ಲಿ 6 ವಿಕೆಟ್‌ಗೆ 294 (ವೇದಾ ಕೃಷ್ಣಮೂರ್ತಿ 103, ಶುಭಾ ಎಸ್. 60, ನಿಕಿ ಪ್ರಸಾದ್ ಔಟಾಗದೆ 39, ದಿವ್ಯಾ ಜಿ. 26; ಕೆ.ಎನ್ ರಮ್ಯಶ್ರೀ 47ಕ್ಕೆ 2, ನಿರಂಜನಾ ನಾಗಾರ್ಜುನ 50ಕ್ಕೆ 2). ತಮಿಳುನಾಡು: 48.3 ಓವರ್‌ಗಳಲ್ಲಿ 208 (ಆರ್ಷಿ ಚೌಧರಿ 96, ಎಂ.ಎಸ್.ಶೈಲಜಾ 56; ಸಹನಾ ಎಸ್. ಪವಾರ್ 29ಕ್ಕೆ 2, ನಿಕಿ ಪ್ರಸಾದ್ 43ಕ್ಕೆ 3). ಫಲಿತಾಂಶ: ಕರ್ನಾಟಕ ತಂಡಕ್ಕೆ 86 ರನ್‌ಗಳ ಜಯ.

ನಾಗಾಲ್ಯಾಂಡ್ 17ಕ್ಕೆ ಆಲೌಟ್; ನಾಲ್ಕು ಎಸೆತಗಳಲ್ಲಿ ಪಂದ್ಯ ಗೆದ್ದ ಮುಂಬೈ!

ಇಂದೋರ್‌ನ ಹೋಳ್ಕರ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಮುಂಬೈ ವಿರುದ್ಧ ನಾಗಾಲ್ಯಾಂಡ್ ಕೇವಲ 17 ರನ್‌ಗಳಿಗೆ ಆಲೌಟ್ ಆಯಿತು. ಮುಂಬೈ ತಂಡ ಗೆಲುವಿನ ಗುರಿಯನ್ನು ಕೇವಲ ನಾಲ್ಕು ಎಸೆತಗಳಲ್ಲಿ ಒಂದೂ ವಿಕೆಟ್ ಕಳೆದುಕೊಳ್ಳದೆ ತಲುಪಿತು.

ಮುಂಬೈ ತಂಡದ ನಾಯಕಿ, ಮಧ್ಯಮವೇಗಿ ಸಯಾಲಿ ಸತಘರೆ 8.4 ಓವರ್ ಬೌಲಿಂಗ್ ಮಾಡಿ ಏಳು ವಿಕೆಟ್ ಗಳಿಸಿದರು. ಕೇವಲ ಐದು ರನ್ ನೀಡಿದರು. ನಾಗಾಲ್ಯಾಂಡ್ ತಂಡದ ಸರಿಬಾ (9) ವೈಯಕ್ತಿಕ ಗರಿಷ್ಠ ರನ್ ಗಳಿಸಿದರು. ಮುಂಬೈ ತಂಡದ ಆರಂಭಿಕ ಆಟಗಾರ್ತಿಯರಾದ ಇಶಾ ಓಜಾ (13, 3 ಬೌಂಡರಿ, 4 ಎಸೆತ) ಹಾಗೂ ವೃಶಾಲಿ ಭಗತ್ (6, 1 ಸಿಕ್ಸರ್) ಮೊದಲ ಓವರ್‌ನಲ್ಲೇ ಪಂದ್ಯ ಮುಗಿಸಿದರು. ನೋಬಾಲ್ ರೂಪದಲ್ಲಿ ಒಂದು ರನ್ ತಂಡದ ಖಾತೆಗೆ ಸೇರಿತು. ಮುಂಬೈ 20 ರನ್ ಗಳಿಸಿತು.

ಕಬಡ್ಡಿ ತಂಡದ ಆಯ್ಕೆ 20ರಂದು

ಬೆಂಗಳೂರು: ಉತ್ತರ ಪ್ರದೇಶದ ಅಯೋಧ್ಯೆಯಲ್ಲಿ ಮುಂದಿನ ತಿಂಗಳಲ್ಲಿ ನಡೆಯಲಿರುವ ರಾಷ್ಟ್ರೀಯ ಕಬಡ್ಡಿ ಚಾಂಪಿಯನ್‌ಷಿಪ್‌ನಲ್ಲಿ ಪಾಲ್ಗೊಳ್ಳಲಿರುವ ರಾಜ್ಯ ತಂಡದ ಆಯ್ಕೆ ಇದೇ 20 ಮತ್ತು 21ರಂದು ನಗರದ ಹೈ ಬ್ರೀಡ್ ಟೆನಿಸ್ ಅಕಾಡೆಮಿಯಲ್ಲಿ ನಡೆಯಲಿದೆ.

ಆಯ್ಕೆ ಬಯಸುವವರ ತೂಕ 85 ಕೆಜಿ ಒಳಗೆ ಇರಬೇಕು. ವಯಸ್ಸಿನ ಮಿತಿ ಇಲ್ಲ. ಆಧಾರ್ ಕಾರ್ಡ್, ಎಸ್‌ಎಸ್‌ಎಲ್‌ಸಿ ಅಂಕಪಟ್ಟಿ ಅಥವಾ ಜನನ ಪ್ರಮಾಣ ಪತ್ರ ಹಾಗೂ ಪಾಸ್‌ಪೋರ್ಟ್ ಅಳತೆಯ ನಾಲ್ಕು ಭಾವಚಿತ್ರಗಳನ್ನು ತೆಗೆದುಕೊಂಡು ಬರಬೇಕು.ಮಾಹಿತಿಗೆ –ಪ್ರಭು (9916167866) ಅಥವಾ ಶ್ರೀನಿವಾಸ್ ರಾಜ್ (9632774079) ಅವರನ್ನು ಸಂಪರ್ಕಿಸಲು ತಿಳಿಸ ಲಾಗಿದೆ.

ರಾಷ್ಟ್ರೀಯ ಟೂರ್ನಿಯಲ್ಲಿ ಪಾಲ್ಗೊಳ್ಳುವ ರಾಜ್ಯ ಕಬಡ್ಡಿ ತಂಡದ ಕೋಚ್ ಆಗಿ ಸಿ.ಹೊನ್ನಪ್ಪ ಅವರನ್ನು ಕಬಡ್ಡಿ ಸಂಸ್ಥೆಯ ಆಡಳಿತಾಧಿಕಾರಿ ಡಿ.ಪಾಂಡುರಂಗ ಗರಗ್ ನೇಮಿಸಿದ್ದಾರೆ.

ಬಾಕ್ಸಿಂಗ್: ಕ್ವಾರ್ಟರ್‌ಗೆ ಗೌರವ್

ನವದೆಹಲಿ (ಪಿಟಿಐ) : ಕಾಮನ್‌ವೆಲ್ತ್ ಗೇಮ್ಸ್ ಚಿನ್ನದ ಪದಕ ವಿಜೇತ, ಭಾರತದ ಬಾಕ್ಸರ್ ಗೌರವ್ ಸೋಳಂಕಿ ಅವರು ಬಾಸ್ಫೊರಸ್ ಬಾಕ್ಸಿಂಗ್ ಟೂರ್ನಿಯ ಕ್ವಾರ್ಟರ್‌ಫೈನಲ್‌ನಲ್ಲಿ ಲಗ್ಗೆಯಿಟ್ಟಿದ್ದಾರೆ. ಟರ್ಕಿಯ ಇಸ್ತಾನ್‌ಬುಲ್‌ನಲ್ಲಿ ನಡೆಯುತ್ತಿರುವ ಟೂರ್ನಿಯ 57 ಕೆಜಿ ವಿಭಾಗದ ಮೊದಲ ಸುತ್ತಿನ ಬೌಟ್‌ನಲ್ಲಿ ಅವರು 5–0ಯಿಂದ ಕಜಕಸ್ತಾನದ ಅರಪೊವ್ ಐದೊಸ್ ಅವರನ್ನು ಮಣಿಸಿದರು.

ವಿಶ್ವ ಚಾಂಪಿಯನ್‌ಷಿಪ್ ಕಂಚಿನ ಪದಕ ವಿಜೇತೆ ಸೋನಿಯಾ ಲಾಥರ್ (ಮಹಿಳೆಯರ 57 ಕೆಜಿ ವಿಭಾಗ) ಟೂರ್ನಿಯಲ್ಲಿ ಶುಭಾರಂಭ ಮಾಡಿದರು. ಸೋನಿಯಾ 5–0 ಅಂತರದಿಂದ ಅರ್ಜೆಂಟೀನಾದ ರೊಸಾರಿಯಾ ಮಿಲೊಗ್ರಾಸ್ ಅವರನ್ನು ಸೋಲಿಸಿದರು.